ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 10
ಸಂಚಿಕೆ 2
ಏಪ್ರಿಲ್-ಜೂನ್-1981

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 10. No. 2, April-June 1982

Chief Editor : Dr. G. S. Sivarudrappa

ಪ್ರಧಾನ ಸಂಪಾದಕರು :
ಡಾ॥ ಜಿ. ಎಸ್. ಶಿವರುದ್ರಪ್ಪ

ಸಂಪಾದಕರು :

ಡಾ॥ ಎಸ್. ವಿದ್ಯಾಶಂಕರ
ಶ್ರೀ ಕೆ. ವಿ. ನಾರಾಯಣ
ಡಾ॥ ಸೂರ್ಯನಾಥ ಕಾಮತ್

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)


ಆಜೀವ ಸದಸ್ಯತ್ವ : ರೂ. 100–00

ಪ್ರಕಾಶಕರು : ಹೆಚ್. ಆರ್. ದಾಸೇಗೌಡ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ಮಂಥನ



ತೊಂಬತ್ತರ ಮಾಸ್ತಿಯವರಿಗೆ ಗೌರವ ನಮನ

ಸ್ಥಿತಿ–ಗತಿ

ಪಿ. ವರಲಕ್ಷ್ಮಿ

ಊರ ತುಂಬಾ
ಕಟ್ಟಿದ
ದೊಡ್ಡ ದೊಡ್ಡ ಸ್ಮಾರಕ
ಗಳ ಜೊತೆ
ಖಾಲಿ ನಿವೇಶನ
ವೇ ಇಲ್ಲದ
ಸಣ್ಣ ದೊಡ್ಡ
ಮನೆ
ಸಿಮೆಂಟು, ಗಾರೆ, ಸುಣ್ಣ ಬಣ್ಣ
ಅಡಿಗೆ–ದೇವರ
ಕೋಣೆ
ಗಳ ಮನೆ
ಗಳ ಮಧ್ಯೆ
ಊರನ್ನಳಿವ ಕಪ್ಪಗೆ ಹೊಳೆವ
ಸೊಗಸಾದ ಟಾರ್ ರೋಡ್
ಗಳ ಜೊತೆ ಸವೆದ ಕಾಲ ಹಾದಿ
ಗಳ ಆಚೆಗಿನ
ಮನೆಯ ಜಾಡು
ಬೇಕೆಂದರೂ ಕಾಣದೆ
ಕಂಡೂ ಸಿಗಲಾರದೆ
. . . .
ಊರಲ್ಲಿಯೇ . . ಊರಿ
ಕರಗಿ
ಪಾಯ ಅಗೆಯುವಾಗ
ಹಲ್ಲು ಗಿಂಜಿತ್ತು
ನನ್ನದೇ
ತಲೆ
ಬುರುಡೆ

ಮುಲ್ಕ್‌ರಾಜ್ ಆನಂದರ "ಅನ್‌ಟಚಬಲ್" ಮತ್ತು ಶಿವರಾಮ ಕಾರಂತರ "ಚೋಮನದುಡಿ"ಯಲ್ಲಿ ವ್ಯಕ್ತಿ ಪ್ರಜ್ಞೆ ಮತ್ತು ಸಾಮಾಜಿಕ ವಾಸ್ತವತೆ

ಮೂಲ : ಜಿ. ಎಸ್. ಅಮೂರ್
ಅನು : ಸುಮತೀಂದ್ರ ನಾಡಿಗ

ಭಾರತೀಯ ಭಾಷೆಗಳಲ್ಲಿನ ಸಾಹಿತ್ಯಕ್ಕೆ ಸಂಬಂಧವೇ ಇಲ್ಲದಂತೆ ಭಾರತೀಯ ಆಂಗ್ಲ ಸಾಹಿತ್ಯವನ್ನು ಪ್ರತ್ಯೇಕವಾಗಿ ವಿಮರ್ಶಿಸುವ ರೀತಿಯೊಂದು ಬೆಳೆದು ಬಂದಿದೆ. ಹೀಗಾಗಿರುವುದರಿಂದ ಇದು ಭಾರತೀಯ ನಿಕಷವೆನ್ನಬಹುದಾದ ವಿಮರ್ಶಾ ಸಂಪ್ರದಾಯದ ಬೆಳವಣಿಗೆಗೆ ಅಡ್ಡಿಯಾಗಿದೆ. ಸಮಾಜ ಮತ್ತು ಮೌಲ್ಯದ ಆವರಣ, ಪುರಾಣ ಮತ್ತು ಸಂಕೇತ, ಮತ್ತು ಮಾನವೀಯ ಪ್ರತಿಮೆಗಳು ಎಲ್ಲ ಭಾರತೀಯ ಸಾಹಿತ್ಯಗಳಿಗೂ ಒಂದೇ ಆಗಿವೆ. (ಅವುಗಳಲ್ಲಿ ಕಾಣಿಸುವ ಸಹಜವಾದ ವಿಶಿಷ್ಟತೆಗಳನ್ನು ಅಲ್ಲಗಳೆಯದೆ ನೋಡಿದರೂ, ಈ ಮಾತಿನಲ್ಲಿ ತಥ್ಯವಿದೆ). ಮಾನವತಾವಾದಿಗಳಾದ ಮುಲ್ಕ್‌ರಾಜ್ ಆನಂದರು ಇಂಗ್ಲೀಷ್‌ನಲ್ಲಿ, ಶಿವರಾಮ ಕಾರಂತರು ಕನ್ನಡದಲ್ಲಿ ಬರೆಯುತ್ತಿದ್ದರೂ, ಅವರನ್ನು ಒಂದೇ ದೃಷ್ಟಿಕೋನಗಳಿಂದ ಗಮನಿಸುವುದರಲ್ಲಿ ನಿಶ್ಚಿತವಾದ ವಿಮರ್ಶಾ ಪ್ರಯೋಜನವಿದೆ. ಅಂತಹ ಕ್ರಮವನ್ನು ಅನುಸರಿಸುವುದರಿಂದ ಉಪಯೋಗವಿದೆಯೆಂದು ತೋರಿಸುವುದೇ ನನ್ನ ಈ ಲೇಖನದ ಉದ್ದೇಶ. ಆನಂದರ 'ಅನ್‌ಟಚಬಲ್' ಮತ್ತು ಕಾರಂತರ 'ಚೋಮನದುಡಿ' ಈ ಎರಡೂ ಕಾದಂಬರಿಗಳು ಮೂರನೆ ದಶಕದ ಕೃತಿಗಳು. ಪರಸ್ಪರ ಪ್ರಭಾವವಿದೆಯೆನ್ನುವುದಕ್ಕೆ ಯಾವ ಪುರಾವೆಗಳು ಇಲ್ಲದಿದ್ದರೂ, ಅವುಗಳಲ್ಲಿ ಗಮನಾರ್ಹವಾದ ಹೋಲಿಕೆಗಳಿವೆ. ಕಥನದ ರೀತಿಯಲ್ಲಿ ಸಾಂಪ್ರದಾಯಿಕವಾದ ಜಾತಿನಿಷ್ಠ ಸಮಾಜದ ವಿಮರ್ಶೆಯನ್ನು ಮಾಡುವುದಕ್ಕೆ ಒಬ್ಬ ಅಸ್ಪೃಶ್ಯನ ದೃಷ್ಟಿಕೋನವನ್ನು ಆರಿಸಿಕೊಂಡಿರುವುದರಿಂದ ಅವರ ವಸ್ತುವನ್ನು ನೇರವಾಗಿ ಗ್ರಹಿಸುವುದು ಈ ಇಬ್ಬರು ಲೇಖಕರಿಗೂ ಸಾಧ್ಯವಾಗಿದೆ. ಈ ಕಾದಂಬರಿಯ ನಾಯಕರಾದ ಬಾಖಾ ಮತ್ತು ಚೋಮ ಕೇವಲ ದೃಷ್ಟಿಕೋನಗಳಾಗಿ ಉಳಿಯದೆ, ಸಂಪೂರ್ಣವಾಗಿ ಗ್ರಹಿಸಿರುವ ವ್ಯಕ್ತಿಗಳಾಗಿ ಅವರ ಅದೃಷ್ಟ, ಅವರನ್ನೊಳಗೊಂಡ ಸ್ತರ ಮತ್ತು ವಿಭಾಗಗಳ, ಸಮಾಜದ ಅದೃಷ್ಟದಷ್ಟೆ ಕುತೂಹಲಕರವಾಗಿ ನಮ್ಮನ್ನು ಆಕರ್ಷಿಸುತ್ತದೆ. ಈ ಕಾದಂಬರಿಗಳಲ್ಲಿ ಸಾಮಾಜಿಕ ವಸ್ತುವಾದ ಅಸ್ಪೃಶ್ಯತೆಯ ರೋಗ

ವನ್ನು ವ್ಯಕ್ತ್ಯಾತ್ಮಕ ವಸ್ತುವಾದ ನಾಯಕನ ಪರಕೀಯ ಪ್ರಜ್ಞೆಯಿಂದ ಬೇರ್ಪಡಿಸುವುದೂ ಸಾಧ್ಯವಿಲ್ಲ.

ಈ ಎರಡೂ ಕಾದಂಬರಿಗಳಲ್ಲಿ ಮುಖ್ಯವಾದ ವ್ಯತ್ಯಾಸಗಳಿವೆ ಎನ್ನುವುದೂ ನಿರ್ವಿವಾದವಾದದ್ದು. ಉದಾಹರಣೆಗೆ ಆನಂದರ ಕಾದಂಬರಿಯಲ್ಲಿನ ಪರಿಸರ ಉತ್ತರ ಭಾರತದ ಬುಲಂದ್ ಶಹರ್ ಎನ್ನುವ ದಂಡಿನ ನಗರ. ಇದು ನಾಗರಿಕ ಹಳ್ಳಿ ಪ್ರಪಂಚ. ಕಾರಂತರ ಕಾದಂಬರಿಯಲ್ಲಿನ ಪರಿಸರ ದಕ್ಷಿಣ ಕನ್ನಡ ಜಿಲ್ಲೆಯ ಭೋಗನ ಹಳ್ಳಿ ಎನ್ನುವ ಸಣ್ಣ ಹಳ್ಳಿ. ಇದು ಗ್ರಾಮೀಣ ಮತ್ತು ಪ್ರಭುತ್ವಶಾಹಿ ಪ್ರಪಂಚ. 'ಅನ್‌ಟಚಬಲ್' ಕಾದಂಬರಿಯಲ್ಲಿ ಹದಿನೆಂಟು ವರ್ಷದ ಬಾಖಾನ ಜೀವನದ ಒಂದು ದಿನ ಮಾತ್ರ ಚಿತ್ರಿತವಾಗಿದೆ. ಆದರೆ ಚೋಮನದುಡಿಯಲ್ಲಿ ಚೋಮ 65 ವರ್ಷದ ಪ್ರಬುದ್ಧ ಮತ್ತು ಅವನ ಜೀವನದ ಅನೇಕ ವರ್ಷಗಳು ಚಿತ್ರಿತವಾಗಿವೆ. 'ಅನ್‌ಟಚಬಲ್' ಮಾರ್ಕ್ಸ್‌ನ ವಿಚಾರ ಪರವಾದ ವಿಮರ್ಶಾತ್ಮಕ ವಾಸ್ತವವಾದದ ಕೃತಿಯಾಗಿದೆ. ಆದರೆ 'ಚೋಮನದುಡಿ' ವಾದಗಳ ಬಂಡೆಯನ್ನು ದಾಟಿ ದುರಂತ ವಿಧಾನದ ಕಡೆಗೆ ಸಾಗುತ್ತದೆ. ಆನಂದರ ಕಾದಂಬರಿ ಎಚ್ಚರ ಪೂರ್ಣವಾದ ಆಶಾವಾದದಲ್ಲಿ ಮುಕ್ತಾಯವಾದರೆ ಕಾರಂತರ ಕಾದಂಬರಿ ದುರಂತದಲ್ಲಿ ಕೊನೆಗೊಳ್ಳುತ್ತದೆ. ಅದೇನೆ ಇರಲಿ. ಈ ಎರಡೂ ಕಾದಂಬರಿಗಳ ಆಂತರಿಕ ರೂಪ ಇಲ್ಲಿಯ ಸಮಸ್ಯಾತ್ಮಕ ನಾಯಕನ ಕೀಳರಿಮೆ ಮತ್ತು ಅವನ ಅಭಿಲಾಷೆಗೆ ಅಡ್ಡಿ ಮಾಡುವ ಸಮಕಾಲೀನ ವಾಸ್ತವದ ಘರ್ಷಣೆಯಿಂದ ಸಿದ್ಧವಾಗುತ್ತದೆ ಎನ್ನುವುದು ಈ ಪ್ರಸಕ್ತ ಅಭ್ಯಾಸಕ್ಕೆ ಹೆಚ್ಚಿನ ಅರ್ಥವನ್ನು ಕೊಡುತ್ತದೆ ಅನಿಸುತ್ತದೆ.

2

ಆನಂದರು ತಮ್ಮ ನಾಯಕ ಬಾಖಾನನ್ನು "ಆಧುನಿಕ ಭಾರತದ ಶಿಶು"ವೆಂದು ನಮ್ಮ ಮುಂದಿಡುತ್ತಾ, ಅವನ ಮಾನವೀಯ ಸಾಧ್ಯತೆಗಳನ್ನು ಒತ್ತಿ ಹೇಳುತ್ತಾರೆ. ಅವನು ರೈತ ತಂದೆ ತಾಯಿಗಳ ಮಗನಂತೆ ದೃಢಕಾಯದವನು ಮತ್ತು ಕರ್ತವ್ಯ ನಿಷ್ಠೆಯುಳ್ಳ ಕುಶಲಕರ್ಮಿ. ಅವನ ಕಲಿಯುವ ಆಸೆ ಗಾಢವಾದದ್ದು ಮತ್ತು ಅವನು ಉತ್ಸಾಹೀ ಆಟಗಾರನಾದರೂ ತನ್ನ ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಅವಕಾಶಗಳು ಕಡಿಮೆ. ಪ್ರಕೃತಿಯ ಬಗ್ಗೆ ಅವನಿಗೆ ಸಂವೇದನೆಗಳಿವೆಯೆನ್ನುವುದು ಗಮನಿಸಬೇಕಾದ ಅಂಶವಾದರೂ ಇದು ಪುರಾತನವಾದ, ಸ್ವಯಂ ಅರಿವಿಲ್ಲದ ಪ್ರಜ್ಞೆಯಾಗಿದೆ. ಈ ಕಾದಂಬರಿಯ ಅತ್ಯುತ್ತಮ ಭಾಗಗಳಲ್ಲಿ ಒಂದು, ಸೂರ್ಯನೊಂದಿಗೆ ಬಾಖಾನ ತನ್ಮಯತೆಯನ್ನು ಹೇಳುತ್ತದೆ:

> ...ಅವನು ತಲೆಯೆತ್ತಿ ಸೂರ್ಯನನ್ನು ನೋಡಿದ. ಸೂರ್ಯನ ಕಣ್ಣು ಕುಕ್ಕುವ ಬೆಳಕನ್ನು ಹಿಡಿದು ದಿಗ್ಭ್ರಾಂತನಾದ. ಒಂದು ಕ್ಷಣ ಮೈಮರೆತು, ಥಳಥಳಿಸುವ ಸೂರ್ಯರಶ್ಮಿಗಳಿಂದ ಗೊಂದಲಗೊಂಡ ಅವನು ಸೂರ್ಯನನ್ನು ಬಿಟ್ಟರೆ ಇನ್ನೇನೂ

> ಇಲ್ಲವೇನೊ ಎನ್ನುವಂತೆ, ಎಲ್ಲೆಲ್ಲೂ ಸೂರ್ಯ ತನ್ನೊಳಗೆ, ತನ್ನ ಮೇಲೆ, ತನ್ನ ಮುಂದೆ, ತನ್ನ ಹಿಂದೆ ಸೂರ್ಯ ಎನ್ನುವಂತೆ ನಿಂತುಕೊಂಡ. ತನ್ನನ್ನು ದಿಗ್ಭ್ರಮೆಗೊಳಿಸುವಂತೆ ಹಠಾತ್ತನೆ ತನ್ನನ್ನು ಈ ಅನುಭವ ಮುಳುಗಿಸಿ ಬಿಟ್ಟರೂ ಅದರಲ್ಲೊಂದು ಹಿತವಿತ್ತು. ತನ್ನ ಬಿಗಿಯುವ ಆವರಣದಲ್ಲಿ ತಾನು ತೇಲುತ್ತಿದ್ದಂತೆ ಅನಿಸಿ, ಅವನೊಂದು ಮಟ್ಟನ್ನು ಗುಣುಗುಣಿಸಿದ (ಅನ್‌ಟಚಬಲ್ ಪುಟ 36–37)

ಈ "ಅಂತರಂಗದ ಅನುಭವದ ಶ್ರೀಮಂತಿಕೆ"ಯೇ ಬಾಖಾನನ್ನು ಮಿಕ್ಕವರಿಂದ ಬೇರ್ಪಡಿಸುತ್ತಲೇ ಅವನನ್ನು ಹೊಸ ಜನಾಂಗದ ಪ್ರತಿನಿಧಿಯನ್ನಾಗಿ ಮಾಡುತ್ತದೆ. ಬಾಖಾನ ಸಾಂಕೇತಿಕ ಅರ್ಥಪೂರ್ಣತೆಯನ್ನು ಆನಂದರು ಅರಿತಿದ್ದಾರೆ:

> ಅವನಿಗೆ ತನ್ನ ಆತ್ಮದ ಇಕ್ಕಟ್ಟಾದ ಜೈಲಿನಿಂದ ತನ್ನ ಆಸೆಗಳನ್ನು ಮುಟ್ಟಲಿಕ್ಕೆ ಸಾಧ್ಯವಿರಲಿಲ್ಲ. ವ್ಯಕ್ತಿಗೂ ಸನ್ನಿವೇಶಕ್ಕೂ ನಡುವಿನ ಅಸಾಂಗತ್ಯದಿಂದ ಇವನಂತಹ ಸಿಂಹ ಬಲೆಯಲ್ಲಿ ಸಿಕ್ಕಿಬಿದ್ದಿತ್ತು; ಅದೇ ಸಮಯದಲ್ಲಿ ಸಾಮಾನ್ಯ ಅಪರಾಧಿಯೊಬ್ಬ ರಾಜನ ಕಿರೀಟವನ್ನು ಧರಿಸಿದ್ದ. ಅವನ ಅಂತರಂಗದ ಅನುಭವ ಅಸಾಮಾನ್ಯವಾಗಿತ್ತು. ಅದೊಂದು ಒಬ್ಬ ರೈತನಿಗೆ ಅನ್ನಿಸಬಹುದಾದ ಒರಟಾದ ದುಂಡಗಿನ ಪ್ರಪಂಚದ ಅನಿಸಿಕೆಯಾಗಿತ್ತು; ಅಥವಾ ಒಂದು ಸಣ್ಣ ದೋಣಿಯಲ್ಲಿ ಹೋಗುವ ಅರೇಬಿಯಾದ ನಾವಿಕನೊಬ್ಬ ಹೀಗೆ ಏನೋ ತನ್ನ ದಿಕ್ಕನ್ನು ಸೂರ್ಯನಿದ್ದ ಸ್ಥಾನದಿಂದ ಕಂಡುಕೊಂಡ ಹಾಗಿತ್ತು ಅಥವಾ ಬಾಗಿಲಿಂದ ಬಾಗಿಲಿಗೆ ಹೋಗುವ ಭಿಕ್ಷುಕ, ಹಾಡುಗಾರ ಮಹಾಕಾವ್ಯವೊಂದನ್ನು ಹಾಡಿದ ಹಾಗಿತ್ತು. ಆದರೆ ಅಸ್ಪಷ್ಟ ಅನಿಸಿಕೆಯಿಂದ ಅದನ್ನು ಸ್ವಪ್ರಜ್ಞೆಯುಳ್ಳ ಮನುಷ್ಯನ ಅತ್ಯುನ್ನತ ಪ್ರವೃತ್ತಿಯಾಗಿ ಮಾರ್ಪಡಿಸುವುದಕ್ಕೆ ಅದಕ್ಕೆ ವಿಚಾರದ ಬಲ ಮತ್ತು ಜೀವಂತಿಕೆ ಬೇಕಾಗಿತ್ತು (ಅನ್‌ಟಚಬಲ್ ಪುಟ 103–104)

ಚೋಮನ ಪ್ರಪಂಚ ಇದರಿಂದ ಸಂಪೂರ್ಣವಾಗಿ ಭಿನ್ನವಾದ ಫ್ಯೂಡಲ್ ದಣಿಗಳ ಮತ್ತು ಗುಲಾಮರ ಪ್ರಪಂಚ. ಆಕಸ್ಮಾತ್ತಾಗಿ ಒಂದು ಜೊತೆ ಎತ್ತುಗಳು ಕಾಡಿನಲ್ಲಿ ಸಿಕ್ಕಪ್ರಸಂಗ ತಾನೂ ಒಬ್ಬ ರೈತನಾಗುವ, ಹೊಸಮನುಷ್ಯನಾಗುವ ಗುಪ್ತವಾದ ಆಸೆಯನ್ನು ಕೆರಳಿಸುತ್ತದೆ. ನೇಗಿಲು ಅವನ ಅಭೀಪ್ಸೆಗಳ ಸಂಕೇತವಾಗಿ ಕಾಡುತ್ತದೆ.

> ಪ್ರತಿಕ್ಷಣವೂ ಅವನ ಮುಂದೆ ಮುನಿದು ನಿಂತ ನೇಗಿಲಿನ ಚಿತ್ರವು ಕಾಣಿಸುವುದು. ಒಮ್ಮೊಮ್ಮೆ– "ನಾನು ನನಗಾಗಿ ನೇಗಿಲನ್ನು ಹಿಡಿಯಬಾರದಾದರೆ ಇನ್ನೊಬ್ಬರಿಗಾಗಿ ಏಕೆ ಹಿಡಿಯಬೇಕೆಂದು ಯೋಚಿಸುವನು. ಈವರೆಗೆ 'ಧನಿಯರು' ಎಂದೊಡನೆ ಬಾಗಿ ಒಗ್ಗಿದ ಅವನ ಮನಸ್ಸು, ವಿನಯವು, ವಿನಯವೇನು ದಾಸ್ಯಮಯ ಸ್ವಭಾವವು ಈಗ ನೆಟ್ಟಗೆ ನಿಲ್ಲಲು ಹೋರಾಡುತ್ತಿದೆ. (ಚೋಮನದುಡಿ ಅಧ್ಯಾಯ VI 52)

ಹೀಗೆ ಹೊಸ ವ್ಯಕ್ತಿತ್ವಕ್ಕೆ ತುಡಿಯುವ ನಿರಂತರವಾದ ಶೋಧನೆ ಚೋಮನನ್ನು ಸಮಸ್ಯಾತ್ಮಕ ವ್ಯಕ್ತಿಯಾಗಿ ಮಾಡುತ್ತದೆ. ಅಷ್ಟನ್ನು ಬಿಟ್ಟರೆ ಅವನ ಕೌಟುಂಬಿಕ ಸಂಬಂಧಗಳಲ್ಲಿ, ಕಳ್ಳಿನ ಪ್ರೇಮದಲ್ಲಿ, ಅವನ ಬುಡಕಟ್ಟಿನ ಔದಾರ್ಯ

ದಲ್ಲಿ ಅವನು ಸಂಪೂರ್ಣವಾಗಿ ಪ್ರಾತಿನಿಧಿಕ ವ್ಯಕ್ತಿಯಾಗಿದ್ದಾನೆ. ಚೋಮನಮಡಿಗೆ ಕಾರಂತರು ದೈವಿಕ ಹೋಲಿಕೆಗಳನ್ನು ಕೊಡುವುದರಿಂದ ಚೋಮನಿಗೆ ಹೆಚ್ಚಿನ ಪ್ರಾಮುಖ್ಯವಿದೆ.

ಬ್ರಿಟಿಷರ ಬ್ಯಾರಕ್‌ಗಳಲ್ಲಿ ತನ್ನ ಚಿಕ್ಕಪ್ಪನ ಜೊತೆಯಲ್ಲಿ ಬಾಖಾ ಒಬ್ಬ ಬಿಳಿ ಮನುಷ್ಯನ ಜೊತೆಗೆ ವಾಸಿಸಿದ್ದರಿಂದ, ಅವನ ಜೀವನದ ರೀತಿಯನ್ನು ನೋಡಿದ್ದರಿಂದ, ತನ್ನ ಸಮಾಜದಿಂದ ತಾನು ಬೇರೆ ಅನ್ನಿಸುವುದೇ ಬಾಖಾನ ನೋವಿಗೆ ಕಾರಣವಾಗಿದೆ. ತನ್ನ ಅಪ್ರಬುದ್ಧತೆಯಲ್ಲಿ ಅವನು ತೊಡುವ ಅನೇಕ ಪಾಶ್ಚಾತ್ಯ ಉಡುಪುಗಳಂತೆ ಯುರೋಪಿನ ಸಂಸ್ಕೃತಿಯಂತೆ ತೋರಿಕೆಯ, ಅಂಶಗಳಿಗೆ ಮಾರು ಹೋಗಿದ್ದರೂ ಇನ್ನೊಂದು ರೀತಿಯಾದ ಜೀವನ ಕ್ರಮವನ್ನು ಹೊಸ ಸಾಧ್ಯತೆಗಳನ್ನು ಅವನು ಕಂಡಿರುವುದರಿಂದ ಅವನು ಹಿಂದೂ ಸಮಾಜದ ವಿಮರ್ಶಕನಾಗಿ, ತನ್ನ ಜೊತೆಯವರಾದ ಇತರ ಅಸ್ಪೃಶ್ಯರೊಂದಿಗೆ ಮೇಲಿನವನಂತೆ ನಡೆದುಕೊಳ್ಳುತ್ತಾನೆ. ದ್ವಂದ್ವ ಮೌಲ್ಯಗಳನ್ನುಳ್ಳ ಅವನ ಸಮಾಜವನ್ನು ಅವನು ಒಪ್ಪಿಕೊಳ್ಳದೆ ಹೊಸ ಜೀವನಕ್ಕೆ ಆಸೆಪಡುವುದರಿಂದ ಅವನು ಸಮಸ್ಯಾತ್ಮಕ ವ್ಯಕ್ತಿಯಾಗುತ್ತಾನೆ. ಚೋಮನ ಪರಕೀಯತೆ ಹೆಚ್ಚು ಆಳದಿಂದ ಭೂಮಿಯ ಬಗ್ಗೆ ಪುರಾತನವಾದ ಆಸೆಯಿಂದ ಹುಟ್ಟುತ್ತದೆ. ಈ ಆಸೆ ಅವನ ಆತ್ಮಾಭಿಮಾನದ, ವ್ಯಕ್ತಿ ಗೌರವದ ಸಮರ್ಥನೆಯಾಗುತ್ತದೆ. ಈ ಮಹದಾಸೆಗಾಗಿ ತನ್ನ ಬದುಕಿನಲ್ಲಿ ಎಲ್ಲವನ್ನೂ, ತನ್ನ ಮಕ್ಕಳನ್ನೂ ಗೌಣವಾಗಿ ಕಾಣುತ್ತಿದ್ದರೂ ಫ್ಯೂಡಲ್ ನಿಷೇಧಗಳಿಂದ ಅವನ ಮಹದಾಸೆ ಉದ್ದಕ್ಕೂ ಭಂಗವಾಗುವುದು ಅವನ ನೋವಿಗೆ ಕಾರಣವಾಗುತ್ತದೆ. ಈ ಎರಡು ಕಾದಂಬರಿಗಳಲ್ಲೂ ದಾಟಲಾರದ ಅಡ್ಡಿಗಳಿಗೆ ಕಾರಣ ಅಸ್ಪೃಶ್ಯತೆಯೇ ಆಗಿದೆ.

III

ಈ ಸಮಸ್ಯಾತ್ಮಕ ನಾಯಕರ ಅಂತರಂಗಗಳ ಮೇಲೆ ಒತ್ತಡ ತೋರುವ ಸಾಮಾಜಿಕ ವಾಸ್ತವಾಂಶಗಳನ್ನು ಈ ಎರಡು ಕಾದಂಬರಿಗಳಲ್ಲಿ ತುಂಬ ಎಚ್ಚರದಿಂದ ಚಿತ್ರಿಸಲಾಗಿದೆ. ಆನಂದರ ಕಥನ ಪ್ರಪಂಚ ಅದಷ್ಟು ಸಂಗ್ರಹವಾಗಿ ಸೃಷ್ಟಿಯಾಗಿದ್ದರೂ ಇದು ಕಾಲ ಮತ್ತು ದೇಶಗಳಲ್ಲಿ ಸುಭದ್ರವಾದ, ಸಂಪೂರ್ಣವಾಗಿ ನಂಬಲರ್ಹವಾದ ಪ್ರಪಂಚವಾಗಿದೆ. ಅದರ ಒಂದು ಕೇಂದ್ರ ಬಿಂದು ಊರ ಹೊರಗಿರುವ ಹೊಲಗೇರಿಯಲ್ಲಿರುವ ಕಕ್ಕಸುಗಳ ಮೂರು ಸಾಲುಗಳು. ಇನ್ನೊಂದು ಕೇಂದ್ರ ಬಿಂದು ಊರಿನ ಜನಗಳನ್ನು ಆಕರ್ಷಿಸುವ ದೇವಸ್ಥಾನ. ಆನಂದರ ಹರಿತವಾದ ವ್ಯಂಗ್ಯ ಚಿಂತನೆಯಲ್ಲಿ, ಕಕ್ಕಸುಗಳು ಶುದ್ಧೀಕರಣದ ಸಂಕೇತವಾದರೆ, ದೇವಸ್ಥಾನ ಮನುಷ್ಯನ ಗೌರವವನ್ನು ಮತ್ತು ಸದ್ಗುಣವನ್ನು ಹಾಳು ಮಾಡುವ, ಕಾಮುಕತೆಯ ಸಂಕೇತವಾಗಿದೆ. ಆದರೆ ಆನಂದರು ಸರಳೀಕರಣಕ್ಕೆ ಕೈಹಾಕುವುದಿಲ್ಲ. ಬಾಖಾನ

ಬಗ್ಗೆ ಚರತ್‌ಸಿಂಗನ ಔದಾರ್ಯಪೂರ್ಣ ನೀತಿ, ಜಾತಿಯ ಬಂಧಗಳನ್ನು ಕಿತ್ತೊಗೆಯುತ್ತದೆ : ಆದರೆ ತನ್ನ ಮಕ್ಕಳನ್ನೇ ಲಾಖಾ ಶೋಷಿಸುವ ರೀತಿ ಅವನ ವೃದ್ಧಾಪ್ಯದಿಂದ ಕ್ಷಮಾರ್ಹವಾಗುವುದಿಲ್ಲ.

ಕಾರಂತರ ಕಥನಪ್ರಪಂಚ ಇದಕ್ಕಿಂತ ಹೆಚ್ಚು ವಿಸ್ತಾರಶೀಲವಾದದ್ದು, ಸಂಕೀರ್ಣವಾದದ್ದು ಆಗಿದೆ. ವೈದೃಶ್ಯವುಳ್ಳ ಎರಡು ಭಾಗಗಳಿವೆ ; ಒಂದು ಕಡೆ ಯಾವ ಬದಲಾವಣೆಯೂ ಇಲ್ಲದ ಭೋಗನಹಳ್ಳಿ. ಚರಿತ್ರೆ ವಿಧಿಸಿದ ಮಿತಿಗಳಲ್ಲೇ ಪ್ರಪಂಚದ ಈ ಭಾಗದಲ್ಲಿ ದಯೆಗೆ ಸ್ಥಾನವಿದೆ. ಅಲ್ಲಿರುವ ಜನರಲ್ಲಿ, ಹೊಲೆಯರಲ್ಲಿ ಕೂಡ ಪರಸ್ಪರ ಆದರವಿದೆ. ಆದರೆ ಬದಲಾವಣೆಯನ್ನಾಗಲೀ, ಅಥವಾ ಅಲ್ಲಿಯ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸುವ ಯಾವ ವ್ಯಕ್ತಿಗತ ಅಭಿಲಾಷೆಯನ್ನು ಆ ಪ್ರಪಂಚ ತೀವ್ರವಾಗಿ ವಿರೋಧಿಸುತ್ತದೆ. ಸಾಮಾಜಿಕ ವಾಸ್ತವದ ಈ ಮುಖವನ್ನು ಪರಿಪೂರ್ಣವಾಗಿ ಪ್ರತಿನಿಧಿಸುವ ವ್ಯಕ್ತಿ ಸಂಕಪ್ಪಯ್ಯನ ತಾಯಿ. ಸಂಕಪ್ಪಯ್ಯ ತರುಣ ಜಮೀನ್ದಾರನಾಗಿ ತನ್ನ ತಾಯಿಯ ಗತಕಾಲದ ಮೌಲ್ಯಗಳನ್ನು ಪ್ರಶ್ನೆ ಇಲ್ಲದೆ ಒಪ್ಪಿಕೊಳ್ಳುವವನಾದರೂ ಅವನು ಈ ಸಾಮಾಜಿಕ ವಾಸ್ತವದ ಪ್ರತಿನಿಧಿಯಾಗಲಾರ. ಏಕೆಂದರೆ ಅವನು ಚೋಮನೊಡನೆ ಮಾತನಾಡುವಾಗ, ಅವನ ತಾಯಿಯೇ ಮಾತನಾಡಿದಂತೆ ಕೇಳಿಸುತ್ತದೆ: 'ನಮ್ಮ ಹಿಂದಿನವರು ಹೊಲೆಯರಿಗೆ ಗೇಣಿಗೆ ಕೊಡಲಿಕ್ಕೆ ಆಗಿಲ್ಲ, ಈಗ ನಂಗು ಕೊಡ್ಲಿಕ್ಕಾಗೋಲ್ಲ'. ಸಂಕಪ್ಪಯ್ಯನ ಜೊತೆಗೆ ಚೋಮನ ಭೇಟಿ ಮುಗಿದಾಗ ಅವನಿಗೆ ಧಣಿಯ ತಾಯಿ ಮನೆಯ ಒಳಗಿನಿಂದ ಶಾಪ ಹಾಕುತ್ತಿರುವುದು ಕೇಳಿಸುತ್ತದೆ. "ಅಬ್ಬಾ ಈ ಹೊಲೆಯರಿಗೆ ಬಂದ ಸೊಕ್ಕೇ" (ಚೋಮನದುಡಿ ಅಧ್ಯಾಯ III 30) ಚೋಮನದುಡಿಯ ಪ್ರಪಂಚದ ಇನ್ನರ್ಧ ಗೋಳ ಕಳಸದಲ್ಲಿರುವ ಮ್ಯಾಖೇಲನ ಕಾಫಿ ತೋಟ ಇದು ದಕ್ಷಿಣ ಕನ್ನಡದ ಅನೇಕ ಕಡೆಗಳಲ್ಲಿ ಬಡತನ ಮತ್ತು ಸಾಲಕ್ಕೆ ಸಿಕ್ಕಿ ಬಂದಿರುವ ಕೂಲಿಗಳನ್ನು ಶೋಷಿಸುವ, ಮನಸ್ಸಿನ ಕಾರ್ಪಣ್ಯದ ಪ್ರಪಂಚ. ಇಲ್ಲಿ ಕೂಲಿಗಳನ್ನು ಭಯಂಕರವಾದ ಕೊಟ್ಟಿಗೆಗಳಲ್ಲಿ ಕೂಡಿಹಾಕಿ ಅವರಿಗೆ ಸಿಗಬೇಕಾದ ಕಡಿಮೆ ಸಂಬಳಕ್ಕೂ ಖೋತ ಹಾಗಲಾಗುತ್ತದೆ. ಆಧುನಿಕ ಪಶುತ್ವದ ಈ ಪ್ರಪಂಚವನ್ನು ಕಾಮುಕ ಮ್ಯಾಖೇಲ್ ಮತ್ತು ಅವನ ಬಲಗೈಯಾದ ಮನ್ವೇಲ ಆಳುತ್ತಾರೆ ಭೋಗನಹಳ್ಳಿಯ ವ್ಯವಸ್ಥಿತ ಪ್ರಪಂಚಕ್ಕಿಂತ ಭಿನ್ನವಾದ ಈ ಪ್ರಪಂಚದಲ್ಲಿ ಬದಲಾವಣೆಯ ಗಾಳಿಗಳು ಬೀಸುತ್ತಿರುತ್ತವೆ. ಇಲ್ಲಿ ಸೇರುವ ಜನಜಂಗುಳಿಯನ್ನು ಸಮಾಜ ಎಂದು ಕರೆಯುವ ಹಾಗಿಲ್ಲ. ಚೋಮನ ಕೌಟುಂಬಿಕ ದುರಂತದ ಕಾರಣಗಳಾದ ಗುರುವನ ಮತಾಂತರ, ಚನಿಯನನ್ನು ಕೊಲ್ಲುವ ರೋಗ, ಬೆಳ್ಳಿಯ ಮಾನಭಂಗ ಈ ಕಾಫಿ ತೋಟದಲ್ಲೇ ನಡೆಯುತ್ತದೆ. ಹೀಗಾಗಿ ಈ ಪ್ರಪಂಚದ ಎರಡು ಭಾಗಗಳಲ್ಲಿ ತುಂಬಾ ವ್ಯತ್ಯಾಸವಿದ್ದರೂ ಅವುಗಳಿಗೆ ಸೂಕ್ಷ್ಮವಾದ ಸಂಬಂಧವಿದೆ.

ಅವೆರಡೂ ಸಹ ಸಮಾನವಾದ ದ್ವೇಷದಿಂದ ಚೋಮನ ಅಂತರಂಗವನ್ನು ಘಾಸಿ ಮಾಡುತ್ತವೆ.

ಆನಂದರು ಮತ್ತು ಕಾರಂತರು ತಮ್ಮ ತಮ್ಮ ನಾಯಕರ ಅಂತರಂಗದ ಪ್ರಪಂಚಗಳನ್ನು ಸೃಷ್ಟಿಸುವುದರಲ್ಲಿ ಬೇರೆ ಬೇರೆ ತಂತ್ರಗಳನ್ನು ಬಳಸಿದ್ದರೂ, ಅವುಗಳಲ್ಲಿ ಸಮಾನವಾದ ಜಯವನ್ನು ಗಳಿಸಿದ್ದಾರೆ. ಆನಂದರ ನಾಯಕ ಆತ್ಮಪ್ರಜ್ಞೆಯುಳ್ಳವನಲ್ಲದಿದ್ದರೂ ಅವರು, ಹೆನ್ರಿಜೇಮ್ಸ್‌ನ ಕೇಂದ್ರ ಪ್ರಜ್ಞೆಯ ವಿಧಾನವನ್ನು ಉಪಯೋಗಿಸಿಕೊಂಡು, ಲೇಖಕನ ಟೀಕೆ ವಿವರಣೆಗಳ ಮೇಲಿನ ಸೂಕ್ಷ್ಮವಾದ ಹತೋಟಿಯಿಂದ ತಮ್ಮ ನಾಯಕನ ಅನಿರ್ವಚನೀಯವಾದ ಸದ್ಯತನವುಳ್ಳ ಅನುಭವಗಳನ್ನು ಚಿತ್ರಿಸುವುದರಲ್ಲಿ ಜಯಶೀಲರಾಗುತ್ತಾರೆ. ಆಗಾಗ ಅವರು ಉಪಯೋಗಿಸುವ ಸಾಂಕೇತಿಕ ಉಪಾಯಗಳು ತುಂಬಾ ಪರಿಣಾಮಕಾರಿಯಾಗಿವೆ. ಕಾದಂಬರಿಯ ಪ್ರಾರಂಭದಲ್ಲೇ ಇವರ ಒಂದು ಉದಾಹರಣೆ ಸಿಗುತ್ತದೆ. ತಾನು ಕಕ್ಕಸುಗಳಿಂದ ಆರಿಸಿತಂದ ಒಣಹುಲ್ಲನ್ನು ಒಂದು ಇಟ್ಟಿಗೆಯ ಗೂಡಲ್ಲಿಟ್ಟು ಸುಟ್ಟು ಹಾಕುವುದು ಬಾಖಾನ ಕರ್ತವ್ಯಗಳಲ್ಲೊಂದಾಗಿದೆ. ಇದು ಅವನಿಗೆ ಇಷ್ಟವಾಗುವ ಕೆಲಸವಾದ್ದರಿಂದ, ಅದು ಪ್ರಯಾಸವೆಂದು ಅವನಿಗೆ ಅನ್ನಿಸುವುದೇ ಇಲ್ಲ. ಬಾಖಾ ಅಪ್ರಜ್ಞಾಪೂರ್ವಕವಾಗಿ ಬೆಂಕಿಯ ಜೊತೆಗೆ ತಾದಾತ್ಮ್ಯವನ್ನು ಹೊಂದಿದ್ದೇ ಇದಕ್ಕೆ ಕಾರಣವೆಂದು ಆನಂದರು ಸೂಚಿಸುತ್ತಾರೆ.

> ಉರಿಯುವ ಜ್ವಾಲೆ ತನ್ನ ಪರವೆಂದು ಅವನಿಗೆ ಅನ್ನಿಸಿತು. ಅದು ಅವನಲ್ಲಿ ವಿನಾಶಕಾರಕ ಶಕ್ತಿಯನ್ನು ತುಂಬುವ ಹಾಗೆ ಕಂಡಿತು. ತನ್ನಲ್ಲಿ ಯಜ್ಞ ಮಾಡುವ ಆಚಾರ್ಯ ಪ್ರವೃತ್ತಿಯನ್ನು ತುಂಬುವ ಹಾಗೆ ಕಂಡಿತು. ಉರಿಯುವುದು ಮತ್ತು ನಾಶ ಮಾಡುವುದು ಶುದ್ಧೀಕರಣದ ಕ್ರಿಯೆಯೆಂದು ಅವನಿಗೆ ಅನ್ನಿಸಿತು (ಅನ್‌ಟಚಬಲ್ ಪುಟ 29)

ತುಂಬ ಜಾಗರೂಕತೆಯಿಂದ ಬರೆದಿರುವ ಈ ಭಾಗ ಪಂಚಭೂತಗಳಲ್ಲೊಂದಾದ ಅಗ್ನಿಯ ಪ್ರತಿಮೆಯನ್ನು ಉಪಯೋಗಿಸುತ್ತ ಅರೆರೂಪಗೊಂಡ ಬಾಖಾನ ಅರಿವಿನ ಹಿಡಿತಕ್ಕೆ ಸಿಗದಿರುವ ಮತ್ತು ಕತ್ತಲಾಗಿರುವ ಮಗ್ಗುಲುಗಳನ್ನು ಬೆಳಗಿಸುತ್ತದೆ, ಮುಕ್ತಿದಾಯಕವಾದ ಕ್ರೌರ್ಯದಿಂದ ಬಾಖಾನ ಉದ್ದೇಶ ಪೂರ್ಣವಾಗುವುದಿಲ್ಲ. ಆದರೆ ವಿನಾಶಕ್ಕೆ ಸಂಬಂಧಿಸಿದ ಪ್ರತಿಮೆಗಳು ಅವನನ್ನು ಆಕರ್ಷಿಸುತ್ತದೆ ಎನ್ನುವುದು ಅವನ ಅಂತರಂಗದ ಮುಖ್ಯ ಸಂಗತಿಯಾಗಿದೆ.

ಕಾರಂತರ ಕಾದಂಬರಿಗೆ ಸರ್ವಸೂಕ್ಷ್ಮ ಪ್ರಜ್ಞೆಯ ನಿರೂಪಣಾ ವಿಧಾನ ಅವಶ್ಯಕವಾಗುತ್ತದೆ. ಅದನ್ನು ಸಲೀಸಾಗಿ ಬಳಸಿದರೂ ಕೂಡ ಆನಂದರು ಎದುರಿಸಿದ ಸಮಸ್ಯೆಗಳನ್ನು ಕಾರಂತರು ಎದುರಿಸಬೇಕಾಗುತ್ತದೆ. ಬಾಖಾನಂತೆ ಚೋಮನು ಸಹ ವಿದ್ಯಾವಂತನಿಗಿರಬಹುದಾದ ಸ್ವಪ್ರಜ್ಞೆಯಿಲ್ಲದವನಾದರೂ, ಮಾತಿಗೆ ಮೀರಿದ ಆಳ

ವಾದ ಭಾವನೆಗಳನ್ನು ಅನುಭವಿಸುವ ಶಕ್ತಿ ಚೋಮನಿಗಿದೆ. ಸಂಕೇತಗಳನ್ನು ಉಪಯೋಗಿಸುವುದರ ಮೂಲಕ ಕಾರಂತರು ಈ ಸಮಸ್ಯೆಯನ್ನು ಬಿಡಿಸುತ್ತಾರೆ. ಇವುಗಳಲ್ಲಿ ಬಹಳ ಮುಖ್ಯವಾದದ್ದು ಚೋಮನದುಡಿ ಎನ್ನುವುದು ಸ್ಪಷ್ಟವಾಗಿದೆ. ಚೋಮನ ಅನುಭವಗಳ ತೀವ್ರ ಕ್ಷಣಗಳಾದ ಅವನ ಮಕ್ಕಳ ಸಾವು ಅಥವಾ ಅವನು ಪುನಃಪುನಃ ರೈತನಾಗುವ ಕನಸು ನುಚ್ಚುನೂರಾಗುವಿಕೆ ಇಂಥವು ಅವನು ದುಡಿ ಬಾರಿಸುವ ಕ್ರಿಯೆಯಲ್ಲಿ ಸ್ಫೋಟವಾಗುತ್ತವೆ. 'ಶಿವನ ಕೈಯ ಡಮರು ಇದ್ದಂತೆ ಚೋಮನ ದುಡಿ' (ಚೋಮನ ದುಡಿ I. 11) ಎಂದು ಕಾರಂತರು ಹೇಳುತ್ತಾರೆ. 'ಬೀಟಿಂಗ್ ಎ ಡ್ರಮ್' ಎನ್ನುವ ಪ್ರಬಂಧದಲ್ಲಿ ವಿಧಿಗಳಲ್ಲಿ ಸಾಂಕೇತಿಕವಾಗುವ ಪ್ರಾಚೀನ ಮನುಷ್ಯನ ಜೀವನದ ಲಯಗಳ ಅರಿವನ್ನು ಕುರಿತು ಟಿ. ಎಸ್. ಇಲಿಯಟ್ ಹೀಗೆ ಹೇಳುತ್ತಾನೆ: 'ನಾವು ತಮ್ಮಟೆಯನ್ನು ಕಳೆದುಕೊಂಡಿದ್ದೇವೆ'. ಇದು ಆಧುನಿಕ ಮಾನವನ ಬಗ್ಗೆ ನಿಜವಾಗಿದ್ದರೂ ಚೋಮ ಮಾತ್ರ ತನ್ನ ಪರಕೀಯ ಸ್ಥಿತಿಯಿಂದ ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಪದೇಪದೇ ತನ್ನ ದುಡಿಗೆ ಹಿಂತಿರುಗುತ್ತಾನೆ. ದುಡಿಯನ್ನು ಬಾರಿಸುವುದು ಎಲ್ಲ ಸಂಕೇತಗಳಿಗಿಂತ ಹೆಚ್ಚಾಗಿ ಚೋಮನ ಅಂತರಂಗದ ತಳಮಳವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

IV

ಬಾಖಾ ಮತ್ತು ಚೋಮನ ಜೀವನಾನುಭವಗಳು ಪರಸ್ಪರ ಸಂಬಂಧವಿಲ್ಲದ ಸಂದರ್ಭಗಳಲ್ಲಿ ಕಾಣಿಸಿಕೊಂಡರೂ ಅವುಗಳ ಮೂಲಭೂತ ಸಾಮ್ಯಗಳು ಆಶ್ಚರ್ಯಕರವಾಗಿವೆ. ಅವರನ್ನು ವಿರೋಧಿಸುವ ಸಾಮಾಜಿಕ ಕ್ರಿಯೆಗಳು ಅವರು ಅಸ್ಪೃಶ್ಯರೆನ್ನುವ ವಿಶಿಷ್ಟತೆಯ ಅರಿವನ್ನು ಅವರ ಮೇಲೆ ಹೇರಿದಾಗ ಎರಡೂ ಕಾದಂಬರಿಗಳಲ್ಲಿ ಕ್ರಿಯೆಗಳು ಪರಾಕಾಷ್ಠೆಯನ್ನು ಮುಟ್ಟುತ್ತವೆ. ಅನ್‌ಟಚಬಲ್ ಕಾದಂಬರಿಯಲ್ಲಿ ಉಚ್ಚಜಾತಿಯ ಒಬ್ಬ ಲಲ್ಲಾನನ್ನು ಮುಟ್ಟಿ ಕೆಡಿಸಿದನೆನ್ನುವ ಆಪಾದನೆಯ ಮೇಲೆ ಬಾಖಾಗೆ ಸಾರ್ವಜನಿಕವಾಗಿ ಕೆನ್ನೆಗೆ ಹೊಡೆದಾಗ ಕ್ರಿಯೆಯ ಪರಾಕಾಷ್ಠೆಯಿದೆ. ಅವನಿಗೆ ಹೊಡೆದ ವ್ಯಕ್ತಿ ಬಾಖಾನಷ್ಟು ದೃಢಕಾಯನಲ್ಲವೆನ್ನುವಲ್ಲಿನ ಪರಿಸ್ಥಿತಿಯ ವ್ಯಂಗ್ಯವನ್ನು ಗಮನಿಸಬೇಕಾಗುತ್ತದೆ. ಬಾಖಾ ಅವನಿಗೆ ಸುಲಭವಾಗಿ ನೀರು ಕುಡಿಸಬಹುದಾಗಿತ್ತು. ಆದರೆ ಬಾಖಾ ಕೈಯೆತ್ತಲಾರ; ನರಳುವುದು ಮಾತ್ರ ಅವನ ಪಾಲಿಗೆ ಬಂದದ್ದು. ನೋವಿನಿಂದ ಕೂಡಿದ ಅವನ ಮನಸ್ಸು ಆ ಸಂದರ್ಭದ ಅರ್ಥವನ್ನು ತಿಳಿಯುವವರೆಗೂ ಕೆಲವೇ ನಿಮಿಷಗಳಲ್ಲಿ ಅತ್ಯಂತ ದೈನ್ಯಾವಸ್ಥೆಯಿಂದ ಭಯಂಕರವಾದ ಕೋಪದವರೆಗಿನ ಭಾವನೆಗಳು ಅವನ ಮನಸ್ಸಿನಲ್ಲಿ ಸುಳಿದು ಹೋಗುತ್ತವೆ :

> ಈಗ ಎಲ್ಲವೂ ಸ್ಪಷ್ಟವಾಗಿತ್ತು. ಹಿಂದೆ ಜಡವಾಗಿದ್ದ, ಮರಗಟ್ಟಿದ್ದ ಅವನ ಗ್ರಹಿಕೆಗಳ ಮೂಲಕ ಒಂದು ಧಕ್ಕೆ ಹರಿದು ಬಂದು, ಅವನ ಅಸ್ತಿತ್ವದಲ್ಲಿ ಒಂದು

> ನಡುಕವನ್ನುಂಟುಮಾಡಿ ಅವನ ಕಣ್ಣು ಕಿವಿ ಮೂಗು ಚರ್ಮ ನಾಲಿಗೆಗೆ ಸಂಬಂಧಿಸಿದ ನರಗಳನ್ನು ಅಲುಗಾಡಿಸಿ, ಚೇತನಗೊಳಿಸಿತ್ತು. 'ನಾನೊಬ್ಬ ಹೊಲೆಯ' ಎಂದು ತನಗೇ ಹೇಳಿಕೊಂಡ 'ನಾನೊಬ್ಬ ಹೊಲೆಯ' (ಅನ್‌ಟಚಬಲ್ 57)

ಬಾಖಾನ ಉದ್ಯೋಗ ಕಕ್ಕಸುಗಳನ್ನು ತೊಳೆಯುವುದು ಮತ್ತು ಬೀದಿಯ ಕಸಗುಡಿಸುವುದಾದರೆ, ಚೋಮನ ಕೆಲಸ ಬೇರೆ ರೀತಿಯದು. ಚೋಮನ ಬದುಕು ಚೊಕ್ಕವಾದದ್ದಾದರೂ, ಬೇರೆಯವರು ಅಪವಿತ್ರ ಮಾಡುವ ಪ್ರತಿದಿನದ ಹೆದರಿಕೆ ಅವನಿಗಿಲ್ಲ. ತಾನು ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವಾಗ ತಾನು ಬರುವುದನ್ನು ಸೂಚಿಸಬೇಕಾದ ಅವಮಾನದ ಅವಶ್ಯಕತೆ ಚೋಮನಿಗಿಲ್ಲ. 'ಹುಶ್ ಹುಶ್ ಕಸ ಹೊಡೆಯುವವನು ಬರುತ್ತಿದ್ದಾನೆ' ಎನ್ನಬೇಕಾಗಿಲ್ಲ. ಅವನನ್ನು ರೈತನಾಗಲಿಕ್ಕೆ ಬಿಟ್ಟಿಲ್ಲದಿರುವ ಅಸ್ಪೃಶ್ಯತೆ ಅವನಿಗೆ ಶಾಪವಾಗಿ ಕಾಣಿಸುತ್ತದೆ. ಆದರೆ ಅವನಿಗೆ ಕೂಡ ತಪ್ಪಿಸಿಕೊಳ್ಳಲಾಗದ ತನ್ನ ಪ್ರತ್ಯೇಕತೆಯ ಅರಿವು ಆಗುವುದು ಒಂದು ಭಯಂಕರ ಸನ್ನಿವೇಶದಲ್ಲಿಯೇ. ಈ ಸನ್ನಿವೇಶದಲ್ಲಿ ಸ್ಪರ್ಶದ ಹೆದರಿಕೆ ತನ್ನ ರಾಕ್ಷಸೀಯ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಅವನ ಕಿರಿಯ ಮಗ ನೀಲ ಹೊಳೆಯಲ್ಲಿ ಮುಳುಗುತ್ತಿರುವುದನ್ನು ಇಡೀ ಹಳ್ಳಿಯ ಜನ ನೋಡುತ್ತಿದ್ದರೂ ಒಬ್ಬರೂ ಅವನನ್ನು ಉಳಿಸುವುದಕ್ಕೆ ಪ್ರಯತ್ನಿಸುವುದಿಲ್ಲ. ಈ ಸಂದರ್ಭದಲ್ಲಿ ನಿರೂಪಣೆಯಲ್ಲಿ ಈ ಮಾತುಗಳಿವೆ. "ಒಬ್ಬ ಬ್ರಾಹ್ಮಣ ತರುಣನು ಧಾವಿಸಿ ನೀಲನನ್ನು ಎಳೆದು ತರಲು ಮುಂದುವರಿದನು. ಅವನ ಹಿರಿಯರು ಅವನನ್ನು ತಡೆದರು. "ಅವನು ಹೊಲೆಯನಲ್ಲವೆ?" ಎಂದರು. (ಚೋಮನ ದುಡಿ XVI 133) ಕಡೆಯಲ್ಲಿ ನೋ ಬ್ರಾಹ್ಮಣರ ಹುಡುಗ ಹೊಳೆಗೆ ದುಮುಕುತ್ತಾನೆ. ಆದರೆ ಪ್ರಯೋಜನವಾಗುವುದಿಲ್ಲ. ಅವನು ಹೆಣವನ್ನು ಮಾತ್ರ ಎಳೆದು ತರುತ್ತಾನೆ. ಅಸಹಾಯನಾಗಿ ಚೋಮ ಈ ದೃಶ್ಯವನ್ನು ನೋಡುವಾಗ, ಬಾಖಾನಿಗೆ ಲಲ್ಲಾ ಕೆನ್ನೆಗೆ ಬಾರಿಸಿದಾಗ ಹೊಳೆದ ಹಾಗೆಯೇ ಚೋಮನಿಗೆ ಈ ಸಂದರ್ಭದಲ್ಲಿ ತನ್ನ ಪರಿಸ್ಥಿತಿಯ ಅರ್ಥ ಹೊಳೆಯುತ್ತದೆ.

> ಚೋಮನಿಗೆ ಹೊಲೆಯರ ಬಾಳ್ವೆಯ ಹುಣ್ಣು ಎಂಥದೆಂದು ಆಗ ಪೂರ್ಣ ಅನುಭವವಾಯಿತು. ಶವವನ್ನು ಹೊತ್ತು ಮನೆಗೆ ತಂದನು... ಚೋಮನು ಶವವನ್ನಿರಿಸಿಕೊಂಡು, ಮನೆಯ ಕದವನ್ನು ಮುಚ್ಚಿ ಯಾರ ಕಣ್ಣಿಗೂ ಕಾಣದಂತೆ ಕುಳಿತುಬಿಟ್ಟನು. (ಚೋಮನ ದುಡಿ XVI 139)

ಈ ಕಾದಂಬರಿಗಳ ಒಳ ಸ್ವರೂಪಗಳು ರಚನೆಯಲ್ಲೂ ಹೋಲಿಕೆಗಳನ್ನು ಪಡೆದಿರುವುದು ಆಶ್ಚರ್ಯಕರವಾಗಿದೆ. ಬಾಖಾನಿಗೆ ಸುಂದರಿಯಾದ ತನ್ನ ತಂಗಿ ಸೋಹಿನಿ ಬಗ್ಗೆ ಇರುವ ತೀವ್ರವಾದ ಪ್ರೀತಿ, ಅವಳು ತನ್ನ ವಿಶೇಷವಾದ ಕೊಳ್ಳುವ ಸಂಬಂಧದಿಂದಾಗಿ ಮೂಡಿದ್ದು ; ಅವಳು ದೇವಸ್ಥಾನದ ಪ್ರಾಕಾರದಲ್ಲಿ ಗುಡಿಸುವಾಗ ಅದರ ಅರ್ಚಕ ಅವಳನ್ನು ಹಿಡಿದುಕೊಳ್ಳುವುದಕ್ಕೆ ಪ್ರಯತ್ನಿಸಿದಾಗ ಅವನಿಗೆ ಭಾರೀ ಸಿಟ್ಟು

ಬರುವುದಲ್ಲದೆ ಮನಸ್ಸಿಗೆ ತುಂಬ ನೋವು ಆಗಿ ಅವನಿಗೆ ಅರ್ಚಕನ ಮೇಲೆ ಸೇಡು ತೀರಿಸಿಕೊಳ್ಳಬೇಕೆನಿಸುತ್ತದೆ. ಆದರೆ ಅವನು ಸೇಡನ್ನು ಕಾರ್ಯಗತ ಮಾಡಲಾರ. ಇಡೀ ಸಂದರ್ಭದ ಮೇಲೆ ಆನಂದರು ಬೆಳಕು ಚೆಲ್ಲುವ ರೀತಿ ಅರ್ಥಪೂರ್ಣವಾಗಿದೆ.

> ಅವನೇನಾದರೂ ಹೇಳಬೇಕೆಂದು ಹೋಗಿ ಏನಾದರೂ ಮಾಡಿಬಿಡಬೇಕೆಂದು, ಅಡ್ಡ ಗಟ್ಟಿಸಿಕೊಂಡ ಹುಲಿಯ ಅದ್ಭುತರೂಪ ಮೇಲೆದ್ದ ಹಾಗೆ, ಎದ್ದುಬಿಡಬೇಕೆಂದು ದೃಢವಾದ ನಿರ್ಧಾರ ಮಾಡಿಕೊಂಡಾಗ, ಮನುಷ್ಯರಲ್ಲೇ ಅತ್ಯುತ್ತಮ ಮಾದರಿಯಾಗಿ ಅವನು ಕಾಣಿಸಿಕೊಂಡ, ಆದರೂ ಅವನ ಮುಖದಲ್ಲಿ ಹತಾಶೆ ಬರೆದಿಟ್ಟಹಾಗಿತ್ತು. ತಮ್ಮ ದೌರ್ಬಲ್ಯವನ್ನು (ಬಾಖಾನಂಥವರು) ಮುರಿಯದ ಹಾಗೆ ಮೇಲಿನವರು ಏರಿಸಿದ ಕಟ್ಟು ಕಟ್ಟಳೆಗಳನ್ನು ಅಡ್ಡಗೋಡೆಗಳನ್ನು ದಾಟುವುದು ಅವನಿಗೆ ಸಾಧ್ಯ ವಿರಲಿಲ್ಲ. ಅವರ ಮಾಂತ್ರಿಕವಲಯದಲ್ಲಿ ಒಬ್ಬ ಅರ್ಚಕನನ್ನು ಥಳಿಸುವುದು ಅದರಲ್ಲೂ ಒಬ್ಬ ಅಸ್ಪೃಶ್ಯ ಅಂಥ ಕೆಲಸಮಾಡುವುದು, ಅವರ ಮಾಂತ್ರಿಕ ವಲಯದೊಳಗೆ ನುಗ್ಗುವುದು ಅವನಿಂದ ಸಾಧ್ಯವಿರಲಿಲ್ಲ. ಆದ್ದರಿಂದ ತನ್ನ ಶಕ್ತಿಯ ಪರಾಕಾಷ್ಠೆ ಯಲ್ಲಿದ್ದಾಗಲೂ, ಅವನಲ್ಲಿರುವ ಗುಲಾಮನದ್ದೇ ಮೇಲುಗೈಯಾಗಿ, ಅವನು ದಾರುಣವಾದ ನೋವಿನಿಂದ ತುಟಿಗಳನ್ನು ಕಚ್ಚಿಕೊಳ್ಳುತ್ತ, ತನ್ನ ದೂರುಗಳನ್ನು ಮುಲುಕು ಹಾಕುತ್ತ, ಹಿಂಜರಿಯಬೇಕಾಯಿತು. (ಅನ್‌ಟಚಬಲ್ ಪುಟ 71).

ಸೂತಪುತ್ರನಾದ ಕರ್ಣನ ಶಕ್ತಿ ಅವನಿಗೆ ಅದರ ಅವಶ್ಯಕತೆ ಜಾಗ್ರತೆಯಿದ್ದಾಗಲೇ ಬತ್ತಿ ಹೋಗುತ್ತಿದ್ದ ಮೂಲಮಾದರಿ ಬಾಖಾನ ಜೀವನದಲ್ಲೂ ಪುನರಾವೃತ್ತಿಯಾಗುತ್ತದೆ.

ಚೋಮ ಕರ್ಣನ ರೀತಿಯ ಮಾನಸಿಕ ತೊಡಕಿಗೆ ಸಿಕ್ಕವನಲ್ಲವಾದರೂ, ಅವನು ಅಂಥದೇ ಒಂದು ಸಂದರ್ಭದಲ್ಲಿ ಸಿಕ್ಕಿಕೊಳ್ಳುತ್ತಾನೆ. ಅವನು ಅಕಸ್ಮಾತ್ತಾಗಿ ಹಿಂತಿರುಗಿ ಬಂದು ಕ್ರಿಸ್ತಜಾತಿಗೆ ಸೇರಿದ ತನ್ನ ಮಗ ಗುರುವನನ್ನು ಕಂಡಾಗ ಮತ್ತು ತನ್ನ ಗುಡಿಸಲಲ್ಲಿ ಮದುವೆಯಾಗದ ತನ್ನ ಮಗಳು ಅವಳನ್ನು ಕೆಡಸಿದ ಮನ್ವೇಲನ ಜೊತೆಗಿರುವುದನ್ನು ಕಂಡಾಗ ಅವನ ಪ್ರತಿಕ್ರಿಯೆಯಲ್ಲಿ ಕ್ರೌರ್ಯವೇ ತುಂಬಿಕೊಳ್ಳುತ್ತದೆ.

> ಅವಳ ಕೈಯನ್ನು ಗಬಕ್ಕನೆ ಹಿಡಿದನು. ಬೆಳ್ಳಿಯ ಮೈ ಬೆವರಿಂದ ಮುದ್ದೆಯಾಗಿತ್ತು. ಹಾಗೆಯೇ ಮಂಕನಂತೆ ನೋಡಿದನು. ಅವಳ ಕತ್ತನ್ನು ಅಮುಕಿ ಹಿಡಿದು ಮರುಳನಂತೆ ಅವಳನ್ನು ಚುಂಬಿಸಿದನು. ಅವನ ವಿಕಟ ಹೆಚ್ಚಿದಂತೆ, ಬೆಳ್ಳಿಯ ಪಂಚವಾಯುಗಳು ಕ್ಷಯಿಸುತ್ತ ಬಂದವು. ಕೊನೆಗೆ ಚೋಮ ಅವಳ ಕತ್ತನ್ನು ಹಿಡಿದು ಅಪ್ಪಳಿಸಿ ಹೊರಕ್ಕೆ ತಳ್ಳಿ ಕದವನ್ನು ಮುಚ್ಚಿಕೊಂಡನು. (ಚೋಮನದುಡಿ xviii ಪುಟ 149)

ಚೋಮ ತನ್ನ ಅಸಹಾಯಕತೆಯ ಅಂತ್ಯದಲ್ಲಿದ್ದಾನೆ. ಅವನು ಉದ್ರೇಕದ ಕ್ಷಣದಲ್ಲಿ ಬೆಳ್ಳಿಯನ್ನು ಶಿಕ್ಷಿಸಿದರೂ, ಅವನು ನಿಜವಾಗಿಯೂ ಬಾಖಾನಷ್ಟೆ ಅಸಹಾಯ

ನಾಗಿರುವುದರಿಂದ ಆ ಸಂದರ್ಭವನ್ನು ಎದುರಿಸಲಾರ. ಚೋಮನ ವಿಷಯದಲ್ಲಿ ಪರಿಸ್ಥಿತಿ ಇನ್ನೂ ವಿಷಮವಾಗಿದೆ. ಸೋಹಿಣಿ ತಾನು ಬಲಿಯಾಗಲಿಕ್ಕೆ ಒಪ್ಪಿರಲಿಲ್ಲ. ಆದರೆ ಬೆಳ್ಳಿ ತನ್ನನ್ನು ಕೆಡಸಿದವನಿಗೆ ಬಲಿಯಾಗಲಿಕ್ಕೆ ಸಿದ್ಧವಾಗಿದ್ದಾಳೆ.

ಈ ಕಾದಂಬರಿಗಳ ನಾಯಕರಿಬ್ಬರೂ ಕ್ರಿಸ್ತಧರ್ಮವನ್ನು ಸಂಧಿಸುವ ರೀತಿಯಲ್ಲಿ ಸಮಾನಾಂಶಗಳಿವೆ. ಚೋಮ ತನ್ನ ಪೂರ್ವಜರ ಧರ್ಮದಲ್ಲಿ ಮುಳುಗಿ ಹೋಗಿರುವುದರಿಂದ ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದುವುದರ ಮೂಲಕ ತನ್ನ ಧರ್ಮದಿಂದ ತಪ್ಪಿಸಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಆದರೂ ಮತಾಂತರಗೊಂಡ ಗುರುವನ ಅಸ್ಪೃಶ್ಯತೆ ಹೋಗಿ ಅವನು ನೆಲದೊಡೆಯನಾಗುವುದು ಸಾಧ್ಯವಾದದ್ದನ್ನು ಕಂಡು ಚೋಮನಿಗೆ, ಮತಾಂತರದ ಆಸೆಯಾಗುತ್ತದೆ. ನೀಲನ ಸಾವಿನ ಅಪಘಾತ ಹಿಂದೂ ಧರ್ಮದ ಬಗ್ಗೆ ಅವನ ಮನಸ್ಸನ್ನು ಕಲ್ಲುಮಾಡಿದೆ. 'ತನ್ನ ದೇವರನ್ನು ನಂಬಿ ತನ್ನ ಆಸೆಯು ಕೈಗೂಡದ ಮೇಲೆ ಪಾದ್ರಿಯ ದೇವರನ್ನು ನಂಬಲೇನು ಹಾನಿ?' (ಚೋಮನ ದುಡಿ. xvii. 141–142). ಅವನ ಆಲೋಚನೆಗಳನ್ನು ಬೆಳ್ಳಿಗೆ ಹೇಳಿದಾಗ ಆಕೆಯೂ ಅದಕ್ಕೆ ಒಪ್ಪಿಗೆ ಸೂಚಿಸುತ್ತಾಳೆ. ಬೆಳ್ಳಿ ಚಿಕ್ಕವಳಾದರೂ ಅವಳಲ್ಲಿ ಬಾಖಾನಿಗಿರುವ ಅಸ್ವಸ್ಥತೆ, ರೋಷವಿಲ್ಲ. ಜೀವನದಲ್ಲಿ ಏನು ಬಂದರೂ ಅದನ್ನು ಲಾಭದ ದೃಷ್ಟಿಯಿಂದ ಆಕೆ ಒಪ್ಪಿಕೊಳ್ಳುತ್ತಾಳೆ. ಇದಕ್ಕೂ ಮುಂಚೆ ಆಕೆ ಅಪ್ಪನ ಅನಾಥವಾದ ಮತ್ತು ಅಪಾಯಕಾರಿಯಾದ ಆಸೆಯನ್ನು ತಡೆಗಟ್ಟಲು ಪ್ರಯತ್ನ ಮಾಡಿ ಸೋತು ಹೋಗಿದ್ದಳು. ಈಗ ಸಂಸಾರ ಒಟ್ಟುಗೂಡುವ ದೃಷ್ಟಿಯಿಂದ ಚೋಮ, ಗುರುವನನ್ನು ನೋಡಲಿಕ್ಕೆ ಹೋಗಬೇಕೆಂದು ಒತ್ತಾಯಿಸುತ್ತಾಳೆ. ಚೋಮ ತನ್ನ ಹಿರಿಯರ ಧರ್ಮದ ಪ್ರಭಾವವನ್ನು ಸರಿಯಾಗಿ ಲೆಕ್ಕಿ ಹಾಕಿಲ್ಲ ಎನ್ನುವುದು ಸುಸ್ಪಷ್ಟ. ಆ ಧರ್ಮ ಮೂಢನಂಬಿಕೆಯ ಮೇಲೆ ನಿಂತಿದ್ದಾದ್ದರಿಂದ ಅವನು ದಾರಿಯಲ್ಲಿ ಪಂಜುರ್ಲಿಯ ಗುಡಿಯ ಹತ್ತಿರಬಂದಾಗ ಪಂಜುರ್ಲಿಯನ್ನು ನೋಡಿ ತನ್ನನ್ನು ಬಯ್ಯುತ್ತಿರುವ ಅದರ ದನಿಯನ್ನೂ ಕೇಳಿ ಅವನ ಧೈರ್ಯ ಉಡುಗಿ ಹೋಗುತ್ತದೆ. ಸ್ವಲ್ಪ ಹಿಂದೆ ಮಾಡಿಕೊಂಡ ಅವರ ನಿರ್ಧಾರ ಕುಸಿದು ಬೀಳುತ್ತದೆ.

> ಅವನ ಮೈಯಲ್ಲಿ ರೋಮಾಂಚನವಾಯಿತು. ತಲೆ ತಲಾಂತರದಿಂದ ನಂಬಿ ಬಂದ ದೇವರನ್ನು ಮರೆತು ತಾನಂಥ ಉದ್ದಟ ಕೆಲಸವನ್ನು ಮಾಡುವುದು ಸರಿಯಿಲ್ಲವೆನಿಸಿತು. ಪಾದ್ರಿಮತದವರು ಸಾಯುವುದಿಲ್ಲವೆ ? ಕಷ್ಟ ಸುಖ ಒಂದಲ್ಲ ಒಂದು ರೀತಿಯಿಂದ ಕ್ರಿಸ್ತರಿಗೂ ತಪ್ಪಿದುದುಂಟೆ ? - ಎಂಬ ವಿಚಾರಲಹರಿಯು ಬಂದಿತು. ಇತ್ತ ತಾನು ನಂಬಿದ ಭೂತವನ್ನು ಮರೆತರೆ ಸಾಯುವತನಕ ಅದರ ಉಪದ್ರ ತಪ್ಪಲಾರದು– ಎಂಬ ಭೀತಿಯುಂಟಾಯಿತು (ಚೋಮನದುಡಿ xviii 148)

ಶಾನು ಮತ್ತೆ ಮತ್ತೆ ಅವಮಾನಕ್ಕೀಡಾದ ಒಂದು ಊರಿನಿಂದ ಇನ್ನೊಂದು ಊರಿಗೆ ಓಡುವ ಬಾಖಾನಿಗೂ ಕ್ರಿಸ್ತಧರ್ಮದ ಸಂಪರ್ಕವಾಗುತ್ತದೆ. ಆದರೆ ಇದು

ತಮಾಷೆಯಲ್ಲಿ ಕೊನೆಗೊಳ್ಳುತ್ತದೆ. ಬಾಖಾನಿಗೆ ಹಿಂದೂಧರ್ಮವು ಅಷ್ಟಾಗಿ ಗೊತ್ತಿಲ್ಲ. ಕ್ರಿಶ್ಚಿಯನ್ ಧರ್ಮದ ಬಗ್ಗೆ ಅವನ ತಿಳಿವು ಇನ್ನೂ ಕಡಿಮೆ. ಹೆಂಡತಿಗೆ ಹೆದರುವ, ದೇವರ ಪ್ರಾರ್ಥನೆಗಳನ್ನು ಹಾಕುವ ಹಚಿನ್ಸನ್ ಬಗ್ಗೆ ಬಾಖಾನಿಗಿರುವ ಆಕರ್ಷಣೆ ಯೆಂದರೆ, ಹಚಿನ್ಸನ್ನನ ಯೂರೋಪಿನ ಉಡುಪು ಮಾತ್ರ. "ಅವನು ಸಾಹೇಬರನ್ನು ಹಿಂಬಾಲಿಸಿದ್ದಕ್ಕೆ ಕಾರಣ ಸಾಹೇಬ ಟ್ರೌಸರ್ಸ್ ಹಾಕಿಕೊಂಡಿದ್ದ. ಟ್ರೌಸರ್ಸ್ ಹಾಕಿಕೊಳ್ಳುವುದು ಅವನ ಜೀವನದ ದೊಡ್ಡ ಕನಸಾಗಿತ್ತು (ಅನ್‌ಟಚಬಲ್ 141) ಹಚಿನ್ಸನ್ನನ ಹಾಡುಗಳಾಗಲಿ ಅಥವಾ ಪಾಪ ಮತ್ತು ಪ್ರಾಯಶ್ಚಿತ್ತದ ಬಗ್ಗೆ ಅವನ ಉಪದೇಶಗಳಾಗಲಿ ಬಾಖಾನಿಗೆ ಅರ್ಥ ಪೂರ್ಣವಾಗಿರಲಿಲ್ಲ.

> ಬಲಿಕೊಡುವುದರ ಬಗ್ಗೆ ಅವನ ಅಭಿಪ್ರಾಯಗಳು ಖಚಿತವಾಗಿದ್ದವು. ಮನೆಗೆ ಕಾಹಿಲೆ, ಹಸಿವು ಮುಂತಾದ ಆಪತ್ತುಗಳು ಬಂದಾಗ ಅವನ ತಾಯಿ ಕಾಳಿಗೆ ಕುರಿಯನ್ನೋ ಅಥವಾ ಇನ್ನೊಂದು ಪ್ರಾಣಿಯನ್ನೋ ಬಲಿಕೊಡುತ್ತಿದ್ದುದು ಅವನಿಗೆ ನೆನಪಾಯಿತು. ಹಾಗೆ ಬಲಿಕೊಡುವುದರಿಂದ ಕಾಳಿಯ ಕೋಪ ಕಡಿಮೆಯಾಗಿ ದುರದೃಷ್ಟ ಕಳೆದು ಹೋಗುತ್ತದೆ. ಆದರೆ ಪ್ರವಾದಿಯಾದ ಏಸುವಿನ ಬಲಿ ಎಂದರೆ ಏನು ? ಅವನು ತನ್ನನ್ನೆ ಬಲಿಕೊಟ್ಟುಕೊಂಡದ್ದು ಏಕೆ? (ಅನ್‌ಟಚಬಲ್. ಪುಟ. 141-42)

ಚೋಮನ ವಿಷಯದಲ್ಲಿ ಆದ ಹಾಗೆಯೇ ಸಾವಿರಾರು ವರ್ಷಗಳಿಂದ ಹಿಂದೂ ಧರ್ಮ ಹುಟ್ಟುಹಾಕಿದ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಟ್ಟುಕಟ್ಟಳೆಗಳಿಂದ ಬಾಖಾ ವಿಷಯದಲ್ಲೂ ಕ್ರಿಸ್ತಮತ ಸೋತು ಹೋಗುತ್ತದೆ. ಬಾಖಾನನ್ನು ಕ್ರಿಸ್ತದೇವಸ್ಥಾನಕ್ಕೆ ಕರೆದುಕೊಂಡು ಹೋಗುವ ಕರ್ನಲ್ ಹಚಿನ್ಸನ್ನನ ಪ್ರಯತ್ನ, ಬಾಖಾನ ಹೆಂಡತಿಯ ಬೈಗುಳದ ಸಿಡಿತದ ಎದುರು ಬಿದ್ದುಹೋಗುವ ರೀತಿ ತಮಾಷೆಯಾಗಿದೆ. ಮೇಮ್ ಸಾಹೇಬರನ್ನು ಕಂಡರೆ ಬಾಖಾನಿಗಿರುವ ಅಸಾಧ್ಯ ಹೆದರಿಕೆಯಿಂದಾಗಿ, ಮಿಸೆಸ್ ಹಚಿನ್ಸನ್ನಳನ್ನು ಕಂಡಾಗ ಅವನು ಓಡಿಹೋಗುತ್ತಾನೆ. ಆಮೇಲೆ ಈ ಇಡೀ ಅನುಭವ ಅಂತರಂಗದಲ್ಲಿ ಅಸಹ್ಯವನ್ನು ಹುಟ್ಟಿಸುತ್ತದೆ.

V

ಇಷ್ಟು ಸಂರಚನಾತ್ಮಕವಾದ ಸಾಮ್ಯಗಳಿದ್ದರೂ ಈ ಎರಡೂ ಕಾದಂಬರಿಗಳ ಮುಕ್ತಾಯಗಳಲ್ಲಿ ವ್ಯತ್ಯಾಸವಿದೆ. ಆನಂದರ ಮಾರ್ಕ್ಸಿಸ್ಟ್ ಯೋಜನೆಗೆ ಅನುಗುಣ ವಾಗಿ ಅನ್‌ಟಚಬಲ್ ಕಾದಂಬರಿ ನಿಯಂತ್ರಿತವಾದ ಆಶಾವಾದದಲ್ಲಿ ಮುಗಿಯುತ್ತದೆ. ಬಾಖಾನ ಅವಮಾನಗಳ ದಿನ ಮುಗಿಯುತ್ತಿದ್ದ ದಿನವೇ ಮಹಾತ್ಮಾಗಾಂಧಿಯವರು ಬುಲುಂದ್‌ಶಹರಿಗೆ ಬರುತ್ತಾರೆ. ಮಹಾತ್ಮರ ದರ್ಶನಕ್ಕಾಗಿ ರೈಲ್ವೆ ಸ್ಟೇಶನ್ನಿನಲ್ಲಿ ಸೇರಿರುವ ಜನಜಂಗುಳಿಗಳಲ್ಲಿ, ತಾತ್ಕಾಲಿಕವಾಗಿ ಬಾಖಾನ ಪ್ರತ್ಯೇಕತೆ ಕರಗಿ ಹೋಗು ತ್ತದೆ. ಆತ್ಮಚರಿತ್ರಾತ್ಮಕವಾಗಿ ಪ್ರಭಾವಶಾಲಿಯಾಗಿ ಮಹಾತ್ಮರು ಆಡಿದ ಮಾತು ಗಳು ಅಸ್ಪೃಶ್ಯತೆಯ ಸಮಸ್ಯೆಗೆ ಧಾರ್ಮಿಕ ಹಾಗೂ ನೈತಿಕ ಪರಿಹಾರವನ್ನು

ಸೂಚಿಸುತ್ತವೆ. ಶಾಂತಿಯುತವಾದ ಬದಲಾವಣೆಯ ಮೂಲಕ ಮತ್ತು ಆತ್ಮ ಶುದ್ಧೀಕರಣದ ಮೂಲಕ ಅಸ್ಪೃಶ್ಯತೆ ಹೊರಟುಹೋಗಬೇಕೆಂದು ಮಹಾತ್ಮರು ಹೇಳಿದಾಗ ಬಾಖಾನ ಮೇಲೆ ಅದು ಶುದ್ಧೀಕರಣದ ಪರಿಣಾಮವನ್ನೂ ಬೀರುತ್ತದೆ;

> ಮುಕ್ತಾಯದ ಭಾಗದ ಪ್ರತಿಯೊಂದು ಶಬ್ದವೂ ಮೇಲ್ಜಾತಿಯವರು ಅಸ್ಪೃಶ್ಯರಿಗೂ ತಮಗೂ ನಡುವೆ ಎಬ್ಬಿಸಿದಂಥ ಪ್ರತ್ಯೇಕತೆಯ ಬಗ್ಗೆ ತನ್ನ ಆಳದಲ್ಲಿ ತೀವ್ರವಾಗಿದ್ದ ಭೀತಿಯ ಮತ್ತು ಸಿಟ್ಟಿನ ಭಾವನೆಯನ್ನು ಪ್ರತಿಧ್ವನಿಸಿತು. ಮಹಾತ್ಮರು ತನ್ನ ಅಂತರಂಗದ ಮೂಲೆಮೂಲೆಗಳನ್ನು ಮುಟ್ಟಿದ ಹಾಗೆ ಅವನಿಗೆ ಅನ್ನಿಸಿತು. (ಅನ್‌ಟಚಬಲ್. ಪುಟ. 165).

ಆದರೆ ಅದೇ ಕಾಲದಲ್ಲಿ ಅವನು ಮಹಾತ್ಮರ ಭಾಷಣವನ್ನು ಟೀಕಿಸುವ ಇಖ್ಬಾಲ್-ನಾಥ್ ಸರಾಶರ್‌ನಿಂದಲೂ ಆಕರ್ಷಿತನಾಗುತ್ತಾನೆ. ತಮ್ಮ ಕೀಳುಕೆಲಸದ ಬದಲಾವಣೆಯಿಂದ ಮತ್ತು ಯಂತ್ರದ ಉಪಯೋಗದಿಂದ ಅಸ್ಪೃಶ್ಯತೆಯನ್ನು ಅಳಿಸಿ ಹಾಕಬಹುದೆಂದು ಅವನಿಗೆ ಮನದಟ್ಟಾಗುತ್ತದೆ. ಯಂತ್ರದ ವಿಚಾರಕ್ಕೆ ಅವನು ಮಾರುಹೋಗುತ್ತಾನೆ.

> "ಯಾರೂ ಕೈಯಿಂದ ಮುಟ್ಟದೆ ತಾನೇ ಹೊಲಸನ್ನು ಎತ್ತಿಹಾಕುವ ಆ ಯಂತ್ರ ಹೇಗಿರುತ್ತದೆ?" ಎಂದು ಅವನು ಯೋಚಿಸಿದ. ಆ ಕವಿಯನ್ನು ಆ ಗಣ್ಯ ಮನುಷ್ಯ ಎಳೆದುಕೊಂಡು ಹೋಗದಿದ್ದರೆ ಅವನನ್ನೇ ಕೇಳಿಬಿಡಬಹುದಾಗಿತ್ತು. (ಅನ್‌ಟಚಬಲ್. ಪುಟ. 172).

ಬಾಖಾನ ಅಂತರಂಗದ ಘರ್ಷಣೆ ಮುಂದುವರಿದರೂ ಅವನಿಗಾಗಲೇ ತಾತ್ಕಾಲಿಕ ಸಮಾಧಾನ ಸಿಕ್ಕುತ್ತದೆ. ಸೂರ್ಯ ಮುಳುಗುತ್ತಿದ್ದ ಹಾಗೆ ಅವನು ಮನೆಯ ಕಡೆ ಹೊರಡುತ್ತಾನೆ.

ಕಾದಂಬರಿಯ ಕೊನೆಯಲ್ಲಿ ಚೋಮ ಕೂಡ ಮನೆಗೆ ಹಿಂದಿರುಗುತ್ತಾನೆ. ಆದರೆ ಅವನು ಕಾಣುವುದು ತನ್ನ ಪ್ರಿಯಕರನೊಂದಿಗಿರುವ ಬೆಳ್ಳಿಯನ್ನು. ಬೆಳ್ಳಿಯ 'ದ್ರೋಹ' ಅವನನ್ನು ಪರಕೀಯ ಸ್ಥಿತಿಗೆ ತಳ್ಳಿಬಿಡುತ್ತದೆ. ಅವನು ಇಚ್ಛಾಪೂರ್ವಕವಾಗಿ ತನ್ನೆಲ್ಲ ಸಂಬಂಧಗಳನ್ನು ಕಡಿದುಹಾಕಿಕೊಂಡು ಸಾಯುವುದಕ್ಕೆ ಸಿದ್ಧನಾಗುತ್ತಾನೆ. ಬಾಖಾನ ಹಾಗೆ ಸಪ್ಪೆಯಿಲ್ಲದ ಚೋಮ ಒಂದು ವಿನಾಶಕಾರಿ ಕೆಲಸದಿಂದ ತನ್ನ ಪ್ರತಿಕ್ರಿಯೆಯನ್ನು ತೋರಿಸುತ್ತಾನೆ:

> ನಡುರಾತ್ರಿ ಜೋಮನೊಬ್ಬನೇ ಬಂದನು. ಬೆಳದಿಂಗಳು ಕ್ಷೀಣವಾಗಿ ಅಂಗಣವನ್ನು ಬೆಳಗುತ್ತಿತ್ತು. ಅದರಲ್ಲಿ ಅವನು ಮನೆಗೆ ಬಂದುದು ಕಾಣಿಸಿತು. ಬಂದವನು ಮನೆಯೊಳಕ್ಕೆ ಹೋಗಿ ಕುಳಿತನು. ಇನ್ನು ಅವನ ಪ್ರಪಂಚದಲ್ಲಿ ಬೆಳ್ಳಿ ಕಸಿಯುಳು. ಧನಿಯ ಋಣವನ್ನು ತೀರಿಸಲೂ, ಇತ್ತು ಬಂದನು. ಎತ್ತುಗಳ ಋಣವನ್ನು ತೀರಿಸಲು, ಅವುಗಳನ್ನು ಮೇಯಿಸಲಾಯಿತು. ಅವುಗಳ ನೆನಪನ್ನು ಹರಿಯಲು, ಅವುಗಳು ಕರುಗಳಾಗಿರುವಾಗ ಯಾವ ಕಾಡಿನಲ್ಲಿ ದೊರೆತವೋ ಅಲ್ಲೇ ಹೋಗಿ ಬಿಟ್ಟು ಬಂದುದಾಯಿತು.

> ಇನ್ನು ಅವನ ಆಸೆಯೆಂದರೆ ನೇಗಿಲಯೋಗ. ತಿರುಗಿ ಹೊರಕ್ಕೆ ಬಂದನು. ನೇಗಿಲು ನೊಗವನ್ನು ನೆಲಕ್ಕೆ ಕುಟ್ಟಿ, ಮುರಿದು ಅಂಗಣದಲ್ಲಿ ರಾಶಿ ಹಾಕಿದನು. ತಿರುಗಿ ಹೊರಕ್ಕೆ ಹೋದನು. ಈ ಬಾರಿ, ಒಂದು ಸೂಡಿಯನ್ನು ಉರಿಸಿ ತಂದಿದ್ದನು. ಪಂಜುರ್ಲಿಗುಡಿಯಲ್ಲಿ ಯಾರೋ ಉರಿಸಿಟ್ಟ ಹಣತೆಯಿಂದ ತನ್ನ ಸೂಡಿಯನ್ನು ಬೆಳಗಿ, ನೇಗಿಲಿನ ಯಜ್ಞವನ್ನು ಮಾಡಿದನು. (ಚೋಮನ ದುಡಿ xviii 151).

ಚೋಮನ ಪ್ರತಿಯೊಂದು ಕಾರ್ಯವೂ ವಿಧ್ಯುಕ್ತಕ್ರಿಯೆಯು ಹಾಗಿರುವುದರಿಂದ ಸಂಸ್ಕೃತಿ ಮತ್ತು ಧರ್ಮ ಅವನ ಮನಸ್ಸಿನಲ್ಲಿ ಎಷ್ಟು ಆಳಕ್ಕಿಳಿದಿವೆ ಎಂದು ಗೊತ್ತಾಗುತ್ತದೆ. ಅವನು ಭೂಮಿಯ ಮೇಲಿನ ಎಲ್ಲ ಋಣಗಳನ್ನೂ ತೀರಿಸಿಕೊಂಡು, ತನ್ನೆಲ್ಲ ಆಸೆಗಳಿಂದಲೂ ತನ್ನನ್ನು ಬಿಡಿಸಿಕೊಂಡು ಬರಲಿರುವ ಸಾವಿಗೆ ಸಿದ್ಧನಾಗುತ್ತಾನೆ. ಅವನಿನ್ನೂ ತನ್ನದು ಎಂದು ಅಂಟಿಕೊಂಡಿರುವ ವಸ್ತುವೆಂದರೆ ದುಡಿ ಮಾತ್ರ. ದುಡಿಯನ್ನು ಬಾರಿಸುತ್ತ ಅವನು ಸಾಯುತ್ತಾನೆ:

> ಆದರಂತೆ ದುಡಿಯನ್ನು ಅವನು ಈ ಜೀವಮಾನದಲ್ಲಿ ಬಾರಿಸಿರಲಿಲ್ಲ, ಇನ್ನು ಬಾರಿಸುವಂತಿಲ್ಲ. ತೀರ ಸ್ವಲ್ಪ ಹೊತ್ತು ಬಾರಿಸುವುದು. ಆದರೆ ನಿಜಕ್ಕೂ ಅದು ಪ್ರಳಯ ತಾಂಡವದ ಢಮರು ನಿನಾದ! ದುಡಿಯ ಢಮಢಮವು ನಿಂತಿತು. ಒಮ್ಮೆಗೇ ನಿಂತಿತು (ಚೋಮನ ದುಡಿ. xviii. 152).

ಅನ್‌ಟಚಬಲ್ ಮುಖ್ಯವಾಗಿ ಕಾಳಜಿಗಳು ಬಾಖಾನ ಮತ್ತು ಅವನ ಅಂಗವಾಗಿರುವ ಸಮಾಜದ ಭವಿಷ್ಯವಾದರೆ, ಚೋಮನ ದುಡಿಯು ಮುಖ್ಯವಾಗಿ ಚೋಮನ ವೈಯಕ್ತಿಕ ದುರಂತವನ್ನು ಕೇಂದ್ರ ಮಾಡಿಕೊಂಡಿದೆ.

VI

ಮುಖ್ಯವಾಗಿ ಪಾಶ್ಚಾತ್ಯ ಓದುಗರಿಗಾಗಿ ಅನ್‌ಟಚಬಲ್ ಕಾದಂಬರಿಯನ್ನು ಪರಿಚಯ ಮಾಡಿಕೊಡುತ್ತ ಇ. ಎಂ. ಫಾರ್‌ಸ್ಟರ್ ಹೀಗೆ ಹೇಳುತ್ತಾರೆ:

> ಹೊರಗಿನಿಂದ ನೋಡಿದ ಭಾರತೀಯ ಮಾತ್ರ ಅನ್‌ಟಚಬಲ್ ಬರೆಯಲು ಸಾಧ್ಯ. ಯಾವ ಯೂರೋಪಿಯನ್ನನೇ ಆಗಲಿ, ಎಷ್ಟೇ ಸಹಾನುಭೂತಿಯುಳ್ಳವನಾದರೂ ಬಾಖಾನಂತಹ ಪಾತ್ರವನ್ನು ಸೃಷ್ಟಿಸಲಾರ... ಯಾವ ಅಸ್ಪೃಶ್ಯನೂ ಇಂತಹ ಕೃತಿಯನ್ನು ಬರೆಯುವುದು ಸಾಧ್ಯವಿರಲಿಲ್ಲ. ಏಕೆಂದರೆ ಅವನು ಕ್ರೋಧದಲ್ಲಿ ಮತ್ತು ಆತ್ಮಮರುಕದಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದ. ಶ್ರೀ ಆನಂದರು ಆಯಕಟ್ಟಿನ ದೃಷ್ಟಿಕೋನವನ್ನು ಪಡೆದಿದ್ದಾರೆ. ಅವರಲ್ಲಿ ಒಳದೃಷ್ಟಿಯ ಮತ್ತು ನಿಷ್ಕಾಮದ ಸರಿಯಾದ ಹೊಂದಾಣಿಕೆಯಿದೆ. (ಅನ್‌ಟಚಬಲ್ ಪುಟ 7)

ಚೋಮನ ದುಡಿಯನ್ನು ಓದಿದರೆ ಫಾರ್‌ಸ್ಟರ್ ಇಂಥದೇ ಮಾತುಗಳನ್ನು ಹೇಳಬಹುದಿತ್ತು. ಅವರು ಈ ಮಾತುಗಳನ್ನು ಮೆಚ್ಚಿಕೆಯಿಂದಲೇ ಆಡಿದ್ದರು.

ಆದರೆ ಇಂದು ದಲಿತರಿಂದಲೇ ಹೊಸಸಾಹಿತ್ಯ ಬಂದಿರುವ ನಮ್ಮ ಸಂದರ್ಭದಲ್ಲಿ, ನಮಗೆ ಆನಂದ ಮತ್ತು ಕಾರಂತರ ಚಾರಿತ್ರಿಕವಾದ ಮತ್ತು ಸಂವೇದನಾತ್ಮಕವಾದ ಮಿತಿಗಳನ್ನು ಕಾಣುವುದು ಸಾಧ್ಯವಿದೆ. ಹಾಗೆ ನೋಡಿದರೆ ಮೂರನೆ ದಶಕದ ಹಿಂದೂಸಮಾಜದ ಸಂದರ್ಭದಲ್ಲಿ, ತಮ್ಮ ಅಸ್ಪೃಶ್ಯ ನಾಯಕರ ಅಂತರಂಗವನ್ನು ಪ್ರವೇಶಿಸುವುದಕ್ಕೆ, ಮಾನವತಾವಾದಕ್ಕೆ ಬದ್ಧರಾದ ಆನಂದ ಮತ್ತು ಕಾರಂತರು ಮಾಡಿದ ಪ್ರಯತ್ನ ಧೀರೋಧಾತ್ತವಾದದ್ದು. ತಮ್ಮ ಪ್ರಯತ್ನದಲ್ಲಿ ಅವರು ಭಾರೀ ಯಶಸ್ಸನ್ನು ಪಡೆದಿದ್ದಾರೆ. ಆದರೆ ಅಸ್ಪೃಶ್ಯತ್ವದ ನೇರವಾದ ಅನುಭವ ವಿಲ್ಲದ್ದರಿಂದ ಆನಂದರು ಅಸ್ಪೃಶ್ಯತೆಯನ್ನು ಹೆಚ್ಚು ಬೌದ್ಧಿಕವಾಗಿ ಪರಿಗಣಿಸಿದ್ದಾರೆ ಮತ್ತು ಕಾರಂತರು ರಮ್ಯಮನೋಭಾವದ ಮೂಲಕ ಆತ್ಮನಿಷ್ಠವಾಗಿ ನೋಡಿದ್ದಾರೆ. ಅವರ ಭಾಷೆಯೇ ಈ ಪರಿಣಾಮವನ್ನು ಎತ್ತಿತೋರಿಸುತ್ತದೆ.

ಅಲ್ಲದೆ ಅವರು ಚಿತ್ರಿಸಿದ ಅಸ್ಪೃಶ್ಯ ಪ್ರಜೆಗಳು ಕ್ರಾಂತಿಕಾರರಾಗಿರಲಿಲ್ಲ. ಅದನ್ನು ಅವರ ತಪ್ಪೆಂದು ಹೇಳಲಾಗುವುದಿಲ್ಲ. ಗಾಂಧೀವಾದಕ್ಕೆ ಬಾಖಾನ ಪ್ರತಿ ಕ್ರಿಯೆ ಪ್ರಶ್ನಾರ್ಥಕವಾಗಿದೆ. ಆದರೆ ಬಹಿರಂಗವಾಗಿ ಪ್ರತಿಭಟನಾ ಸ್ವರೂಪದ್ದಲ್ಲ. ಕೊನೆಯವರೆಗೂ ಚೋಮನ ಮೌಲ್ಯ ಹಿಂದೂ ಸಮಾಜದ ಮೌಲ್ಯಗಳೇ ಆಗಿವೆ. ಏಕೆಂದರೆ ಚೋಮ ಸಾಯುವ ಮುಂಚೆ ವಿಧಿಪೂರ್ವಕವಾಗಿ ಸನ್ಯಾಸವನ್ನು ಸ್ವೀಕರಿಸುತ್ತಾನೆ. ವಿನಾಶಕ್ಕೆ ಮತ್ತು ಶುದ್ಧೀಕರಣಕ್ಕೆ ಮೂಲವಾದಿಯ ಸ್ವರೂಪದ ಅಗ್ನಿಯ ಜೊತೆಗೆ ಬಾಖಾ ಅನುಭಾವಿಯಹಾಗೆ ತನ್ಮಯನಾಗುತ್ತಾನೆ; ಹಾಗೆಯೇ ಮೃತ್ಯು ಮತ್ತು ವಿನಾಶದ ಪ್ರತೀಕವಾಗಿ ಶಿವನ ಡಮರುವಿನ ಜೊತೆಗೆ ಚೋಮನ ದುಡಿಗೆ ಭಾವಸಾಮ್ಯವಿದೆ. ಆದರೆ ಇವು ಅಪ್ರಜ್ಞಾಸ್ಥಿತಿಯಲ್ಲೇ ಉಳಿಯುವುದ ರಿಂದ ಕ್ರಿಯೆಯಲ್ಲಿ ವ್ಯಕ್ತವಾಗುವುದಿಲ್ಲ. ವಿಲಿಯಂ ಸ್ಟೈರನ್ನನ ಪ್ರಸಿದ್ಧ ಕಾದಂಬರಿ ಯಲ್ಲಿ ನ್ಯಾಟ್ ಕಾರ್ನರ್ ಮುಕ್ತಿಪರವಾದ ಹಿಂಸೆಯನ್ನು ಒಪ್ಪಿಕೊಳ್ಳುವ ಹಾಗೆ ಬಾಖಾನಾಗಲಿ ಚೋಮನಾಗಲೀ ಒಪ್ಪಿಕೊಳ್ಳುವುದಿಲ್ಲ. ಆದರೆ ಈ ರೀತಿಯಾಗಿ ನೋಡುವಾಗ ಬಹುಶಃ ನಾವು ಮುಖ್ಯವಾಗಿ ಚಾರಿತ್ರಿಕ ಮಹತ್ವವುಳ್ಳ ಕೃತಿಗಳ ಮೇಲೆ ಸಮಕಾಲೀನ ವಾದವನ್ನು ಹೇರುತ್ತಿದ್ದೇವೊ ಏನೊ.

ಕುಷಾಣ ಅರಸರ ನಾಣ್ಯಗಳು*
(ಕನಿಷ್ಕ ಮತ್ತು ಇನ್ನಿತರ ಅರಸರ ಭಾಗ)

ಎಸ್. ಎನ್. ಶಿವರುದ್ರಸ್ವಾಮಿ

1

ಭಾರತದ ಇತಿಹಾಸದಲ್ಲಿ ಮಂಗೋಲಿ ಜನಾಂಗಕ್ಕೆ ಸೇರಿದ ಯೂ–ಚಿ ಅಥವಾ ಕುಷಾಣರ ಆಗಮನವು ಅತ್ಯಂತ ಪ್ರಮುಖವಾದ ಆಯಾಮ. ಮೌರ್ಯ ಸಾಮ್ರಾಜ್ಯದ ಪತನದ ಅನಂತರ ಉತ್ತರ ಭಾರತದಲ್ಲಿ ವ್ಯಾಪಕವಾದ ಸಾಮ್ರಾಜ್ಯ ವನ್ನು ಸ್ಥಾಪಿಸಿದವರು ಕುಷಾಣರು. ಧರ್ಮ, ಕಲೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಹೊಸ ಮನ್ವಂತರವನ್ನು ಆರಂಭಿಸಿದವರು, ಅವರು.

ಕನಿಷ್ಕನು ಕುಷಾಣರಲ್ಲೆಲ್ಲ ಅತ್ಯಂತ ಪ್ರಮುಖನಾದ ಅರಸ. ಇನ್ನೂ ಶೈಶವಾವಸ್ಥೆಯಲ್ಲಿದ್ದ ಕುಷಾಣರ ಸಾಮ್ರಾಜ್ಯವನ್ನು ಭದ್ರ ಬುನಾದಿಯ ಮೇಲೆ ಸ್ಥಾಪಿಸಿದವನು ಇವನು. ಸತತವಾದ ಇವನ ಬೆಂಬಲದಿಂದ ಬೌದ್ಧ ಧರ್ಮ ಸಾಕಷ್ಟು ಪ್ರಬಲವಾಗಿ ಬೆಳೆಯಿತು. ಚಂದ್ರಗುಪ್ತ ಮೌರ್ಯನಲ್ಲಿದ್ದ ಸೈನಿಕ ಸಾಮರ್ಥ್ಯ, ಅಶೋಕನಲ್ಲಿದ್ದ ಧಾರ್ಮಿಕ ಆಸ್ಥೆ—ಎರಡೂ ಇವನಲ್ಲಿ ಮೇಳವಿಸಿವೆ. ಕ್ರಿ. ಶ. 78ರ ಸುಮಾರಿಗೆ ಇವನು ಅಧಿಕಾರಕ್ಕೆ ಬಂದಿರಬಹುದು.

ಕನಿಷ್ಕನ ನಂತರ ವಾಸಿಷ್ಕ, ಅವನ ನಂತರ ಹುವಿಷ್ಕ ಪಟ್ಟಕ್ಕೆ ಬಂದರು. ಇವನಾದ ಮೇಲೆ ವಾಸುದೇವ ಅಧಿಕಾರಕ್ಕೆ ಬಂದ. ಇವನ ಹೆಸರು, ಇವನು ವೈಷ್ಣವ ಪಂಥಕ್ಕೆ ಸೇರಿದವನೆಂದು ಸೂಚಿಸಿದರೂ, ಇವನು ಶೈವಧರ್ಮಾರಾಧಕ.

ಕುಷಾಣರು ಉನ್ನತ ಹಾಗೂ ಕೀಳು ಲೋಹಗಳೆರಡನ್ನೂ ತಮ್ಮ ನಾಣ್ಯಗಳ ತಯಾರಿಕೆಯಲ್ಲಿ ಬಳಸಿದರು. ಚಿನ್ನ ಮತ್ತು ತಾಮ್ರದಲ್ಲಿ ಹೆಚ್ಚಾಗಿಯೂ, ಬೆಳ್ಳಿಯಲ್ಲಿ ಅಪೂರ್ವವಾಗಿಯೂ ನಾಣ್ಯಗಳನ್ನು ಟಂಕಿಸಿದರು. ಕನಿಷ್ಕ, ಹುವಿಷ್ಕ

---

* ಈ ಲೇಖನದಲ್ಲಿ ಪ್ರತಿಪಾದಿತವಾದ ವಿಷಯಗಳ ಬಗೆಗೆ ಪೂರ್ವಭಾವಿ ಪರಿಚಯಕ್ಕೆ ಇದೇ ಲೇಖಕರ "ಕುಷಾಣ ಅರಸರ ನಾಣ್ಯಗಳು (ಕ್ಯಾಡ್ ಫಿಸೆಸ್ ಅರಸರ ಭಾಗ)" (ಸಾಧನೆ, ಸಂಪುಟ 8, ಸಂಚಿಕೆ 2; ಏಪ್ರಿಲ್-ಜೂನ್ 1979) ಲೇಖನವನ್ನು ದಯವಿಟ್ಟು ನೋಡಬೇಕಾಗಿ ವಿನಂತಿ.

ಮತ್ತು ವಾಸುದೇವರು ಹೆಚ್ಚಾಗಿ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದರು. ಹಿಮ್ಮುಖದಲ್ಲಿ "ಓವಿಷೋ" ಆಲೇಖ ಉಳ್ಳ ಕನಿಷ್ಕನ ಬೆಳ್ಳಿಯ ನಾಣ್ಯಗಳನ್ನು 1925ರಲ್ಲಿ ಪ್ರಕಟಿಸಲಾಯಿತು. ಇತ್ತೀಚೆಗೆ 1960ರಲ್ಲಿ ಡಾ. ನಾರಾಯಣರು ಹುವಿಷ್ಕನ ಎರಡು ಬೆಳ್ಳಿಯ ನಾಣ್ಯಗಳನ್ನು ಪ್ರಕಟಿಸಿದರು.

ಕುಷಾಣ ಅರಸರು ತಮ್ಮ ನಾಣ್ಯಗಳನ್ನು ವಿವಿಧ ಭೇದಕಾಂಶಗಳಲ್ಲಿ ಮತ್ತು ಆಕಾರಗಳಲ್ಲಿ ಟಂಕಿಸಿದರು. ಅವರ ನಾಣ್ಯಗಳನ್ನು ದಿನಾರ-ಎಂದು ಕರೆಯಲಾಗುತ್ತಿತ್ತು. ಇದು ರೋಮನ್ನರ ನಾಣ್ಯವಾದ ಡಿನೆರಿಯಸ್‌ನ ಸಂಸ್ಕೃತ ರೂಪಾಂತರ. ಒಂದು ದಿನಾರದ ಸರಾಸರಿ ತೂಕ 123 ಗ್ರೈನುಗಳು. ಕನಿಷ್ಕ ಮತ್ತು ಅನಂತರದ ಕುಷಾಣ ಅರಸರ ನಾಣ್ಯಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು. ಅವುಗಳ ಸರಾಸರಿ ತೂಕ ಈ ರೀತಿ ಇದೆ :

1.	ದ್ವಿ-ದಿನಾರ	264.4 ಗ್ರೈನ್
2.	ದಿನಾರ	132.2 ಗ್ರೈನ್
3.	ಕಾಲು-ದಿನಾರ	30.8 ಗ್ರೈನ್

ಈ ನಾಣ್ಯಗಳಲ್ಲಿ ಖರೋಷ್ಠಿ ಲಿಪಿ ಹಾಗೂ ಪ್ರಾಕೃತ ಭಾಷೆಗಳಿಲ್ಲದಿರುವುದು ಪ್ರಮುಖವಾದ ಅಂಶ. ಕನಿಷ್ಕನ ಕಾಲದಲ್ಲಿ ಇದ್ದಕ್ಕಿದ್ದಂತೆಯೇ ದ್ವೈಲಿಪಿಕ ನಾಣ್ಯಪದ್ಧತಿ ನಿಂತುಹೋಯಿತು. ಏಕ ಲಿಪಿಕ ಹಾಗೂ ದ್ವೈಭಾಷಿಕ ನಾಣ್ಯಗಳು ಆಚರಣೆಯಲ್ಲಿದ್ದವು. ಗ್ರೀಕ್ ಲಿಪಿ, ಮತ್ತು ಗ್ರೀಕ್ ಹಾಗೂ ಶಕ ಭಾಷೆಗಳನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತ್ತಿತ್ತು. ಹುವಿಷ್ಕನ ಒಂದು ಮಾದರಿಯ ನಾಣ್ಯದ ಮೇಲೆ ಬ್ರಾಹ್ಮೀಲಿಪಿಯನ್ನು ಉಪಯೋಗಿಸಿದ್ದನ್ನು ಕಾಣಬಹುದು.

ಕುಷಾಣರ ನಾಣ್ಯಗಳ ಮೇಲೆ ಅರಸರನ್ನು ವಿವಿಧ ಭಾವಾಭಿನಯಗಳಲ್ಲಿ ಚಿತ್ರಿಸಿದೆ. ಕೆಲವು ನಾಣ್ಯಗಳ ಮೇಲೆ ಅರಸನನ್ನು ಬಲ ಅಥವಾ ಎಡಭಾಗಕ್ಕೆ ಮುಖ ತಿರುಗಿಸಿ ನಿಂತಿರುವಂತೆ ಚಿತ್ರಿಸಲಾಗಿದೆ. ಕೆಲ ನಾಣ್ಯಗಳ ಮೇಲೆ ಯಜ್ಞ ವೇದಿಕೆಯ ಹತ್ತಿರದಲ್ಲಿದ್ದಾನೆ. ಅರಸ ಆನೆ ಅಥವಾ ಹುಲಿಯ ಮೇಲೆ ಸವಾರಿ ಮಾಡುತ್ತಿರುವಂತೆ, ಅಥವಾ ಶಕಟವನ್ನೇರಿರುವಂತೆ ರೂಪಿಸಲಾಗಿದೆ. ಅರಸ ವಿವಿಧಾಕೃತಿಯ ಶಿರಸ್ತ್ರಾಣಗಳನ್ನು ಧರಿಸಿರುವುದನ್ನೂ ಕಾಣಬಹುದು. ಅವನು ಸರ್ವಾಭರಣ ಭೂಷಿತನಾಗಿ, ಇಜಾರನ್ನು ಧರಿಸಿರುವುದು ಕಾಣಸಿಗುತ್ತದೆ. ಖಡ್ಗ, ಗದೆ, ಭರ್ಜಿ, ತ್ರಿಶೂಲ ಇನ್ನೂ ಹಲವಾರು ಆಯುಧಗಳನ್ನೂ, ಹೂಮಾಲೆ ಅಥವಾ ಮರದ ರೆಂಬೆಗಳನ್ನೂ ಹಿಡಿದಿರುವುದು ಸಾಮಾನ್ಯ. ಅರಸನಿಗೆ ದೈವತ್ವವನ್ನು ಆರೋಪಿಸಿ ಚಿತ್ರಿಸಿರುವುದು ಕುಷಾಣರ ನಾಣ್ಯಗಳಲ್ಲಿನ ಸಾಮಾನ್ಯ ಸಂಗತಿ. ಅರಸನ ಹೆಗಲ ಮೇಲೆ ಹೊರಹೊಮ್ಮುತ್ತಿರುವ ಜ್ವಾಲೆ, ತಲೆಯ

ಮೇಲಿನ ಅರ್ಧ ಚಂದ್ರಾಕೃತಿ, ತಲೆಯ ಹಿಂಭಾಗದಲ್ಲಿನ ತೇಜೋಮಂಡಲ —ಇವು ಅವರ ನಾಣ್ಯಗಳಲ್ಲಿ ದೈವತ್ವವನ್ನು ಸಂಕೇತಿಸುವ ಅಂಶಗಳು.

ನಾಣ್ಯಗಳ ಹಿಮ್ಮುಖದಲ್ಲಿ ವಿವಿಧ ಧರ್ಮ ಹಾಗೂ ಪಂಥಗಳಿಗೆ ಸೇರಿದ ದೇವ-ದೇವಿಯರ ಮೂರ್ತಿಗಳನ್ನು ರೂಪಿಸಿರುವುದು ಕುಷಾಣರ ನಾಣ್ಯಗಳ ಸಾಮಾನ್ಯವಾದ ಅಂಶ. ಗ್ರೀಕ್, ಹಿಂದೂ, ಬೌದ್ಧ, ಜೊರಾಷ್ಟ್ರಿಯನ್ ಪಂಥಗಳ ದೇವತಾ ಮೂರ್ತಿಗಳನ್ನು ಚಿತ್ರಿಸಲಾಗಿದೆ. ಈ ಪದ್ಧತಿ ಕನಿಷ್ಕನ ಕಾಲದಲ್ಲಿ ಸಾಕಷ್ಟು ವಿಪುಲವಾಗಿ ಬೆಳೆಯಿತು. ಈ ಕೆಳಗೆ ತಿಳಿಸಿರುವ ದೇವ-ದೇವಿಯರ ಮೂರ್ತಿಗಳನ್ನು ನಾಣ್ಯಗಳ ಹಿಮ್ಮುಖದಲ್ಲಿ ಕಾಣಬಹುದು.

ಗ್ರೀಕ್	ಪರ್ಶಿಯನ್	ಹಿಂದು	ಬೌದ್ಧ
ಹಿಲಿಯೊಸ್	ಅಥಶೊ	ಶಿವ	ಬುದ್ಧ
ನಾನ ಅಥವಾ ನಾನಯ	ಮವೊ	ಕಾರ್ತಿಕೇಯ	
ಸೆಲೆನೆ	ಮಿಾರೊ	ವಿಷ್ಣು	
	ಓಡೊ	ಗಣೇಶ	
	ಅರ್ದ್ಲಾಂಗ್ನೊ		
	ಫಿರೊ		

ಹುವಿಷ್ಕನ ನಾಣ್ಯಗಳ ಮೇಲೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ದೇವತೆಗಳನ್ನು ಚಿತ್ರಿಸಲಾಗಿದೆ. ವಾಸುದೇವನ ಕಾಲಕ್ಕೆ ದೇವತೆಗಳ ಸಂಖ್ಯೆ ಗಮನಾರ್ಹವಾಗಿ ಕಡಮೆಯಾಯಿತು. ಆದರೆ ಇವನು ಶೈವ ಧರ್ಮಾನುಯಾಯಿಯಾದುದರಿಂದ ಶಿವನ ಚಿತ್ರವೇ ಪ್ರಧಾನವಾಗಿದೆ.

ಕುಷಾಣ ಅರಸರು ಧಾರ್ಮಿಕ ಕ್ಷೇತ್ರದಲ್ಲಿ ಉದಾರವಾದ, ಸರಳ ನೀತಿಯನ್ನು ಅನುಸರಿಸಿದ್ದರು. ಅವರು ತಮ್ಮ ನಾಣ್ಯಗಳ ಮೇಲೆ ಎಲ್ಲ ಧರ್ಮಗಳ ದೇವತೆಗಳಿಗೆ ಸಮಾನ ಸ್ಥಾನವನ್ನು ಕೊಟ್ಟಿದ್ದರು. ಆದರೆ ಅವರ ವೈಯಕ್ತಿಕ ಜೀವನ ಇದಕ್ಕಿಂತ ಭಿನ್ನವಾಗಿದೆ. ಕನಿಷ್ಕ ಬೌದ್ಧನಾಗಿದ್ದ ; ಹುವಿಷ್ಕ ಕಾರ್ತಿಕೇಯನ ಆರಾಧಕನಾಗಿದ್ದ; ವಾಸುದೇವ ಶಿವಭಕ್ತನಾಗಿದ್ದ.

ಇದುವರೆವಿಗೂ ಕನಿಷ್ಕ ಮತ್ತು ಅವನನಂತರದ ಕುಷಾಣ ಅರಸರ ನಾಣ್ಯಗಳ ಸಾಮಾನ್ಯ ಪರಿವೀಕ್ಷಣೆ ನಡೆಸಿದ್ದಾಯಿತು. ಇನ್ನು ಅವರ ವೈಯಕ್ತಿಕ ಸಾಧನೆಗಳನ್ನು ಪರಿಶೀಲಿಸೋಣ.

೩

ಬೌದ್ಧ ಪರಂಪರೆಯಲ್ಲಿ ಕನಿಷ್ಕನ ಹೆಸರು ಚಿರಂತನವಾದುದು. ಉತ್ತರ ಭಾರತದಲ್ಲಿ ಮಧ್ಯ ಏಷ್ಯಾದ ಕೆಲಭಾಗಗಳನ್ನು ಒಳಗೊಂಡಂತೆ ಹೆಚ್ಚು ವಿಸ್ತಾರವಾದ

ರಾಜ್ಯವನ್ನು ಸ್ಥಾಪಿಸಿದ ಮೊದಲ ವಿದೇಶೀ ಅರಸನೆಂದರೆ ಅವನೇ. ಅವನ ಕಾಲವಲ್ಲೇ ಬೌದ್ಧಧರ್ಮ, ಮಹಾಯಾನ ಮತ್ತು ಹೀನಯಾನ ಎಂಬೆರಡು ಪಂಥಗಳಾದದ್ದು. ಇದು ಬೌದ್ಧರ ಇತಿಹಾಸದಲ್ಲಿ ಅನೇಕ ದೃಷ್ಟಿಗಳಿಂದ ಪ್ರಾಮುಖ್ಯ ಪಡೆದ ಘಟನೆ. ಅವನು ಬೌದ್ಧಧರ್ಮದ ನಿಷ್ಠಾವಂತ ಅನುಯಾಯಿಯಾಗಿದ್ದರೂ ಉಳಿದ ಧರ್ಮಗಳನ್ನು ಕಡೆಗಣಿಸಲಿಲ್ಲ; ಸರ್ವಧರ್ಮಗಳನ್ನೂ ಸಮನ್ವಯ ದೃಷ್ಟಿಯಿಂದ ನೋಡಿದ. ಕಲೆ, ವಾಸ್ತುಶಿಲ್ಪ ಹಾಗೂ ಸಾಹಿತ್ಯ ಅವನ ಕಾಲದಲ್ಲಿ ಪ್ರಫುಲ್ಲವಾದವು. ಕನಿಷ್ಕ ಚಿನ್ನದ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸಿದ. ಅವನ ನಾಣ್ಯಗಳು ಎಲ್ಲ ಧರ್ಮಗಳನ್ನೂ ಹಾಗೂ ಪಂಥಗಳನ್ನೂ ಪ್ರತಿನಿಧಿಸುತ್ತವೆ. ಅವನ ಕಾಲವಲ್ಲೇ ದ್ವಿಲಿಪಿಕ ಮತ್ತು ದ್ವಿಭಾಷಿಕ ನಾಣ್ಯಗಳ ಸಂಪ್ರದಾಯ ನಿಂತುಹೋಯಿತು. ಇದು ಅವನ ನಾಣ್ಯ ಪದ್ಧತಿಯ ಪ್ರಮುಖವಾದ ಒಂದಂಶ.

ಚಿನ್ನದ ನಾಣ್ಯಗಳು

ಚಿನ್ನದ ನಾಣ್ಯಗಳ ಸಂಪ್ರದಾಯವನ್ನು ಆರಂಭಿಸಿದ ಮೊದಲ ಕುಷಾಣ ಅರಸ ವಿಮ ಕ್ಯಾಡ್ ಫಿಸೆಸ್. ಇದು ಕುಷಾಣರ ಆರ್ಥಿಕ ಉತ್ಕರ್ಷವನ್ನು ಸೂಚಿಸುತ್ತದೆ. ಕನಿಷ್ಕ ಮತ್ತು ಅವನ ಉತ್ತರಾಧಿಕಾರಿಗಳ ಕಾಲದಲ್ಲಿ ಈ ಪದ್ಧತಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ಕುಷಾಣರ ನಾಣ್ಯಗಳು ರೋಮನ್ ನಾಣ್ಯಗಳ ನೇರ ಪ್ರಭಾವಕ್ಕೆ ಒಳಗಾದದ್ದುಂಟು. ರೋಮನ್ನರ ಮತ್ತು ಕುಷಾಣರ ನಾಣ್ಯಗಳ ತೂಕದಲ್ಲಿ ಸಾಮ್ಯ ಗೋಚರಿಸುತ್ತದೆ. ರೋಮನ್ ಚಕ್ರವರ್ತಿಗಳಾದ ಅಗಸ್ಟಸ್, ತಿಬೇರಿಯುಸ್ ಕಾಲಿಗುಲ, ಕ್ಲಾಡಿಯುಸ್ ಮತ್ತು ನೀರೊ—ಇವರ ನಾಣ್ಯಗಳ ಇಡುಗಂಟುಗಳು ಉತ್ತರ ಭಾರತದಲ್ಲಿ ಚದುರಿದಂತೆ ದೊರೆತಿವೆ. ಕುಷಾಣರು ಇವರ ನಾಣ್ಯಗಳನ್ನು ಕರಗಿಸಿ ತಮ್ಮ ನಾಣ್ಯಗಳಿಗೆ ತಿರುಗಿ ಉಪಯೋಗಿಸಿದರು. ಈ ವ್ಯವಸ್ಥೆ ವಿಮಕ್ಯಾಡ್‌ಫಿಸೆಸ್ ಅಥವಾ ಕನಿಷ್ಕನಿಂದ ಆರಂಭವಾಗಿರಬೇಕು. ಇದೇ ಕಾಲದಲ್ಲಿ ವಿದೇಶಗಳ ಅದರಲ್ಲೂ ಮುಖ್ಯವಾಗಿ ರೋಮ್, ಮತ್ತು ಭಾರತಗಳ ನಡುವೆ ವ್ಯಾಪಾರ ಬಿರುಸಿನಿಂದ ನಡೆದಿತ್ತು. ಅಂತರಾಷ್ಟ್ರೀಯ ವಾಣಿಜ್ಯದ ಅವಶ್ಯಕತೆಯಿಂದ ಕುಷಾಣರು ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತರಬೇಕಾಯಿತು. ಸ್ಥಳೀಯ ವ್ಯಾಪಾರ ಹಾಗೂ ಆಂತರಿಕ ವಿನಿಮಯಕ್ಕಾಗಿ ತಾಮ್ರದ ನಾಣ್ಯಗಳನ್ನು ಟಂಕಿಸಿದರು.

ಕನಿಷ್ಕ ಮತ್ತು ಅವನ ನಂತರದ ನಾಣ್ಯಗಳು ತಮ್ಮವೇ ಆದ ಕೆಲವು ವೈಲಕ್ಷಣ್ಯಗಳನ್ನು ಒಳಗೊಂಡಿವೆ. ಅವುಗಳ ಮುಮ್ಮುಖ ಒಂದೇ ತೆರನಾಗಿದ್ದರೆ, ಹಿಮ್ಮುಖ ನಿರಂತರವಾಗಿ ಬದಲಾವಣೆ ಹೊಂದುತ್ತವೆ. ಅವುಗಳ ಕೆಲವು ಪ್ರಮುಖ ನಮೂನೆಗಳನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ ವಿಂಗಡಿಸಲಾಗಿದೆ.

I "ಯಜ್ಞವೇದಿಕೆಯ ಹತ್ತಿರವಿರುವ ಅರಸ ಮತ್ತು ದೇವನ" ಮಾದರಿ:

(ಅ) ಮುಮ್ಮುಖ : ಅರಸ ಎಡಕ್ಕೆ ಮುಖ ತಿರುಗಿಸಿದ್ದಾನೆ. ಶಿರಸ್ತ್ರಾಣವನ್ನು ಧರಿಸಿ, ಮೈತುಂಬ ಬಟ್ಟೆ ಹೊದ್ದು, ಇಜಾರನ್ನು ಧರಿಸಿದ್ದಾನೆ; ಯಜ್ಞ ವೇದಿಕೆಯ ಬಳಿ ಇದ್ದಾನೆ. ಹೆಗಲ ಮೇಲೆ ಜ್ವಾಲೆ ಏಳುತ್ತಿದೆ, ಎಡಗೈಲಿ ಭರ್ಜಿ ಹಿಡಿದಿದ್ದಾನೆ. ಗ್ರೀಕ್ ಆಲೇಖ "ಬೆಸಿಲಿಯಾಸ್ ಬೆಸಿಲಿಯಾನ್ ಕಸಿಷ್ಕ"
(ಅನು : ರಾಜರ ರಾಜನಾದ ಕನಿಷ್ಕ).

ಹಿಮ್ಮುಖ : ಆಲೇಖ : "ಷಾನೂಷಾಯ್ ಕನೆಷ್ಕಿ ಕೊಷಾಣೊ"
(ಅನು : ರಾಜರರಾಜನಾದ ಕುಷಾಣರ ಕನಿಷ್ಕ)

(ಆ) ಮುಮ್ಮುಖ : ಅರಸ ಅಂಕುಶವನ್ನು ಹಿಡಿದು ಯಜ್ಞವೇದಿಕೆಯ ಬಳಿ ನಿಂತಿದ್ದಾನೆ. ಎಡಗೈಲಿ ಭರ್ಜಿ ಇದೆ. ಸೊಂಟದಲ್ಲಿ ಕತ್ತಿ ನೇತಾಡುತ್ತಿದೆ.

ಆಲೇಖ : "ಷಾನುಷಾಯ್"

ಈ ಮಾದರಿಗಳ ಹಿಮ್ಮುಖಗಳಲ್ಲಿ ಗ್ರೀಕ್, ಪರ್ಶಿಯ, ಭಾರತೀಯ ದೇವರುಗಳ ಚಿತ್ರಗಳನ್ನು ಕಾಣಬಹುದು.

(ಇ) ಮುಮ್ಮುಖ : ಯಜ್ಞ ವೇದಿಕೆಯ ಬಳಿ ಅರಸನಿದ್ದಾನೆ. (ಅ) ನಮೂನೆಯಲ್ಲಿರುವ ಅಂಶಗಳೆಲ್ಲ ಇವೆ. ಗ್ರೀಕ್ ಆಲೇಖ : "ಬೆಸಿಲಿಯಾಸ್ ಬೆಸಿಲಿಯಾನ್ ಕನೆಷ್ಕೊ"

ಇಲ್ಲಿ ಮುಮ್ಮುಖ ಒಂದೇ ತೆರನಾಗಿದೆ. ಆದರೆ ಹಿಮ್ಮುಖ ಬದಲಾವಣೆ ಹೊಂದುತ್ತಾ ಹೋಗುತ್ತದೆ.

ಹಿಮ್ಮುಖ : (1) "ಸೆಲೆನೆ ನಮೂನೆ" : ಎಡಕ್ಕೆ ನಿಂತಿರುವ ಪುರುಷದೇವ ಶಿರಸ್ತ್ರಾಣವನ್ನು ಧರಿಸಿದ್ದಾನೆ. ಅರ್ಧ ಚಂದ್ರಾಕೃತಿಗಳನ್ನು ದೇವರ ಹೆಗಲ ಮೇಲೆ ಕಾಣಬಹುದು. ಎಡಗೈಲಿ ರಾಜದಂಡವಿದೆ. ಗ್ರೀಕ್ ಆಲೇಖ : "ಸೆಲೆನೆ" (ಗ್ರೀಕ್‌ರ ಚಂದ್ರ).

ಹಿಮ್ಮುಖ (2) "ಮಾವೊ ನಮೂನೆ" : ಅಥವಾ ಪರ್ಶಿಯನ್ ಚಂದ್ರದೇವ. ಇದು ಸೆಲೆನೆ ನಮೂನೆಯಂತಿದೆ.
ಗ್ರೀಕ್ ಆಲೇಖ : "ಮಾವೊ"

ಹಿಮ್ಮುಖ (3) "ಹೈಪೈಸ್ಟರ್ ನಮೂನೆ" : ಗಡ್ಡದಾರಿಯಾದ ದೇವ, ಎಡಗೈಲಿ ಖಡ್ಗ ಹಿಡಿದಿದ್ದಾನೆ. ಬಲಗೈಲಿ ಪುಷ್ಪಮಾಲೆ ಇದೆ. ಗ್ರೀಕ್ ಆಲೇಖ : "ಹೆಪೈಸ್ಟರ್"—ಇವನು ಗ್ರೀಕರ ಅಗ್ನಿದೇವ.

ಹಿಮ್ಮುಖ (4) "ಬುದ್ಧೊ ನಮೂನೆ" : ತೇಜೋವಲಯದಿಂದ ಆವೃತನಾಗಿ ನಿಂತಿರುವ ಬುದ್ಧ. ಅವನ ಬಲಗೈ ಮುಂಚಾಚಿದೆ. ಗ್ರೀಕ್ ಆಲೇಖ "ಬುದ್ಧೊ" (ಬುದ್ಧ).

ಹಿಮ್ಮುಖ (5) "ಓಯೋಷೋ ನಮೂನೆ" : ತೇಜೋವಲಯದಿಂದ ಆವೃತನಾದ ಶಿವ ಎಡಭಾಗಕ್ಕೆ ನೋಡುತ್ತಾ ನಿಂತಿದ್ದಾನೆ. ಅವನ ಜಟೆ ಕೋನಾಕೃತಿಯಲ್ಲಿದೆ. ಅವನ ನಾಲ್ಕು ಹಸ್ತಗಳಲ್ಲಿ ತ್ರಿಶೂಲ, ಅಂಕುಶ, ಕರಂಡಕ, ಮದ್ದಳೆಗಳಿವೆ. ಗ್ರೀಕ್ ಆಲೇಖ : "ಓಯೋಷೊ". ಇದು "ಉಮೇಶ" ಅಥವಾ "ಭೂಮೇಶ"— ಎಂಬುದರ ವಿಕೃತ ರೂಪಾಂತರ.

ಕನಿಷ್ಕನ ನಾಣ್ಯಗಳ ವಿವಿಧ ಬಗೆಯ ಹಿಮ್ಮುಖಗಳು ಅವನು ವಿವಿಧ ಧರ್ಮಗಳನ್ನು ಸಮಾನತೆಯಿಂದ ಕಾಣಬೇಕೆಂಬ ತತ್ವದಲ್ಲಿ ಅವನಿಗಿರುವ ನಂಬಿಕೆಯನ್ನು ದೃಢೀಕರಿಸುತ್ತವೆ.

II ಎದೆವರೆಗಿನ ರಾಜನ ಚಿತ್ರ ಮತ್ತು ದೇವನ ಮಾದರಿ :

ಮುಮ್ಮುಖ : ಶಿರಾಲಂಕೃತನಾಗಿ, ಶಿರಸ್ತ್ರಾಣವನ್ನು ಧರಿಸಿರುವ ಅರಸ. ಎಡಗೈಲಿ ಭರ್ಜಿ ಹಿಡಿದು, ಮೇಘದಿಂದ ಮೇಲೇಳುತ್ತಿದ್ದಾನೆ. ಗ್ರೀಕ್ ಆಲೇಖ : "ಷಾನುಷಾಯ್ ಕನೆಷ್ಕಿ ಕುಷಾನೋ" (ಅನು : ರಾಜರ ರಾಜನಾದ ಕುಷಾಣರ ಕನಿಷ್ಕ)

ಮೊದಲನೆಯ ಮಾದರಿಯಲ್ಲಿರುವಂತೆ ಇಲ್ಲೂ ಕೂಡ ಹಿಮ್ಮುಖ ವಿವಿಧ ನಮೂನೆಗಳಿಂದ ಕೂಡಿದೆ.

ಹಿಮ್ಮುಖ (1) "ಅಥಷೊ ನಮೂನೆ" : ಗಡ್ಡಧಾರಿಯಾದ ದೇವ, ಎಡಕ್ಕೆ ನೋಡುತ್ತಾ ನಿಂತಿದ್ದಾನೆ. ಬಲಗೈಲಿ ಹೂಮಾಲೆ ಇದೆ; ಎಡಗೈ ಸೊಂಟದ ಮೇಲಿದೆ. ಇವನು ಪರ್ಶಿಯನ್ನರ ಅಗ್ನಿದೇವ. ಗ್ರೀಕ್ ಆಲೇಖ : "ಅಥಷೊ".

ಹಿಮ್ಮುಖ (2) "ಓಯೋಷೋ ನಮೂನೆ": ಇದು ಮೊದಲ ಮಾದರಿಯ ಹಿಮ್ಮುಖ (5) ರಂತೆ ಇದೆ.

ತಾಮ್ರದ ನಾಣ್ಯಗಳು :

ಕನಿಷ್ಕನ ತಾಮ್ರದ ನಾಣ್ಯಗಳು ಅವನ ಸುವರ್ಣದ ನಾಣ್ಯಗಳಂತೆ ವಿವಿಧ ಮಾದರಿಗಳಲ್ಲಿ ದೊರೆಯುತ್ತವೆ.

I ವೇದಿಕೆಯ ಬಳಿ ಇರುವ ಅರಸನ ಮಾದರಿ :

ಮುಮ್ಮುಖ : ಅರಸ ಎಡಕ್ಕೆ ವೇದಿಕೆಯ ಬಳಿ ನಿಂತು ಯಜ್ಞ ನಡೆಸುತ್ತಿದ್ದಾನೆ. ಶಿರಸ್ತ್ರಾಣವನ್ನೂ, ಉದ್ದನೆಯ ಅಂಗಿ ಹಾಗೂ ಇಜಾರವನ್ನು ಧರಿಸಿದ್ದಾನೆ. ಎಡಗೈಲಿ ಉದ್ದನೆಯ ಭರ್ಜಿ ಇದೆ. ಗ್ರೀಕ್ ಆಲೇಖ : "ಬೆಸಿಲಿಯಸ್ ಬೆಸಿಲಿಯಾನ್ ಕನೆಷ್ಕೊ"

ಇಲ್ಲೂ ಕೂಡ ಒಂದೇ ಮುಮ್ಮುಖದ ಹಲವಾರು ಹಿಮ್ಮುಖಗಳ ನಮೂನೆಗಳನ್ನು ಕಾಣಬಹುದಂ.

ಹಿಮ್ಮುಖ (1) "ಹಿಲಿಯೋಸ್ ನಮೂನೆ" : ದೇವನೊಬ್ಬ ಶಿರಾಲಂಕೃತನಾಗಿ ಎಡಭಾಗಕ್ಕೆ ಮುಖಮಾಡಿದ್ದಾನೆ. ಮುಖದಿಂದ ಸೂರ್ಯಕಿರಣ ಪುಂಜವು ಹೊರ ಹೊಮ್ಮುತ್ತದೆ. ಗ್ರೀಕ್ ಆಲೇಖ : "ಹಿಲಿಯೋಸ್" (ಗ್ರೀಕ್‌ರ ಸೂರ್ಯದೇವ)

ಹಿಮ್ಮುಖ (2) "ನಾನಯ ನಮೂನೆ" : ನಾನಯ ದೇವತೆ ಶಿರಾಲಂಕೃತಳಾಗಿ ಎಡಕ್ಕೆ ಮುಖ ತಿರುಗಿಸಿ ನಿಂತಿದ್ದಾಳೆ. ಬಲಗೈಲಿ ರಾಜದಂಡವಿದೆ. ಗ್ರೀಕ್ ಆಲೇಖ : "ನಾನಯ". ಇವಳು ಪರ್ಶಿಯನ್ನರ ಸೃಷ್ಟಿದೇವತೆ.

II "ಷಾವೋ ಕನೆಷ್ಕಿ" ಬಿರುದನ್ನು ಹೊಂದಿ, ವೇದಿಕೆಯ ಬಳಿ ಇರುವ ಅರಸ ಮತ್ತು ದೇವನ ಮಾದರಿ :

ಮುಮ್ಮುಖ : ಮೊದಲ ಮಾದರಿ (I) ಯಂತಿದ್ದು, ಆಲೇಖದಲ್ಲಿ ಮಾತ್ರ ಬದಲಾವಣೆ ಕಾಣಬಹುದು. ಗ್ರೀಕ್ ಆಲೇಖ : "ಷಾವೊ ಕನೆಷ್ಕಿ".

ಇಲ್ಲೂ ಮುಮ್ಮುಖ ಎಂದಿನಂತೆ ಇದ್ದು, ಹಿಮ್ಮುಖ ಮಾತ್ರ ಅನೇಕ ಬದಲಾವಣೆಗಳಿಗೆ ಗುರಿಯಾಗುತ್ತದೆ.

ಹಿಮ್ಮುಖ (1) "ಬುದ್ಧ ನಮೂನೆ" : ತೇಜೋವಲಯದಿಂದ ಕೂಡಿದ ಬುದ್ಧ ನಮ್ಮತ್ತ ಮುಖ ಮಾಡಿದ್ದಾನೆ. ಅವನ ಬಲಗೈ ಬೋಧನ

ಮುದ್ರೆಯಲ್ಲಿದೆ. ಎಡಗೈಲಿ ಜೋಳಿಗೆ ಇದೆ. ಗ್ರೀಕ್ ಆಲೇಖ : "ಸಕಮನ ಬೊದ್ದೊ" (ಅನು : "ಶಾಕ್ಯಮುನಿ ಬುದ್ಧ)

ಹಿಮ್ಮುಖ (2) "ಓಡೊ ನಮೂನೆ" : ದೇವನೊಬ್ಬ ಎಡಕ್ಕೆ ಓಡುತ್ತಿದ್ದಾನೆ. ಜಟೆ ಸಡಿಲಗೊಂಡಿದೆ. ಹಾರಾಡುತ್ತಿರುವ, ಮೈಮೇಲಿನ ಬಟ್ಟೆಯ ಒಂದಂಚನ್ನು ಕೈಲಿ ಹಿಡಿದಿದ್ದಾನೆ. ಗ್ರೀಕ್ ಆಲೇಖ : "ಓಡೋ". ಇವನು ಪರ್ಶಿಯನ್ನರ ವಾಯುದೇವ.

ಉನ್ನತ ಬಿರುದು ಹಾಗೂ ಪ್ರತಿಮಾರೂಪದಲ್ಲಿ ಪ್ರಭುತ್ವವನ್ನು ಪ್ರಕಟಿಸುವ ಉನ್ನತ ಕಲ್ಪನೆಯನ್ನು ಅನುಷ್ಠಾನಕ್ಕೆ ತಂದ ಹೊಣೆಗಾರಿಕೆ ಪ್ರಮುಖವಾಗಿ ಕನಿಷ್ಕನದು. ತೇಜೋವಲಯ, ಹೆಗಲಮೇಲೇಳುತ್ತಿರುವ ಜ್ವಾಲೆ, ಮೋಡದಿಂದ ಏಳುತ್ತಿರುವ ಅರಸನ ದೇಹ—ಇವೆಲ್ಲವೂ ಕುಷಾಣ ಅರಸರಿಗೆ ದೈವತ್ವವನ್ನು ಆರೋಪಿಸುವ ಸಾಂಕೇತಿಕ ವಿಧಾನಗಳಾಗಿದ್ದವು.

ವೇದಿಕೆಯ ಬಳಿ ಯಜ್ಞ ಮಾಡುತ್ತಿರುವ ಅರಸನ ಚಿತ್ರವು, ಪ್ರಾಯಶಃ ರೋಮನ್ನರ ಪೊಂಟಿಫೆಕ್ಸ್ ಮ್ಯಾಕ್ಸಿಮಸ್ (Pontifex Maximus)ನ್ನು ಹೋಲುತ್ತದೆ. ಇಂತಹ ಸಂದರ್ಭದಲ್ಲಿ ರಾಜನು ಪ್ರಜೆಗಳ ಪ್ರಮುಖ ಪುರೋಹಿತನಾಗಿರುತ್ತಿದ್ದ. ಹೋಮರನ ಕಾಲದಲ್ಲಿ ಗ್ರೀಕ್ ಅರಸರಿಗೆ ಇದೇತೆರನಾದ ಧಾರ್ಮಿಕ ಕರ್ತವ್ಯಗಳಿದ್ದವು. ಗ್ರೀಕ್, ಪರ್ಶಿಯನ್, ಹಿಂದು, ಮತ್ತು ಬೌದ್ಧ—ಈ ಪಂಥಗಳಿಗೆ ಸೇರಿದ ದೇವ-ದೇವಿಯರ ಅಸಂಖ್ಯಾತ ಮೂರ್ತಿಗಳನ್ನು ಅವನ ನಾಣ್ಯಗಳ ಹಿಮ್ಮುಖದಲ್ಲಿ ಧಾರಾಳವಾಗಿ ಕಾಣಬಹುದು. ಕನಿಷ್ಕನ ರಾಷ್ಟ್ರ ಈ ಎಲ್ಲ ಪಂಥಗಳ ಜನರನ್ನು ಒಳಗೊಂಡಿತ್ತು. ಧಾರ್ಮಿಕವಾಗಿ ಯಾರೊಬ್ಬರ ಮನಸ್ಸನ್ನೂ ಘಾಸಿ ಮಾಡುವುದು ಅವನಿಗೆ ಇಷ್ಟವಿರಲಿಲ್ಲ. ಅವನು ಎಲ್ಲ ಪಂಥೀಯರಿಗೂ ಪ್ರಾತಿನಿಧ್ಯ ಕೊಡುವ ಮಾಧ್ಯಮವಾಗಿ ನಾಣ್ಯಗಳನ್ನು ಉಪಯೋಗಿಸಿದ. ರ್‍ಯಾಪಸನ್ ಮತ್ತು ಹಲವು ವಿದ್ವಾಂಸರ ಅಭಿಮತವು ಇದೇ ಆಗಿದೆ. ಇದು ಅವನಿಗೆ ಎಲ್ಲ ಧರ್ಮಗಳ ಮೇಲಿರುವ ಗೌರವವನ್ನೂ ಹಾಗೂ ನಿಷ್ಪಕ್ಷಪಾತ ಮನೋಭಾವವನ್ನೂ ಸೂಚಿಸುತ್ತದೆ. ಹಾಗಾದರೆ ಅವನ ವೈಯಕ್ತಿಕ ಧರ್ಮದ ಬಗ್ಗೆ ಅನುಮಾನವಾಗುವುದು ಸಹಜವೇ. ಅವನ ಆರಂಭಿಕ ಧಾರ್ಮಿಕ ಜೀವನ ಅನೇಕ ಬದಲಾವಣೆಗಳಿಗೆ ಗುರಿಯಾಯಿತು–ಎನ್ನುವ ಕನ್ನಿಂಗ್‌ಹ್ಯಾಂನ ಮಾತು ಒಪ್ಪತಕ್ಕದ್ದೆ. ಆದರೂ ಅವನು ಬೌದ್ಧಧರ್ಮದ ನಿಷ್ಠಾವಂತ ಅನುಯಾಯಿ–ಎಂಬುದರಲ್ಲಿ ಕಿಂಚಿತ್ತೂ ಅನುಮಾನವಿಲ್ಲ.

ಕನಿಷ್ಕ ಮತ್ತು ಅವನ ಉತ್ತರಾಧಿಕಾರಿಗಳ ಕಾಲದಲ್ಲಿ ನಾಣ್ಯಗಳ ಆಲೇಖಕ್ಕಾಗಿ ಖರೋಷ್ಠಿ ಲಿಪಿಗಳನ್ನು ಬಳಸುವುದು ನಿಂತು, ಗ್ರೀಕ್ ಲಿಪಿ ಒಂದನ್ನೇ ಬಳಸುವುದು ಆರಂಭವಾಯಿತು. ಈ ಬಗ್ಗೆ ಹಲವಾರು ವಾದಗಳ ವರ್ಗಗಳಿವೆ. ಮೊದಲನೆಯ

ದಾಗಿ ಗ್ರೀಕರು ಬಹುಕಾಲದವರೆವಿಗೂ ಬ್ಯಾಕ್ಟ್ರಿಯಾ ಪ್ರದೇಶವನ್ನು ಆಕ್ರಮಿಸಿದ್ದರು. ಈ ಪ್ರದೇಶದಲ್ಲಿ ಸಹಜವಾಗಿಯೇ ಗ್ರೀಕ್ ಭಾಷೆ ಮತ್ತು ಗ್ರೀಕ್ ಲಿಪಿಗಳೆರಡೂ ಬೆಳೆದು ಬಂದವು. ಖರೋಷ್ಠಿಲಿಪಿ ಗಾಂಧಾರ ಪ್ರದೇಶದಲ್ಲಿ ಮಾತ್ರವೇ ಬಳಕೆಯಲ್ಲಿತ್ತು. ಬ್ಯಾಕ್ಟ್ರಿಯಾದಲ್ಲಿ ಗ್ರೀಕ್ ಲಿಪಿ ಹಾಗೂ ಭಾಷೆಗಳೆರಡನ್ನು ಉಪಯೋಗಿಸಿದ್ದರಿಂದ ಉಳಿದೆಡೆಯಲ್ಲೂ ಇದನ್ನೆ ಆಚರಣೆಗೆ ತಂದಿರಬೇಕು. ಖರೋಷ್ಠಿ ಲಿಪಿಯ ಬಳಕೆಯನ್ನು ನಿಲ್ಲಿಸಲು ಕುಷಾಣ ಅರಸರಿಗೆ ಗ್ರೀಕ್ ಭಾಷೆಯ ಮೇಲೆ ಇರುವ ವ್ಯಾಮೋಹವೂ ಕಾರಣವಿರಬಹುದು. ಆದುದರಿಂದಲೇ ಖರೋಷ್ಠಿ ಲಿಪಿಗೆ ಕಿರಿಯ ದರ್ಜೆಯ ಸ್ಥಾನವನ್ನು ಕೊಟ್ಟಿದ್ದರು. ಅನಂತರದ ಕುಷಾಣರ ಕಾಲದಲ್ಲಿ ಯಾರಾದರಿಬ್ಬರು ಜೊತೆಗೂಡಿ ನಾಣ್ಯಚಲಾಯಿಸಿದರೆ ಕಿರಿಯ ವ್ಯಕ್ತಿಯನ್ನು ವರ್ಣಿಸಲು ಖರೋಷ್ಠಿಲಿಪಿಯನ್ನು ಉಪಯೋಗಿಸುತ್ತಿದ್ದರು. ಎರಡನೆಯ ವರ್ಗದ ವಿದ್ವಾಂಸರ ಪ್ರಕಾರ ಅಂತರರಾಷ್ಟ್ರೀಯ ವಾಣಿಜ್ಯದ ಅವಶ್ಯಕತೆಯಿಂದಾಗಿ ನಾಣ್ಯಗಳ ಆಲೇಖಕ್ಕೆ ಗ್ರೀಕ್ ಭಾಷೆ–ಲಿಪಿಗಳನ್ನು ಉಪಯೋಗಿಸಲಾಯಿತೆಂದು ತಿಳಿದು ಬರುತ್ತದೆ. ಅಂದು ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಗ್ರೀಕ್ ಭಾಷೆಯನ್ನು ವಾಣಿಜ್ಯ ಭಾಷೆಯನ್ನಾಗಿ ಉಪಯೋಗಿಸಲಾಗುತ್ತಿತ್ತು.

ಳ

ಕನಿಷ್ಕನನಂತರದ ವಾಸಿಷ್ಕನ ನಾಣ್ಯಗಳು ಇನ್ನೂ ದೊರೆತಿಲ್ಲ. ಹುವಿಷ್ಕ ಕುಷಾಣರ ಅರಸನೆಂದು ಕಲ್ಹಣ ತನ್ನ 'ರಾಜ ತರಂಗಿಣಿ'ಯಲ್ಲಿ ತಿಳಿಸುತ್ತಾನೆ. ಅವನು ಕ್ರಿ. ಶ. 109 ರಿಂದ 138ರ ವರೆವಿಗೆ ಆಳ್ವಿಕೆ ನಡೆಸಿರಬಹುದು. ಶಾಸನಗಳಲ್ಲಿ ಇವನನ್ನು "ಮಹಾರಾಜ ರಾಜಾತಿರಾಜ ದೇವಪುತ್ರ"ನೆಂದು ಬಣ್ಣಿಸಲಾಗಿದೆ. ಇವನು ಚಿನ್ನ ಮತ್ತು ತಾಮ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲೂ ಮತ್ತು ಬೆಳ್ಳಿಯಲ್ಲಿ ಕಡಮೆ ಸಂಖ್ಯೆಯಲ್ಲೂ ನಾಣ್ಯಗಳನ್ನು ಟಂಕಿಸಿದ. ಇವನ ನಾಣ್ಯಗಳ ಮುಮ್ಮುಖ ಹಾಗೂ ಹಿಮ್ಮುಖಗಳು ಸಾಕಷ್ಟು ಬದಲಾವಣೆ ಹೊಂದುತ್ತವೆ. ಅನೇಕ ವಸ್ತ್ರಾಭರಣಗಳಿಂದ ಕೂಡಿದ ಎದೆವರೆಗಿನ ಚಿತ್ರವನ್ನು ಮುಮ್ಮುಖದಲ್ಲಿ ಕಾಣಬಹುದು. ಅರಸ ಸಮತಟ್ಟವಾದ ಶಿರಸ್ತ್ರಾಣವನ್ನು ಧರಿಸಿ, ಕೈಲಿ ರಾಜದಂಡದನ್ನು ಹಿಡಿದಿದ್ದಾನೆ. ಆನೆಯ ಮೇಲೆ ಸವಾರಿ ಮಾಡುತ್ತಿರುವಂತೆ ಹಾಸಿಗೆಯ ಮೇಲೆ ಪವಡಿಸಿರುವಂತೆ ಇನ್ನೂ ಹಲವಾರು ಭಾವ-ಭಂಗಿಗಳಲ್ಲಿ ಅರಸನನ್ನು ಮುಮ್ಮುಖದಲ್ಲಿ ಚಿತ್ರಿಸಲಾಗಿದೆ. ಕನಿಷ್ಕನ ನಾಣ್ಯಗಳಂತೆ ಇವನ ನಾಣ್ಯಗಳ ಹಿಮ್ಮುಖದಲ್ಲಿ ವಿವಿಧ ಪಂಥಗಳಿಗೆ ಸೇರಿದ ದೇವಾನುದೇವತೆಗಳ ಚಿತ್ರಗಳನ್ನು ಕಾಣಬಹುದು. ಅವುಗಳ ಸಂಖ್ಯೆ ಇಲ್ಲಿ ಮತ್ತಷ್ಟು ಹೆಚ್ಚಾಗಿದೆ. ಇವನ ನಾಣ್ಯಗಳ ಒಂದರ ಮಾದರಿಯಲ್ಲಿ ಹೊಸ ಅಂಶವನ್ನು ಕಾಣಬಹುದು: ಧನುಸ್ಸನ್ನು ಹಿಡಿದ ಶಿವನಂತಿರುವ ಚಿತ್ರವಿದೆ. ಕೆಳಗಡೆ ಬ್ರಾಹ್ಮಿ ಲಿಪಿಯಲ್ಲಿ 'ಗಣೇಶ' – ಎಂದು ಬರೆಯಲಾಗಿದೆ. ಇನ್ನೂ

ಹಲವಾರು ಮಾದರಿಗಳಲ್ಲಿ ಸ್ಕಂದ, ಕುಮಾರ, ಮಹಾಸೇನ, ವಿಷ್ಣುವಿನ ಚಿತ್ರಣಗಳೂ ಇವೆ.

ಹುವಿಷ್ಕನನ್ನು ಅವನ ನಾಣ್ಯಗಳ ಹಿಮ್ಮುಖದಲ್ಲಿ "ಷಾವೊ ನಾನೊ ಷಾವೊ ಓಯುಷ್ಕಿ ಕೊಷಾಣೊ"–ಎಂಬ ಗ್ರೀಕ್ ಆಲೇಖದಲ್ಲಿ ಅವನನ್ನು ಬಣ್ಣಿಸಲಾಗಿದೆ. ಕೆಲವು ಚಿನ್ನದ ನಾಣ್ಯಗಳು ಅವನ ದೇಹದ ಸ್ಥೂಲ ಚಿತ್ರಣವನ್ನು ಕೊಡುತ್ತವೆ. ನೀಳ ನಾಸಿಕ, ವಿಶಾಲವೂ ಆಳವೂ ಆದ ಕಣ್ಣುಗಳು, ಮತ್ತು ದೃಢ ನಿರ್ಧಾರದ ನೋಟ ಉಳ್ಳ ವ್ಯಕ್ತಿ ಅವನು. ಅವನ ನಾಣ್ಯಗಳ ಅಧ್ಯಯನದಿಂದ, ಅವನಲ್ಲಿ ಒರಟುತನವಿದ್ದರೂ, ಅಪೂರ್ವ ತೇಜಸ್ಸಿನಿಂದ ಕೂಡಿದ, ಧರ್ಮಗಳ ಬಗ್ಗೆ ಸರಳ ನೀತಿಯನ್ನು ಅನುಸರಿಸಿದ ಪ್ರಭಾವಶಾಲಿಯಾದ ಅರಸನೆಂದು ತಿಳಿಯಬಹುದು. ಅವನ ನಾಣ್ಯಗಳ ಕೆಲ ಮಾದರಿಗಳನ್ನಿಲ್ಲಿ ಕೊಡಲಾಗಿದೆ:

ಚಿನ್ನದ ನಾಣ್ಯಗಳು :

1 'ಅರ್ಧಮಾನದ ಚಿತ್ರ'ದ ಮಾದರಿ :

ಮುಮ್ಮುಖ : ಕೋನಾಕೃತಿಯ ಶಿರಸ್ತ್ರಾಣವನ್ನು ಧರಿಸಿ ಮೋಡದ ಮೇಲೇಳುತ್ತಿರುವ ಅರಸ. ಎಡಗೈಲಿ ರಾಜದಂಡವಿದೆ (ಕೆಲವೊಮ್ಮೆ ಗದೆ ಅಥವಾ ಅಂಕುಶ ಹಿಡಿದಿರುವುದುಂಟು) ಗ್ರೀಕ್ ಆಲೇಖ: "ಷಾವೊ ನಾನೊ ಷಾವೊ ಓಯುಷ್ಕಿ ಕೊಷಾಣೊ"

(ಅನು : ರಾಜರ ರಾಜನಾದ ಕುಷಾಣರ ಹುವಿಷ್ಕ)

ಹಿಮ್ಮುಖ (1) "ಅರ್ದಕ್ಷೊ ನಮೂನೆ" : ಪರ್ಷಿಯನ್ನರ ಸಂಪತ್ತಿನ ದೇವತೆ, (ಭಾರತೀಯರ ಲಕ್ಷ್ಮಿ ಇದ್ದಂತೆ). ಬಲಕ್ಕೆ ಮುಖ ತಿರುಗಿಸಿದ್ದಾಳೆ. ಎರಡು ಕೈಗಳಲ್ಲೂ ಅಕ್ಷಯ ಪಾತ್ರೆ ಇದೆ.
ಗ್ರೀಕ್ ಆಲೇಖ: "ಅರ್ದಕ್ಷೊ"

ಹಿಮ್ಮುಖ (2) "ಮಾವೊ ನಮೂನೆ" : ಎಡಕ್ಕೆ ಚಂದ್ರದೇವ ಮುಖ ಮಾಡಿದ್ದಾನೆ. ಅವನ ಹೆಗಲ ಹಿಂಬದಿಯಲ್ಲಿ ಅರ್ಧಚಂದ್ರಾಕೃತಿಗಳಿವೆ. ಕೈಗಳಲ್ಲಿ ರಾಜದಂಡ ಮತ್ತು ಹೂಮಾಲೆ ಇವೆ. ಸೊಂಟದಲ್ಲಿ ಕತ್ತಿ ಇದೆ.
ಗ್ರೀಕ್ ಆಲೇಖ : "ಮಾವೊ"

ಹಿಮ್ಮುಖ (3) "ಓಯೇಷು ನಮೂನೆ". ಶಿವ ನಮ್ಮತ್ತ ಮುಖ ಮಾಡಿದ್ದಾನೆ. ಅವನಿಗೆ ಮೂರು ಶಿರಸ್ಸುಗಳು, ನಾಲ್ಕು ಹಸ್ತಗಳಿವೆ.

ಅವನು ತ್ರಿಶೂಲ ವಜ್ರಾಯುಧ, ಅಂಕುಶ–ಮೊದಲಾದ ಆಯುಧಗಳನ್ನು ಹಿಡಿದಿದ್ದಾನೆ.

ಹಿಮ್ಮುಖ (4) "ಮವೊ–ಮಿಹಿರ ನಮೂನೆ": ಮಿಹಿರ ಪರ್ಶಿಯನ್ನರ ಸೂರ್ಯದೇವ. ಇವನು ಎಡಭಾಗಕ್ಕಿದ್ದು, ಬೆಳಕಿನ ಕಿರಣಗಳನ್ನು ಹೊರ ಹೊಮ್ಮಿಸುತ್ತಿದ್ದಾನೆ. ಅವನ ಬಲಗೈ ಹೊರ ಚಾಚಿದ್ದು, ಎಡಗೈಲಿ ರಾಜದಂಡವಿದೆ. ಚಂದ್ರದೇವ ಬಲಕ್ಕಿದ್ದು ಹೆಗಲ ಹಿಂಬದಿಯಲ್ಲಿ ಅರ್ಧಚಂದ್ರಾಕೃತಿಯಿದೆ. ಇವನು ರಾಜದಂಡವನ್ನು ಮತ್ತು ಅಂಕುಶಗಳನ್ನು ಹಿಡಿದಿದ್ದಾನೆ.
ಗ್ರೀಕ್ ಆಲೇಖ: "ಮವೊ–ಮಿಹಿರೊ"

ಹಿಮ್ಮುಖ (5) "ಸ್ಕಂದ ಕುಮಾರ ವಿಶಾಖ ನಮೂನೆ": ಸ್ಕಂದ ಮತ್ತು ವಿಶಾಖರು ಮುಖಾಮುಖಿಯಾಗಿ ನಿಂತಿದ್ದಾರೆ. ಸ್ಕಂಧ ಆಯುಧಪಾಣಿಯಾಗಿ ಪಕ್ಷಿಯನ್ನು ಏರಿದ್ದಾನೆ. ವಿಶಾಖನ ಎಡಗೈಲಿ ರಾಜದಂಡವಿದೆ.
ಗ್ರೀಕ್ ಆಲೇಖ: "ಸ್ಕಂದ ಕೊಮರೊ ಬಿಜಾಗೊ"

II "ಆನೆಯ ಮೇಲಿರುವ ಅರಸ ಮತ್ತು ಆರ್ದಕ್ಷೊ" ಮಾದರಿ:

ಮುಮ್ಮುಖ: ಆನೆಯ ಮೇಲೆ ಸವಾರಿ ಮಾಡುತ್ತಿರುವ ಅರಸ. ಕೈಗಳಲ್ಲಿ ರಾಜದಂಡ ಮತ್ತು ಅಂಕುಶಗಳಿವೆ. ಗ್ರೀಕ್ ಆಲೇಖ ಮೇಲಿನ ಮಾದರಿಗಳಲ್ಲಿರುವಂತಿದೆ.

ಹಿಮ್ಮುಖ: ಸಂಪತ್ತಿನ ದೇವಿಯಾದ ಆರ್ದಕ್ಷೊ ತನ್ನೆರಡು ಕೈಗಳಲ್ಲಿ ಅಕ್ಷಯ ಪಾತ್ರೆಯನ್ನು ಹಿಡಿದಿದ್ದಾಳೆ.
ಗ್ರೀಕ್ ಆಲೇಖ "ಆರ್ದಕ್ಷೊ".

III "ಕುಳಿತಿರುವ ಅರಸ ಮತ್ತು ಹೆರಾಕ್ಲೆಸ್" ಮಾದರಿ:

ಮುಮ್ಮುಖ: ಪದ್ಮಾಸನದಲ್ಲಿ ಕುಳಿತಿರುವ ಅರಸ ಅಲಂಕೃತವಾದ ಶಿರಸ್ತ್ರಾಣವನ್ನು ಧರಿಸಿದ್ದಾನೆ. ಹೆಗಲ ಮೇಲೆ ಜ್ವಾಲೆ ಏಳುತ್ತದೆ. ಕೈಲಿ ಭರ್ಜಿ ಇದೆ. ಗ್ರೀಕ್ ಆಲೇಖ ಹಿಂದಿನ ಮಾದರಿಗಳಲ್ಲಿರುವಂತಿದೆ.

ಹಿಮ್ಮುಖ: ಗಡ್ಡಧಾರಿಯಾದ ಹೆರಾಕ್ಲೀಸ್ ಎಡಕ್ಕೆ ಮುಖ ತಿರುಗಿಸಿದ್ದಾನೆ. ಬಲಗೈಲಿ ಗದೆ ಇದೆ. ಎಡ ತೋಳಿನ ಮೇಲೆ ಸಿಂಹದ ಚರ್ಮವಿದೆ. ಗ್ರೀಕ್ ಆಲೇಖ: "ಹೆರಕ್ಲಿಯೊ".

ತಾಮ್ರದ ನಾಣ್ಯಗಳು

ಕನ್ನಿಂಗ್‌ಹ್ಯಾಂ ಹುವಿಷ್ಕನ ಹಲವಾರು ನಾಣ್ಯಗಳನ್ನು ಪರಿಶೀಲಿಸಿದರು. ಇಲ್ಲೂ ಮುಮ್ಮುಖ ವಿವಿಧ ಬಗೆಗಳಲ್ಲಿದ್ದರೂ, ಹಿಮ್ಮುಖ ಇನ್ನೂ ಹೆಚ್ಚಿನ ನಮೂನೆಗಳಲ್ಲಿ ಕಾಣಸಿಗುತ್ತವೆ. ಅವುಗಳಲ್ಲಿ ಒಂದರ ಮಾದರಿಯನ್ನು ಕೊಟ್ಟಿದೆ.

ಮುಮ್ಮುಖ: ಅರಸ ರಾಜದಂಡವನ್ನು ಹಿಡಿದು ಆನೆಯ ಮೇಲೆ ಸವಾರಿ ಮಾಡುತ್ತಿದ್ದಾನೆ. ಎಡಗೈಲಿ ಅಂಕುಶವಿದೆ. ಎಂದಿನಂತೆ ಗ್ರೀಕ್ ಆಲೇಖವಿದೆ.

ಹಿಮ್ಮುಖ (1) "ಗಣೇಶ ನಮೂನೆ": ಬಿಲ್ಲುಗಾರನೊಬ್ಬ ಬಲಕ್ಕೆ ಮುಖ ಮಾಡಿದ್ದಾನೆ. ಆಲೇಖ ಬ್ರಾಹ್ಮಿ ಭಾಷೆಯಲ್ಲಿದೆ. ಇದನ್ನು ಗುರ್ತಿಸಿದವರು ವಿನ್ಸೆಂಟ್ ಸ್ಮಿತ್

ಆಲೇಖ: "ಗಣೇಶೊ"

ಹಿಮ್ಮುಖ (2) "ಮಿಹಿರೊ ನಮೂನೆ": ಸೂರ್ಯದೇವ ಎಡಕ್ಕೆ ಮುಖ ತಿರುಗಿಸಿ ಬಲಗೈಯನ್ನು ಮುಂಚಾಚಿದ್ದಾನೆ. ಎಡಗೈಲಿ ಕತ್ತಿ ಇದೆ.

ಆಲೇಖ: "ಮಿಹಿರೊ"

ಹಿಮ್ಮುಖ (3) "ಒಶೋಷೊ ನಮೂನೆ": ಎಡಕ್ಕೆ ನೋಡುತ್ತಿರುವ ಶಿವ, ತನ್ನ ನಾಲ್ಕು ಕೈಗಳಲ್ಲಿ ಪಾಶ, ಡಮರುಗ, ತ್ರಿಶೂಲ, ಅಂಕುಶಗಳನ್ನು ಹಿಡಿದಿದ್ದಾನೆ.

ಹುವಿಷ್ಕನ ನಾಣ್ಯಗಳು ಹಲವಾರು ಬಗೆಯ ಮುಮ್ಮುಖ ಹಾಗೂ ಹಿಮ್ಮುಖಗಳನ್ನು ಒಳಗೊಂಡಿರುವುದು, ಅವನ ನಾಣ್ಯಗಳ ಪ್ರಮುಖ ವೈಲಕ್ಷಣ್ಯಗಳಲ್ಲೊಂದು. "ಯಜ್ಞ ವೇದಿಕೆಯ ಬಳಿ ಯಜ್ಞ ಮಾಡುತ್ತಿರುವ ಅರಸನ ಚಿತ್ರ" ಇಲ್ಲದಿರುವುದು ಅವನ ನಾಣ್ಯಗಳಲ್ಲಿ ವ್ಯಕ್ತವಾಗುವ ಮತ್ತೊಂದು ಸಂಗತಿ. ಅವನ ಪೂರ್ವಿಕರ ನಾಣ್ಯಗಳ ಮೇಲೆ ಕಾಣದಿರುವ ಹಲವಾರು ಹೊಸ ದೇವ–ದೇವಿಯರ ಚಿತ್ರಗಳನ್ನು ಇವನ ನಾಣ್ಯಗಳ ಮೇಲೆ ನೋಡಬಹುದು. ಇವನು ತಿರುಗಿ ದ್ವೈಲಿಪಿಕ ನಾಣ್ಯಗಳ ಪರಂಪರೆಯನ್ನು ಆಚರಣೆಗೆ ತಂದ. ಬೆಳ್ಳಿಯ ನಾಣ್ಯಗಳ ಮೇಲೆ ಗ್ರೀಕ್ ಮತ್ತು ಖರೋಷ್ಠಿ ಲಿಪಿಗಳಲ್ಲೂ, ಮತ್ತು ತಾಮ್ರದ ನಾಣ್ಯಗಳ ಮೇಲೆ ಗ್ರೀಕ್ ಮತ್ತು ಬ್ರಾಹ್ಮೀ ಲಿಪಿಗಳಲ್ಲೂ ಆಲೇಖಗಳನ್ನು ಮುದ್ರಿಸಿದ. ಅವನ ನಾಣ್ಯಗಳ ಮೇಲಿನ ದೇವತಾಮೂರ್ತಿಗಳನ್ನು ಅವಲೋಕಿಸಿದರೆ, ಅವನು ಕಾರ್ತಿಕೇಯನ ಭಕ್ತನಾಗಿದ್ದಂತೆ ತಿಳಿದುಬರುತ್ತದೆ. ಅವನ ಅಸಂಖ್ಯಾತ ನಾಣ್ಯಗಳ ಹಿಮ್ಮುಖದ ಮೇಲೆ ಸ್ಕಂದ, ಕುಮಾರ, ವಿಶಾಖ ಮತ್ತು ಮಹಾಸೇನರ ಚಿತ್ರಗಳನ್ನು ಕಾಣಬಹುದು. ಅವನ

ಕೆಲವು ಚಿನ್ನದ ನಾಣ್ಯಗಳ ಮೇಲೂ ಅವನನ್ನು "ಮಹಾಸೇನ"ನೆಂದು ಬಣ್ಣಿಸಲಾಗಿದೆ. ಮಹಾಸೇನ, ಕಾರ್ತಿಕೇಯನ ಮತ್ತೊಂದು ಹೆಸರು. ಪೆಷಾವರ್‌ನ ಬಳಿ ದೊರೆತಿರುವ ಖರೋಷ್ಠಿ ಶಾಸನ ಒಂದರಲ್ಲಿ ಅವನನ್ನು ಮಹಾಸೇನನೆಂದು ತಿಳಿಸಲಾಗಿದೆ. ಇವೆಲ್ಲದರ ಆಧಾರದ ಮೇಲೆ ಅವನು ಶಿವನ ಮಗನಾದ ಕಾರ್ತಿಕೇಯನ ಭಕ್ತನೆಂಬ ತೀರ್ಮಾನಕ್ಕೆ ಬರಬಹುದು.

೫

ಹುವಿಷ್ಕನನಂತರ ಅಧಿಕಾರಕ್ಕೆ ಬಂದ ವಾಸುದೇವನದು ಭಾರತೀಯ ಹೆಸರಾದುದರಿಂದ, ಕುಷಾಣರು ಕ್ರಮೇಣ ಇಲ್ಲಿನ ಮಣ್ಣಿನ ಮಕ್ಕಳಾದುದನ್ನು ಸೂಚಿಸುತ್ತದೆ. ಇವನು ಕ್ರಿ.ಶ. 145 ರಿಂದ 176ರ ವರೆವಿಗೆ ಆಳಿರಬೇಕು. ಇವನು ಚಿನ್ನ ಹಾಗೂ ತಾಮ್ರದಲ್ಲಿ ಸ್ಟ್ಯಾಟರ್ ಮತ್ತು ಕಾಲು-ಸ್ಟ್ಯಾಟರ್ ನಾಣ್ಯಗಳನ್ನು ಟಂಕಿಸಿದ. ಅವನ ನಾಣ್ಯಗಳು ತೂಕ, ರಚನೆ ಮತ್ತು ನಮೂನೆಗಳಲ್ಲಿ ತನ್ನ ಹತ್ತಿರದ ಪೂರ್ವಿಕರಿಬ್ಬರ ನಾಣ್ಯಗಳನ್ನು ಹೋಲುತ್ತವೆ. ಗ್ರೀಕ್ ಲಿಪಿಯನ್ನಲ್ಲದೆ, ಉಳಿದ ಲಿಪಿಗಳಲ್ಲಿ ಆಲೇಖಗಳು ಅವನ ನಾಣ್ಯಗಳ ಮೇಲಿಲ್ಲದಿರುವುದು ಎದ್ದುಕಾಣುವ ಪ್ರಮುಖ ಅಂಶ. ಅವನ ನಾಣ್ಯಗಳು ಪಂಜಾಬ್ ಮತ್ತು ವಾಯುವ್ಯ ಭೂಭಾಗದಲ್ಲಿ ದೊರೆತಿವೆ. ತಕ್ಷಶಿಲೆಯ ಧರ್ಮರಾಜಿಕಾ ಸ್ತೂಪ ಪ್ರದೇಶದಲ್ಲಿ ದೊರೆತ 531 ನಾಣ್ಯಗಳ ನಿಕ್ಷೇಪವೇ ಅತ್ಯಂತ ದೊಡ್ಡದು. ಅವನ ನಾಣ್ಯಗಳು ಮಥುರಾ ಮತ್ತು ಇನ್ನೂ ಹಲವಾರು ಪ್ರದೇಶಗಳಲ್ಲೂ ದೊರೆತಿವೆ.

ವಾಸುದೇವನ ನಾಣ್ಯಗಳ ಮೇಲೆ ವಿದೇಶಿ ಪ್ರಭಾವ ಕಾಣಸಿಗುತ್ತದೆ. ಆಯುಧಧಾರಿಯಾಗಿ, ನಂದಿಯಿಂದ ಸೇವೆ ಪಡೆಯುತ್ತಿರುವ ಶಿವನ ಚಿತ್ರ ವಿಪುಲವಾಗಿ ಅವನ ನಾಣ್ಯಗಳ ಮೇಲೆ ಕಾಣಿಸುತ್ತದೆ. ಆದರೂ ಅವನು ಅನ್ಯಧರ್ಮಗಳನ್ನು ಕಡೆಗಣಿಸಲಿಲ್ಲ. ಅಪೂರ್ವವಾದರೂ ಪರ್ಶಿಯನ್ನರ ದೇವರ ಚಿತ್ರಗಳಾದ 'ನಾನ' ಮತ್ತು 'ಆರ್ದಕ್ಷೊ'ಗಳನ್ನು ಮುದ್ರಿಸಿದೆ.

"ಷಾವೊ ನಾನೊ ಷಾವೊ ಬಜದೇವ್ ಕೊಷಾಣೊ"–ಎಂಬ ಆಲೇಖವನ್ನು ಸಾಮಾನ್ಯವಾಗಿ ಅವನ ಚಿನ್ನದ ಮತ್ತು ತಾಮ್ರದ ನಾಣ್ಯಗಳ ಮೇಲೆ ಟಂಕಿಸಿದೆ. ಬ್ರಾಹ್ಮೀಲಿಪಿಯಲ್ಲಿ "ವಾಸು"–ಆಲೇಖವನ್ನು ಹೊಂದಿರುವ ತಾಮ್ರದ ನಾಣ್ಯವೊಂದು ದೊರೆತಿದೆ. ಇದು ವಾಸುದೇವನ ನಾಣ್ಯವೆಂದು ಗುರ್ತಿಸಲಾಗಿದೆ. ತ್ರಿಶಿರಸ್ಸನ್ನೂ ಮತ್ತು ನಾಲ್ಕು ತೋಳುಗಳನ್ನೂ ಹೊಂದಿರುವ ಶಿವನ ಚಿತ್ರವನ್ನು ಅವನ ನಾಣ್ಯಗಳ ಮೇಲೆ ರೂಪಿಸಿರುವುದು ಅವನ ನಾಣ್ಯಗಳ ಹೊಸ ಅಂಶ.

ಚಿನ್ನದ ನಾಣ್ಯಗಳು :

ವಾಸುದೇವನ ಚಿನ್ನದ ನಾಣ್ಯಗಳನ್ನು ಹಲವಾರು ಮಾದರಿಗಳನ್ನಾಗಿ ಅಭ್ಯಾಸಕ್ಕೆ ಅನುಕೂಲವಾಗುವಂತೆ ವಿಂಗಡಿಸಲಾಗಿದೆ.

I. "ಯಜ್ಞವೇದಿಕೆಯ ಬಳಿ ಇರುವ ಅರಸನ" ಮಾದರಿ:

ಮುಮ್ಮುಖ: ಎಡಕ್ಕೆ ಮುಖ ತಿರುಗಿಸಿ ನಿಂತಿರುವ ಅರಸನ ಹಿಂದೆ ತೇಜೋವಲಯುವಿದೆ. ಅವನ ಬಲಗೈ ಯಜ್ಞವೇದಿಕೆಯ ಮೇಲಿದೆ. ಮಂಡಿಯವರೆವಿಗೂ ಚಾಚಿರುವ ಗ್ರೀಕ್‌ರ ಮಾದರಿಯಲ್ಲಿನ ಜುಬ್ಬವನ್ನೂ, ಇಜಾರನ್ನೂ ಧರಿಸಿದ್ದಾನೆ. ಕೋನಾಕೃತಿಯ ಶಿರಸ್ತ್ರಾಣವಿದೆ. ಟಾರ್ಟರ್ ಬೂಟನ್ನು ಕಾಲುಗಳಲ್ಲಿ ತೊಟ್ಟಿದ್ದಾನೆ. ಎಡಭಾಗದಲ್ಲಿ ಖಡ್ಗವಿದೆ. ವಿಕೃತಗೊಂಡ ಗ್ರೀಕ್ ಆಲೇಖ. "ಷಾವೊ ನಾನೊ ಷಾವೊ ಬಜದೇವೊ ಕೊಷಾಣೊ." (ಅನು: "ರಾಜರರಾಜನಾದ ಕುಷಾಣರ ವಾಸುದೇವ.")

ಇಲ್ಲೂ ಕೂಡ ಹಿಂದಿನ ಅರಸರುಗಳ ನಾಣ್ಯಗಳಂತೆ ಮುಮ್ಮುಖ ಒಂದೇ ರೀತಿ ಇದ್ದು, ಹಿಮ್ಮುಖ ಅನೇಕ ರೀತಿಯಲ್ಲಿ ಬದಲಾವಣೆ ಹೊಂದುತ್ತಾ ಹೋಗುತ್ತದೆ.

ಹಿಮ್ಮುಖ (1): ಬಲಕ್ಕೆ ಮುಖ ಮಾಡಿ, ತೇಜೋವಲಯದಿಂದ ಕೂಡಿರುವ 'ನಾನ'. ತಲೆಯ ಮೇಲೆ ಅರ್ಧ ಚಂದ್ರಾಕೃತಿ ಇದೆ. ಕೈಲಿ ರಾಜದಂಡವಿದೆ. ಗ್ರೀಕ್ ಆಲೇಖ: 'ನಾನ.'

ಹಿಮ್ಮುಖ (2): ಸಮ್ಮುಖ ಮುಖ ಮಾಡಿರುವ, ತ್ರಿಶಿರಸ್ಕನಾದ ಶಿವ, ಅವನ ಎರಡು ಕೈಗಳಲ್ಲೂ ಪಾಶ ಅಥವಾ ಹೂಮಾಲೆ, ಮತ್ತು ತ್ರಿಶೂಲವಿದೆ. ಗ್ರೀಕ್ ಆಲೇಖ "ಓಯೋಷು."

II. ತ್ರಿಶೂಲ ಹಿಡಿದು, ಯಜ್ಞವೇದಿಕೆಯ ಬಳಿ ಇರುವ ಅರಸನ ಮಾದರಿ:

ಮುಮ್ಮುಖ: ಹಿಂದಿನ ಮಾದರಿಯಲ್ಲಿರುವ ಎಲ್ಲ ಅಂಶಗಳನ್ನೂ ಕಾಣಬಹುದು. ಆದರೆ ಅರಸ ತ್ರಿಶೂಲವನ್ನು ಹಿಡಿದಿದ್ದಾನೆ. ಗ್ರೀಕ್ ಆಲೇಖವು ಹಿಂದಿನಂತೆ ಇದೆ.

ಹಿಮ್ಮುಖ : ಏಕ ಮುಖದ ಶಿವ, ಹೂಮಾಲೆ ಅಥವಾ ಪಾಶ, ಮತ್ತು ತ್ರಿಶೂಲಗಳನ್ನು ಹಿಡಿದಿದ್ದಾನೆ. ಅವನ ಹಿಂದೆ ನಂದಿ ಇದೆ. ಆಲೇಖ: "ಓಯೋಷು".

III. 'ವಾಸು' ಆಲೇಖ ಉಳ್ಳ ನಾಣ್ಯಗಳು:

ಮುಮ್ಮುಖ: ಯಜ್ಞವೇದಿಕೆಯ ಬಳಿ ಇರುವ ಅರಸ ಅಂಗಿಯನ್ನೂ, ಕೋನಾಕೃತಿಯ ಶಿರಸ್ತ್ರಾಣವನ್ನೂ ಧರಿಸಿದ್ದಾನೆ. ಕೈಲಿ

ಉದ್ದವಾದ ರಾಜದಂಡವಿದೆ. ಯಜ್ಞವೇದಿಕೆಯ ಬಳಿ ತ್ರಿಶೂಲವಿದೆ. ಬ್ರಾಹ್ಮೀ ಆಲೇಖ: "ವಾಸು."

ಹಿಮ್ಮುಖ : ನಮ್ಮತ್ತ ಮುಖ ಮಾಡಿರುವ ದೇವಿ ಒಬ್ಬಳು ಸಿಂಹಾಸನದ ಮೇಲಿದ್ದಾಳೆ. ಕೈಗಳಲ್ಲಿ ಅಕ್ಷಯ ಪಾತ್ರೆ ಹಿಡಿದಿದ್ದಾಳೆ. ಆಲೇಖ : "ಆರ್ದಕ್ಷೊ."

ತಾಮ್ರದ ನಾಣ್ಯಗಳು :

ಮುಮ್ಮುಖ : ಚಿನ್ನದ ಎರಡನೆಯ ಮಾದರಿಯ ನಾಣ್ಯಗಳ ಮೇಲಿರುವ ಅಂಶಗಳೆಲ್ಲ ಇವೆ.

ಹಿಮ್ಮುಖ (1) : ಇದೂ ಕೂಡ ಅದೇ ಮಾದರಿಯ ಹಿಮ್ಮುಖದ ಯಥಾ ಪ್ರತಿಯಾಗಿದೆ.

ಹಿಮ್ಮುಖ (2) : "ಆರ್ದಕ್ಷೊ"ನಮೂನೆ: ದೇವತೆ ಒಬ್ಬಳನ್ನು (ಒರಟಾದ ಆಕೃತಿಯಲ್ಲಿ ಚಿತ್ರಿಸಿ) ಸಿಂಹಾಸನದ ಮೇಲೆ ಕುಳ್ಳಿರಿಸ ಲಾಗಿದೆ. ಹಣ ಸುರಿಯುತ್ತಿರುವ ಅಕ್ಷಯ ಪಾತ್ರೆ ಅವಳ ಕೈಗಳಲ್ಲಿದೆ. ಗ್ರೀಕ್ ಆಲೇಖ : "ಆರ್ದಕ್ಷೊ"

ವಾಸುದೇವನ ನಾಣ್ಯಗಳ ಸಮಗ್ರ ಅಧ್ಯಯನದಿಂದ ನಾವು ಕೆಲವೊಂದು ತೀರ್ಮಾನಕ್ಕೆ ಧಾವಿಸಬಹುದು. ತೇಜೋವಲಯದಿಂದ ಕೂಡಿದ ಅರಸನ ಚಿತ್ರಣವು ಅವನಿಗೆ ಉನ್ನತ ಪ್ರಭುತ್ವದಲ್ಲಿರುವ ನಂಬಿಕೆಯನ್ನು ಸೂಚಿಸುತ್ತದೆ. ಅವನ ಬಹಳಷ್ಟು ನಾಣ್ಯಗಳ ಮೇಲೆ ಶಿವನ ಚಿತ್ರವನ್ನು ರೂಪಿಸಿರುವುದು, ಶಿವನು ಅವನ ಆರಾಧ್ಯದೈವವೆಂದು ತಿಳಿಯಬಹುದು. ಆದರೂ ತನ್ನ ಪೂರ್ವಿಕರಂತೆ ಅವನು ಅನ್ಯ ಧರ್ಮಗಳನ್ನು ಗೌರವಿಸಿದ್ದನೆಂಬುದಕ್ಕೆ 'ನಾನಯ' ಚಿತ್ರವೇ ಸಾಕ್ಷಿ. ಯಜ್ಞವೇದಿಕೆಯ ಬಳಿ ಇರುವ ಚಿತ್ರವು ಅಗ್ನಿಯ ಆರಾಧನೆಯಲ್ಲಿ ಅವನಿಗಿರುವ ನಂಬಿಕೆಯನ್ನು ತಿಳಿಸ ದಿರಲಾರದು. ಅವನ ಕೆಲ ನಾಣ್ಯಗಳು ಹಲವರ ಒರಟು ಅನುಕರಣೆಯೂ ಆಗಿವೆ. ಅವು ಅನಂತರದ ಕಾಲದಲ್ಲಿ ತೆಳ್ಳಗೆ ಬಟ್ಟಲಾಕೃತಿಯವಾದವು. ಅವನ ಕೊನೆಯ ದಿವಸಗಳಲ್ಲಿ ರಾಜಕೀಯ ಕ್ಷೋಭೆ ಉಂಟಾದಂತೆ ಕಂಡುಬರುತ್ತದೆ. ಆ ಕಾಲದಲ್ಲಿ ಈ ನಾಣ್ಯಗಳನ್ನು ಸ್ಥಳೀಯ ಅರಸರುಗಳೋ ಅಥವಾ ಅವನ ದುರ್ಬಲ ಉತ್ತರಾಧಿಕಾರಿಗಳೋ ಚಲಾವಣೆಗೆ ತಂದಿರಬಹುದು.

೬

ಭಾರತೀಯ ನಾಣ್ಯಶಾಸ್ತ್ರದ ಇತಿಹಾಸದಲ್ಲಿ ಕುಷಾಣರ ಕಾಲವು ಅತ್ಯಾಸಕ್ತಿ ಯನ್ನು ಕೆರಳಿಸುವ ಪ್ರಮುಖ ನೆಲೆಯಾಗಿದೆ. ಅವರ ಇತಿಹಾಸ ರಚನೆಯಲ್ಲಿ

ನಾಣ್ಯಗಳ ಪಾತ್ರ ಅಗಾಧವಾದುದು. ಪ್ರಾಯಶಃ, ಅವರ ನಾಣ್ಯಗಳು ದೊರೆಯುದಿದ್ದರೆ, ಈಗ ನಾವು ತಿಳಿದಿರುವ ಇತಿಹಾಸ ಅಪೂರ್ಣವಾಗುತ್ತಿತ್ತು. ಕ್ಯಾಡ್‌ಫಿಸೆಸ್ ಅರಸರ ಕಾಲದಿಂದ ವಾಸುದೇವನ ಕಾಲದವರೆವಿಗೂ ಹಂತಹಂತಗಳಲ್ಲಿ ಅವರು ಭಾರತೀಯರಾದುದನ್ನು ಗುರ್ತಿಸಬಹುದು. ಅವರ ವೈಯುಕ್ತಿಕ ಧರ್ಮಾಸಕ್ತಿ ಏನೇ ಇರಲಿ, ಅನ್ಯಧರ್ಮಗಳ ಬಗ್ಗೆ ಅವರು ತಳೆದ ಸರಳ ಉದಾರ ನೀತಿ, ಕಳಕಳಿ ವ್ಯಕ್ತವಾಗುವುದು ಅವರ ನಾಣ್ಯಗಳಿಂದಲೇ. ಕುಷಾಣರ ಇತಿಹಾಸದ ಪುನಾರಚನೆಯಲ್ಲಿ ಅವರ ನಾಣ್ಯಗಳಿಗೆ ನಿಜಕ್ಕೂ ಸಿಂಹಪಾಲು.

ಗ್ರಂಥಋಣ :

Chattopadhyay, Baskar—The Age of the Kushanas, 1967
Kumar, Baldev—Early Kushanas, 1973
Gupta, P. L.,—Coins, 1979
Majumdar, R. C.—The Age of Imperial Unity.

ಅಡಕೆಗೆ ಪ್ರಸಿದ್ಧವಾಗಿದ್ದ 'ನೆಲವತ್ತಿ' ಗ್ರಾಮ ಯಾವುದು ?

ಎಂ. ಚಿದಾನಂದಮೂರ್ತಿ

'ನಂಜನಗೂಡು ಬಾಳೆಹಣ್ಣು' 'ಈರನಗೆರೆ ಬದನೆ' 'ಮೈಸೂರು ಮಲ್ಲಿಗೆ' 'ಬಿಜಾಪುರ ಜೋಳ' 'ಬ್ಯಾಡಗಿ ಮೆಣಸಿನಕಾಯಿ' ಹೀಗೆ ಕೆಲವು ಸಸ್ಯಗಳು ಮತ್ತು ಸಸ್ಯೋತ್ಪನ್ನಗಳು ಬೇರೆಬೇರೆ ಸ್ಥಳಗಳ ಹೆಸರುಗಳ ಜೊತೆ ಬಳಕೆಯಾಗುವುದನ್ನು ಕೇಳಿದ್ದೇವೆ. ಆ ಸಸ್ಯಗಳನ್ನು ಈಗ ಬೇರೆ ಕಡೆಯೂ ಬೆಳೆಯುತ್ತಿದ್ದರೂ, ಅವುಗಳ ತಳಿ ಮೂಲತಃ ಆಯಾ ಪ್ರದೇಶದ್ದಾಗಿರಬಹುದು ; ಅಥವಾ ಅವು ಪ್ರಸಿದ್ಧವಾದುದು ಆ ಪ್ರದೇಶದಿಂದ ಎಂದೂ ಹೇಳಬಹುದು. ಹಾಗೆಯೇ ಸಾವಿರ ವರ್ಷಗಳ ಹಿಂದೆ ಅರಿಸಿಣಕ್ಕೆ ಒಳುಗುಂದ ಪ್ರಸಿದ್ಧವಾಗಿದ್ದರೆ[1], ಅಡಕೆಗೆ ನೆಲವತ್ತಿ ಎಂಬ ಗ್ರಾಮ ಪ್ರಸಿದ್ಧವಾಗಿದ್ದಿತು. ನೆಲವತ್ತಿಯಡಕೆ ಕುರಿತು ವಿಚಾರ ಮಾಡಿದ ಡಾ. ಡಿ. ಎಲ್. ನರಸಿಂಹಾಚಾರ್ಯರು ಆ ಹೆಸರಿನ ಉಲ್ಲೇಖ ಬರುವ ಅನೇಕ ಆಕರಗಳನ್ನು ಕೊಟ್ಟಿದ್ದಾರೆ. ವಡ್ಡಾರಾಧನೆ, ಶಾಂತಿಪುರಾಣ, ಧರ್ಮನಾಥ ಪುರಾಣದ ಉಲ್ಲೇಖಗಳ ಜೊತೆಗೆ ಹೂಲಿಯ ಒಂದು ಶಾಸನವನ್ನೂ, ಶಿವಮೊಗ್ಗ ಜಿಲ್ಲೆಯ ಇನ್ನೊಂದು ಶಾಸನವನ್ನೂ ಪ್ರಸ್ತಾಪಮಾಡಿ ಅಲ್ಲೆಲ್ಲ ಬರುವ 'ನೆಲವತ್ತಿಯಡಕೆ' ಮಾತಿನಕಡೆ, ಬರೀ 'ನೆಲವತ್ತಿ' ಎಂಬ ಹೆಸರಿನ ಕಡೆ ಗಮನ ಸೆಳೆದಿದ್ದಾರೆ. "ಹತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಈ ಅಡಕೆ ಕನ್ನಡ ನಾಡಿನಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದಂತೆ ಕಾಣುತ್ತದೆ" ಎಂದೂ, ಆ ಶಬ್ದ ಕ್ರಿ.ಶ. 1352 ಕ್ಕಿಂತ ಹಿಂದೆಯೇ ಜನಬಳಕೆಯಿಂದ ನಷ್ಟವಾಗಿರಬಹುದು ಎಂದೂ ಊಹಿಸುತ್ತಾರೆ.[2] ಶಿವಮೊಗ್ಗ ತಾಲೂಕಿನ ಶಾಸನವೊಂದರಲ್ಲಿ ಬರುವ ಎರಡು ಉಲ್ಲೇಖಗಳನ್ನು ಗಮನಿಸಿ, ಆ ಊರು ಶಿವಮೊಗ್ಗೆಗೆ ಹತ್ತಿರವಾಗಿದ್ದಿರಬೇಕೆಂದು ಸರಿಯಾಗಿಯೇ ಊಹಿಸಿ, "ಕ್ರಿ.ಶ. 1080 ರಲ್ಲಿ ಏಳ್ಗೆಯಲ್ಲಿದ್ದ ಆ ಊರು......ಅನಂತರದ ಕಾಲದಲ್ಲಿ...... ಹಾಳಾಗಿರಬೇಕು ; ಕಾಡು ಬೆಳೆದುಕೊಂಡು ಆ ಊರನ್ನೂ ಜಿನಭವನವನ್ನೂ ಕಬಳಿಸಿರಬೇಕು[3]" ಎಂದೂ ಊಹಿಸಿದ್ದಾರೆ. ಆದರೆ "ನೆಲವತ್ತಿ ಎಂಬ ಊರು ಮಾತ್ರ

---

1. 'ಒಳಗುಂದದ ಅರಿಸಿನ' ಎಂಬ ಮಾತು ಮಹಾದೇವಿಯಕ್ಕನಲ್ಲಿದೆ
2. ಪೀಠಿಕೆಗಳು ಮತ್ತು ಲೇಖನಗಳು (ಡಿ. ವಿ. ಕೆ. ಮೂರ್ತಿ, ಮೈಸೂರು. 1971), ಪು. 924–5 ; ವಡ್ಡಾರಾಧನೆ (1970), ಪು. 232–3.
3. ಪೀಠಿಕೆಗಳು ಮತ್ತು ಲೇಖನಗಳು, ಪು. 925.

ಈಗ ಇಲ್ಲ" ಎಂಬ ಅವರ ಹೇಳಿಕೆಯನ್ನು ನಾವು ಒಪ್ಪಬೇಕಾಗಿಲ್ಲ ; ಏಕೆಂದರೆ ಆ ಹೆಸರಿನ ಊರು ಈಗಲೂ ಇದೆ. ವ್ಯಾಪಾರ ಕೇಂದ್ರವಾಗಿ ಬೆಳೆದಿದೆ, ಬೆಳೆಯುತ್ತಿದೆ.

ಡಾ. ನರಸಿಂಹಾಚಾರ್ಯರು ಶಿವಮೊಗ್ಗ ತಾಲ್ಲೂಕಿನ ತಟ್ಟೇಕೆರೆ ಗ್ರಾಮದ ಶಾಸನವನ್ನು[4] ಮಾತ್ರ ಗಮನಿಸಿದರು. ಆ ಊರಲ್ಲಿ ಪೆರ್ಗಡೆ ನೊಕ್ಕಯ್ಯ ಎಂಬಾತ ತನ್ನ ಮಗ ಜಿನದಾಸನ 'ಪರೋಕ್ಷ ವಿನಯ'ಕ್ಕಾಗಿ ಒಂದು ಬಸದಿಯನ್ನೂ, 'ನೆಲ್ಲವತ್ತಿ' ಗ್ರಾಮದಲ್ಲಿ ಅಂತಹುದೇ ಇನ್ನೊಂದು ಬಸದಿಯನ್ನೂ ಮಾಡಿಸಿದಂತೆ ಹೇಳಿರುವುದರಿಂದ, ತಟ್ಟೇಕೆರೆಗೆ ಸಮೀಪದಲ್ಲಿಯೇ 'ನೆಲ್ಲವತ್ತಿ' ಗ್ರಾಮ ಇದ್ದಿರಬೇಕು. ಡಾ. ನರಸಿಂಹಾಚಾರ್ಯರು ಶಿವಮೊಗ್ಗ ತಾಲೂಕಿನ ಪಕ್ಕದ ಹೊನ್ನಾಳಿ ತಾಲೂಕಿನ ಶಾಸನಗಳನ್ನೂ ಒಮ್ಮೆ ಪರಿಶೀಲಿಸಿದ್ದಿದ್ದರೆ ಅವರೇ ನೆಲ್ಲವತ್ತಿ ಗ್ರಾಮ ಯಾವುದೆಂಬುದನ್ನು ಖಚಿತವಾಗಿ ಗುರುತಿಸಿಬಿಡುತ್ತಿದ್ದರು. ಹೊನ್ನಾಳಿ ತಾಲೂಕಿನ ನ್ಯಾಮತಿ ಎಂಬ ಪಟ್ಟಣ ಹೊನ್ನಾಳಿಯಷ್ಟೇ ವ್ಯಾಪಾರ ಪ್ರಸಿದ್ಧವಾಗಿದೆ. ನ್ಯಾಮತಿ ಸಾವಿರ ವರ್ಷಗಳ ಹಿಂದೆ ಒಂದು ಅಗ್ರಹಾರವಾಗಿದ್ದು ಅದಕ್ಕೆ ನೆಲವತ್ತಿ ಎಂಬ ಹೆಸರಿದ್ದುದಾಗಿ ಅದೇ ಊರಿನ ಹಲವಾರು ಶಾಸನಗಳು ತಿಳಿಸುತ್ತವೆ. ಆ ಶಾಸನಗಳ ಪಾಠಭಾಗಗಳು ಹೀಗಿವೆ.

(1) "ಅಗ್ರಹಾರಂ ನೆಲವತ್ತಿಯ ಸಾಸಿರ್ವರು ಮಹಾಜನರುಮಿರ್ದು"[5]
(2) "ಅಗ್ರಹಾರಂ ನೆಲವತ್ತಿಯ ಸಾಸಿರ್ವರು ಮಹಾಜನ"[6]
(3) "ಬಳ್ಳಿಯನಾಡ ನೆಲವತ್ತಿಯ"[7]
(4) "...ಯಗ್ರಹಾರಂ ನೆಲವತ್ತಿಯ"[8]
ನ್ಯಾಮತಿಯ ಸುತ್ತಮುತ್ತಣ ಗ್ರಾಮಗಳ ಶಾಸನಗಳಲ್ಲಿ ನೆಲವತ್ತಿ ಅಥವಾ ನೇಮತ್ತಿಯ ಹೆಸರಿದೆ.
(5) "ಬಳೆಯನಾಡ ನೇಮತ್ತಿಯ ಗ್ರಾಮದ ಕಾಲುವಳಿ ಸುರಹೊಂನೆಯ ಪುರದಲು"[9] (ಸುರಹೊನ್ನೆ ಗ್ರಾಮದಶಾಸನ)
(6) "ಬೆಳೆಯನಾಡ ಬೆಳಗವತ್ತಿಯ ಸಂತಾನ ಮಂನೆಯ ಶ್ರೀಮದನಾದಿ ......ರಂ ನೇಮತ್ತಿಯ ಶ್ರೀಮದಶೇಷ ಮಹಾಜನಂಗಳು"[10] (ಜಟ್ನಿಹಳ್ಳಿ ಗ್ರಾಮದ ಶಾಸನ)

---

4. EC. VII (Rice Edition) Shimoga No. 10. C. 1085 A.D.
5. EC. VII (Rice Edition) Honnali. No. 66, 1103 A.D.
6. ಅದೇ, ನಂ. 67, 1103 A.D.
7. ಅದೇ. ನಂ. 68, C. 1403 A.D.
8. ಅದೇ, ನಂ. 69,
9. ಅದೇ, ನಂ. 71, 1396 A.D.
10. ಅದೇ, ನಂ. 76, C. 1314 A.D.

(7) "ನೇಮತ್ತಿಗೆ ಧಾಳಿಯಿಟ್ಟಲ್ಲಿ"[11] (ಕುಳ್ಳಹಳ್ಳಿ ಶಾಸನ)

ನ್ಯಾಮತಿಯ ಕ್ರಿ.ಶ. 974ರ ಶಾಸನದಲ್ಲಿ ಬರುವ 'ನೆಲ್ಮಬ್ಬೆಯ ಕಮ್ಮರಬೀದಿ' ಎಂಬಲ್ಲಿ 'ನೆಲ್ಮಬ್ಬೆ' ಎಂಬುದು 'ನೆಲವತ್ತಿ' ಎಂಬುದರ ಅಪಲಿಖಿತವಿರಬಹುದು.[12] ಆದರೆ, 'ನೇಮತ್ತಿ' ಎಂಬ ಹೆಸರು 'ನೆಲವತ್ತಿ' ಎಂಬ ಹೆಸರಿನ ಈಚಿನ ರೂಪವೆಂಬುದ ರಲ್ಲಿ ಅನುಮಾನವಿಲ್ಲ. ಏಕೆಂದರೆ, ನೆಲವತ್ತಿಯಂತೆಯೇ 'ನೇಮತ್ತಿ'ಯೂ ಒಂದು ಅಗ್ರಹಾರವಾಗಿತ್ತು (ಮೇಲೆ ನಂ. 6 ನೋಡಿ). ಈಗಿನ ನ್ಯಾಮತಿ ಎಂಬ ಹೆಸರು ಬಂದಿರುವ ಕ್ರಮ ಹೀಗಿದೆ.

ನೆಲವತ್ತಿ→ನೇಮತ್ತಿ ('ಲ' ಲೋಪವಾಗಿ ಹಿಂದಿನ ಸ್ವರ ದೀರ್ಘವಾಗಿದೆ—Compensatory lengthening. 'ವ' ಕಾರವು 'ಮ'ಕಾರವಾಗಿದೆ. 'ವ' ಮತ್ತು 'ಮ'ಕಾರಗಳ ಮಧ್ಯೆ ವಿನಿಮಯ ಕನ್ನಡದಲ್ಲಿ ಸಾಮಾನ್ಯ: ಬೆಮರ್∾ಬೆವರ್; ಆಮೆ∾ಆವೆ).

ನೇಮತ್ತಿ→ನ್ಯಾಮತಿ (ದೇವರು→ದ್ಯಾವರು ಎಂಬ ಬದಲಾವಣೆ ಗಮನಿಸಿ)

ಶಿವಮೊಗ್ಗ ಜಿಲ್ಲೆಯಲ್ಲಿ ನೆಲವತ್ತಿ ಎಂಬ ಹೆಸರಿನ ಪ್ರಾಚೀನ ಅಥವಾ ಅರ್ವಾ ಚೀನವಾದ ಬೇರೆ ಯಾವ ಊರೂ ಇಲ್ಲವಾದುದರಿಂದ,* ಈಗಿನ ನ್ಯಾಮತಿಯೇ ಹಿಂದೆ ನೆಲವತ್ತಿ ಎಂಬ ಹೆಸರನ್ನು ಪಡೆದಿತ್ತೆಂಬುದಕ್ಕೆ ಅದೇ ಊರಿನ ಶಾಸನಾಧಾರ ಗಳು ಇರುವುದರಿಂದ, ನೊಕ್ಕಯ್ಯ ಬಸದಿ ಕಟ್ಟಿಸಿದ ವಿಷಯ ಹೇಳುವ ಶಾಸನದ ನೆಲ್ಲವತ್ತಿಯು ನ್ಯಾಮತಿಯೇ ಎಂಬ ಬಗ್ಗೆ ಅನುಮಾನವಿಲ್ಲ. ಕರ್ನಾಟಕದಲ್ಲಿ ನೆಲವತ್ತಿ

---

11. ಅದೇ, ನಂ. 57

12. ಅಥವಾ 'ನೆಲ್ಮಬ್ಬೆ'ಎಂಬುದು ನೆಲ್ಮತ್ತಿ ಎಂಬುದರ ಅಪಲಿಖಿತವೂ ಆಗಿರಬಹುದು. ಊರಿನ ಮೊದಲ ಹೆಸರು ನೆಲವತ್ತಿ ಎಂಬುದರಲ್ಲಿ ಅನುಮಾನವಿಲ್ಲ. ಕ್ರಿ. ಶ. 974ರ ಹೊತ್ತಿಗಾಗಲೇ ಅದು ಜನರ ಬಾಯಲ್ಲಿ ನೆಲ್ಮತ್ತಿ ಆಗಿತ್ತೆಂದು ಊಹಿಸಲೂ ಅವಕಾಶವಿದೆ. ನೆಲ್ಮತ್ತಿ→ನೇಮತ್ತಿ→ನ್ಯಾಮತಿ ಹೀಗೆ ಹೆಸರು ವಿಕಾಸಹೊಂದಿರ ಬಹುದು. 974ರ ಬಳಿಕ ನೆಲವತ್ತಿಯು ಅಗ್ರಹಾರವಾದ ಮೇಲೆ ಗ್ರಾಮ್ಯ ನೆಲ್ಮತ್ತಿ ಹೆಸರಿಗಿಂತ ನೆಲವತ್ತಿ ಎಂಬ ಹಿಂದಿನ ಹೆಸರೇ ಚೆನ್ನಾಗಿ ಕಂಡು ಕ್ರಿ.ಶ, 1103 ರ ಈಚಿನ ಶಾಸನಗಳಲ್ಲಿ ನೆಲವತ್ತಿ ಎಂಬ ರೂಪವೇ ಬಳಕೆಗೆ ಬಂದಿರಬಹುದು. ಆದರೆ ಜನರ ಬಾಯಲ್ಲಿ ಬಳಕೆಯಾಗುತ್ತಿದ್ದ 'ನೆಲ್ಮತ್ತಿ'ಯೇ ನೇಮತ್ತಿಯಾಗಿರಬೇಕು. ನ್ಯಾಮತಿಯಿಂದ ಬೇರೆಯಾದ ಊರುಗಳ ಶಾಸನಗಳಲ್ಲೆಲ್ಲ 'ನೇಮತ್ತಿ' ರೂಪವೇ ಇರುವುದನ್ನು ಗಮನಿಸಬೇಕು.

* List of villages in Mysore State ಎಂಬ ಪುಸ್ತಕದಲ್ಲಿನ ಶಿವಮೊಗ್ಗ ಜಿಲ್ಲೆಯ ಎಲ್ಲ ಗ್ರಾಮನಾಮಗಳನ್ನು ಪರಿಶೀಲಿಸಿದ್ದೇನೆ.

ಅಥವಾ ನೆಲ್ಲವತ್ತಿ ಎಂಬ ಇನ್ನೊಂದು ಗ್ರಾಮವನ್ನು ತೋರಿಸಲು ಸಾಧ್ಯವಿಲ್ಲವಾಗಿರುವುದರಿಂದ, ಕನ್ನಡ ಕಾವ್ಯಗಳಲ್ಲಿ ಬರುವ 'ನೆಲ್ಲವತ್ತಿಯ ಅಡಕೆ' ನ್ಯಾಮತಿಯಿಂದ ಪ್ರಸಿದ್ಧವಾಗಿದ್ದ ಅಡಕೆ ಎಂದು ಊಹೆ ಮಾಡಿದರೆ ಅದರಲ್ಲಿ ತಪ್ಪೇನೂ ಇಲ್ಲ*.

ಹೂಲಿಯ ಕ್ರಿ.ಶ. 1184ರ ಶಾಸನದಲ್ಲಿ ಹೀಗಿದೆ—"ನೆಲ್ಲವರ್ತ್ತಿಗೆ ಸಾಸಿರಕ್ಕೆ ಪನ್ನೊಂದಡಕೆಯ ಸೊಜ್ಜಮುಮಂ ಪೇಱಿಂಗೆ ಲಾಭಗವಳಿಗೆ ಯೆಂಟುನೂಱೆಲೆಯುಮಂ"[13] ಎಂದಿದೆ. 'ನೆಲವರ್ತ್ತಿ' ಅಥವಾ 'ನೆಲವರ್ತಿಗೆ' ಎಂದರೆ ಬಹುಶಃ ನೆಲವರ್ತಿ ಅಡಕೆಯೇ ಎಂದು ಹೇಳಬಹುದು. ಇಲ್ಲಿನ ನೆಲವರ್ತಿ ಎಂಬ ರೂಪ ಗಮನಾರ್ಹ. ಹೊನ್ನಾಳಿ ತಾಲೂಕಿನ ನ್ಯಾಮತಿಯಿಂದ ಹೂಲಿ ಸುಮಾರು ನೂರೈವತ್ತು ಮೈಲುಗಳ ಅಂತರದಲ್ಲಿದೆ. ನೆಲವತ್ತಿ ರೂಪ ನೆಲ್ಲವರ್ತಿ ಎಂದು ಸಿಗುವುದು ದೂರದ ಹೂಲಿಯಲ್ಲಿ ಮಾತ್ರ.

ಇವುಗಳಲ್ಲಿ ಯಾವುದು ಪ್ರಾಚೀನರೂಪವೆಂದು ನಿರ್ಧರಿಸುವುದು ದುಸ್ತರ. 'ನೆಲವತ್ತಿ' ಎಂಬ'—ವತ್ತಿ' ಕೊನೆಯಲ್ಲಿರುವ ರೂಪಕ್ಕೆ ಪ್ರಾಚೀನತೆ ಮತ್ತು ಸಂಖ್ಯೆಯ ಬೆಂಬಲವಿದೆ. 'ನೆಲವರ್ತಿ' ರೂಪದ ಬಗ್ಗೆ ಒಂದು ಊಹೆಯನ್ನು ಮಾಡಬಹುದು. ನ್ಯಾಮತಿ (<ನೆಲವತ್ತಿ) ಪಕ್ಕದಲ್ಲಿ ತೀರ ಸಮೀಪದಲ್ಲಿರುವ ಬೆಳಗುತ್ತಿ ಗ್ರಾಮವು ಆ ಪ್ರದೇಶದಲ್ಲಿ ಮಾಂಡಳಿಕರಾಗಿ ಆಳುತ್ತಿದ್ದ ಸಿಂದರ ರಾಜಧಾನಿಯಾಗಿತ್ತು. ಬೆಳಗುತ್ತಿಯ ಹಿಂದಿನ ರೂಪ ಬೆಳಗವತ್ತಿ. ಅದರ ಹಿಂದಿನ ರೂಪ ಬೆಳಗವರ್ತಿ ಎಂಬುದು ಅಲ್ಲಿಯ ಶಾಸನಗಳಿಂದ ಸ್ಪಷ್ಟವಾಗುತ್ತದೆ.

(1) "ಬೆಳಗವರ್ತಿಯ ನೆಲೆವೀಡಿನೊಳ್".
"ತಂನ ಬೆಳಗವರ್ತಿ" (Ep. Carn. VII. Honnali No. 50, 1180 A.D.)

(2) "ಬೆಳಗವರ್ತಿ"[14].

'ಬೆಳಗವರ್ತಿ' ಎಂಬುದು ಕ್ರಮೇಣ ಹದಿಮೂರನೇ ಶತಮಾನದಲ್ಲಿ 'ಬೆಳಗವತ್ತಿ' ಎಂದಾಯ್ತು[15].

---

*ಡಾ॥ ಡಿ. ಎಲ್. ಎನ್. ಅವರ ಗಮನಕ್ಕೆ ಬಾರದ 'ನೆಲವತ್ತಿಯೆಲೆಯಡಕೆ ಬಿಳಿಯೆಲೆಯ' ಎಂಬ ಭವರೋಗಹರಾಷ್ಟಮಿ ನೋಂಪಿ ಕತೆಯ ಕಡೆ (ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ K. 1375, ಫೋಲಿಯೊ 114 ಹಿಂಭಾಗ) ಶ್ರೀ ಎಸ್. ಶಿವಣ್ಣ ನನ್ನ ಗಮನ ಸೆಳೆದಿದ್ದಾರೆ.

13. Ep. Indica. Vol. XVIII. No. E. Line 33 (ಡಿ. ಎಲ್. ಎನ್. ಅವರಿಂದ ಉದ್ಧೃತ).

14. EC. VII Honnali, No. 45, 1175 A.D; ನಂ. 44, 1215 AD; ನಂ. 37. 1196 A.D; ನಂ. 41, 1215 A.D; ನಂ. 26, 1173 A.D.

15. ಅದೇ ನಂ. 43, 1232 A.D ; ನಂ. 48, 1216 A.D.

ಬೆಳಗವರ್ತಿ → ಬೆಳಗವತ್ತಿ → ಬೆಳಗುತ್ತಿ

ನೆಲವತ್ತಿಯು ರಾಜಧಾನಿಯಾದ ಬೆಳಗವರ್ತಿಯ ಪಕ್ಕದಲ್ಲಿದ್ದುದರಿಂದ ಅದನ್ನು ಹೂಲಿ ಶಾಸನಕಾರ 'ನೆಲವರ್ತಿ' ಎಂದು ಮಾರ್ಪಡಿಸಿರಬಹುದು. ಅಥವಾ ಬೆಳಗಾಂ ಜಿಲ್ಲೆಯ ಸವದತ್ತಿ ಅಥವಾ ಸೌಂದತ್ತಿಯು ಹಿಂದಿನರೂಪ ಸಂಸ್ಕೃತೀಕರಣವಾಗಿ 'ಸುಗಂಧವರ್ತಿ' ಎಂದೂ ದೊರೆಯುತ್ತದೆ. ಸೌಂದತ್ತಿಗೆ ಸಮೀಪದಲ್ಲಿರುವ ಹೂಲಿಯ ಶಾಸನ ಬರೆದ ಕವಿಗೆ ನೆಲವತ್ತಿಯನ್ನು 'ನೆಲವರ್ತಿ'ಯೆಂದು ತಿದ್ದಲು 'ಸುಗಂಧವರ್ತಿ' ಎಂಬ ಹೆಸರು ಪ್ರಚೋದನೆ ನೀಡಿರಬಹುದು.[16]

ನ್ಯಾಮತಿ ಈಗ ಅಡಕೆ ಬೆಳೆಯುವ ಕೇಂದ್ರವಲ್ಲ; ಬಹುಶಃ ಹಿಂದೆಯೂ ಆಗಿದ್ದಿರಲಾರದು. ಆದರೆ ಅಲ್ಲಿಯ ವ್ಯಾಪಾರಿ 'ಬಣಜಿಗ'ಜನ ಈಗಲೂ ಅಡಕೆ, ಜೀರಿಗೆ ಇತ್ಯಾದಿಗಳನ್ನು ತೆಗೆದುಕೊಂಡು ಸಂತೆಸಂತೆಗಳಿಗೆ ಹೋಗಿ ಮಾರುತ್ತಾರೆ. ಮತ್ತು ಬೇರೆಕಡೆ ಕೊಂಡ ಅಡಕೆಯನ್ನು ದಾಸ್ತಾನು ಮಾಡುವ ವ್ಯಾಪಾರಿಗಳು ಅಲ್ಲಿದ್ದಾರೆ. ನೆಲವತ್ತಿಯ ವ್ಯಾಪಾರಿಗಳಿಂದ ಬಳಕೆಗೆ ಬಂದ ಅಡಕೆ ಪ್ರಸಿದ್ಧವಾಗಿ ಆ ಹೆಸರನ್ನು ಪಡೆದಿರಬೇಕು. ನೆಲವತ್ತಿಯ ವ್ಯಾಪಾರಿಗಳಿಗೆ ಅಡಕೆ ಸರಬರಾಜಾಗುತ್ತಿದ್ದಿರಬಹುದಾದ ಪ್ರದೇಶ ಅಲ್ಲಿಗೆ ಸಮೀಪದ ಸಾಗರ, ಸೊರಬ, ಸಿರಸಿಗಳಿರಬಹುದು. ಈಗಲೂ ಈ ಪ್ರದೇಶಗಳು ಅಡಕೆಗೆ ಪ್ರಸಿದ್ಧಿಯಾಗಿವೆ. 'ನೆಲವತ್ತಿಯಡಕೆ' ಎಂಬುದು ಬೆಳೆದ ಊರನ್ನು ಹೇಳುವುದಕ್ಕಿಂತ ಅಡಕೆ ವ್ಯಾಪಾರಿಗಳ ಊರನ್ನು ಹೇಳುವ ಸಾಧ್ಯತೆಗಳೇ ಹೆಚ್ಚು.

ಇದಕ್ಕೆ ಪೋಷಕವಾದ ಒಂದು ಚಿಕ್ಕ ಅಂಶವನ್ನು ಡಾ. ಆರ್. ಸಿ. ಹಿರೇಮಠರು ನನ್ನ ಗಮನಕ್ಕೆ ತಂದಿದ್ದಾರೆ. ಧಾರವಾಡ ಪ್ರದೇಶದಲ್ಲಿ ಈಗಲೂ 'ನ್ಯಾಮತಿ' ಎಂಬ ಅಡ್ಡ ಹೆಸರಿರುವ ವೀರಶೈವ ಬಣಜಿಗ ಜಾತಿಯ ಜನ ಬಹಳ ಇದ್ದಾರೆ. ಎಂದರೆ, ಹಿಂದೊಮ್ಮೆ ವ್ಯಾಪಾರ ಕೇಂದ್ರವಾಗಿದ್ದ ನ್ಯಾಮತಿಯಿಂದ

---

16. ಎಷ್ಟೋ ಸಾರಿ, ದೂರದ ಊರಿನ ಹೆಸರುಗಳನ್ನು ನಾವು ಅದೇ ಊರಿನ ಜನ ಬಳಸುವುದಕ್ಕಿಂತ ಸ್ವಲ್ಪ ಬೇರೆಯಾಗಿ ಬಳಸುವುದು ಸಾಮಾನ್ಯ. ಫ್ಲರೆನ್ಸ್ ವಾಸ್ತವವಾಗಿ, ಫಿರೆಂಜ್, ರೋಮ್ ವಾಸ್ತವವಾಗಿ ರೋಮ, ಬೆನಾರಿಸ್ ವಾಸ್ತವವಾಗಿ ವಾರಣಾಸಿ. ಪೂನಾ ವಾಸ್ತವವಾಗಿ ಪುಣೆ, ಬೊಂಬಾಯಿ ವಾಸ್ತವವಾಗಿ ಮುಂಬಯಿ. ಹೀಗೆ ನೆಲವತ್ತಿಯು ದೂರದ ಹೂಲಿಯಲ್ಲಿ 'ನೆಲವರ್ತಿ' ಎಂದು ಕರೆಯಿಸಿಕೊಳ್ಳುತ್ತಿದ್ದಿರಬಹುದು. ಅಥವಾ ಜನ 'ನೆಲವರ್ತಿ'ಯನ್ನು ಊರು ಎಂದು ಭಾವಿಸುತ್ತಿದ್ದುದಕ್ಕಿಂತ, ಅಡಕೆಯ ಒಂದು ಪ್ರಭೇದವಾಗಿ ಅದನ್ನು ಹೇಳುತ್ತಿದ್ದರು. ಶಾಸನ ಬರೆದವನಿಗೆ 'ನೆಲವರ್ತಿ' (ನೆಲವತ್ತಿ)ಎಂಬ ಊರು ಎಲ್ಲಿತ್ತು ಎಂಬುದೇ ಗೊತ್ತಿಲ್ಲದಿರುವ ಸಾಧ್ಯತೆಗಳಿವೆ. 'ಬೆನಾರಿಸ್ ಸೀರೆ' ಎಂದು ಹೇಳುವ ಎಲ್ಲ ಜನರಿಗೂ ವಾರಣಾಸಿಯ ವಿಷಯ ತಿಳಿದಿರುವ ಸಾಧ್ಯತೆ ಇಲ್ಲ.

ಬೇರೆ ಬೇರೆ ಕಡೆ ಹೋಗಿ ನೆಲಸಿದ ಮೇಲೆ ಅವರ ಕುಲನಾಮ (surname) 'ನ್ಯಾಮತಿ' ಎಂದಾಯಿತು. 'ನೆಲವತ್ತಿಯಡಕೆ' ಎಂಬಲ್ಲಿ ನೆಲವತ್ತಿಯು ವ್ಯಾಪಾರ ಕೇಂದ್ರವಾಗಿದ್ದು ಅಲ್ಲಿನ ವ್ಯಾಪಾರಿಗಳ ಮೂಲಕ ಪ್ರಸಿದ್ಧವಾದ ಅಡಕೆ ಎಂಬ ಅರ್ಥವೇ ಸದ್ಯಕ್ಕೆ ಹೆಚ್ಚು ಸಂಭವನೀಯವಾಗಿ ತೋರುತ್ತದೆ. (ಈಗಿನ ನ್ಯಾಮತಿಯು ಹಿಂದೆ ಅಡಕೆ ಬೆಳೆಯುವ ಜಾಗವಾಗಿತ್ತೆಂದು ಯಾರಾದರೂ ತೋರಿದರೆ ಆಗ 'ನೆಲವತ್ತಿಯಡಕೆ' ಎಂದರೆ ನೆಲವತ್ತಿ ಪ್ರದೇಶದಲ್ಲಿ ಬೆಳೆಯುತ್ತಿದ್ದ ಅಡಕೆ ಎಂದು ಅರ್ಥೈಸಲು ಬರುತ್ತದೆ).

ಇಲ್ಲಿ ಮುಖ್ಯ ಸಂಗತಿಯೆಂದರೆ, ಹಿಂದಿನ ನೆಲವತ್ತಿಯು ಈಗಿನ ನ್ಯಾಮತಿ ಆಗಿರುವುದು.

ನಮ್ಮ ಊರು

ಎ. ಎಸ್. ಶ್ಯಾನಭಾಗ್

ನಮ್ಮ ಊರು ಹಿಂದೆ
ನಾಲ್ಕು ಬೆತ್ತಲೆ ರಸ್ತೆಗಳ
ಒಂದು ಚೌಕ,
ಜತೆಗೆ
ಕೆಂಪು ಮೂತಿಯವನ ನೆನಪಿಗಾಗಿ
ತೋಡಿದ ನಾಲ್ಕು ಬಾವಿಗಳ ನೀರಿಗೆ
ಆತು, ಮೌಲಾ ಟೊಪ್ಪಿ
ಏರಿಸಿದ ನಾಲ್ಕು ಮನೆಗಳು ;
ಬಾಡಿ ಇಲ್ಲದ ಬೋಳು ಬಸ್ಸುಗಳ
ಆಮೆನಡಿಗೆಯಲ್ಲಿ ಧೂಳು ಕಾರುವಾಗ
ಸ್ವಾಗತಿಸುವ
ಚಡ್ಡಿ ಇಲ್ಲದ 'ಚಾಚಾ' ಗಳು,
ಕಣ್ಣ ಅಗಲಿಸಿ ಕಮ್ಮು ಕಾರುವ
ಕಲಾಯಿ ಸಾಬಿ.

ಈಗ ನಮ್ಮೂರು
ಬದಲಾಗಿದೆ,
ಬಸ್ಸಿಗೆ ಬಾಡಿ ಬಂದ ಹಾಗೆ,
ಪಡ್ಡೇ ಹುಡುಗರು
ಪ್ಯಾಂಟು ಏರಿಸಿದ ಹಾಗೆ,
ಕೋಳಿ ತತ್ತಿ ಇಟ್ಟ ಹಾಗೆ
ತಲೆ ಎತ್ತಿವೆ ಮನೆಗಳು.

ಈಗಲೂ ಸಾಹೇಬರ ಕೋವಿಗೆ
ಗೋರಿ ಕಂಡ
ಜೀವದಸ್ತಿತ್ವದ ಕುರುಹುಗಳು
ಗೋಡೆಯಲ್ಲಿ ತೂಗಿವೆ.

ನಶಿಸಿದ ಸಾಮ್ರಾಜ್ಯದ ಅವಸ್ಥೆಯ
ಮೂಕವೇದನೆಯಲ್ಲಿ ಸಾರಿವೆ
ಸತ್ತರೂ ಸುಖ ಕೊಡುವ
ಜೀವದ ಎರಕಗಳು.

ಈಗ
ಊರು ಬೆಳೆದಿದೆ
ನಾವು ನೀವು ಬೆಳೆದ ಹಾಗೆ
ಬಾಳೆ ಮರದಹಾಗೆ.

ಸ್ವಾತಂತ್ರ್ಯ ಬಂದಮೇಲೆ
ಬಿರುಕು ಬಿಟ್ಟ ಗೋಡೆಗೆ
ಜಡಿದ ಮೊಳೆಗೆ
ಜೋತು ಬಿದ್ದಿವೆ
ಸದಾ ನಗುವ ಗಾಂಧಿ ನೆಹರು
ಫೊಟೋಗಳು,
ಅವರೆ ಮೆಚ್ಚಿ ತಲೆಗೆರಿಸಿದ
ಬೆಚ್ಚನೆಯ ಬಿಳಿಟೋಪಿಗಳ ಅಡಿಗೆ
ಬಣ್ಣ ತಿಳಿಯದ ಗರಡಿಗಾಳಗಳು.

ಈಗ ನಮ್ಮೂರಿನಲ್ಲೂ
ಕಾಗೆ ಗೂಡು ಸೇರುವಾಗ
ಬೇಲಿಗೂಟ ಮಾತನಾಡಿಸುತ್ತವೆ
ಹುಣ್ಣಿಮೆಯ ತಿಂಗಳ ಬೆಳಕಿಗೆ
ಸುಖಕ್ಕಾಗಿ ಮೈಯೊಡ್ಡುತ್ತವೆ.

ನಮ್ಮ ಊರು ಬೆಳೆದಿವೆ
ಶಹರದ ಪ್ರೀತಿಗೆ
ಜನಗಳ ಭರ್ತಿಗೆ.

ಮಾನವ ಫಲವಂತಿಕೆಯ ಮಾಪನ

ಟಿ. ಶ್ರೀವೆಂಕಟರಮಣ

ಜನಸಮಷ್ಟಿಯ ಸಾಂಖ್ಯಿಕ ಚಿತ್ರಣಕ್ಕೆ ಜನಸಂಖ್ಯಾ ವಿಜ್ಞಾನ ಎನ್ನುತ್ತಾರೆ. ಇಲ್ಲಿ ಜನಸಮಷ್ಟಿಯನ್ನು ವ್ಯಕ್ತಿಗಳ ಸಮಗ್ರವೆಂದು ತಿಳಿಯುವುದರಿಂದ ವೈಯಕ್ತಿಕ ನಡತೆ ಗೌಣ; ಸಮಷ್ಟಿಯ ವರ್ತನೆ ಮುಖ್ಯ. ಅದಲ್ಲದೆ ಸದಸ್ಯರು ನಶ್ವರರಾದರೂ ಸಮಷ್ಟಿ ಶಾಶ್ವತ. ಹೀಗಾಗಿ ಸಮಷ್ಟಿಯ ಸದಸ್ಯತ್ವ ಸತತವಾಗಿ ಬದಲಾಗುತ್ತಿರುತ್ತದೆ. ಪ್ರತಿ ವರ್ಷ ಹಲವರು ಸತ್ತು ಸದಸ್ಯತ್ವ ಕಡಿಮೆಯಾದರೆ ಜನನಗಳಿಂದಾಗಿ ಅದು ಹೆಚ್ಚಾಗುತ್ತದೆ. ಇದರೊಂದಿಗೆ ವಲಸೆಯ ಅಂಶವೂ ಸೇರಿಕೊಳ್ಳುತ್ತದೆ. ಈ ಮೂರು ವಿಚಾರಗಳ ಸಮತೋಲನ ಸಮಷ್ಟಿಯನ್ನು ನಿರಂತರವಾಗಿಸುತ್ತದೆ.

ಜನನಗಳಿಂದಾಗಿ ಸಮಷ್ಟಿಯ ವೃದ್ಧಿಯುನ್ನು ಅಧ್ಯಯಿಸುವಾಗ ಫಲಭರಿತತೆ ಮತ್ತು ಫಲವಂತಿಕೆಗಳ ಕಲ್ಪನೆಗಳಿಗಿರುವ ವ್ಯತ್ಯಾಸವನ್ನು ಗಮನಿಸಬೇಕಾಗುತ್ತದೆ. ಮೊದಲನೆಯದು ಕ್ರಿಯಾಶೀಲ ಲಿಂಗಾಣುಗಳನ್ನು ಉತ್ಪಾದಿಸುವ ಸಾಮರ್ಥ್ಯ; ಎರಡನೆಯದು ಸಜೀವ ಸಂತತಿಯನ್ನು ಪಡೆಯುವ ಮೂಲಕ ವಾಸ್ತವವಾಗಿ ಪ್ರದರ್ಶಿತ ಮಟ್ಟ. ಒಂದು ಜೀವನ ಸಮಷ್ಟಿಯ ಪುನರುತ್ಪತ್ತಿದರವನ್ನು ಅದರ ಸದಸ್ಯರ ಫಲಭರಿತತೆ ಮತ್ತು ಅವರ ಕೂಡುವಿಕೆಗಳ ಫಲವಂತಿಕೆ ನಿರ್ಧರಿಸುತ್ತವೆ. ಮೊದಲನೆಯದನ್ನು ಸಮಷ್ಟಿ ತಲುಪಬಲ್ಲ ಗರಿಷ್ಠತಮ ಪುನರುತ್ಪತ್ತಿ ಮಟ್ಟ ಮತ್ತು ಎರಡನೆಯದನ್ನು ಅದು ನಿಜವಾಗಿಯೂ ತಲುಪಿದ ಮಟ್ಟ ಎಂದು ತಿಳಿಯುವುದಿದೆ. ಕಠಿನ ಪರಿಸರದಲ್ಲಿರುವ ಜೀವಿಗಳಲ್ಲಿ ಫಲಭರಿತತೆ ಸಾಮಾನ್ಯವಾಗಿ ಜಾಸ್ತಿ ; ಸಂರಕ್ಷಿತ ಪರಿಸರದಲ್ಲಿರುವ ಜೀವಿಗಳಲ್ಲಿ ಕಡಿಮೆ. ಅಂದರೆ ಅನೇಕ ಶತ್ರುಗಳಿದ್ದು, ಹಲವು ಅಪಾಯಗಳನ್ನು ಇದುರಿಸಬೇಕಾಗಿರುವ ಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಣುಗಳನ್ನು ಉತ್ಪಾದಿಸುತ್ತವೆ. ವಾರ್ಷಿಕವಾಗಿ 800 ರಿಂದ 7500 ಕೋಟಿ ಮೊಟ್ಟೆಗಳನ್ನು ಉತ್ಪಾದಿಸುವ ಮೀನುಗಳಿದ್ದು ಸಾವಿರದಲ್ಲಿ ಕೇವಲ ಒಂದರಷ್ಟು ಮಾತ್ರ ಮರಿಮೀನಾಗುವ ಉದಾಹರಣೆಯಿದೆ. ಆದರೆ ಮಾನವನಂಥ ಸಸ್ತನಿಯಲ್ಲಿ ಫಲಭರಿತತೆ ಕಡಿಮೆಯಿದ್ದರೂ ಪುನರುತ್ಪತ್ತಿದರ ಹೆಚ್ಚಾಗಿಯೇ ಇದೆ. ಲಿಂಗಾಣುಗಳ ಸಂಖ್ಯೆ ಮತ್ತು ಕ್ರಿಯಾಶೀಲತೆ, ಜೀವಿಯ ಆಯುಷ್ಯ ಮತ್ತು ಸಂತಾನ ಪಡೆಯುವ ಅವಧಿ, ಅಂಡೋತ್ಪತ್ತಿಯ ಆವರ್ತಾಂಕ–ಇವನ್ನು ನಿರ್ಧರಿಸುವ ವಿಚಾರಗಳು ಫಲಭರಿತತೆಯ ಮೇಲೆ ಪ್ರಭಾವ ಬೀರುತ್ತವೆ. ಲೈಂಗಿಕ ಕೂಡುವಿಕೆ, ಬಳಿಕ

ಲಿಂಗಾಣುಗಳ ಸೇರ್ಪಡೆ, ಸಂತತಿಯ ಜನನಪೂರ್ವ ಆರೈಕೆ ಇತ್ಯಾದಿ ವಿಚಾರಗಳು ಫಲವಂತಿಕೆಯ ಮೇಲೆ ಪ್ರಭಾವ ಬೀರುತ್ತವೆ.

ಸಜೀವ ಜನನಗಳ ಸಂಖ್ಯೆ ಫಲವಂತಿಕೆಯ ಸೂಚಕ. ಜನನ ಸಂಬಂಧಿ ವಿವರಗಳನ್ನು ಬಳಸಿ ಫಲವಂತಿಕೆಯನ್ನು ಅಂದಾಜು ಮಾಡಬಹುದು. ಆದರೆ ಫಲಭರಿತತೆಯನ್ನು ನೇರವಾಗಿ ಅಳೆಯಲು ಬರದು. ಮಾನವ ಸಮಷ್ಟಿಯ ಫಲವಂತಿಕೆಗೆ ಮಾನಗಳನ್ನು ರಚಿಸಲು ಯತ್ನಿಸಿದ್ದಾರೆ. ಈ ಕಾರ್ಯ ಸುಲಭವಿಲ್ಲ. ಕಾರಣಗಳು ಹಲವು ; ಫಲವಂತಿಕೆಗಿರುವ ಹಲವು ವ್ಯಾಖ್ಯೆಗಳು, ಜನನಗಳ ವಿತರಣೆಯ ವೈಚಿತ್ರ್ಯ, ಹೆಚ್ಚಾಗಿ ಬೇರೆ ಉದ್ದೇಶಕ್ಕಾಗಿ ಸಂಗ್ರಹಿಸಿದ ಮಾಹಿತಿಯನ್ನು ಬಳಸಬೇಕಾದುದು, ದತ್ತಾಂಶಗಳಲ್ಲಿರುವ ಕುಂದುಕೊರತೆ ಇತ್ಯಾದಿ.

ಫಲವಂತಿಕೆಯ ಮಾಪನಕ್ಕೆ ಜನನಗಳ ಆವರ್ತಾಂಕ ತಳಹದಿ. ಆದರೆ ಎರಡು ಪ್ರಶ್ನೆಗಳು. ಯಾವ ಅವಧಿಯ ಆವರ್ತಾಂಕ? ಸಮಷ್ಟಿಯ ಯಾವ ವಿಭಾಗವನ್ನು ಕುರಿತ ಆವರ್ತಾಂಕ? ಇವು ಎರಡು ಪ್ರಧಾನ ಮಾರ್ಗಗಳಿಗಿರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತವೆ. ಯಾವುದೇ ಪಂಚಾಂಗ ವರ್ಷದ ಜನನ ಮತ್ತು ಜನಸಂಖ್ಯಾ ಮಾಹಿತಿಯನ್ನು ಬಳಸಿ ಜನನ ದರವನ್ನು ಗಣಿಸುವುದು ಒಂದು ಮಾರ್ಗ. ಸಂತಾನಪಡೆಯುವ ಅವಧಿಯಲ್ಲಿ ವ್ಯಕ್ತಿಗೆ/ದಂಪತಿಗೆ ಆಗುವ ಸಂತತಿಯ ಸರಾಸರಿ ಸಂಖ್ಯೆಯನ್ನು (ಪೂರ್ಣಗೊಂಡ ಕುಟುಂಬದ ಗಾತ್ರವನ್ನು) ತಿಳಿಯುವುದು ಇನ್ನೊಂದು ಮಾರ್ಗ. ಮೊದಲನೆಯದು ಹಲವು ವಿಭಿನ್ನ ವರ್ಗಗಳ ಪುನರುತ್ಪತ್ತಿ ಚಟುವಟಿಕೆಯ ದತ್ತವರ್ಷದ ಅಂಶವನ್ನು ಮಾತ್ರ ಒಳಗೊಂಡಿರುತ್ತದೆ; ಎರಡನೆಯದು ಒಂದು ವರ್ಗದ ಪೂರ್ಣಗೊಂಡ ಇಂಥ ಚಟುವಟಿಕೆಯನ್ನು ಪ್ರತಿನಿಧಿಸುತ್ತದೆ. ಫಲವಂತಿಕೆಯ ಮಾಪನವನ್ನು ಹೆಂಗಸರಿಗೆ ಮಾತ್ರ ಸೀಮಿತಗೊಳಿಸುವುದು ರೂಢಿ. ಗಂಡಸರನ್ನು ಕುರಿತಾದರೂ ಮಾಪನ ವಿಧಾನ ಅದೇ ಇರುತ್ತದೆ.

ಜನನ ವಿವರಗಳ ವೈಶಿಷ್ಟ್ಯಗಳು

ಜನನ, ಮರಣ ಎರಡು ಮುಖ್ಯ ಘಟನೆಗಳು. ಹಲವು ದೃಷ್ಟಿಗಳಲ್ಲಿ ಮರಣ, ಜನನಕ್ಕಿಂತ ಸರಳ. ಕೆಲವು ವಿಚಾರಗಳನ್ನು ಗಮನಿಸಿ.

(i) ಗರ್ಭಧರಿಸುವ ವಯಸ್ಸಿನವರಿಗೆ ತಾಯ್ತನ ಒಂದಕ್ಕಿಂತ ಹೆಚ್ಚು ಬಾರಿ ಆಗಲು ಸಾಧ್ಯ. ದಾಖಲೆಗಳ ದೃಷ್ಟಿಯಿಂದ ಒಂದೇ ಬಾರಿ ಆಗುವ ಸಾವು ಸರಳ ಘಟನೆ. ಜನನದ ಸರತಿಯನ್ನು ಅವಲಂಬಿಸಿ ಹಲವು ವರ್ಗಗಳ ತಾಯ್ತನವಿದೆ. ಉದಾ. ಎರಡು ಮಕ್ಕಳ ತಾಯಿ ಮೂರನೇ ಮಗುವನ್ನು ಪಡೆಯುವ ಸಾಧ್ಯತೆ, ಹದಿನಾಲ್ಕು ಮಕ್ಕಳ ತಾಯಿ ಹದಿನೈದನೆಯದನ್ನು ಪಡೆಯುವ ಸಾಧ್ಯತೆಗಿಂತ ಸಾಕಷ್ಟು ಹೆಚ್ಚಿರು

ತ್ತದೆ. ಹೀಗಾಗಿ ಸಮಷ್ಟಿಯಲ್ಲಿ ಮಕ್ಕಳ ವಿತರಣೆ, ಅದರಲ್ಲಿರುವ ಹೆಂಗಸರಿಗೆ ಆಗಲೇ ಇರುವ ಮಕ್ಕಳ ಸಂಖ್ಯೆಯ ಮೇಲೆ ಅವಲಂಬಿಸಿರುತ್ತದೆ.

(ii) ಪ್ರತಿ ಜನನ ಎರಡು ವ್ಯಕ್ತಿಗಳನ್ನು ಒಳಗೊಂಡಿರುತ್ತದೆ ; ತಾಯಿ ಮತ್ತು ತಂದೆ. ಆದರೆ ಹೆಚ್ಚಿನ ದರಗಳನ್ನು ತಂದೆಗೆ ಯಾ ತಾಯಿಗೆ ಕುರಿತಾಗಿ ಗಣಿಸುತ್ತಾರೆ. ಬೇರೆಬೇರೆ ಲಕ್ಷಣಗಳನ್ನು ಕುರಿತು ಜನನಗಳ ವಿತರಣೆ ಗಂಡಸರಿಗೆ ಮತ್ತು ಹೆಂಗಸರಿಗೆ ಒಂದೇ ಆಗಿಲ್ಲದ್ದರಿಂದ ನಿರ್ದಿಷ್ಟ ದರಗಳು ಹೆತ್ತವರಿಬ್ಬರನ್ನೂ ಏಕಕಾಲದಲ್ಲಿ ಪ್ರತಿನಿಧಿಸಲಾರವು.

(iii) ಸಮಷ್ಟಿಯ ಕೆಲವು ಅಂಶಗಳಿಗೆ ಮಾತ್ರ ತಾಯಿ ತಂದೆಯಾಗುವ ಅವಕಾಶ ಸೀಮಿತ. ಉದಾ. ತೀರ ಚಿಕ್ಕವರಿಗೆ ಯಾ ವೃದ್ಧರಿಗೆ ಈ ಅವಕಾಶವಿಲ್ಲ. ಮದುವೆಯಾಗದಿರುವಿಕೆ, ವೈಧವ್ಯ, ವಿವಾಹ, ವಿಚ್ಛೇದನ, ಬಂಜೆತನ ಯಾ ಗರ್ಭನಿರೋಧಕ ವಿಧಾನಗಳ ಬಳಕೆಯಿಂದಾಗಿ ಕೆಲವರು ಈ ಅವಕಾಶವನ್ನು ಕೆಲವೊಮ್ಮೆ ಇಲ್ಲವಾಗಿಸಿಕೊಳ್ಳಬಹುದು. ಹೆಂಗಸರು ತಾಯಿಯಾಗುವ ವಯಸ್ಸಿಗೆ ಹೆಚ್ಚು ಕಡಿಮೆ ಖಚಿತ ಮಿತಿಗಳಿವೆ. ಸಾಮಾನ್ಯವಾಗಿ ಎಲ್ಲ ಜನನಗಳು ತಾಯಿಯ ವಯಸ್ಸು 15 ರಿಂದ 50 ವರ್ಷಗಳಿರುವಾಗ ನಡೆಯುತ್ತವೆ.

(iv) ಜನನಗಳ ಒಂದು ಚಿಕ್ಕ ಪ್ರಮಾಣ, ಬಹುಶಃ ಶೇಕಡಾ 1 ರಿಂದ 2, ಒಂದಕ್ಕಿಂತ ಹೆಚ್ಚು ಮಕ್ಕಳನ್ನು ನೀಡುತ್ತದೆ. ಈ "ಬಹು" ಜನನಗಳು ಫಲವಂತಿಕೆದರಗಳ ಗಣನೆಯಲ್ಲಿ ತುಸು ಗೊಂದಲವನ್ನುಂಟು ಮಾಡುತ್ತವೆ. ಅವಳಿ ಮಕ್ಕಳ ಜನನ ಒಂದು ಘಟನೆಯೇ ? ಯಾ ಎರಡು ಘಟನೆಗಳೇ ? ಅಳತೆಯ ಮಾನವಾಗಿ, ಹುಟ್ಟಿದ ಮಕ್ಕಳ ಸಂಖ್ಯೆಯನ್ನು ಬಳಸಬೇಕೇ ಯಾ ಪೂರ್ಣಗೊಂಡ ಗರ್ಭಗಳ ಸಂಖ್ಯೆಯನ್ನು ಬಳಸಬೇಕೇ ಎಂಬುದು ಸ್ಪಷ್ಟವಿಲ್ಲ. ಹೆಚ್ಚಿನ ದೇಶಗಳಲ್ಲಿ ಸಜೀವ ಜನನಗಳ ಸಂಖ್ಯೆಯನ್ನು ಮಾತ್ರ ನೊಂದಾಯಿಸಿಕೊಳ್ಳುತ್ತಾರೆ. ಆದ್ದರಿಂದ ಅದನ್ನೇ ಬಳಸಬೇಕಾಗುತ್ತದೆ. ಹೇಗಿದ್ದರೂ ಈ ವಿಚಾರದ ಒಟ್ಟು ಪ್ರಭಾವ ಅತ್ಯಲ್ಪ.

(v) ಫಲವಂತಿಕೆಯ ಮೇಲೆ ವೈಯುಕ್ತಿಕ ಆಯ್ಕೆ ಯಾ ಬಯಕೆಯ ಪ್ರಭಾವ ಸಾಕಷ್ಟಿರುತ್ತದೆ. ಸಾವಿನ ವಿಚಾರದಲ್ಲಿ ಈ ಪ್ರಭಾವ ಸರಿಸುಮಾರು ಒಂದೇ ದಿಕ್ಕಲ್ಲಿರುತ್ತದೆ. ಹೆಚ್ಚುಕಡಿಮೆ ಪ್ರತಿಯೊಬ್ಬನೂ ಸಾಯು

ವುದಕ್ಕಿಂತ ಜೀವಿಸಲೇ ಬಯಸುತ್ತಾನೆ. ಮಕ್ಕಳನ್ನು ಪಡೆಯುವ ವಿಚಾರದಲ್ಲಿ ಇಂಥ ಒಮ್ಮತವಿಲ್ಲ. ಯಾವುದೇ ವರ್ಷ ಮಕ್ಕಳನ್ನು ಪಡೆಯುವ ಬಗ್ಗೆ ಯಾ ಬಯಸುವ ಮಕ್ಕಳ ಒಟ್ಟು ಸಂಖ್ಯೆಯ ಬಗ್ಗೆ ಭಿನ್ನ ಅಭಿಪ್ರಾಯಗಳಿರುತ್ತವೆ. ಇದು ಈಗಾಗಲೇ ಇರುವ ಮಕ್ಕಳ ಸಂಖ್ಯೆಯ ಮೇಲೆ ಹಾಗೂ ಕಾಲ ಪ್ರವೃತ್ತಿಯ ಮೇಲೆ ಹೊಂದಿಕೊಂಡಿರುತ್ತದೆ. ಈ ಎಲ್ಲ ಘಟಕಗಳ ಜಂಟಿ ಪರಿಣಾಮವನ್ನು ಅರಿಯುವುದು ಕ್ಲಿಷ್ಟ.

ವಾರ್ಷಿಕ ಜನನ ದರಗಳು

ಜನಸಮಷ್ಟಿಯಲ್ಲಿ ಫಲವಂತಿಕೆಯನ್ನು ಅಳೆಯುವ ಮುಖ್ಯ ತಳಹದಿ ಯಾವುದಾದರೊಂದು ವಾರ್ಷಿಕ ಸೂಚಿ. ಉದಾ. ಜನನಗಳ ವಾರ್ಷಿಕ ಸಂಖ್ಯೆ ಮತ್ತು ಆ ವರ್ಷದ ಯಾವುದಾದರೊಂದು ಸಂಬಂಧಿತ ಜನಸಂಖ್ಯೆಗಿರುವ ನಿಷ್ಪತ್ತಿ. ಕೆಳಗಿರುವ ದರಗಳು ಸಾಮಾನ್ಯ ಬಳಕೆಯಲ್ಲಿವೆ.

(ಅ) **ಕಚ್ಚಾ ಜನನದರ.** ನೊಂದಾಯಿಸಿದ ಜನನಗಳ ವಾರ್ಷಿಕ ಸಂಖ್ಯೆ ಮತ್ತು ವರ್ಷ ಮಧ್ಯದ ಜನ ಸಂಖ್ಯೆಗಳ ನಿಷ್ಪತ್ತಿ.

(ಆ) **ಸಾರ್ವತ್ರಿಕ ಫಲವಂತಿಕೆ ದರ.** ನೊಂದಾಯಿಸಿದ ಜನನಗಳ ವಾರ್ಷಿಕ ಸಂಖ್ಯೆ ಮತ್ತು ಗರ್ಭಧರಿಸುವ ವಯಸ್ಸಿನ (ವ. 15–44 ಯಾ 15–49) ಮಹಿಳೆಯರ ಸಂಖ್ಯೆಗಳ ನಿಷ್ಪತ್ತಿ, ಇಲ್ಲಿ ನಿಷ್ಪತ್ತಿಯು ಛೇದ ತಾಯಿಯಾಗಬಲ್ಲವರಿಗೆ ಮಾತ್ರ ಸೀಮಿತ.

(ಇ) **ವಯೋ ನಿರ್ದಿಷ್ಟ ಜನನದರ.** ಯಾವುದೇ ವಯೋವರ್ಗದ ಮಹಿಳೆಯರಿಗೆ ಜನಿಸಿದ ಮಕ್ಕಳ ವಾರ್ಷಿಕ ಸಂಖ್ಯೆ ಮತ್ತು ಆ ವರ್ಗದ ಮಹಿಳೆಯರ ಒಟ್ಟು ಸಂಖ್ಯೆಗಳ ನಿಷ್ಪತ್ತಿ.

(ಈ) **ಶಿಶು–ಸ್ತ್ರೀ ನಿಷ್ಪತ್ತಿ.** ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆ ಮತ್ತು ಗರ್ಭಧರಿಸುವ ವಯಸ್ಸಿನ ಹೆಂಗಸರ ಸಂಖ್ಯೆಗಳ ನಿಷ್ಪತ್ತಿ,

(ಉ) **ಸಮಗ್ರ ಫಲವಂತಿಕೆ ದರ.** 15–49 ವರ್ಷ ವಯಸ್ಸಿನ ಮಹಿಳೆಯರ ಎಲ್ಲ ವಯೋನಿರ್ದಿಷ್ಟ ಜನನದರಗಳ ಮೊತ್ತ.

(ಊ) **ಕಚ್ಚಾ ಪುನರುತ್ಪತ್ತಿ ದರ.** 15–49 ವರ್ಷ ವಯಸ್ಸಿನ ಮಹಿಳೆಯರ ಎಲ್ಲ ವಯೋನಿರ್ದಿಷ್ಟ ಜನನದರಗಳನ್ನು ಸ್ತ್ರೀ ಜನನಗಳಿಗೆ ಮಾತ್ರ ಅನ್ವಯಿ

ಸುವಂತೆ ಲೆಕ್ಕಿಸಿ, ಅವುಗಳ ಮೊತ್ತ ಗುರುತಿಸಿ. ಜನಸಂಖ್ಯಾಭಿವೃದ್ಧಿ ಅಧ್ಯಯನದಲ್ಲಿ ಇದರ ಬಳಕೆ ಸಾಮಾನ್ಯ. ಇದಕ್ಕೆ ಒಂದು ಸೂತ್ರ ಹೀಗಿದೆ.

$5 \sum_{i=1}^{7} \left(b_i^f / p_i \right)$ ಇಲ್ಲಿ i ಎಂಬುದು 5 ವರ್ಷಗಳ ಅವಧಿ; ವಯಸ್ಸು. ಈ ಅವಧಿಯಲ್ಲಿರುವ ಮಹಿಳೆಯರು ದತ್ತ ವರ್ಷ ಇತ್ತ ಸಜೀವ ಸ್ತ್ರೀ ಜನನಗಳ ನೊಂದಾಯಿಸಿದ ಸಂಖ್ಯೆ b_i^f ಮತ್ತು ಈ ಮಹಿಳೆಯರ ಮಧ್ಯವಾರ್ಷಿಕ ಒಟ್ಟು ಸಂಖ್ಯೆ P_i. 'ಮಹಿಳೆಗೆ ತಲಾ ಹೆಣ್ಣುಮಕ್ಕಳ ಸಂಖ್ಯೆ' ಎಂದು ಈ ದರವನ್ನು ಅರ್ಥವಿಸಬಹುದು. ಒಮ್ಮೊಮ್ಮೆ ಗಂಡು ಜನನಗಳ ಸಂಖ್ಯೆಯನ್ನು ಗಂಡಸರ ಸಂಖ್ಯೆಗೆ ಸಂಬಂಧಿಸಿ ಪುನರುತ್ಪತ್ತಿದರವನ್ನು ಪಡೆಯುವುದೂ ಇದೆ.

ಹೆಚ್ಚಿನ ಸಂದರ್ಭಗಳಲ್ಲಿ ಈ ದರಗಳ ಪೈಕಿ ಆರಿಸಿಕೊಳ್ಳುವ ಪ್ರಶ್ನೆ ಉದ್ಭವಿಸಲು ದತ್ತಾಂಶಗಳು ಅವಕಾಶವನ್ನೇ ನೀಡುವುದಿಲ್ಲ. ಉದಾ. ಜನನಗಳ ಮತ್ತು ಜನರ ಸಂಖ್ಯೆ ಮಾತ್ರ ತಿಳಿದಿರುವಾಗ ಕಚ್ಚಾ ಜನನದರವನ್ನು ಮಾತ್ರ ಗಣಿಸಬಹುದು. ಜನಗಣತಿ ನೀಡುವ ವಯೋವಿತರಣೆ ಮಾತ್ರ ತಿಳಿದಿದ್ದು, ಜನನಗಳ ವಿವರ ತಿಳಿಯದಿರುವಾಗ, ಶಿಶು–ಸ್ತ್ರೀ ನಿಷ್ಪತ್ತಿಯನ್ನು ಗಣಿಸಬೇಕು, ಇತ್ಯಾದಿ.

ಪೂರ್ಣಗೊಂಡ ಕುಟುಂಬದ ಗಾತ್ರ.

ಹೆಂಗಸರ ಒಂದು ನಿರ್ದಿಷ್ಟ ಗುಂಪಿಗೆ ಜನಿಸುವ ಎಲ್ಲ ಮಕ್ಕಳನ್ನು ಗಣಿಸುವುದು ಫಲವಂತಿಕೆಯನ್ನು ಅಳೆಯುವ ಇನ್ನೊಂದು ವಿಧಾನ. ಅಂದರೆ ದತ್ತ ವರ್ಷದಲ್ಲಿ ಬೇರೆ ಬೇರೆ ಮಹಿಳೆಯರಿಗಾಗುವ ಜನನಗಳ ಮೊತ್ತದ ಬದಲು, ಹೆಂಗಸರ ನಿರ್ದಿಷ್ಟ ಗುಂಪಿನಲ್ಲಿ ಅದರ ಜೀವಮಾನದಲ್ಲಿ ಆಗುವ ಎಲ್ಲ ಜನನಗಳ ಮೊತ್ತವನ್ನು ಪಡೆದು ಸರಾಸರಿಯನ್ನು ಗಣಿಸುವುದು. ಇದಕ್ಕೆ ಬೇಕಾಗುವ ಮಾಹಿತಿಗೆ ಮೂರು ತರಹದ ಮೂಲಗಳಿವೆ.

(i) ಕಡಿಮೆಯೆಂದರೆ 30–35 ಅನುಕ್ರಮ ವರ್ಷಗಳ ವಯೋನಿರ್ದಿಷ್ಟ ಜನನದರಗಳು ತಿಳಿದಿದ್ದರೆ, ಅವನ್ನು ಹೆಂಗಸರ ನಿರ್ದಿಷ್ಟ ಗುಂಪಿಗೆ ಅನ್ವಯಿಸುವಂತೆ ಒಟ್ಟುಗೊಳಿಸುವುದು.

(ii) ಸ್ತ್ರೀಯರು ವೈಯಕ್ತಿಕವಾಗಿ ಇತ್ತ ಜನ್ಮಗಳ ದಾಖಲೆಯನ್ನು ಬಳಸುವುದು. ಸುಮಾರು 35 ಅನುಕ್ರಮ ವರ್ಷಗಳ ಇಂಥ ಮಾಹಿತಿ ಇದ್ದಲ್ಲಿ, ಸ್ತ್ರೀಯರ ನಿರ್ದಿಷ್ಟ ತಂಡದ ಪುನರುತ್ಪಾದನಾ ಚರಿತ್ರೆಯನ್ನು ತಿಳಿಯಲು ಸಾಧ್ಯ. ಆದರೆ ಇಂಥ ಮಾಹಿತಿ ಸಿಗುವುದು ವಿರಳ.

(iii) ಜನಗಣತಿಯೂ ವಿಶೇಷ ಸಮೀಕ್ಷೆಗಳ ಸಂದರ್ಭದಲ್ಲಿ ವಯಸ್ಕರು ವೈಯಕ್ತಿಕವಾಗಿ ನೀಡಿದ ವರದಿಗಳ ಬಳಕೆ. ಪ್ರತಿ ಮಹಿಳೆಗೆ ಜನಿಸಿದ ಮಕ್ಕಳ ಒಟ್ಟು ಸಂಖ್ಯೆ ಮತ್ತು ಪ್ರತಿ ಮಗುವಿನ ಜನನ ತಾರೀಕಿನ ಕುರಿತ ಪ್ರಶ್ನೆಗೆ ಉತ್ತರವಾಗಿ ಈ ಮಾಹಿತಿ ಇರುತ್ತದೆ.

ಫಲವಂತಿಕೆಯ ಮಾಪನ ಜನಸಂಖ್ಯಾಭಿವೃದ್ಧಿಯ ಪ್ರರೂಪವನ್ನು ತಿಳಿಯಲು ಅತ್ಯವಶ್ಯ. ಬೇರೆ ಬೇರೆ ಕಾಲಾವಧಿ, ಭೌಗೋಲಿಕ ವಲಯ, ಆರ್ಥಿಕ ಯಾ ಸಾಮಾಜಿಕ ಸ್ತರಗಳಲ್ಲಿ ಫಲವಂತಿಕೆಯ ಹೋಲಿಕೆ ಉಪಯುಕ್ತ ಮಾಹಿತಿಯನ್ನು ನೀಡಬಲ್ಲದು.

ಪಂಪ ಭಾರತದಲ್ಲಿ "ಸಾಹಸದ ಮಹಿಮೆಯೊಳ್ ಫಲ್ಗುಣಂ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬಿ. ಸಿ. ಜವಳಿ

[೭]

ಪಾಶುಪತಾಸ್ತ್ರ ಸಂಪಾದನೆ : ಕೃಷ್ಣದ್ವೈಪಾಯನ (ಸತ್ಯವತೀ ನಂದನ) ನ ಉಪದೇಶದ ಮೇರೆಗೆ, ಮುಂದೆ ಉಂಟಾಗಬಹುದಾದ ಘೋರ ಯುದ್ಧವನ್ನು ಊಹಿಸಿ, ದುರ್ಯೋಧನನ ಬಳಿ ವೀರಾಧಿವೀರರಿದ್ದುದನ್ನು ಅರಿತು, ಅರ್ಜುನನು, ಶಿವನನ್ನು ಪ್ರಾರ್ಥಿಸಿ, ದಿವ್ಯಾಸ್ತ್ರಗಳನ್ನು ಪಡೆಯಲು ಇಂದ್ರಕೀಲಕ್ಕೆ ಹೊರಡುತ್ತಾನೆ. ಕೃಷ್ಣದ್ವೈಪಾಯನರಾದರೂ ಈ ಕಾರ್ಯಕ್ಕೆ ಆಯ್ದುಕೊಂಡುದು ಪಾಂಡವರಲ್ಲಿ ಅರ್ಜುನನನ್ನೇ. ಅವನಿಗೆ ಮಂತ್ರೋಪದೇಶಗೆಯ್ದು, ಗುಹ್ಯಕನೆಂಬವನನ್ನು ಬರಿಸಿ, ಅರ್ಜುನನನ್ನು ಇಂದ್ರಕೀಲಪರ್ವತಕ್ಕೊಯ್ಯಲು ಆಜ್ಞಾಪಿಸುತ್ತಾರೆ. ಧರ್ಮ ಭೀಮರಿಗೆ ನಮಸ್ಕರಿಸಿ ಹೊರಡಲನುವಾದಾಗ ದ್ರೌಪದಿಯು ಅರ್ಜುನನಿಗೆ "ಪಗೆವರ ಕಡುವೆರ್ಚಂ ಎನ್ನ ಪೂಣ್ಕೆಯುಂ ಬಗೆ; ನಿನ್ನ ಮುಯ್ಯೊಸಕಮಂ ಬಗೆಯದಿರ್" ಎಂದು ನುಡಿಯುತ್ತಾಳೆ. ಕರ್ಪೂರ ಕಾಳಾಗರು ಭಸಿತದ ಹುಡಿ, ಕಲ್ಪವೃಕ್ಷದ ವಲ್ಕಲ, ಕನಕಕಮಳನಾಳೋತ್ಕರದ ಯಜ್ಞೋಪವೀತ ಧರಿಸಿ, ಅದಿರದ ಚಿತ್ತ, ಅಳುಕದ ಮನ, ಬಗೆಗೊಳ್ಳದ ಮೋಹ, ಎತ್ತಿಕಟ್ಟಿದ ಜಡೆ, ತೊಟ್ಟ ರತ್ನಕವಚ, ಬಿಲ್, ಬಿಗಿದಿರ್ದ ಎರಡು ದೊಣೆ, ಮಿಸುಪ ಅಸಿ, ಖೇಟಕ – ಇವುಗಳಿಂದ ಅರ್ಜುನನು 'ಸೌಮ್ಯಭಯಂಕರ'ನಾಗಿ ಕಂಗೊಳಿಸುತ್ತಾನೆ; ತಪಕ್ಕೆ ಕುಳಿತುಕೊಳ್ಳುತ್ತಾನೆ. ಕ್ಷತ್ರಿಯ ವೀರಾಗ್ರೇಸರನಾದ ಅರ್ಜುನನು ಬ್ರಾಹ್ಮಣನಂತೆ ತಪಗೈವ ನಿರ್ಣಯ ಕೈಕೊಂಡುದು ಸಾಹಸದ ಮಾತೇ ಸರಿ. "Hero is a hero in all respects" ಎನ್ನುವಂತೆ ಈ ಪ್ರಸಂಗದಲ್ಲಿಯೂ ಸಾಹಸ ಜೀವಿಯೇ ಆಗಿ ಕಂಗೊಳಿಸುತ್ತಾನೆ. ಅಸ್ತ್ರಶಸ್ತ್ರ ವಿದ್ಯೆಯನ್ನೇನೋ ಗುರುಗಳಲ್ಲಿ ಕಲಿತಿದ್ದಾನೆ; ತಪಸ್ಸನ್ನು ತಾಳಿಕೊಳ್ಳುವ ತಾಳ್ಮೆಯೂ ಅವನಲ್ಲಿದೆ. ವೀರರಿಗೆ ತಪಸ್ವಿಗಳ ತಾಳ್ಮೆ ಇರುವುದು ಉತ್ತಮ ಸಂಸ್ಕೃತಿಯ ಲಕ್ಷಣವೇ. ಅರ್ಜುನನ ತಪಃಪ್ರಭಾವದಿಂದ ಸಿಂಹದ ಮರಿ ಹೆಣ್ಣಾನೆಯ ಮೊಲೆಗೆ ಬಾಯಿ ಹಾಕುತ್ತದೆ; ಆನೆಯ ಮರಿ ಸಿಂಹದ ಮರಿಯನ್ನು ಬೆದರಿಸುತ್ತ ಹೆಣ್ಣು ಸಿಂಹದ ಮೊಲೆಗೆ ಬಾಯಿ ಹಾಕುತ್ತದೆ; ಹೀಗೆ ಇಂದ್ರಕೀಲ ಪರ್ವತದ ಕಾಡುಪ್ರಾಣಿಗಳಲ್ಲಿ ಅಪ್ರಾಕೃತ ಗುಣ ತಲೆದೋರುತ್ತವೆ. ಸಹಜ ವೈರವು ಮರೆಯಾಗುತ್ತದೆ.

ಇತರ ತಪಸ್ವಿಗಳ ತಪಸ್ಸು ಉಡುಗುತ್ತದೆ ; ದೇವೇಂದ್ರನಿಗೆ ಆಸನ ಕಂಪವಾಗುತ್ತದೆ. ಆಗ ದೇವೇಂದ್ರನು ತನ್ನ ನಚ್ಚಿನ ಅಪ್ಸರೆಯರು, ಋತುಗಳು, ಕಾಮದೇವ ಮತ್ತು ಗಂಧರ್ವರನ್ನು ಅರ್ಜುನನ ತಪೋಭಂಗಮಾಡಲು ಕಳಿಸುತ್ತಾನೆ. ಉರ್ವಸಿಯ ದೇಸಿನಾಟ್ಯ, ಮೇನಕೆಯ ಸುಸ್ವರ ಗಾಯನ, ತಿಳೋತ್ತಮೆಯ ದೇಶಿ ಮಾರ್ಗಗಳ ನೃತ್ಯ, ಇವಾವುವೂ ಅರಿಗನನ್ನು ವಿಚಲಿತಗೊಳಿಸಲು ಸಮರ್ಥವಾಗಲಿಲ್ಲ. ಅಲ್ಲದೆ ಹರಿಗನ ರೂಪ, ಸೌಂದರ್ಯ, ಗಂಡಗಾಡಿಗಳೇ ಇವರನ್ನು ಸೋಲುವಂತೆ ಮಾಡುತ್ತವೆ ! ಮುತ್ತು ಮೆಳಸು ಕೂಡಿದಂತೆ ಅರ್ಜುನನ ತಪಸ್ಸು ಬೂದಿ, ಜಡೆಗಳಿಂದಲೂ, ದೊಣೆ, ಶರಾಸನ, ಕವಚಗಳಿಂದಲೂ ಕೂಡಿದೆ. ಅಪ್ಸರೆಯರ ಲಲ್ಲೆಯ ಚೆಲ್ಲಾದ ಮಾತುಗಳಿಗೆ ಮರುಳಾಗದ ಅರ್ಜುನನನ್ನು ನೋಡಿ ಅವರು ಅಚ್ಚರಿಪಡುತ್ತಾರೆ; ಮರಳಿ ಹೋಗಿ ತಮ್ಮ ಸೋಲನ್ನು ಇಂದ್ರನಿಗೆ ನಿವೇದಿಸುತ್ತಾರೆ. ಇಂದ್ರನೇ ದ್ವಿಜ ವೇಷದಿಂದ ಅಲ್ಲಿಗೆ ಬರುತ್ತಾನೆ. ಆಗ ಅರ್ಜುನನು, ದಾಯಾದಿಗಳಿಗೆ ರಾಜ್ಯವನ್ನು ಜೂದಿನಲ್ಲಿ ಒತ್ತೆಯಿರಿಸಿ, ಅಣ್ಣನ ಅಪ್ಪಣೆ ಪಾಲಿಸಲು ವನಕ್ಕೆ ಆಗಮಿಸಿ, ಪರಾಶರನ ಅಭಿಮತದಂತೆ ಹರನನ್ನೊಲಿಸಲು ತಪಸ್ಸು ಮಾಡುವುದಾಗಿ ತಿಳಿಸುತ್ತಾನೆ. "ತಪದಿಂದ ಶರೀರವನ್ನು ಕರಗಿಸುತ್ತೇನೆ; ಇಂದ್ರನಿತ್ತ ವರದಿಂದ ವೈರಿಗಳನ್ನು ತವಿಸುತ್ತೇನೆ" ಎನ್ನಲು ಇಂದ್ರನು ಮೆಚ್ಚಿ, ನಿಜವೇಷದೋರಿ, ಮಗನನ್ನಪ್ಪಿಕೊಂಡು "ದುರಿತಹರನಂ ಆರಾಧಿಸು" ಎಂದು ಹರಸಿ ಹೋಗುತ್ತಾನೆ. ಅರ್ಜುನನ ಉಗ್ರೋಗ್ರ ತಪಸ್ಸಿನ ಪ್ರಭಾವವನ್ನು ಶಿವನಿಗೆ ಅಲ್ಲಿಯ ತಪಸಿಗಳು ಇಂತು ನಿವೇದಿಸುತ್ತಾರೆ : 'ಆವನೋ ತಿಳಿಯದು, ಅರಾತಿವಿದ್ರಾವಣ, ದಾವಪಾವಕ, ಆರೋಪಿತ ಚಾಪ, ಸಂಧಾರಿತ ಕವಚ, ಧೃತೋಗ್ರಶರಧಿ ಯುಗ್ಮಂ, ನಿನ್ನನೆ ಪೋಲ್ವಂ'–ಎಂದು. ತಪಸ್ವಿ ಅರ್ಜುನನೆಂದು ಶಿವನು ತಿಳಿಸಿ, ಬಂದ ಮುನಿಗಳನ್ನು ಕಳಿಸಿ, ಮೂಕನೆಂಬ ದಾನವನು ಇಂದ್ರನಿಗೆ ಉಪಟಳ ಕೊಡುತ್ತಿದ್ದುದನ್ನು ಗಮನಿಸಿ, ಅವನು ವರಾಹ ರೂಪದಲ್ಲಿದ್ದುದನ್ನು ತಿಳಿದು, ಅವನನ್ನು ಕೊಲ್ಲುವ ನೆವದಿಂದ ಮಾಯಾಯುದ್ಧವನ್ನು ನಿರ್ಮಿಸಿ, "ಸಾಹಸಾಭರಣನ ಸಾಹಸದ ಬಲದ ಚಲದ ಬಿಲ್ಲಾಳ್ತನದ ಅಳವಿಗಳನಳೆದು" ಮರವೀಯಲು ಅರ್ಜುನನಿರುವಲ್ಲಿಗೇ ಅವತರಿಸುತ್ತಾನೆ. ತಾನೇ ಬೇಡ, ಪಾರ್ವತಿ ಬೇಡಿತಿ ; ಗುಹನೇ ಕಿರಾತ-ಬಲದ ನಾಯಕ ; ಭೂತಗಣವೇ ಬೇಡಪಡೆಯಾಗುತ್ತದೆ. ಮೂಕ ದಾನವನನ್ನು ಬೆನ್ನಟ್ಟುತ್ತಾನೆ; ಅದು ಅರ್ಜುನನತ್ತ ಹೋದಾಗ, ಅರ್ಜುನನು, ಗಾಂಡೀವಕ್ಕೆ ಅಮೋಘಾಸ್ತ್ರವನ್ನು ಹೂಡಿ ಹೊಡೆಯುತ್ತಾನೆ; ಶಿವನೂ ಬಾಣ ಬಿಡುತ್ತಾನೆ. ಅರ್ಜುನನು, ರುಧಿರಯುಕ್ತ ಬಾಣವನ್ನು ತೆಗೆದುಕೊಂಡು ಪೂಗೊಳದಲ್ಲಿ ತೊಳೆದು ಬತ್ತಳಿಕೆಗೆ ಸೇರಿಸುತ್ತಾನೆ; ಮತ್ತೆ ಏಕ ಪಾದದ ಮೇಲೆ ನಿಂತು ತಪಸ್ಸು ಮಾಡುತ್ತಾನೆ. ಶಿವನು ಬಾಣವನ್ನು ಕೇಳಲು ಗುಹನನ್ನು ಅರ್ಜುನನಲ್ಲಿಗೆ ಕಳಿಸುತ್ತಾನೆ. ಗುಹನು ಆಗಮಿಸಿ, ತಪಸ್ವಿಗೇಕೆ–ಕವಚ ಖಡ್ಗ ? ಬೂದಿ ಜಡೆ ಸಾಕು ; ನೀವು ತಪಸ್ವಿಗಳಲ್ಲ ; ಎಮ್ಮರಸರ ಶರವನ್ನು ಕೊಡ

ಬೇಕೆಂಬುದಾಗಿ ಹೇಳಿದಾಗ, ಅರ್ಜುನನು ಕೋಪದಿಂದ 'ನನ್ನ ಉಗ್ರಾಸ್ತ್ರವನ್ನು ಕೇಳಲು ಯೋಗ್ಯತೆಯಿದೆಯೇ ? ಇದು ಕಲಹದ ನುಡಿ ; ಬೇಡದಿರು ; ಯೋಗ್ಯತೆ ಯುಳ್ಳೊಡೆ ನಿನ್ನೊಡೆಯನನ್ನೇ ಬರಹೇಳು' ಎನ್ನುತ್ತಾನೆ. ಬೇಡನು ತನ್ನ ಬಲ ವನ್ನೆಲ್ಲ ಅರ್ಜುನನಿಗೆ ಇದಿರೊಡ್ಡುತ್ತಾನೆ. ಅರ್ಜುನನು ಕಿಡಿಕಿಡಿಯಾಗಿ ಇದಕ್ಕೆ ಪ್ರತಿಯಾಗಿ ಲಕ್ಷ ಸಂಖ್ಯೆಯ ಬಾಣಗಳನ್ನು ಪ್ರಯೋಗಿಸಿ, ಚತುರಂಗ ಬಲವನ್ನೇ ಹೆಣೆಯುತ್ತಾನೆ. ಆಗ ಶಿವ-ಅರ್ಜುನರು ಶೂನ್ಯಹಸ್ತದಿಂದ ಎಷ್ಟೋ ಹೊತ್ತು ಹೋರಾಡುತ್ತಾರೆ. ಕೊನೆಯಲ್ಲಿ ಅರ್ಜುನನೇ ಗೆಲ್ಲಕ್ಕೆ ಮುಡಿಗಿಕ್ಕುವಂತೆ (ಸವಾಲು ನೀಡುವಂತೆ) ಹರನನ್ನಿಕ್ಕಿ ಗಂಟಲಂ ಮೆಟ್ಟುತ್ತಾನೆ. ಶಿವನು ಅಲ್ಲಿಯವರೆಗೂ ಮರೆ ಮಾಡಿದ ನೊಸಲಕಣ್ಣನ್ನು 'ಎರಕದೆ ತೋರಿ' ನಿಜರೂಪು ಪ್ರಕಟ ಮಾಡುತ್ತಾನೆ. ಆಗ ಹರಿಗನು ಶಿವಗೆರಗಿ ಮಾಡಿದ ಅಪರಾಧವನ್ನು ನೀಗುವುದೆಂದು ಬೇಡಿಕೊಳ್ಳು ತ್ತಾನೆ. ಸಮಸ್ತ ಬಲವನ್ನೇ ಅರ್ಜುನನೆದುರು ಕಳಿಸಿದಾಗ ಅದಿರದೆ ಶರಜಾಲದಿಂದ, ಶಿವನನ್ನು ಶೂನ್ಯ ಹಸ್ತದಿಂದ ಎದುರಿಸುತ್ತಾನೆ. ಹರನ ಗಂಟಲನ್ನು ಮೆಟ್ಟಿರಿದ ಏಕಾಂಗವೀರನೆಂಬುದು ಇಲ್ಲಿ ಮುಖ್ಯ. ಎಂತಹ ಭಯಾನಕ ಸನ್ನಿವೇಶವೇ ಇರಲಿ, ತನ್ನ ನೆರವಿಗೆ ಬಲವಿರಲಿ ಇಲ್ಲದಿರಲಿ, ಧೈರ್ಯದಿಂದ ಎದುರಿಸುವ ಸಾಹಸ ಅರ್ಜುನ ನದು. ಅರ್ಜುನನ ಈ ಸಾಹಸ, ತಪಸ್ಸು, ಭಕ್ತಿ ಮತ್ತು ವಿನಯಗಳಿಗೆ ಮೆಚ್ಚಿ ಹರನು ಪಾಶುಪತಾಸ್ತ್ರವನ್ನು, ದಿವ್ಯಾಸ್ತ್ರಗಳನ್ನು, ಗೌರೀದೇವಿಯು ಮಂಜರಿಕಾಸ್ತ್ರವನ್ನು, ಮೂವತ್ತುಮೂರು ದೇವರುಗಳು ತಂತಮ್ಮ ನಚ್ಚಿನ ಅಂಬುಗಳನ್ನು ದಯಪಾಲಿಸು ತ್ತಾರೆ. ಈ ವಿಜಯದಿಂದ ಹರುಷಗೊಂಡು ದೇವೇಂದ್ರನು ಅರ್ಜುನನನ್ನು ಅಮರಾವತಿಗೆ ಕರೆದೊಯ್ದು, ಸಂಭ್ರಮದ ಆತಿಥ್ಯ ನೀಡಿ, ಗೌರವಿಸಿ, ಅಲ್ಲಿಯ ಸ್ತ್ರೀಯರಿಗೂ ಸಂತೋಷವನ್ನುಂಟುಮಾಡುತ್ತಾನೆ. ಅರ್ಜುನನು, ಇಂದ್ರ ವೈರಿ ಮೂಕ ದಾನವನನ್ನು ಕೊಂದುದಲ್ಲದೆ ಇತರ ವೈರಿಗಳನ್ನೂ ನಾಶಪಡಿಸಿ ಇಂದ್ರನ ಅರ್ಧಾಸನವನ್ನೇರಿದ ಸಾಹಸ ಈತನದು. ಖಾಂಡವದಹನದ ಕಾಲಕ್ಕೆ ಇಂದ್ರನನ್ನು ಸುಮ್ಮನಾಗಿರಿಸಿದ್ದ ; ತಪಸ್ಸು ಮಾಡುವಾಗ ಅವನ ಪರೀಕ್ಷೆಯಲ್ಲಿ ಗೆಲುವು ಪಡೆದಿದ್ದ. ಶಿವನನ್ನೂ ಗೆಲ್ದು 'ಮೂರು ಲೋಕದ ಗಂಡ' ಎಂಬ ಬಿರುದಿಗೆ ಪಾತ್ರ ನಾಗುತ್ತಾನೆ. ಮಹಾಭಾರತದಲ್ಲಿ ಸಾಹಸವನ್ನು ಮಾಡಿದವರುಂಟು ; ಆದರೆ ತಮ್ಮ ಪ್ರವೃತ್ತಿಗೆ ವಿರುದ್ಧವಾದ ತಪಗೈದ ವೀರ ತಪಸ್ವಿಗಳು ವಿರಳ ; ಮತ್ತು ಇಷ್ಟೊಂದು ಸಂಖ್ಯೆಯಲ್ಲಿ ಸಾಹಸಗೈದವರು ಕಡಿಮೆ. ಕೊನೆಯಲ್ಲಿ ಅರ್ಜುನನು ದೇವೇಂದ್ರನಿಂದ 'ಐಂದ್ರ'ವೆಂಬ ದಿವ್ಯಾಸ್ತ್ರ, ನೈಷ್ಠಿಕವೆಂಬ ಮುಷ್ಟಿಯನ್ನು ಕೈಕೊಂಡು, ಇಂದ್ರಸಾರಥಿ ಮಾತಳಿಯೊಡನೆ ಹೊರಟಿರುತ್ತಾನೆ. ಇಷ್ಟು ದಿವಸಗಳಾದರೂ ಬರಲಿಲ್ಲವೆಂದು ಅರ್ಜುನನನ್ನೇ ಹುಡುಕ ಹೊರಟ ಪಾಂಡವರು ಗಂಧಮಾದನ ಗಿರಿಯಲ್ಲಿ ಬರುತ್ತಿರು ವುದನ್ನು ಕಾಣುತ್ತಾರೆ ; ಅವನನ್ನು ಸ್ವಾಗತಿಸಿ ಅಲ್ಲಿಂದ ದ್ವೈತವನಕ್ಕೆ ಆಗಮಿಸು ತ್ತಾರೆ. ದಾರಿಯಲ್ಲಿ ದಣಿದು ಧರ್ಮರಾಜನು ನೀರಡಸಿದಾಗ ಸರೋವರಕ್ಕೆ ನೀರು

ತರಲು ಹೋದಾಗ ಮಾತ್ರ 'ಅರಿಭೂಪಾನೀಕ ಭಯಂಕರ'ನೂ ಜೋಲ್ದು ಧರೆಯಲ್ಲಿ ಬೀಳುತ್ತಾನೆ. ಇದು ಕಾಲನೇ ಪಾಂಡವರನ್ನು ಪರೀಕ್ಷಿಸಿದ ಬಗೆ. ಕಾಲಂಗೆ ಎದುರಾದವರುಂಟೆ? ಅಲ್ಲಿಂದ ಪಾಂಡವರು ವಿರಾಟನಗರಕ್ಕೆ ಬಂದು ಅಜ್ಞಾತವಾಗಿ ವಿರಾಟನ ಅರಮನೆಯಲ್ಲಿರುತ್ತಾರೆ. ಅಮರಾವತಿಯಲ್ಲಿ ಅರ್ಜುನನ ಗಂಡಗಾಡಿಗೆ ಸೋತು, ರಂಭೆ ಮೇಲೆ ಬಿದ್ದಾಗ, ತಾಯಿಯೆಂಬ ಭಾವನೆಯಿಂದ ನಿರಾಕರಿಸಿದುದಕ್ಕೆ, ಆಕೆಯ ಶಾಪಕ್ಕೊಳಗಾದ ಅರ್ಜುನನು, ಇಲ್ಲಿ ಬಳೆದೊಟ್ಟು ಬೃಹಂದಳೆಯಾಗುತ್ತಾನೆ! ಇಂತಹ ವೀರನೂ ಬಳೆದೊಟ್ಟುದೊಂದು ಸಾಹಸವೇ. ತಪಸ್ಸು ಮಾಡಿದುದು ಹೇಗೆ ಸಾಹಸವೋ ಹಾಗೆಯೇ ಇದು. ಬಳೆದೊಟ್ಟುದುದರಿಂದಲೋ ಏನೋ ಕೀಚಕ ವಧೆಯ ಪ್ರಸಂಗದಲ್ಲಿ ಅರ್ಜುನನು ದ್ರೌಪದಿಗೆ ನಿಸ್ಸಹಾಯಕನಾಗುತ್ತಾನೆ.

೮

ಗೋಗ್ರಹಣಪ್ರಸಂಗ : ಕೀಚಕ ಮತ್ತು ಅವನ ತಮ್ಮಂದಿರು ಹತರಾದರೆಂಬ ವಾರ್ತೆಯನ್ನು ತಿಳಿದ ದುರ್ಯೋಧನನು, ಪಾಂಡವರು ಇಲ್ಲಿಯೇ ಇರಬೇಕೆಂದು ಊಹಿಸಿ, ಗೋಗ್ರಹಣನಿಮಿತ್ತ ವಿರಾಟನಗರಕ್ಕೆ ದಂಡೆತ್ತಿ ಬರುತ್ತಾನೆ. ಆಗ ಅರ್ಜುನನು ಮೊದಲು ಉತ್ತರನಿಗೆ ಸಾರಥಿಯಾಗಿ "ಕಾನನದೊಳು ಬೇಗೆ ಹರಿವಂತೆ" ರಭಸದಿಂದ ರಥವನ್ನು ಹರಿಸುತ್ತಾನೆ. ಅಪಾರಸೈನ್ಯವನ್ನು ಕಂಡ ಉತ್ತರನು ರಥದಿಂದಿಳಿದು ಹೋದಾಗ, ಅವನನ್ನು ಬೆನ್ನಟ್ಟಿ ರಥದಲ್ಲಿರಿಸಿ, ತಾವಿರಿಸಿದ ಆಯುಧ ತೆಗೆದುಕೊಂಡು ಬಳೆಯೊಡೆದು ಗಂಡುಡೆಯುಟ್ಟು, ಗಾಂಡಿವವನ್ನು ಧರಿಸಿ, ರಥವೇರಿ ಬಂದಾಗ, ಭೀಷ್ಮರನ್ನು ಎದುರಾದವನು ಅರ್ಜುನ ಎಂದು ತಿಳಿಯುತ್ತದೆ. ಗೋಗಳನ್ನು ಕೊಂಡೊಯ್ಯುತಿದ್ದ ಸುಯೋಧನನನ್ನು ತನ್ನ ಬಾಣಗಳಿಂದ ಬೆನ್ನಟ್ಟಿದಾಗ, ಅವನು ಸೋತು ಓಡುತ್ತಾನೆ. ಅರ್ಜುನನು ಜಡೆ ಬಿಚ್ಚಿದೊಡನೆ ಕುರುಧ್ವಜಿನಿ ತೊಟ್ಟನೆ ಬಾಯ್ಬಿಡುತ್ತದೆ ; ಗಂಡುವೇಷ ಧರಿಸಿದೊಡನೆಯೇ ವೈರಿಬಲವು ಪೌರುಷ ಕಳೆದುಕೊಳ್ಳುತ್ತದೆ; ಪಾರ್ಥಿಯು ಗಾಂಡೀವವನ್ನು ಧರಿಸಿ ಟಂಕಾರ ಮಾಡಿದೊಡೆ, ಕುರು ಬಲಕ್ಕೆ ಸಿಡಿಲೇ ಬಡಿದಂತಾಗುತ್ತದೆ; ರಥವನ್ನೇರಿದ ಕೂಡಲೆ ಆತನ ಸಾಹಸವು ಸೂರ್ಮಡಿಯಾಗುತ್ತದೆ! ಬಾಣಪ್ರಯೋಗವೋ–ಉಪಮಾತೀತ! ಒಂದೊಂದಂಬಿನಲ್ಲಿ ಲಕ್ಷಬಲವು ನಾಶವಾಗುತ್ತದೆ! ವೀರರ ಶವಗಳನ್ನು ತುಳಿಯುತ್ತ, ಸುಯೋಧನನು ಹಿಡಿದಿದ್ದ ಗೋವುಗಳು, ಜಿಗಿಯುತ್ತ ಪುಟಿಯುತ್ತ ಓಡುತ್ತವೆ. ಅಳುರ್ವ ಬೇಗೆ ಪೊಲೆಜ್ಜ ನರಶರಾಳಿಗಳು "ಛಿಳಿಲ್ ಛಿಟಿಲ್" ಎಂದು ಸಿಡಿಲಂತೆ ಭಯಂಕರ ಧ್ವನಿ ಮಾಡುತ್ತ ವೈರಿಬಲಕ್ಕೆ ತಾಗಿ ಬಿಸುನೆತ್ತರ ಸುಟ್ಟುರೆಯನ್ನು ನಿರ್ಮಿಸುತ್ತವೆ! ಬೇಗೆ ವೈರಿಚತುರಂಗಬಲವು ಘಾಸಿಯಾಗಿ ತೊತ್ತಳದುಳಿಯುತ್ತದೆ! ಕುಲಬಲದಲ್ಲಿ ನೆಗಳ್ದ ಬೀರರ, ಚೆನ್ನರ, ಸಂದಚೆನ್ನಪೊಂಗರ ತಲೆಗಳು "ತಾಳಿಪಣ್ಣು ಕೆದರಿದಂತೆ"

ಒಡೆದು ಬಿದ್ದಿರುತ್ತವೆ! ರಕ್ತದ ಮಡುವಿನಲ್ಲಿ ಆನೆಗಳ ತಲೆಗಳು ತೇಲುತ್ತವೆ! ಕದನಕ್ಷೇತ್ರದ ಈ ಅಪೂರ್ವಯುದ್ಧದ ದೃಶವು, ನೋಡಲು ಭಯಾನಕವೂ, ಆಶ್ಚರ್ಯದಾಯಕವೂ ಆಗಿರುತ್ತದೆ. ಇದನ್ನು ಸಹಿಸಲಾರದೆ ಕರ್ಣವಿಕರ್ಣರು ಅರ್ಜುನನ ಮೇಲೇರಿಹೋದಾಗ, ಅರ್ಜುನನು ರೌದ್ರಶರಗಳಿಂದ ಕರ್ಣನ ವಕ್ಷಕ್ಕೆ ಹೊಡೆದು ನೋವನ್ನುಂಟುಮಾಡುತ್ತಾನೆ ; ಒಂದು ಬಾಣದಿಂದ ವಿಕರ್ಣನನ್ನು ಕೊಲ್ಲುತ್ತಾನೆ. ಇಂದೇ ಭಾರತಯುದ್ಧ ಮುಗಿಯಿತೆನ್ನುವಂತೆ ಅಮರ ನರೋರಗರು ನುಡಿಯುತ್ತಾರೆ! ತಕ್ಕಿನ ಕುಂಭಸಂಭವ, ನದೀಜ, ಕೃಪ ಪ್ರಮುಖವೀರರು ಒಬ್ಬೊಬ್ಬರೇ ಎದುರಾಗಿ, ಅರ್ಜುನನ ನಿಶಾತಬಾಣಕ್ಕೆ ಜೋಲ್ದು, ಸೆರಗಂಬಗೆದು ಓಡುತ್ತಾರೆ. ಅವರ ಮೇಲೆ ಸಮ್ಮೋಹನಾಸ್ತ್ರವನ್ನೆಚ್ಚು ಅವರ ಧ್ವಜಗಳನ್ನು ಸೆಳೆದುಕೊಳ್ಳುತ್ತಾನೆ. ಅವರೆಲ್ಲ ನಿಸ್ಸಹಾಯಕರಾಗಿ ಕಾಲ್ದೆಗೆಯುತ್ತಾರೆ. ಹೀಗೆ ವೈರಿಬಲವನ್ನು ಗೆದ್ದು ವಿರಾಟಪುರವನ್ನು ಪ್ರವೇಶಿಸುತ್ತಾನೆ. ಸುಮಾರು ಹತ್ತುದಿವಸ ನಡೆದ ಈ ಯುದ್ಧದಲ್ಲಿ ಹೋರಾಡಿದ ಪಾಂಡವ ಪ್ರಮುಖನಾಯಕನೆಂದರೆ ಅರ್ಜುನನೇ. ಇದೊಂದು ಕಿರಿದಾದ ಭಾರತಯುದ್ಧವೇ. ಮುಂದೆ ನಡೆಯಬಹುದಾದ ಯುದ್ಧದ ಪರಿಣಾಮವನ್ನು ಇಂದೇ ಸಾರಿದ ಈ ವಿಜಯಕ್ಕೆ ಕಾರಣ ಪಾರ್ಥನೇ. ದ್ರೌಪದೀ ಸ್ವಯಂವರ, ಸುಭದ್ರಾವಿವಾಹಗಳಿಂದ ರಾಜಕೀಯವಾಗಿ ಕೌರವರೊಡನೆ ಹೋರಾಡಲು ಪಾಂಡವರ ಬಲಕ್ಕೂ ಕಳೆಬಂದಿದೆ. ಈ ಯುದ್ಧದಿಂದಾಗಿ ಅಭಿಮನ್ಯುವಿಗೆ ಉತ್ತರೆಯನ್ನು ಮದುವೆಮಾಡಿಕೊಂಡುದು ಅವರ ರಾಜಕೀಯ ಬಲಕ್ಕೆ ಇನ್ನೂ ಪುಷ್ಟಿನೀಡಿದಂತಾಯಿತು. ಮುಂದಿನ ಯುದ್ಧಕ್ಕೆ ಶ್ರೀಕೃಷ್ಣನ ಸಹಾಯ ಪಡೆಯಲು ಧರ್ಮರಾಜನು ಅರ್ಜುನನನ್ನೇ ದ್ವಾರಾವತಿಗೆ ಕಳಿಸುತ್ತಾನೆ; ಯಾವುದೇ ವ್ಯವಹಾರವನ್ನು ಅರ್ಜುನನು ಸೂಕ್ತರೀತಿಯಲ್ಲಿ ಮಾಡಿಕೊಂಡು ಬರುವನೆಂಬ ಭರವಸೆ ಧರ್ಮರಾಜನಿಗೆ ಇದೆ. ಆದುದರಿಂದ ಅರ್ಜುನನು ಹರಿಯನ್ನು ಒಲಿಸಿಕೊಂಡೇ ಬರುತ್ತಾನೆ. ಇದು ಅವನ ರಾಜಕೀಯಕ್ಕೂ ವ್ಯವಹಾರ ಕೌಶಲಕ್ಕೂ ಸಾಕ್ಷಿಯಾಗಿದೆ

೬

ಕೃಷ್ಣನು, ಸಂಧಾನಕ್ಕೆ ಹೋದ ಕಾಲದಲ್ಲಿ ಅರ್ಜುನನ ಸಾಹಸಕೃತ್ಯಗಳನ್ನು, ದುರ್ಯೋಧನನಿಗೆ, ಹೀಗೆ ವಿವರಿಸಿದ್ದಾನೆ: ೧) ಒಂದೇ ಬಾಣದಿಂದ ವಿಭೀಷಣನನ್ನು ಹೊಡೆದು ಕಪ್ಪಗೊಂಡುದು; ೨) ಖಾಂಡವವನ ದಹನದಲ್ಲಿ ಅಗ್ನಿಗೆ ಹೊಟ್ಟೆತುಂಬ ಉಣಿಸಿದುದು ೩) ಯಮನನ್ನು ಗೆದ್ದು ಪಾರ್ವರ ಪಿಳ್ಳೆಯ ಪ್ರಾಣವನ್ನು ಮರಳಿ ಪಡೆದುದು ೪) ತಪದ ಕಾಲದಲ್ಲಿ ಗಣಿಕೆಯರನ್ನು ಕಣ್ಣೆತ್ತಿನೋಡದುದು ೫) ಮೂಕ ದಾನವನನ್ನು ಒಂದೇ ಅಂಬಿನಲ್ಲಿ ಹೊಡೆದು ಕೆಡೆದುದು ೬) ತ್ರಿಣೇತ್ರನ ಗಂಟಲನ್ನು ಮೆಟ್ಟಿದುದು ೭) ಇಂದ್ರವೈರಿಗಳನ್ನು ಸದೆಬಡಿದುದು ೮) ಚಿತ್ರಾಂಗದನನ್ನು

ಸೋಲಿಸಿದುದು ೯) ಗೋಗ್ರಹಣದ ಯಶಕ್ಕೆ ಕಾರಣನಾದುದು–ಎಂದು ಅರ್ಜುನನ ಸಾಹಸಗಳ ಸರಮಾಲೆಯನ್ನೇ ಮುಂದಿಟ್ಟು ದುರ್ಯೋಧನನನ್ನು ಅಂಜಿಸುತ್ತಾನೆ. ಅಲ್ಲದೆ ಆ ಸಾಹಸ ಪ್ರಸಂಗದಲ್ಲಿ ಸುರಿದ ಸರಳು, ನರಳ್ದ ಭಟರು, ಉರುಳ್ದದಳ, ಹೊರಳಿಬಿಳ್ದ ಸಿಂಧುರಘಟೆ, ಹರಿದ ನೆತ್ತರ ಕಡಲು, ಎಲ್ಲೆಲ್ಲೂ ಕುಣಿದ ರುಂಡಗಳು, ರಣಭೂಮಿಯಲ್ಲಿ ಭಯಾನಕತೆ, ವೈರಿಗಳ ಮನೆಯಲ್ಲಿ ಕೂಗಾಟ–ಇವೇ ಮುಖ್ಯ ವಾಗಿದ್ದುವು. 'ಗಂಡರಾರೂ ಉಳಿಯದಂತೆ ಕೊಂದ ಅರಿಕೇಸರಿಯ ಸಾಹಸ ಸಾಮಾನ್ಯವೆ?' –ಎಂದು ಶ್ರೀಕೃಷ್ಣನೇ ದುರ್ಯೋಧನನ ಪ್ರಚಂಡ ಸಭೆಯಲ್ಲಿ ಗರ್ಜಿಸುತ್ತಾನೆ. ಕೃಷ್ಣಸಂಧಾನವು ವಿಫಲವಾದಮೇಲೆ ಅರ್ಜುನನು, ಯುದ್ಧಕ್ಕೆ ಅಣಿಯಾಗಿರಬೇಕೆಂದು ತಿಳಿಸಲು ಬಂದ ಸಂಜಯನಿಗೆ ಹೀಗೆ ನುಡಿಯುತ್ತಾನೆ. "ಎಮಗೆ ದುರ್ಯೋಧನನು ಕೂಪವನ್ನುಂಟುಮಾಡಿದ್ದಾನೆ; ಯುದ್ಧಮಾಡಿದಲ್ಲದೆ ಎಮ್ಮ ಭೂಮಿಯನ್ನು ಕೊಡನು. ಇನ್ನು ಆರು ತಿಂಗಳೂ ಕಿರಿಚುತ್ತ ಇರಬೇಕೇ ? ರಣವನ್ನು ಬೇಡವೆಂದವರಾರು ? ಇಂದೆ ಬರಲಿ; ಬಂದೊಡೆ ಕುರುಕ್ಷೇತ್ರದಲ್ಲಿ ತಿಳಿಯುತ್ತದೆ"–ಎಂದು ಹೇಳಿ ಭೈರವಪ್ರಭುವಿನಾಕಾರ ಧರಿಸಿ, ವೈರಿಗಳನ್ನು ಸಂಹರಿಸದೆ ಬಿಡೆನೆಂದು ಕುರುಕ್ಷೇತ್ರದ ರಣಭೂಮಿಯತ್ತ ಆಗಮಿಸುತ್ತಾನೆ. 'ನಾರಾಯಣ ಉದಾತ್ತ ನಾರಾಯಣರನ್ನು ರಣದಲ್ಲಿ ಜಯಿಸುವ ಗೆಂಡರುಂ ಒಳರೇ' ಎಂಬುದು ಭೀಷ್ಮರ ಮಾತು, ದುರದಲ್ಲಿ ಭೀಷ್ಮರನ್ನು ಎದುರಿಸುವ ಸಾಮರ್ಥ್ಯ ವುಳ್ಳವರು ಇಬ್ಬರೆ; ಒಬ್ಬನು ಮೊಮ್ಮಗ ಅರ್ಜುನ, ಇನ್ನೊಬ್ಬ ಪರಮಗುರು ಎಂದು ಭೀಷ್ಮರು ಮನದಲ್ಲಿಯೇ ಅರ್ಜುನನ ಸಾಮರ್ಥ್ಯವನ್ನು ಕೊಂಡಾಡುತ್ತಾರೆ.

ಕುರುಕ್ಷೇತ್ರಯುದ್ಧ ಸಾಹಸ :

ಕುರುಕ್ಷೇತ್ರಯುದ್ಧವೇ ಭಾರತಯುದ್ಧ. ಇದು ಸಾಮಾನ್ಯಯುದ್ಧವಲ್ಲ. ಅರ್ಜುನನು ಶುದ್ಧಾಂಗನಾಗಿ ಹಸ್ತ್ಯಶ್ವರಥ, ಅಸ್ತ್ರ ಶಸ್ತ್ರಗಳನ್ನು ಪೂಜಿಸುತ್ತಾನೆ. ರಣಭೂಮಿಯಲ್ಲಿ ಪದಿನೆಂಟುಕೋಟಿ ಸಂಸಪ್ತಕರ ರಥಕ್ಕೆ ಅರ್ಜುನನ ಒಂದೇ ರಥವು ಎದುರಾಗುತ್ತದೆ ; ಪುರುಷೋತ್ತಮಗೆರಗಿ, ರಿಪುಪಕ್ಷ ಕ್ಷಯಕರಮಪ್ಪ, ವಿಶ್ವಕರ್ಮ ನಿರ್ಮಿತಮಪ್ಪ ತನ್ನ ದಿವ್ಯರಥದಲ್ಲಿ, ಶ್ರೀಕೃಷ್ಣನನ್ನು ಏರಲು ಹೇಳಿ, ಮೂರುಸೂಳ್ ಬಲವಂದು, ವಜ್ರಕವಚದೊಟ್ಟು, ತವದೊಣೆಗಳನೆರಡು ದೆಸೆಯೊಳು ಬಿಗಿದು, ಗುರುದ್ರೋಣಂಗೆ ಮನದೊಳು ವಂದಿಸಿ, ರಥವನ್ನೇರಿ, ಗಾಂಡೀವವನ್ನು ಹೆದೆ ಯೇರಿಸಿ ಜೇವೊಡೆದು, ದೇವದತ್ತವನ್ನೂದಿ, ಸಂಸಪ್ತಕಬಲಜಲಧಿಯತ್ತ ಸಾರು ತ್ತಾನೆ ಕುಲಶೈಲ, ಅಂಭೋನಿಧಿ, ದಿಗ್ದಂತಿ, ವಿಶ್ವಧಾತ್ರೀವಳಯ, ಪಾತಾಳ ಮೂರಿ ಸಕಲ ಭುವನ–ಈ ಒಂದೊಂದರಲ್ಲೂ, ಚಿಮ್ಮಲು, ಜೋಲ್ಲಾಡಲು, ತಾಗಲು, ಸಿಡಿದು ಒಡೆಯಲು, ಹಾರಿ ಜೇರೆಂದು ಶಬ್ದಮಾಡಲು ನಿಂತಿದ್ದ ಸೈನ್ಯ ಗಲಭೆಯುಂ, ಅರ್ಜುನನ ಆಗಮನದಿಂದ ನಿಶ್ಶಬ್ದವಾಗುತ್ತದೆ. ಮೊದಲದಿನವೇ ಸಂಸಪ್ತಕ ಬಲದ

ಮೇಲೆ ಜಯ ಸಂಪಾದಿಸುತ್ತಾನೆ. ಧೃಷ್ಟದ್ಯುಮ್ನನು ಸೇನಾಧಿಪತಿಯಾದಮೇಲೆ ಅರ್ಜುನನೂ ಯುದ್ಧಕ್ಕೆ ಹೊರಡುವ ಮುನ್ನ ಆಕಾಶವು "ಅರಿಕೇಸರಿಯ ವಿರೋಧಿ ರುಧಿರಜಲನಿಧಿ" ಯಂತೆ ಕಾಣುತ್ತದೆ. ವೀರರು ಕಿಡಿಗುಟ್ಟಿ ಕಾದುತ್ತಾರೆ ; ಭೀಮನೂ ಶಲ್ಯನನ್ನು ಬೆನ್ನಟ್ಟುತ್ತಾನೆ; ಕೌರವಬಲವೆಲ್ಲ ಆತನ ನೆರವಿಗೆ ಬಂದು ಭೀಷ್ಮರ ಮರೆಹೋಗುತ್ತದೆ. ಆಗ ಭೀಮನತ್ತ ಧಾವಿಸಿದ ಅರ್ಜುನನು, "ಅಂಕದ ಶಲ್ಯ ಸೈಂಧವಕೃಪ ದ್ರೋಣರ್ಕಳು ಸಾಯುಕಂಗಿಡೆ, ತನ್ನೆಚ್ಚ ಶರಾಳಿಗಳ್ ವಿಲಯಕಾಲೋಲ್ಕಂಗಳಂ ತಾಗಿದಾಗಡೆ ತತ್ಸೂತರಥಾಶ್ವಕೇತನಶರವ್ರಾತಂಗಳುಂ ನುರ್ಗಿಕಣ್ಣೆಡೆ" ಹರಿಗನು ಬೆನ್ನಟ್ಟುತ್ತಾನೆ. ಆನೆಮೆಟ್ಟಿದ ಕಳುಂಪೆಯಂತೆ, ಅತಿರಥಮಹಾರಥ ಸಮರಥ ಅರ್ಧರಥರ್ಕಳನ್ನು ದೆಸೆದೆಸೆಗೆ ಚೆದುರಿಸುತ್ತಾನೆ. ಭೀಷ್ಮ ದುರ್ಯೋಧನರಿಬ್ಬರೂ ಅಚ್ಚರಿಪಡುತ್ತಾರೆ. ದುರ್ಯೋಧನನು ಭೀಷ್ಮರಿಗೆ "ನೀವಿಂದು ಹೇಡಿಯಂತಾದಿರಿ ; ಪಾಂಡವರಲ್ಲಿ ಕೂಡಿ ನಣ್ಪನೆ ಬಗೆದಿರಿ ; ಜೋಳದ ಪಾಳಿಯನ್ನು ಬಗೆಯಲಿಲ್ಲ'' ಎಂದಾಗ, ಅರ್ಜುನನ್ನು, "ರಿಪುಧ್ವಜಿನೀಧ್ವಂಸಕ ; ಸಂದ ಕಲಿ ; ಬಿಲ್ಲಾಳ್ ; ಜಗತ್ಖ್ಯಾತನ್."– ಎಂದು ಪ್ರಶಂಸಿಸಿದುದನ್ನು ನೋಡಿದರೆ ಅವನ ಸಾಹಸದ ಮಹಿಮೆ ನಮಗೆ ವಿದಿತವಾಗುತ್ತದೆ. ಅದಕ್ಕನುಗುಣವಾಗಿ ಅರ್ಜುನನೂ ಗರ್ಜಿಸಿ, ವ್ಯಾಪಕವಾಗಿ ಬಾಣಗಳನ್ನು ಎಸೆದಾಗ, ತ್ರಿಪುರಗಳನ್ನು ಹೊತ್ತಿಸಿದ ಶಿವನ ಹಾಗೆ ಆಕಾಶಮಂಡಲವು ಎಲ್ಲೆಲ್ಲೂ ಕಿಡಿಪಡೆಯುತ್ತದೆ. ಒಮ್ಮೆ ಕೋಪದಿಂದ ಭೀಷ್ಮರ ಮೇಲೆಯೇ ಎರಡುಬಾಣಗಳನ್ನು ಪ್ರಯೋಗಿಸಿ ಅವರನ್ನು ಘಾಸಿಗೊಳಿಸುತ್ತಾನೆ. ಕುರುಬಲವೆಲ್ಲ ಭೀಷ್ಮರ ಮರೆಹೊಕ್ಕಾಗ ಅವರ ಬಾಣಗಳನ್ನು ಕಡಿಯಲುಂ ಮುಂದಾದವನು ಅರ್ಜುನನೇ. 'ಜ್ವಳನಪತತ್ರಿಯುಂ ಕಡಿದು, ವಾರುಣಪತತ್ರಿಯಿಂ ಐಂದ್ರ ಬಾಣಮಂ ಕಳೆದು, ಸಮೀರಣಾಸ್ತ್ರದಿಂ ಇದಿರ್ಚಿ, ಭೂಭುಜರೆಲ್ಲರಂ ಭಯಂಗೊಳಿಸಿ, ನಿಶಾತವಜ್ರಶರದಿಂ ಸುರರ್ ಅಂಬರತಳದೊಳ್ ತಗುಳ್ದು ಬಿಚ್ಚಳಿಸೆ, ನದೀಜನುಚ್ಚಳಿಸೆ' ಗುಣಾರ್ಣವನು ಕಾದಾಡುತ್ತಾನೆ. ಅಂದು, ಅರ್ಜುನನ ಹೊಡೆತದಿಂದ ಅಳಿದ ವೈರಿಗಳ ನೆತ್ತರದಿಂದ ಹೊಲಸುನಾರುವ ಮೆಯ್ಯನ್ನು ತೊಳೆದುಕೊಳ್ಳಲು ಹೋಗುವಂತೆ ರವಿ ಮುಳುಗುತ್ತಾನೆ. ಇದೊಂದು ಅರ್ಜುನನ ಸಾಹಸವನ್ನು ವಿವರಿಸಲು ಕವಿ ಬಳಸಿದ ಸೂಕ್ತ ದೃಷ್ಟಾಂತ. ಭೀಷ್ಮರು ಶರಪಂಜರದಲ್ಲಿ ಒರಗಿದಮೇಲೆ ದುರ್ಯೋಧನನಿಗೆ ಅರ್ಜುನನನ್ನು ಗೆಲ್ಲುವ ಚಿಂತೆಯೇ ಆವರಿಸುತ್ತದೆ. ಧರ್ಮನ ಮೇಲೇರಿಹೋದ ದ್ರೋಣರನ್ನು, ಅರ್ಜುನನು ಕಳಕಳರವ ಕೇಳಿ ಸಂಸಪ್ತಕರ ಬಲವನ್ನು ಬಿಟ್ಟು, ಪ್ರಚಂಡ ಪರಾಕ್ರಮದಿಂದ ಕಾದಿ ಅಣ್ಣನನ್ನು ಉಳಿಸುತ್ತಾನೆ. ಶರನಿಕರಗಳು ಕವಿಯಲು ಮಾರ್ತಾಂಡನು ಮುಳುಗುತ್ತಾನೆ. ಶ್ರೀಕೃಷ್ಣನ ಆದೇಶದ ಮೇರೆಗೆ ಭಗದತ್ತನ ಭಯಂಕರ ಸುಪ್ರತೀಕಗಜವನ್ನೂ, ಭಗದತ್ತನ ಶಿರಸ್ಸನ್ನೂ ಕತ್ತರಿಸುತ್ತಾನೆ. ಆ ಆನೆಯನ್ನು ಪಂಪಕವಿಯು 'ಅಂಕದ ಪೊಂಕದ ಸುಪ್ರತೀಕ" ಎಂದಿದ್ದಾನೆ. ಈ ಕೃತಿಯನ್ನು ಕಂಡ ದೇವತೆಗಳು ಪುಷ್ಪ

ವೃಷ್ಟಿ ಯನ್ನು ಸೂಸುತ್ತಾರೆ. "ನರಶರದಿಂದ ಇನ್ನು ಭುವನವುರಿಯದಿರದೆಂದು" ರವಿ ಮುಳುಗುತ್ತಾನೆ. ದ್ರೋಣಾಚಾರ್ಯರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲವೆಂದು ಸುಯೋಧನನ ಆಕ್ಷೇಪ. ಅದಕ್ಕೆ "ಎನಗಲ್ತು ; ಆರ್ಗಂ ಅಸಾಧ್ಯನಲ್ತೆ ವಿಜಯಂ ; ಆತನ ಗೆಲ್ವ ಮಾತಂ ನೀಂ ಬಿಸುಡು" ಎಂಬುದು ಆಚಾರ್ಯರ ಉತ್ತರ. ಧರ್ಮನಂದನನಿಂದ ಹರಿಗನನ್ನು ಬೇರ್ಪಡಿಸಿ ಎದುರಿಸ ಬೇಕೆಂದು, ದುರ್ಯೋಧನನು ಸಂಸಪ್ತಕರ ಬಲಕ್ಕೆ ಆಜ್ಞಾಪಿಸುತ್ತಾನೆ. ದ್ರೋಣರು ಅಂದು ಅಭೇದ್ಯ ಚಕ್ರವ್ಯೂಹವನ್ನು ರಚಿಸಿ, ಗುಹೆಯ ಬಾಗಿಲ್ಗೆ ನಿಂದ ಸಿಂಹದಂತಿರ್ದ ಸಿಂಧುರಾಜನನ್ನು ನೆರವಿಗೆ ಪಡೆಯುತ್ತಾರೆ. ಈ ಸಿಂಹವನ್ನು ಕೆಣಕುವ ಸಾಮರ್ಥ್ಯ ಶರಭಕ್ಕೆ ಮಾತ್ರ. ಈ ವ್ಯೂಹವನ್ನು ಭೇದಿಸುವ ಸಾಮರ್ಥ್ಯ ಅರ್ಜುನಂಗೆ ಮಾತ್ರ ; ನಾಲ್ವರುಂ ಭೇದಿಸಲರಿಯೆವು ಎಂಬುದು ಧರ್ಮನಂದನನ ಅಭಿಪ್ರಾಯ. ಇಲ್ಲಿಯೂ ಅವನ ಸಾಹಸದ ಮಹಿಮೆಯ ಸ್ಪಷ್ಟಕಲ್ಪನೆ ಧರ್ಮನಿಗಿದೆ. ಭೀಷ್ಮರು ಪರಶು ರಾಮನನ್ನಂಜಿಸಿದ ವೀರನೆನಿಸಿದ್ದರೆ, ಅರ್ಜುನನಿಗೆ ದ್ರೋಣರನ್ನು ಎದುರಿಸುವ ಸಾಮರ್ಥ್ಯವಿದೆ. ಆದರೆ ಈ ಕಾರ್ಯವನ್ನು ಆ ವೀರನರನ ಕರು ಅಭಿಮನ್ಯು ಕೈಕೊಳ್ಳು ತ್ತಾನೆ; ಅಭಿಮನ್ಯು ಸಿಂಧುರಾಜನಿಂದ ಹತನಾಗುತ್ತಾನೆ. ಈ ಭಯಂಕರ ವಾರ್ತೆ ಯನ್ನು ತಿಳಿದಾಗ ಅರ್ಜುನನಿಗಾದ ಕೋಪ ಅಷ್ಟಿಷ್ಟಲ್ಲ. ಪಂಪನ ಮಾತುಗಳಲ್ಲಿ ನೋಡಬೇಕು ಆ ಕೋಪಿಷ್ಠನನ್ನು ;

> "ಪ್ರಚಂಡ ಕೋಪ ಪಾವಕ ಪ್ರಶಮಿತ ಶೋಕರಸನುಂ, ಉನ್ನತಲಲಾಟ
> ತಟಘಟಿತ ಭೀಷಣಭ್ರುಕುಟಿಯುಂ, ಕಲ್ಪಾಂತ ದಿನಕರ ದುರ್ನಿರೀಕ್ಷನುಂ,
> ಉತ್ಪಾತ ಮಾರುತನಂತೆ ಸಕಲ ಭೂಭೃತ್ಕಂಪಕಾರಿಯುಂ. ವಿಂಧ್ಯಾ
> ಚಳದಂತೆ ವರ್ಧಮಾನೋತ್ಸೇಧನುಂ, ಅಂಧಕಾರಾತಿಯಂತೆ ಭೈರವಾಕಾರನುಂ"

ಎಂದು. ಜಯದ್ರಥನನ್ನು ಭೂಮಿ – ಪಾತಾಳ – ಸಮುದ್ರದಿಂದಾಚೆಗೆ ಇದ್ದರೂ ಕೊಲ್ಲದೆ ಬಿಡನೆಂದೂ, ಬಿಸಜಭವನಾಗಲಿ, ಮೃಡನಾಗಲಿ,ಅಸುರಾಂತಕ ನಾಗಲಿ ಜಯದ್ರಥನನ್ನು ರಕ್ಷಿಸಲು ಪ್ರಯತ್ನಿಸಿದರೂ ಲೆಕ್ಕಕ್ಕೆ ತಾರದೆ, ಸಿಂಧುರಾಜನ ಬಸಿರನ್ನು ಇಬ್ಭಾಗಮಾಡಿ, ಮಗನನ್ನು ಎತ್ತುವುದಾಗಿ (ಸ್ವರ್ಗಕ್ಕೆ) ಪ್ರತಿಜ್ಞೆ ಮಾಡುತ್ತಾನೆ! ನಾಳಿನದಿನ ಸೂರ್ಯಾಸ್ತದ ಮುನ್ನವೇ ಜಯದ್ರಥನನ್ನು ಕೊಲ್ಲದಿದ್ದರೆ, ಗಾಂಡೀವವನ್ನೇ ಧರಿಸುವುದಿಲ್ಲವೆಂದೂ ಸಾರುತ್ತಾನೆ. ಸೈಂಧವ ನನ್ನು ಪಾಶುಪತಾಸ್ತ್ರದಿಂದಲ್ಲದೆ ಕೊಲಲಾಗದೆಂದು ಅದರ, ಮಂತ್ರವನ್ನು ತಿಳಿದು ಕೊಳ್ಳಲು ಹರಿಯು ಅರ್ಜುನನನ್ನು ಶಿವಪಾದದ ಮೇಲೆ ತಂದಿರಿಸುತ್ತಾನೆ. ಶಿವನಿಂದ ಉಪದೇಶ ಪಡೆದು ಅರ್ಜುನನು ಆಗಮಿಸುತ್ತಾನೆ. ಕೌರವಬಲವೆಲ್ಲ ಜಯ ದ್ರಥನನ್ನು ಮಧ್ಯದಲ್ಲಿರಿಸಿ, ದ್ರೋಣರ ರಕ್ಷೆಯಲ್ಲಿರುತ್ತದೆ. ಸಿಂಧುಕ್ಷಿತಿಪನಿಗೆ ಸಾವು ಸಂಭವಿಸಿದರೆ ಅದರಂತೆಯೇ ತಾನೂ ಮೃತ್ಯುವನ್ನಪ್ಪುವುದಾಗಿ ದ್ರೋಣರೂ

ತಿಳಿಸಿದುದರಿಂದ, ದುರ್ಯೋಧನನು ಭಯಪಡುವುದಿಲ್ಲ. ಅರ್ಜುನನು ಗಾಂಡೀವವನ್ನು ಧರಿಸಿ ಜೇವೊಡೆದಾಗ ಕೈಲಾಸದಿಂದ ಶಿವ, ಬ್ರಹ್ಮಾಂಡದಿಂದ ಬ್ರಹ್ಮ, ಸೂರ್ಯ ಮಾರ್ಗದಿಂದ ಸೂರ್ಯ ಕಿತ್ತೇಳುವಂತೆ ಅದರ ಧ್ವನಿ ಮಾರ್ದನಿಗುಂಡುತ್ತದೆ! ಚಕ್ರವ್ಯೂಹದ ಬಾಗಿಲಲ್ಲಡ್ಡಗಟ್ಟಿ ನಿಂದ ದ್ರೋಣರಿಗೆ ನಮಸ್ಕರಿಸುತ್ತ ಸಾಗುತ್ತಿದ್ದಾಗ, ದ್ರೋಣರು 'ಅಂಜಿಪೋಗದಿರ್' ಎಂದೊಡೆ, "ನಿಮಗಾನಂಜುವುದೆನ್ನ ಬಾಲತನದಿಂದಾದುದು; ನಿಮಗಾನಂಜದೊಡೆ ಯುದ್ಧದೊಳ್ ತ್ರೈಲೋಕ್ಯಮುಂ ಅಂಜಿಸಲ್ ನೆರೆವೆನೇ" ಎನ್ನುತ್ತಾನೆ; ಗುರು ಹರಸುತ್ತಾನೆ. ಅರ್ಜುನನು ದುರ್ಯೋಧನನ ಬಲವನ್ನು ತಾಗುತ್ತಾನೆ. ಅರ್ಜುನನು, ಮಸೆದಂಬುಗಳನ್ನು ಕಾರಮಳೆಯಂತೆ ಕರೆಯುತ್ತಿರೆ, ಕೋಟಿಬಾಣಗಳಿಂದ ವೈರಿ ಸೈನ್ಯವನ್ನು ಸೀಳಲು, ಪಡೆಯು, 'ಚಿತ್ರದ ಪಡೆ' ಯಂತಾಗುತ್ತದೆ! ವೈರಿಪಡೆಯ ಸೈನಿಕರ ಅಡಿ, ತೊಡೆ, ಹೊಕ್ಕುಳು, ಕತ್ತು, ಮೊಳಕಾಲು, ಕೊರಳು, ಬೆರಳು, ಉರ, ಬೆನ್ನು, ಹೊಟ್ಟೆ, ಮುಖ, ಮೂಗು, ಕಟಿ, ಮುಮ್ಮಡ, ಹಿಮ್ಮಡ, ನೊಸಲ್, ಕದಪು ಮೊದಲಾದೆಡೆಗಳಲ್ಲಿ ಬಾಣಗಳು ನಟ್ಟುದಲ್ಲದೆ, ಸೀಳುತ್ತವೆ. ಬಾಹ್ಲಿಕ, ಸೋಮದತ್ತ, ಭೂರಿಶ್ರವರನ್ನು 'ಆನೆಮೆಟ್ಟಿದ ಕಳುಂಪೆ'ಯಂತೆ ದೆಸೆದೆಸೆಗೆ ಚೆದುರಿಸುತ್ತಾನೆ. ಕಾಂಭೋಜ, ಸುದಕ್ಷಿಣ, ಜಯತ್ಸೇನ ಎಂಬವರೇರಿಬರಲು, ಮೂರು ಅಕ್ಷೋಹಿಣೀಪತಿಗಳನ್ನು, ನಾಲ್ಕು ಸಾವಿರ ಮಕುಟವರ್ಧನರನ್ನೊಳಗೊಂಡು ಕೊಂದು, ಶಲ್ಯನ ಉರಕ್ಕೆ ಹೊಡೆದು, ಕೃಪಾಚಾರ್ಯರನ್ನು ವಿರಥರನ್ನಾಗಿ ಮಾಡುತ್ತಾನೆ. ನಡುಹಗಲವರೆಗೆ ಕಾದಿ ಕುದುರೆಗಳನ್ನು ನೀರಿಗೆ ಬಿಟ್ಟು, 'ದೇವಖಾತ' ವೆಂಬ ಮಡುವಿಗೆ ಆಗಮಿಸುತ್ತಾನೆ. ಅಷ್ಟು ಹೊತ್ತಿಗೆ ಅರ್ಜುನನ್ನು ಎದುರಿಸುವ ಗಂಡರೇ ಇಲ್ಲದಂತಹ ಸ್ಥಿತಿ ದುರ್ಯೋಧನನಿಗೆ ಒದಗುತ್ತದೆ! ಆಗ ದುರ್ಯೋಧನನು ದ್ರೋಣರಿಗೆ ಇನ್ನು ಕೆಲವು ಹೊತ್ತು ಅರ್ಜುನನನ್ನು ಎದುರಿಸಬೇಕೆಂದು ಸೂಚಿಸುತ್ತಾನೆ. ಅದಕ್ಕೆ ದ್ರೋಣರು ಅವನಿಗೆ "ನಿನ್ನ ವಕ್ರತೆ, ಗರ್ವ, ಎತ್ತ ಹೋದುವು? ಎನಗೆ ಆತಂ ಅಸಾಧ್ಯಂ; ಅವಧ್ಯಂ" ಎಂದು ತಿಳಿಸಿ, ದುರ್ಯೋಧನನಿಗಾಗಿ ಹೋರಾಡುವುದಾಗಿ ತಿಳಿಸುತ್ತಾರೆ. ರಥವೇರಿ ಹೊರಡುತ್ತಾರೆ; ದುರ್ಯೋಧನನೂ ಆ ರಥವನ್ನೇರುತ್ತಾನೆ. ಆಗ ಭೀಮನು ದುರ್ಯೋಧನನ ಕೈಗಳಿಗೆ ಹೊಡೆದು ಅವನು ಬಿಲ್ಲು ಹಿಡಿಯದಂತೆ ಮಾಡುತ್ತಾನೆ. ಧರ್ಮರಾಜನು ಅರ್ಜುನನ ಸಹಾಯಕ್ಕೆ ಬರುವಾಗ, ಭೂರಿಶ್ರವನು ಅರ್ಜುನನನ್ನು ತಡೆಗಟ್ಟುತ್ತಾನೆ. ಅರ್ಜುನನು ಭೂರಿಶ್ರವನ ರಥವನ್ನು ಕಡಿದು, ಅವನ ಖಡ್ಗವನ್ನು ಕಿತ್ತುಕೊಳ್ಳುತ್ತಾನೆ; ಭೂಭಾಗ ನಭೋವಿಭಾಗಗಳಿಗೆ ಭಯಮಾವರಿಸುವಂತೆ ಕಾದಾಡಿ, ಮಾಂಸಖಂಡಗಳನ್ನು ಚೆಲ್ಲಿ, ನೆತ್ತರ ಸುಟ್ಟರೆಗಳನ್ನು ನಿರ್ಮಿಸುತ್ತಾನೆ. ಹರಿಯುಪದೇಶದಂತೆ ಭೂರಿಶ್ರವನ ಕೈಕತ್ತರಿಸುತ್ತಾನೆ. ಪಾಂಡವ ಬಲವೆಲ್ಲ ಅರ್ಜುನನ ಸಾಹಸವನ್ನು ಮೆಚ್ಚುತ್ತದೆ. ಸಂಧ್ಯಾಕಾಲವಾಗುತ್ತ ಬರುವುದನ್ನೂ ಪ್ರತಿಜ್ಞೆಯನ್ನು

ಮುರಾರಿಯು ಅರ್ಜುನನಿಗೆ ನೆನಪು ಮಾಡಿಕೊಡುತ್ತಾನೆ. ದೇವದತ್ತಧ್ವನಿ ಬರುವುದೊಂದೇ ತಡ; ಅರ್ಜುನನ ರಥವು ಜಯದ್ರಥನತ್ತ ಹರಿಯುತ್ತದೆ. ಆ ದೇವದತ್ತ ಧ್ವನಿಗೆ ಅಜಾಂಡಮಂಡಳವೇ ಪ್ರತಿಧ್ವನಿಸುತ್ತದೆ. ಆ ಚಕ್ರದ ರಭಸವನ್ನು ಪಂಪಕವಿ ವರ್ಣಿಸಿದ ರೀತಿ ಇದು :

> "ಚಟುಳಿತ ಚಕ್ರನೇಮಿ ಪರಿವರ್ತನ ಘಟ್ಟನ ನಿರ್ಭರ
> ಸ್ಫುಟಿತ ಧರಾತಳಂ, ವಿಜಯನುಗ್ರರಥಂ ಪರಿದತ್ತುದಲ್, ಘಟಾ
> ಘಟಿತ ಹಟದ್ವಿರೋಧಿ ರುಧಿರಪ್ಲವ ಲಂಪಟ ಸಂಕಟೋತ್ಕಟಂ
> ಕಟಕಟಘಾತ ನಾಕತಟ ಸಂಕಟ ಸಂಗರ ರಂಗಭೂಮಿಯೊಳ್"

ಇದು ನಮಗೆ ಗ್ರೀಕು. ರೋಮನ್ ಚಕ್ರವರ್ತಿಗಳ ದಂಡಯಾತ್ರೆಯನ್ನೂ ಅವರ ರಥಗಳನ್ನೂ ನೆನಪಿಸುತ್ತದೆ. ಈ ಶಬ್ದ ಕೇಳಿದೊಡನೆಯೇ ಕುರುಧ್ವಜನಿಗೆ ಭಯಜ್ವರ, ಮಹೇಶಜ್ವರವಾವರಿಸುತ್ತವೆ. ಕರ್ಣಶಲ್ಯರೆಲ್ಲ ಗುಂಪಾಗುತ್ತಾರೆ. ಅರ್ಜುನನ ಬತ್ತಳಿಕೆಯಿಂದ ನಿರಂತರ ಹೊರಚಿಮ್ಮುವ ಬಾಣಗಳು, ಚತುರ್ಬಲವನ್ನು 'ಅರೆದು ಸಣ್ಣಿಸುತ್ತವೆ'. 'ಸಿಂಧುರಾಜನು ಇದೇ ಗೆಲ್ಲುವ ಸಮಯ. ವೀರರಿಗೆಂದೇ ಬಾಣವನ್ನೆತ್ತಿದ್ದೇನೆ, ಎದುರಿಸುವ ವೀರರು ಮುಂದೆ ಬನ್ನಿ' ಎಂಬ ಘೋಷದೊಂದಿಗೆ–ಅರ್ಜುನನು, 'ಪ್ರಚಂಡಪ್ರಳಯಘನಘಟಾರಾವದಿಂದಾರ್ದು' ವೈರಿಗಳನ್ನು ಪೊಳಲು ನಿರ್ಧರಿಸುತ್ತಾನೆ. ರಣಗಳ್ತಲೆಯೆ ನಸುಗತ್ತಲೆಯನ್ನುಂಟುಮಾಡುತ್ತದೆ. ಇದನ್ನರಿತ ಕೌರವಬಲವು, ವಿಜಯನು ಸೋತನೆಂಬ ಸಂತಸದಲ್ಲಿರುವಾಗಲೇ ಅರ್ಜುನನು ಅಗ್ನಿಯಾಸ್ತ್ರದಿಂದ ಹೊಡೆಯಲು ಕತ್ತಲೆ ಕಣ್ಮರೆಯಾಗಿ, ಮಹಾರಥರು ಅಂಜುತ್ತಾರೆ; ಸೈಂಧವನು ಅಡಗಿರುವುದು ಒಳಿತಲ್ಲವೆಂದು ಜಗದೇಕಮಲ್ಲನೊಡನೆ ಹೋರಾಟಕ್ಕಿಳಿಯುತ್ತಾನೆ; ಏಳೆಂಟು ನಿಶಿತಾಸ್ತ್ರದಿಂದ ನರನಾರಾಯಣರನ್ನು ಹೊಡೆಯುತ್ತಾನೆ. ಅರ್ಜುನನು ಗದೆಗೊಂಡು ಆತನ ಸೂತ, ಧ್ವಜ, ಹಯ, ರಥ – ನುಚ್ಚುನೂರಾಗುವಂತೆ ಹೊಡೆದು, ಇದೇ ಸಮಯವೆಂದು, ಹರಿಯ ಆದೇಶದ ಮೇರೆಗೆ ಪಾಶುಪತಾಸ್ತ್ರಕ್ಕೆ ಕೈಹಾಕುತ್ತಾನೆ. ಪಾಶುಪತಾಸ್ತ್ರವನ್ನು ತೊಡುವುದೇ ತಡ! ದಿಶೆ ನಡುಗುತ್ತವೆ; ನಭೋಮಂಡಲವು ಸುರುಳಿಯಾಗಿ ಉಡುಗುತ್ತದೆ; ಭೂಮಿ ಬಿರಿಯುತ್ತದೆ; ಶಿವನ ಮನಸ್ಸು ಕಲಂಕಿ ಕದಡುತ್ತದೆ; ಕಡಲಿನಿಂದ ಪರ್ವತಗಳು ಸಿಡಿವಂತೆ, ಕಡಲತಳದ ಮುತ್ತುಗಳು ಕುದಿವ ನೀರಿನಿಂದ ಅಸ್ನದ ಅಗಳು ಸಿಡಿವಂತೆ ಸಿಡಿದು, ರುದ್ರ ಮತ್ತು ಸುರೇಂದ್ರರ ವಿಮಾನದಪಂಕ್ತಿಗಳನ್ನು ತಾಗುತ್ತವೆ! ತ್ರಿಭುವನ ಕ್ಷೋಭೆ ಮತ್ತು ಸಮುದ್ರಕ್ಷೋಭೆಗಳುಂಟಾಗುತ್ತವೆ! ಅರ್ಜುನನು ಇಂತಹ ದಿವ್ಯಾಸ್ತ್ರವನ್ನು ತೆಗೆದುಕೊಂಡು ಬಲವಾಗಿ ಎಳೆದು ಹೊಡೆಯಲು ಸೈಂಧನವನ ಸಿರಸ್ಸು ಕತ್ತರಿಸಿ, ರವಿಯನ್ನು ನುಂಗಲು ಧಾವಿಸುವ ರಾಹುವಿನಂತೆ ಆಕಾಶದತ್ತ ಹಾರುತ್ತದೆ! ಈ ಆಹವದಿಂದ 'ಅಮೋಘ'ನೆಂಬ ಬಿರುದನ್ನು ಪಡೆಯುತ್ತಾನೆ;

ಸುರಸುಂದರಿಯರು ಪುಷ್ಪಾಂಜಲಿ ಸೂಸುತ್ತಾರೆ. ಅಂದಿನ ರಾತ್ರಿಯೂ ಯುದ್ಧ ಮುಂದುವರಿಯುತ್ತದೆ. ಪ್ರಾಯಶಃ ರಾತ್ರಿ ಯುದ್ಧ ಮುಂದುವರಿದುದು ಮಹಾಭಾರತ ಯುದ್ಧದಲ್ಲಿ ಇದೇ ಮೊದಲು; ದೀವಿಗೆಗಳ ಬೆಳಕಿನಲ್ಲಿ ಯುದ್ಧ ಮುಂದುವರಿದಿದೆ. "ಕಿಚ್ಚಿದ್ದ ಲಂಕೆಯನ್ನು ನೋಡುವಂತೆ" ಅಂಬರತಳದೊಳು ದೇವತೆಗಳು ಯುದ್ಧವನ್ನು ನೋಡುತ್ತಾರೆ. ಅರ್ಜುನನ ಕ್ರೂರಬಾಣಗಳಿಗೆ ಅನೇಕರು ಆಹುತಿಯಾಗುತ್ತಾರೆ. ಸಂಸಪ್ತಕಬಲದೆಡೆಗೆ 'ಮನಃಪವನವೇಗ' ದಿಂದ ಧಾವಿಸಿ, ದಂಡಧಾರನ ಗಜವನ್ನು ತರಿದಿಕ್ಕುತ್ತಾನೆ. ನಂತರ ಕರ್ಣನ ಮಗ ವೃಷಸೇನನನ್ನು ಕೊಲ್ಲುತ್ತಾನೆ. ಪಾಶುಪತಾಸ್ತ್ರಕ್ಕೆ ದೊರೆಯಾದ ಅಸ್ತ್ರವು ಬೇರೆಯವರಲ್ಲಿಲ್ಲದುದು, ಅದರ ಪ್ರಯೋಗ, ಸಂಸಪ್ತಕರೊಡನಾದ ಹೋರಾಟ ಇವೇ ಅವನ ಮಹಾಸಾಹಸ, ಪೌರುಷಗಳಿಗೆ ಸಾಕ್ಷಿಯಾಗಿವೆ. ಪ್ರಾಯಶಃ ಇಂದಿನ ಕ್ಷಿಪಣಿಮೊದಲಾದ ಮಾರಕಾಸ್ತ್ರಗಳ ಧ್ವನಿ–ಶಕ್ತಿ–ವೇಗ–ಪರಿಣಾಮ–ಇವೆಲ್ಲವುಗಳನ್ನು ಈ ಅಸ್ತ್ರವು ನಮಗೆ ನೆನಪಿಗೆ ತರುತ್ತದೆ. ಅರ್ಜುನನ ಬಾಣಗಳನ್ನು, ಪಂಪನು, 'ಬೆಳ್ಮಸೆಯುಂಬು, ಸರಿಮೊನೆಯುಂಬು, ಸೋನೆಯಪಾರೆಯುಂಬು, ಕೂರ್ಗಣೆ' ಎಂದು ವರ್ಣಿಸಿದ್ದಾನೆ. ಹದ್ದು ಎರಗಲು ಭೂಮಿಗೆ ಬೀಳುವ ಪಕ್ಷಿಗಳಂತೆ ಅರ್ಜುನನ ಪೊಡೆತಕ್ಕೆ ವೈರಿಸೈನ್ಯವು ತತ್ತರಿಸಿ ಬೀಳುತ್ತದೆ! ಅಳಿದ ರಥಿಕರ, ಮಾವತಿಗರ ರುಧಿರವು "ಕಲ್ವರೆಯೊಳ್ ಭೋರ್ಗರೆವ ತೊರೆಯಂತೆ" ಹರಿಯುತ್ತದೆ! ಅವನ ಕಣೆಗಳು ವೀರರನ್ನು, ಪ್ರತಿಜ್ಞಾಬದ್ಧರನ್ನು ಬಿರುದರನ್ನು ಲೆಕ್ಕಿಸದೆ ಮುರಿದು ಮುಕ್ಕುತ್ತವೆ. ಛೇದಗೊಂಡ ಮೊಳಕಾಲ್ ಎಷ್ಟೋ; ಕತ್ತರಿಸಿದ ಕೈಬೆರಳೆಷ್ಟೋ! ಪರಶುದಾರುಣ ಶರದಿಂದ ಸಂಸಪ್ತಕರ ಬಲದೊಡೆಯನಾದ ಸುಶರ್ಮನನ್ನು, ರಾಮನು, ರಾವಣನನ್ನು ಕೊಲ್ಲುವಂತೆ ಕೊಲ್ಲುತ್ತಾನೆ. ಇವರೆಲ್ಲ ಅಳಿದಮೇಲೆ ಅರ್ಜುನನಿಗೆ ಉಳಿದವನೆಂದರೆ ಕರ್ಣನೊಬ್ಬನೇ. ದೊರೆವೆತ್ತ ಕಾಳಗದ ಸೋಲದ ಗೆಲ್ಲದ ಮಾತು ಕರ್ಣ ಮತ್ತು ಅರ್ಜುನನಲ್ಲಿ ಎಂಬುದು ಶಲ್ಯನ ಅಭಿಪ್ರಾಯ. ಸಂಸಪ್ತಕರ ಬಲವನ್ನು ಅರ್ಜುನನು 'ಪಾದರಸವನ್ನು ಒಡಿದಂತೆ' ಒಡಿಯುತ್ತಾನೆ. ಕೇಸರಿಯಂತೆ, ಕೌರವ ಬಲದಲ್ಲಿ ಹೊಕ್ಕು ಬಾಣಗಳಿಂದ ಅದನ್ನು ನಾಶಪಡಿಸುತ್ತಾನೆ. ಇವನ ಸಾಹಸವನ್ನು ಕಂಡ ಧರ್ಮರಾಜನು ಮತ್ತೆ ಮತ್ತೆ 'ನರನರಾಯಣರಿರ್ವರುಂ ಉರ್ವರೆಯೊಳ್ ಗೆಲ್ವರಾರ್' ಎನ್ನುತ್ತಾನೆ. 'ನಿಮ್ಮಂ ಮುಳಿಯಿಸಿದ ಸುರಾಸುರರೊಳರೇ?' ಎಂದು ಅಣ್ಣ ಧರ್ಮನಿಗೆ ನುಡಿದ ಅರ್ಜುನನು 'ಕರ್ಣನೆಂಬನೆನಗೇವಿರಿಯಂ?' ನಾಳಿನದಿನ "ನೇಸರಿಂದೊಳಗೆ ಆಂ ದಿನಕರಸುತನನಿಕ್ಕಿಬಂದಲ್ಲದೆ ಕಾಣೆಂ ಭವತ್ಪಾದಮಂ"–ಎಂದು ಅಜಾತ ಶತ್ರುಗೆ ಪೊಡವಟ್ಟು, ಇಂದಿನ ದಿನ ಎನ್ನ ಸುರಿಗೆಗಾಳಗವನ್ನೂ, ಕಾಳಗವನ್ನೂ ನೋಡಬೇಕೆಂದು ಭೀಮಸೇನನಿಗೆ ತಿಳಿಸಿ, ಕೌರವಕುಲಕ್ಕೆ ಭಯಜ್ವರಂ ಬರ್ಪಂತೆ ಪವನ ಜವದಿಂ ಬಂದು, ಕರ್ಣನ ರಥಮೆಲ್ಲಿತ್ತು? ಎತ್ತ ಪೋದುದು ಎಂದು ಆರ್ಭಟಿಸುತ್ತಾನೆ. ದೇವದತ್ತವನ್ನು ಊದುತ್ತಾನೆ; ಗಾಂಡೀವವನ್ನು

ಜೇವೊಡೆದಾಗ ಬ್ರಹ್ಮಾಂಡದಿಂದಿತ್ತ ಉದಧಿ, ಕುಲನಗ, ದ್ವೀಪಸಂಘಾತಗಳ ಬತ್ತಿ, ತಳ್ಳಲ್ಪಟ್ಟು ಸುಕ್ಕಿಹೋಗುತ್ತವೆ; ದಿಕ್ಪಾಲಕರ ಎದೆ ನಡುಗುತ್ತದೆ; ದೇವೇಂದ್ರನು ಮಿಡುಕದಂತಾಗುತ್ತಾನೆ; ಅಬ್ಜಗರ್ಭ, ಭೂತನಾಥ, ನಾರದ ಉರಗರಾಜಾದಿಗಳೊಡನೆ ಮಗನ ಯುದ್ಧಕಾಲವನ್ನು ನೋಡಲು ಇಂದ್ರನು ಗಗನ ತಳಕ್ಕೆ ಆಗಮಿಸುತ್ತಾನೆ. ತಂತಮ್ಮ ಮಕ್ಕಳ ಗೆಲವಿಗಾಗಿ, ನಮ್ಮ ನಿಮ್ಮ ಹಾಗೆ, ರವಿ ಮತ್ತು ಇಂದ್ರರ ನಡುವೆ ಕದನವೇ ಆರಂಭವಾಗಿ, ತ್ರಿಪುರಹರನು ಅವರನ್ನು ಕರೆಸಿ ಇಂತು ನುಡಿಯುತ್ತಾನೆ.

> ''ಜಗಳಮಿದೇಂ ದಿನಕರ, ಪೊಣರ್ದುಗೆಲ್ವನೇ ನಿಜತನೂಭವಂ ಹರಿಗನೊಳ್
> ಏಂ ಬಗೆಗೆಟ್ಟಿಯೋ ? ಧುರದೊಳ್ ಅವಂ ಎನಗೆ ಮಿಗಿಲ್ : ನಿನಗೆ ಪಗಲೊಳೇಂ
> ಕಳ್ತಲೆಯೇ ? ಅಳವಿನೊಳ್ ಎನ್ನುಮನಿನಿಸಗ್ಗಳಿಸಿದ ಹರಿಗನೊಳಿದಿರ್ಚಿ
> ಕರ್ಣ ಗೆಲಲುಮ್ಮಳಿಪಂ''

ಎಂದು ಅರ್ಜುನನ ಮಹಾಸಾಮರ್ಥ್ಯದ ಬಗೆಗೆ ಮೊದಲೇ ನಿರ್ಣಯವಿತ್ತು ಕಳಿಸುತ್ತಾನೆ. ಯುದ್ಧ ಭೂಮಿಯಲ್ಲಿ ಕರ್ಣನನ್ನು ಎದುರಿಸಿ, "ಎನಗಂಜಿ ಸುಮ್ಮನಿರುವೆಯೇಕೆ ? ಸೆಟ್ಟಿಯು ಬಳ್ಳಂ ಕಿರಿದು ಎಂಬ ಮಾತನ್ನು ದಿಟ ಮಾಡಿದೆ. ಮಾನಸರೇಂ ನೂರುವರುಷ ಬಾಳುತ್ತಾರೆಯೇ" – ಎಂಬ ಪಸುಗೆಯ (ವಿವೇಕದ) ಮಾತನಾಡುತ್ತಾನೆ. ಕರ್ಣನೂ ಹೇಡಿಯಲ್ಲ. ಅರ್ಜುನನ ಮೇಲೆ ಮಸೆಯಂಬಿನ ಬೆಳ್ಸರಿ ಕವಿಸುತ್ತಾನೆ. ಅರ್ಜುನನೂ ಭೈರವಾಕಾರ ತಾಳಿ, ಶರಹೂಡುವುದು, ಎಳೆವುದು ಮತ್ತ ಬಿಡುವುದು ಇವುಗಳಲ್ಲಿ ಪರಿಣತಿಯನ್ನು ತೋರುತ್ತಾನೆ. ಕರ್ಣನ ಬಾಣಗಳನ್ನು ತುದಿಯಿಂದ ಗರಿವರೆಗೂ ಸೀಳುತ್ತಾನೆ. ಬಾಣಗಳ ಹೊಡೆತಕ್ಕೆ ಕಿಡಿಹಾರುತ್ತದೆ; ಹೊಗೆ ಹೊರಹೊಮ್ಮುತ್ತದೆ! ಆ ಕಿಡಿಯ ಝಳದಲ್ಲಿ ಅಮರಸುಂದರಿಯರು ಮುಖ ಕಾಯಿಸಿಕೊಳ್ಳುತ್ತಾರೆ; ನಾರದನು ಕುಣಿಯುತ್ತಾನೆ. ಶರವರ್ಷದಲ್ಲಿ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣದಾಗುತ್ತದೆ. ಗುಣಾರ್ಣವನ ಅಸ್ತ್ರಗಳು ಕರ್ಣನ ಬಾಣಗಳನ್ನು ಆಕ್ರಮಿಸಿ, ತಳ್ಳಿ, ಪ್ರತಿಯಾಗಿ ಮುಚ್ಚಿ, ತಗುಲಿ, ನುಗ್ಗಿ, ಉಜ್ಜಿ, ಕಿಡಿಯನ್ನುಂಟುಮಾಡಿ, ದವಾನಳವನ್ನು ಸೃಷ್ಟಿಸಿ ದುದರಿಂದ, ಖಾಂಡವದಹನದ ನೆನಪನ್ನುಂಟುಮಾಡಿದುವು. ಕರ್ಣನ ಫಣಿಗಣೆಯಿಂದ ಕಿರೀಟಿಯ ಕಿರೀಟವು ಉರುಳಿದಾಗ ಗಾಂಡೀವಧನ್ವನೂ ಪ್ರತಿಯಾಗಿ ಸನ್ನದ್ಧ ನಾಗುತ್ತಾನೆ ಅರ್ಜುನನ ಬಟ್ಟಿನ ಅಂಬುಗಳ ಬಲ್ಸರಿಯಲ್ಲಿ ಕರ್ಣನು ಮುಳುಗುತ್ತಾನೆ. ಶಲ್ಯನು ಸಾರಥಿತನದಿಂದ ತೊಲಗುತ್ತಾನೆ; ರಥದ ಗಾಲಿಗಳು ನೆಲದೊಳು ಹೂಳು ತ್ತವೆ. ಈ ಸ್ಥಿತಿಯಲ್ಲಿಯೇ ಕರ್ಣನನ್ನು ಕಡಿದೊಟ್ಟಲು ಅರ್ಜುನನಿಗೆ ಮನಸ್ಸು ಬಾರಲಿಲ್ಲ; ಕರ್ಣನಲ್ಲಿ ಕೂರ್ಮೆ ಅಳವಟ್ಟು ಮುರಾರಿಯಲ್ಲಿ ಕಾರಣ ಕೇಳುತ್ತಾನೆ. ಆ ಪ್ರಸಂಗದಲ್ಲಿ ಕೃಷ್ಣನು ಅರ್ಜುನನಿಗೆ ಅಭಿಮನ್ಯು ವಧೆಯನ್ನು ಸ್ಮರಣೆಗೆತಂದು ಕೊಟ್ಟು, ಕರ್ಣನಿಂದ ಧರ್ಮಜನಿಗಿದ್ದ ಭಯವನ್ನೂ ನಿವೇದಿಸಿ ಅವನು ಕೊಲ್ಲದಿದ್ದರೆ

ತಾನೇ ಚಕ್ರದಿಂದ ಕೊಲ್ಲುವುದಾಗಿ ಸಾರಿದಾಗ ಅರ್ಜುನನು 'ವನದಂತಿಯಂತೆ' ಕಾಗೆಯ ಧ್ವಜ (ಕರ್ಣನದು) ವನ್ನು ಕೆಡವಿ, ವೀರದ ಪತಾಕೆಯನ್ನು ನೆಲೆಗೊಳಿಸುತ್ತಾನೆ. ಗೌರೀದೇವಿಯಿಂದ ಪಡೆದ 'ಅಂಜಲಿಕಾಸ್ತ್ರ'ವನ್ನು ಅಭಿಮಂತ್ರಿಸಿ, ಬಿಲ್ಲಿಗೆ ಹೂಡಲು ಉರ್ವರೆ ನಡುಗುತ್ತದೆ; ಅಜಾಂಡವು ಬಿರಿಯುತ್ತದೆ; ಸಪ್ತಸಾಗರಗಳು ಉಡುಗುತ್ತವೆ. ಆ ಬಾಣವನ್ನು ಕಿವಿವರೆಗೆ ಜಗ್ಗಿ ಕರ್ಣನ ಕುತ್ತಿಗೆಗೆ ಗುರಿಯಿಟ್ಟು ಹೊಡೆದಾಗ ಆ ಅಸ್ತ್ರವು "ಮಹೋಗ್ರಪ್ರಳಯಶಿಖಿಶಿಖಾನೀಕಮಂ ವಿಸ್ಫುಲಿಂಗಗಳುಮಂ ಬೀರುತ್ತ, ಔರ್ವಜ್ವಳನರುಚಿಯುಮಂ ತೋರುತ್ತ" ವ್ಯಾಪಿಸುತ್ತ ಬಂದು, ಗಗನ ತಳವೇ ಕೆನ್ನೆತ್ತರಿಂದ ವ್ಯಾಪಿಸುವಂತೆ ಕರ್ಣನ ಶಿರವು ಸಿಡಿಲ್ದು ಬೀಳುತ್ತದೆ. ಕುಲಶೈಲವು ಬೀಳುವಂತೆ ಕರ್ಣನ ಶರೀರವು ನೆಲಕ್ಕೆ ಬೀಳುತ್ತದೆ. ಆ ಬೀಳುವಿಕೆಗೆ ಭೂಮಿ ಕಂಪನಗೊಳ್ಳುತ್ತದೆ. ಅರ್ಜುನನು ಈ ಸಾಹಸವನ್ನು ಕಂಡು ನಾರದರು ನರ್ತನಗೈಯುತ್ತಾರೆ. ದೇವತೆಗಳು ಪುಷ್ಪಾಂಜಲಿ ನೀಡುತ್ತಾರೆ. ಕಿರೀಟಿಯ ಶಾತಶರಂಗಳಿಂದ ಕರ್ಣನು ಸತ್ತನೆಂದು ಸುಯೋಧನನು ದುಃಖಿಸುತ್ತಾನೆ. ಅಸಾಧ್ಯನೋಳ್ ಆ ಗಾಂಡೀವಿಯೊಳ್ ಕರುತ್ತಿರಿವರಾರ್ ಎಂದು ಧೃತರಾಷ್ಟ್ರನು ಉದ್ಗಾರತೆಗೆದು ಮಗನಿಗೆ ಸಂಧಿಗೆ ಸಲಹೆ ಮಾಡುತ್ತಾನೆ. ಕರ್ಣನ ತರುವಾಯ ಉಳಿದ ವೀರನೆಂದರೆ ಅಶ್ವತ್ಥಾಮ. ಅಶ್ವತ್ಥಾಮನ ಶರಗಳು ಪಾರ್ಥನಿಗೆ ನಮಸ್ಕರಿಸಿ ಮರಳಿದವೆಂದಮೇಲೆ ಅವನ ಶರಪರಿಣತಿಯನ್ನು ಕೇಳಬೇಕೆ? ನರಶರಪತಿಯಿಂದ, ನರರಥಚಕ್ರಘಾತದಿಂ ಉರುಳ್ದ ಅರಿಶಿರಗಳೇ ಅವನ ಸಮರ ಸಾಹಸಕ್ಕೆ ಸಾಕ್ಷಿ. ಮಾನವರು ಹೇಳಿದುದಾಯಿತು. ಪ್ರತ್ಯಕ್ಷವಾಗಿ ಹುಟ್ಟಿದಂತೆ ಸನ್ನುಂಡ ಭೂತಗಣವೇ ಅರಿಕೇಸರಿಯೊಡನೆ ವೈರಬೇಡ, ಸಂಧಿಮಾಡಿಕೋ ಎಂದು ದುರ್ಯೋಧನನಿಗೆ ಸಲಹೆಮಾಡುತ್ತವೆ.

ರಣವೆಲ್ಲ ಮುಗಿದಮೇಲೆ ಶ್ರೀಕೃಷ್ಣನು ಧರ್ಮರಾಜನಿಗೆ ಹೀಗೆ ನುಡಿಯುತ್ತಾನೆ: ಕದನ ತ್ರಿಣೇತ್ರನ ಯುದ್ಧವು

ಶಾತ ಶರಾಗ್ನಿ ಭಗ್ನ ಭಟಕೋಟಿ ವಿಭೀಷಣ ಮುಗ್ರ ವೈರಿ ಸಂ
ಘಾತ ಕರೀಂದ್ರ ರುಂದ್ರ ಕಟ ಕೂಟ ವಿನಿಚ್ಯುತ ಭೃಂಗ ಮಾಳಿಕಾ
ಹೀತ ಮದಾಂಬುಕಾ ಪ್ರಕೃತಿ ರಕ್ತ ಜಳಾಸವ ಮತ್ತ ಯೋಗಿನೀ
ವ್ರಾತ ಪರೀತ ಭೂತ ಸದನಂ ಕದನಂ ಕದನ ತ್ರಿಣೇತ್ರನಾ.

"ಸ್ಫುರಿತ ವರೂಥ ಚಕ್ರ ಹತಿಯಿಂ ಧರಣೀ ತಳಮತ್ತ ಮಿತ್ತಮ
ಲ್ದಿರಿಯೆ, ವಿಯತ್ತಳಂ ಬಗೆದು ನೋಳ್ಪೊಡೆ ನಾಡೆ ಪತತ್ಪತತ್ರಿ ಜ
ರ್ಝರಿತಮೆ ದಿಕ್ತಟಂ ರಿಪುನರಾಧಿಪ ರಕ್ತ ಧುನೀ ಪ್ರವಾಹ ಪಿಂ
ಜರಿತಮೆ...

ಎಂದು ಹೇಳಿ ಪ್ರಾಯದ ಪೆಂಪು ತನಗೆ, ಮೀರಿದರಂಕೊಂದಪೆಂಪು, ಶೌರ್ಯದ ಪೆಂಪು, ಶಕ್ರಸೊಡ ನೇರಿದ ಪೆಂಪು ಅರ್ಜುನನಿಗೆ ಎಂದು ಗುಣಾರ್ಣವನ ಸ್ತುತಿ ಮಾಡಿದುದೂ ಅವನ ಸಾಹಸದ ಮಹಿಮೆಗೆ ಸಂದ ಗೌರವವಾಗಿದೆ.

ಹೀಗೆ ಒಟ್ಟಂದದಲ್ಲಿ ಅರ್ಜುನನು ಪಾಂಡವ ಕೌರವರಲ್ಲಿ ಯಾರೂ ತೋರದ ಅನುಪಮ ಸಾಮರ್ಥ್ಯದೋರಿ, ವಂಶಕ್ಕೆ ಅತ್ಯಂತ ಹಿರಿಯ ಶ್ರೇಯಸ್ಸು ತಂದಿದ್ದಾನೆ. ಬಾಲ್ಯಕಾಲದ ದ್ರುಪದ ವಿಜಯದಲ್ಲಿ ಬೇರೂರಿ, ದ್ರೌಪದೀ ಸ್ವಯಂವರದಲ್ಲಿ ಮೊಳತು, ಖಾಂಡವವನದಲ್ಲಿ ಸಸಿಯಾಗಿ, ಪಾಶುಪತಾಸ್ತ್ರ ಪಡೆವ ಸನ್ನಿವೇಶದ ಪ್ರಸಂಗದಲ್ಲಿ ಮರನಾಗಿ, ಗೋಗ್ರಹಣ, ಸಂಸಪ್ತಕ ಬಲವಧೆ, ಸೈಂಧವವಧೆ, ಭಗದತ್ತವಧೆ, ಕರ್ಣವಧೆಯ ಪ್ರಸಂಗಗಳಲ್ಲಿ ಫಲವಾಗಿ, ಅರ್ಜುನನ ಸಾಹಸವು ಹಿರಿಯ ವೃಕ್ಷದಂತೆ ಬೆಳೆದಿದೆ. ಒಮ್ಮೆ ಏಕಾಂಗ ವೀರನಾಗಿ ಹೋರಾಡಿದರೆ ಮತ್ತೊಮ್ಮೆ ಭೀಮ–ಹರಿ ಇವರ ನೆರವಿನೊಂದಿಗೆ ಸೆಣಸಿದ್ದಾನೆ. ಅವನ ರಣವೇಷ, ಬಿಲ್ವಿದ್ಯೆ, ಬಾಣಗಳ ವೇಗ, ಬಾಣಗಳ ಶಕ್ತಿ, ಬಾಣಗಳ ಶಬ್ದಗಳಲ್ಲಿ ಮಾತ್ರವಲ್ಲದೆ ಅವನು ಕೊಂದ ಮಹಾರಥರು, ವೀರರು, ಆನೆ, ಕುದುರೆಗಳ ಸಂಖ್ಯೆಯಲ್ಲಿ, ಅವನ ರಥದ ವೇಗದಲ್ಲಿ, ಪಂಪಕವಿಯು ಸೂಕ್ತಭಾಷೆಯನ್ನು ಬಳಸಿ, ಅವನ ಮಹಾಸಾಹಸದ ಸುಂದರ ಚಿತ್ರಣ ಚಿತ್ರಿಸಿದ್ದಾನೆ. ಅವನ ಸಾಮರ್ಥ್ಯಕ್ಕೆ ಹರನ ಗಂಟಲೊತ್ತಿದುದನ್ನು ಉದಾಹರಣೆ ಹೇಳಿದರೆ ಬೇರಾಗುವುದು ಬೇಡವೆಂದು ಹೇಳಬೇಕಿಲ್ಲ. ಅವನೊಬ್ಬ ಅಸಾಮಾನ್ಯ ಸಾಹಸಿ; ಜೆಟ್ಟಿ, ನರರನ್ನು, ಭೂತಗಳನ್ನೂ, ದೇವತೆಗಳನ್ನೂ ಮೆಚ್ಚಿಸಿ, ನಯ ವಿನಯ, ದಾನ, ಶೀಲ, ವಿಧೇಯತೆ, ವಿದ್ಯಾನೈಪುಣ್ಯಗಳಿಂದ ಉದಾತ್ತ ನಾರಾಯಣ, ಉದಾರ ಮಹೇಶ್ವರ ಎನಿಸಿಕೊಂಡ ಏಕೈಕವೀರ-ಜಗದೇಕಮಲ್ಲ.

'ಚರಗ' ಪದದ ಅರ್ಥ ಮತ್ತು ಆಚರಣೆಯ ಹಿನ್ನೆಲೆ; ಚರಗ ಪದದ ವಿವೇಚನೆ

ವಿ. ಶಿವಾನಂದ

ಕೆಲವು ಶಬ್ದಗಳು ಅವು ಹೊಂದಿರುವ ಕೋಶದ ಅರ್ಥಕ್ಕಿಂತ ಭಿನ್ನವಾಗಿ ಒಮ್ಮೊಮ್ಮೆ ಆಯಾ ಪ್ರಾದೇಶಿಕ, ಜಾನಾಂಗಿಕ, ಸಂಸ್ಕೃತಿ, ನಂಬುಗೆ ಆಚರಣೆಯ ಹಿನ್ನೆಲೆಯಲ್ಲಿ ವಿಶಿಷ್ಟಾರ್ಥ ಪಡೆದಿರುತ್ತದೆ. 'ಚರಗ' ಅಂತಹ ಸಾಂಸ್ಕೃತಿಕ ಮಹತ್ವದ ಶಬ್ದಗಳಲ್ಲೊಂದು. ಅದರ ವ್ಯುತ್ಪತ್ತಿ ಎಲ್ಲಿಯೇ ಸಿಕ್ಕರೂ ಆ ಪದ ಹಲವು ನಿಷ್ಪನ್ನರೂಪಗಳಿಂದಾಗಿ (Derivations) ಮೂಲದ ಅರ್ಥದಲ್ಲಿ ವ್ಯತ್ಯಾಸ ಗಳನ್ನು ಪಡೆದಿದೆ. ಇಲ್ಲಿ ಅದರ ಮೂಲರೂಪ ಹಾಗೂ ಈ ಶಬ್ದದ ಹಿನ್ನೆಲೆ ಯಾಗಿ ಬೆಳೆದುಬಂದ ಒಂದು ಆಚರಣೆಯ ಮೇಲೆ ಬೆಳಕು ಬೀರುವ ಪ್ರಯತ್ನವಿದೆ.

'ಚರುಗ' ~ ಚೆರಗ ~ ಚರಗ/ಸರಗ ಎಂಬಿವು ಇದರ ಆಡು ಮಾತಿನ ರೂಪ ಗಳು. ಪ್ರಾದೇಶಿಕ ಆವರಣದಲ್ಲಿ ಹೇಳುವುದಾದರೆ, ಈ ಶಬ್ದ ಈಗ ತುಂಬ ಪ್ರಚಲಿತವಾಗಿರುವುದು, ಉತ್ತರಕರ್ನಾಟಕದ ಹಳ್ಳಿಗಳಲ್ಲಿ. ಅಲ್ಲಿ ಒಕ್ಕಲಿಗರು ಆಚರಿಸುವ ಒಂದು ಹಬ್ಬ ಎಳ್ಳಮಾಸೆ. ಆ ದಿನ[1] ವಿಶಿಷ್ಟವಾದ ಬುತ್ತಿಯನ್ನೊಯ್ದು ಹೊಲದಲ್ಲಿ 'ಪಾಂಡವರಿ'ಗೆ ಪೂಜೆ ಸಲ್ಲಿಸಿ ಆ ಬುತ್ತಿಯ ಅನ್ನವನ್ನು 'ಅಗಲು' (=ನೈವೇದ್ಯ) ಮಾಡಿ, ಅಲ್ಲಿ ಬೆಳೆದುನಿಂತ ಪೈರಿಗೆ ಪ್ರೋಕ್ಷಿಸುವುದನ್ನು ಚೆರಗ ಚೆಲ್ಲುವುದು ಎಂದು ಹೇಳುತ್ತಾರೆ. ಹೊಲದ ತುಂಬೆಲ್ಲ ಸಂಚರಿಸುತ್ತ ಚೆರಗ ಚೆಲ್ಲು ವುದರಿಂದ 'ಚರ್' (ಧಾ) ಎಂದರೆ ನಡೆದಾಡು'[2] ಇದರಿಂದ ಚರಗ ಪದದ ವ್ಯುತ್ಪತ್ತಿ

---

1. ಕಲಬುರ್ಗಿ ಜಿಲ್ಲೆಯಲ್ಲಿ 'ಚರಗ' ಚೆಲ್ಲುವದು ಎಳ್ಳಮಾವಾಸ್ಯೆಯ ದಿನವೇ. ಆದರೆ ಧಾರವಾಡ, ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ಈ ಸಂಪ್ರದಾಯ ಕೆಲವು ಬೇರೆ ಸಂದರ್ಭಗಳಲ್ಲೂ ನಡೆಯುತ್ತದೆ.

2. ಚರ್ > ಚರನ್ತಿ, ಚರಕ, ಚರಪಿ, ಚರಕಾರ ಈ ಪದಗಳಿಗೆ Move, go, wonder, spread, extend, move in different directions ; A practical San. Dic. by A.A. Macdonell p. 92. ಚರ್ಯೆತ್ಯಾನಿ – ಚರ್ಯಾ ಇದರ ತದ್ಭವ 'ಚರಿಗೆ' ಎಂಬಲ್ಲಿ ಇದೊಂದು ಕರ್ಮ, ವ್ರತ. ಜೈನ ಮುನಿಗಳ ಭೋಜನಕ್ಕೂ ಈ ಹೆಸರಿದೆ. 'ನಿರ್ಮಳ ಚರಿತಂ' 'ಚರಿಗೆ' ವೊಕ್ಕನರಸನ ಬೀಡಂ' (ಆ. ಪು. 5–10)

ಸಾಧ್ಯವಾಗಿ ತೋರಿದರೂ, ಇದು ಇಲ್ಲಿ ನಡೆಯುವ ಆಚರಣೆಯ ಹಿನ್ನೆಲೆಯಿಂದ ಸಮರ್ಪಕವೆನಿಸುವುದಿಲ್ಲ. ಒಕ್ಕಲಿಗರು ಭೂಮೀಪುತ್ರರು, ಭೂಮಿತಾಯಿಗೆ ಅನ್ನ ಸಂತರ್ಪಣೆಯಾಗಬೇಕು. ಆದರಿಂದ ಹೆಚ್ಚಿನ ಫಲವತ್ತತೆಯನ್ನು ತಾವು ಪಡೆಯ ಬೇಕೆಂಬುದರ ಉದ್ದೇಶದಿಂದಲೇ ಅವರು ಬೆಳೆಗೆ ಅನ್ನ ಚೆಲ್ಲುವರು. ಆ ಅನ್ನವನ್ನೇ ಅವರಿಲ್ಲಿ 'ಚರಗ' ಎನ್ನುವುದು. ಚರಗ ಚೆಲ್ಲುವದು ಎಳ್ಳಮಾಸೆಯ ಹಬ್ಬದ ಪ್ರಮುಖ ಆಕರ್ಷಣೆ. ಹೀಗಿರುವಾಗ 'ಚರಗ' ಪದಕ್ಕೆ ಬೇರೊಂದು ನೆಲೆಯಿರ ಬೇಕು ಎನ್ನಿಸುತ್ತದೆ.

ಸಂಸ್ಕೃತದಲ್ಲಿ 'ಚರು' ಪದವಿದೆ. ಇದಕ್ಕೆ a caldron, a pan ಕುಂಭ, ಪಾತ್ರೆ ಎಂಬರ್ಥಗಳು ಸಾಮಾನ್ಯವಾಗಿದ್ದರೂ[3] ಹಿಂದೆ ಅದು ವಿಶಿಷ್ಟವಾದ ಪಾತ್ರೆಯೇ ಎನ್ನಿಸಿತ್ತು. 'caru' a kind of vessel in which a particular oblation is prepared. 'yagna' an oblation of rice, barley and pulse boild with butter and Milk presentation of gods or Mans.[4] ದೇವತಾವರ್ಗಕ್ಕೆ ಗೋಧಿ, ಬೆಳೆ ಹಾಗೂ ಅನ್ನವನ್ನು ಹಾಲು ಮೊಸರಿ ನಲ್ಲಿ ಕೂಡಿಸಿ ಬೇಯಿಸಿದ ಪಾತ್ರೆಗೆ 'ಚರು' ಎಂಬುದು ಇಲ್ಲಿನ ಅರ್ಥ. ಒಟ್ಟಿನಲ್ಲಿ ಹವಿಸ್ಸು, ಹವಿಸ್ಸಿಡುವ ಪಾತ್ರೆಗೆ 'ಚರು'ವೆಂದಿರುವುದು ಸಂಸ್ಕೃತದ ಕೋಶಗಳಲ್ಲೂ ಇತರ ದೇಶ-ಭಾಷೆಯ ಕೋಶಗಳಲ್ಲೂ ಕಂಡುಬರುತ್ತದೆ.[5]

ಸಂಸ್ಕೃತ ಮೂಲದ ಈ 'ಚರು' ಪದ ಬೇರೆ ಕಡೆಗಳಲ್ಲಿ ಕೆಲವೊಂದು ರೂಪಾಂತರಗಳನ್ನು ಪಡೆದು ನೆಲೆಸುವಾಗ ಅದರ ಮೂಲದ ಅರ್ಥವೂ ಸಹ ಪರಿವರ್ತನೆಗೊಂಡಿದೆ. ಅರ್ಥ ವ್ಯತ್ಯಾಸವುಂಟಾಗುವುದರ ಅನೇಕ ಕಾರಣ ಗಳನ್ನು ನಾವು ಆಧುನಿಕ ಅರ್ಥ ವಿಜ್ಞಾನದ (semantics) ಅಭ್ಯಾಸದಿಂದ

---

3. ಕಿಟೆಲ್ ಕೋಶ ಪು. 633 ಅನ್ನವನ್ನು ಪಾತ್ರೆಯಲ್ಲಿ ಬೇಯಿಸುವಾಗ ಅಲ್ಲಿಯೇ ಅದರ ನೀರು ಇಂಗುವಂತೆ ತಯಾರಿಸುವರು. ಇದಕ್ಕೆ 'ಚರುವಿನ ಅನ್ನ'ವೆಂದು ಹೇಳುವ ವಾಡಿಕೆ ಕಾರವಾರ ಜಿಲ್ಲೆಯ ಬ್ರಾಹ್ಮಣರಲ್ಲಿದೆ. (ಮಿತ್ರ ಜಿ. ಎಂ. ಹೆಗಡೆ ತಿಳಿಸಿದುದು) ಇದನ್ನು ಭೂತಗಳಿಗೆ ನೈವೇದ್ಯ ಮಾಡುವುದೂ ಉಂಟು. ಆದರೆ ಆ ಪಾತ್ರೆಗೆ 'ಚರು'ವೆಂಬ ಅರ್ಥವಿದ್ದು ಕ್ರಮೇಣ ಅನ್ನಕ್ಕೆ ಆ ಹೆಸರು ಬಂದಿರಬೇಕು.

4. San-Eng Dic by Sir Monier Williams : pp. 390

5. an oblation of Rice offered to Gods through sacrificial fire-Tulu English Dic p. 93 M. M. Bhat and Shankar Kedilaya.

ಕಂಡರಿಯುಬಹುದಾಗಿದೆ.[6] ತಮಿಳಿನಲ್ಲಿ 'ಸೋರ್' ಎಂಬಲ್ಲಿ ಈಗ ಇದಕ್ಕೆ cooked rice ಎಂಬ ಸಾಮಾನ್ಯಾರ್ಥವಿದೆ.[7]

ಕನ್ನಡದ 'ಚರಗ' ಪದದ ಮೂಲ ಈ 'ಚರು'ವಿನಲ್ಲಿ ಧ್ವನಿಸುತ್ತದೆ. ಸಂಸ್ಕೃತ 'ಚರುಕ' ಪದದ ತದ್ಭವವೇ 'ಸರುಗ'ವೆಂಬುದಾಗಿ ಕಿಟೆಲ್ ಕೋಶದಲ್ಲಿ ಹೇಳಿದ್ದರೂ,[8] ಒಂದರಲ್ಲಿ ವಿಶೇಷವಾಗಿ ವರ್ತಿಸುವ ಕಡೆಗಳಲ್ಲಿ 'ತ' ಪ್ರತ್ಯಯ ಕ್ರಿಯಾ ಇಲ್ಲವೆ ನಾಮ ಪ್ರಕೃತಿಗಳಿಗೆ ಹತ್ತಿ ತದ್ಧಿತ ನಾಮಪದಗಳು ಕನ್ನಡದಲ್ಲಿ ಸಾಧ್ಯವಾಗುತ್ತವೆ. ಚರು+ಗ=ಚರಗ ಬಲಿ ಅಥವ ಅರ್ಪಣೆಯಾಗುವ ಅನ್ನ. ಸ/ಚಗಳ ಸ್ವಚ್ಛಂದ ಪರಿವರ್ತನೆಯಿಂದ (free variation) ಚರುಗ/ಸರುಗ ಪದಗಳೆರಡೂ ಇಂದು ಬಳಕೆಯಲ್ಲಿವೆ. ಚರ+ಪು=ಚರಪು (ಅರ್ಪಣೆ ಭಾವದ ಅನ್ನ–ತದ್ಧಿತ ಭಾವನಾಮ)ವೆಂಬ ಪದವೂ ಹಿಂದೆ ಪ್ರಯೋಗದಲ್ಲಿತ್ತು. ಇಲ್ಲಿನ ಚರಗ, ಸರಗ ಇವೆರಡರಲ್ಲಿ 'ಸರಗ' ಪದ ಹೆಚ್ಚು ಪ್ರಾಚೀನ. ಈಗ 'ಸರಗ' ಪದ ಬಳಕೆಯಲ್ಲಿ ಚರುಗವೆಂದಿದ್ದರೂ ಮೂಲದ ಅರ್ಥ ಉಳಿದಿಲ್ಲ.[9] 'ಚರಗ' ಸಂಸ್ಕೃತದಿಂದ ನೇರವಾಗಿ ಕನ್ನಡಕ್ಕೆ ಬಂದಿಲ್ಲ. ಮರಾಠಿಯಲ್ಲಿ 'ಚರಗ' ಪದ ಹೆಚ್ಚು ಪ್ರಚುರವಾಗಿದ್ದು. ಅಲ್ಲಿರುವ ಅರ್ಥವೇ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಉಳಿದುಬಂದಿದೆ. ಇಲ್ಲಿ ಇದಕ್ಕಿರುವ ಅರ್ಥ ಹೊಲದ ಬೆಳೆಗೆ ಅರ್ಪಿಸುವ ಅನ್ನವೆಂದೇ. ಇದರಿಂದ ಈ ರೂಪಗಳಲ್ಲಿ ಒಂದೊಂದು ಅರ್ಥದ ಅವಾಂತರ ಅವಸ್ಥೆಗಳನ್ನು ನಾವೀಗ ಕಾಣುತ್ತೇವೆ*. ಇಲ್ಲಿ ಅವನ್ನು ಪ್ರಾಚೀನ ಕಾವ್ಯ ಶಾಸನಗಳ ಪ್ರಯೋಗದ ಮೇಲಿಂದ ವಿಶ್ಲೇಷಿಸಿದೆ.

---

6. ಬ್ರಿಯೆಲ್‌ನು ತನ್ನ Semantics (London 1900) ಗ್ರಂಥದಲ್ಲಿ ಕೊಡುವ ಕಾರಣಗಳು (1) extension (2) Restriction (3) elevation (4) Degeneration (5) Transfer (6) euphemnism (7) Folk etymology etc.

7. Tamil lexicon p. 1321 (ಪಿಂಗಳ ನಿಘಂಟುವಿನ ಪ್ರಕಾರ)

8. ಕಿಟೆಲ್ ಕೋಶ ಪು. 32

9. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ನಿಘಂಟುವಿನಲ್ಲಿ ಈ ಪದದ ಅರ್ಥ ವ್ಯತ್ಯಾಸವನ್ನು ವಿದ್ವಾಂಸರು ಸೂಕ್ಷ್ಮವಾಗಿ ಗಮನಿಸಿಲ್ಲ. (ಸಂಪುಟ ಮೂರು) ಹಿಂದಿನ ಕಾವ್ಯ–ಶಾಸನ ಪ್ರಯೋಗಗಳನ್ನೂ, ಇಂದಿನ ಪ್ರಾದೇಶಿಕ ಶಬ್ದ ರೂಪಗಳನ್ನು ಒಟ್ಟಿಗೆ ಕಲೆಹಾಕುವಾಗ ಅವುಗಳ ಅರ್ಥ ಇಲ್ಲಿ ಕಲಸುಮೇಲೋಗರವಾದಂತಿದೆ.

* ಕಿಟೆಲ್‌ರು ಈ ಪದ S. Mhr ದಲ್ಲಿರುವುದನ್ನು ತಿಳಿಸಿರುವುದಲ್ಲದೆ, ಗಂಗಾಧರ ಮಡಿವಾಳೇಶ್ವರರ Small canerese voleleytory (?–ಸಂ.) (1869 ಬೆಳಗಾಂ) ಯಿಂದ ಈ ಶಬ್ದವನ್ನು ಸಂಗ್ರಹಿಸಿದ್ದಾರೆ.

I ಚರು : 'ಬಲಿಯನ್ನ' ಎಂಬ ಆರ್ಥದ ಪ್ರಯೋಗಗಳು

'ಬಂಡಿತೀವಿದ ಚರಗಂ (ಪಾಠಾಂ. ಚರುಗಳ್)ವೆಸು ತನ್ನ ಮಗನಪ್ಪ ಮಂಡ ಕೌಶಿಕನಂ ಕುಂಭಂಗಾಹಾರ ನಿಮಿತ್ತಮಟ್ಟಿದೊಡೆ' (ನೋಡಿ. ಕ.ನಿ. ಸಂ. 3)

II ಸರಗ: ಗುರು, ಮುನಿ, ದೈವಕ್ಕರ್ಪಿಸುವ ನೈವೇದ್ಯ ಅಥವ ವ್ರುಪ್ಪಾನ್ನ ಎಂಬ ಅರ್ಥದ ಪ್ರಯೋಗಗಳು

(i) 'ಗಂಧ ಧೂಪದೀಪಕ್ಕಂ, ಸರುಗಿಗಂ ಕುಡುವ ಭೂಮಿ' (EI Vol. XVII Pp. 122 AD. 1047)

(ii) ಅನರ್ಘ್ಯಮಣಿವಿಷ್ಟರದೊಳ್ ಕುಳ್ಳಿರ್ದು ಸರಗಮನುಣೆ (ಆದಿ. ಪು. 13–39)

(iii) 'ಜಿನಪದಯುಗಳಕ್ಕೆತ್ತಿ ನೈವೇದ್ಯಮಂ ಜಾತ್ರೆಗೆ ಬಂದರ್ ಮತ್ತೆ ತೋರ್ಪರ್ಚ (ಪಾಠಾಂ. ಸ)ರುಗ' (ಸಮಯ ಪರೀಕ್ಷೆ 2–69)

(iv) ಮತ್ತಂ ಶುಚಿಭೂರ್ತರಾಗಿ ಚಕ್ಕುಲಿಯಂತೆ ಓಟ್ಟಿಸಿಂ ಬಟ್ಟಿತುವಾಗಿ ಬರೆದವಱ ಮೇಲೆ ಸರುಗದ ಮುದ್ದೆಗಳನ್ನಿಟ್ಟು' (ಪದಾರ್ಥಸಾರ ಪು. 465)

(v) 'ಪರಕೆನೀಯದೆ ಮಾಸಲಸರುಗಮನಿಡದೆ' (ಅದೇ ಪು. 465)

(vi) ಗಂಧಮಾಲ್ಯಾದಿಗಳನರ್ಚಿಸಿರ್ದ ಸಿಂಹಾಸನವನೇಱಿ ನಾಮ್ ಸರುಗನುಣೆ ಕಂಡು (ಚಾವುಂಡರಾಯ ಪುರಾಣ 75–75)

ಮೇಲಿನ ಪ್ರಯೋಗಗಳಲ್ಲಿ 'ಚರಗ' ಪದದಲ್ಲಿ 'ಸ' ಪಾಠಾಂತರವೆಂದು ಸಂಪಾದಕರು ಗುರುತಿಸಿದ್ದರೂ, ಅದುವೇ ಮೂಲ ಪಾಠ. ಸ>ಚ ಧ್ವನಿ ವ್ಯತ್ಯಾಸ ಹಸ್ತಪ್ರತಿಗಳಲ್ಲಿ ಅನಂತರದ ಬೆಳವಣಿಗೆಯೆಂದು ನಮಗೆ ಕಾಣುತ್ತದೆ. ಇದರಿಂದ ಸಂಸ್ಕೃತ–ಕನ್ನಡ ಭಾಷೆಗಳಲ್ಲಿನ 'ಚರಗ' ಪದ ಪ್ರಯೋಗಕ್ಕೆ ಸಂಬಂಧಿಸಿದಂತೆ ಒಟ್ಟು 5 ವಿಧವಾದ ಅರ್ಥಪ್ರಭೇದಗಳನ್ನು ಇಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ಸಂಸ್ಕೃತ I-ಚರು-ಹವಿಸ್ಸು ; ಹವಿಸ್ಸಿಡುವ ಪಾತ್ರೆ, ದೇವತೆ, ಇಲ್ಲವೆ ಪಿತೃ ವರ್ಗಕ್ಕೆ ಮಾಡುವ ಯಜ್ಞದ ಅನ್ನ.

2 ಚರುಕ-ಬಲಿಯನ್ನ ಅಥವ ಬೇಯಿಸಿಟ್ಟ ಅನ್ನ

ಕನ್ನಡ (ಗ್ರಂಥಸ್ಥ) 3–ಸರುಗ ('ಚರುಕ'ದ ತದ್ಭವ) (?) ಗುರು, ಮುನಿ, ದೈವಕ್ಕಿರುವ ನೈವೇದ್ಯ ಅಥವಾ ವ್ರುಪ್ಪಾನ್ನ.

ಮರಾಠಿ 4 ಚರಗ (<ಚೊರವಾ) ಹೊಲದ ಬೆಳೆಗೆ ಚೆಲ್ಲುವ ಅಲಗು (=ನೈವೇದ್ಯ) ಅನ್ನ.

ಕನ್ನಡ (ಪ್ರಾದೇಶಿಕ) 5. ಸರಗ/ಚರಗ ಹೊಲದ ಬೆಳೆಗೆ ಅರ್ಪಿಸುವ ಅನ್ನ.

ಈಗ ಆಡು ನುಡಿಯಲ್ಲಿ ಪ್ರಯೋಗವಿರುವಂತೆ ಚರಗ/ಸರಗ ಎಂಬ ರೂಪಗಳು ಮಾತ್ರ ಉತ್ತರ ಕರ್ನಾಟಕದಲ್ಲಿ ಹೊಲಕ್ಕೆ ಚೆಲ್ಲುವ ನೈವೇದ್ಯದ ಅನ್ನವೆಂಬರ್ಥದಲ್ಲಿ ಮಾತ್ರ ರೂಢವಾಗಿವೆ.

ಚರಗ ಸಂಪ್ರದಾಯ :

ಚರು, ಚರಕ>ಚರಗವೆಂಬಲ್ಲಿನ ಯಜ್ಞದ ಅನ್ನವೆಂಬರ್ಥ ಈಗ ಕಣ್ಮರೆಯಾಗಿದೆ. ಆದರೆ ಹೊಲಗಳಿಗೆ ರೈತರು ಆಹುತಿಯಾಗಿ ಅರ್ಪಿಸುವ ಅನ್ನವೆಂಬರ್ಥ ಯಾವಾಗ ಬಂತೆಂದು ಹೇಳುವುದು ಕಷ್ಟ. ಈ ಆಚರಣೆ ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿರಬೇಕು. ಭೂಮಿಯ ಫಲವತ್ತತೆ (Fertility) ಕುರಿತ ನಂಬುಗೆ, ಅದಕ್ಕೆ ಸಂಬಂಧಿಸಿದ ದೇವತಾರಾಧನೆಯ ಸಂಪ್ರದಾಯದೊಂದಿಗೆ ಈ ಆಚರಣೆಯೂ ಬೆಳೆದು ಬಂದಿದೆ* ಒಂದೊಂದು ಪ್ರದೇಶದಲ್ಲಿ ಇದು ಬೇರೆ ಬೇರೆ ರೂಪಗಳಲ್ಲಿ ಪ್ರಚಲಿತದಲ್ಲಿತ್ತು.

ಹಿಂದೆ ಮನುಷ್ಯರನ್ನೇ ಆಹುತಿಯಾಗಿ ಕೊಡುತ್ತಿದ್ದ ಸಂಪ್ರದಾಯ ಒರಿಸ್ಸಾದ 'ಖೊಂಡ' ಜನಾಂಗದಲ್ಲಿ ಕಳೆದ ಶತಮಾನದವರೆಗೂ ಇತ್ತು[10] ಈ ಬಗೆಗೆ ದೊರಕುವ ವಿವರಣೆ ಇಂತಿದೆ.

'Meriah Sacrifice Post' ('ಮೆರಿಹ' ಗ್ರಾಮ ದೇವತೆಯ ಆಹುತಿ ಸ್ಥಂಭ) The Khonds of Orissa used to Sacrifice human beings to their earth Godesses a centuty ago for good crops. This exhibit from Gangam Dist. is a vertical Post which revolves a horizontal wooden piece which is just like an elephant trunk in

---

* ಜನಪದದಲ್ಲಿ ಪ್ರಚಲಿತವಿದ್ದ ಹಲವು ದೈವಿಕ ನಂಬುಗೆಗಳ ಉಲ್ಲೇಖ ಪ್ರಾಚೀನ ಕಾವ್ಯಗಳಲ್ಲಿದೆ. 'ಸಾವಿರ ಖಂಡುಗಮಂ ಬೆಳೆ । ದಾವೊಕ್ಕಲ ಮಗನದೊಂದು ಕಂಬಮನೊಯ್ದು । ಟ್ಟಾವೂರಿನ ಬಾದುಂಬೆಗೆ । ಸಾವಿರಮಂ ಬೆಳೆದೆವೆಂದು ನುಡಿವರ್ ಮೂಢರ್ (ಸಮಯ ಪರೀಕ್ಷೆ ಆಶ್ವಾಸ 9).

10 ಮದ್ರಾಸ್ ಮ್ಯೂಸಿಯಂನಲ್ಲಿ ಈಗ ಈ ಆಹುತಿ ಸ್ಥಂಭವಿದೆ. ಒರಿಸ್ಸಾದ ಖೊಂಡರು ದ್ರಾವಿಡ ಜನಾಂಗ. (Ling-Sur-Indi Vol. IV p.457– G.A. Grierson.) ಎತ್ತಿನ ಕೊಂಬುಗಳನ್ನು ತಲೆಗೆ ಕಟ್ಟಿಕೊಂಡು ನೃತ್ಯಮಾಡುವರು. ಇದು ಕೃಷಿಯನ್ನೇ ಅವಲಂಬಿಸಿದ ದ್ರಾವಿಡ ಜನಾಂಗಗಳಲ್ಲೊಂದು. ನೋಡಿ 'Khonda or Ku:bi A Dravidian Language. by Dr. Bh. Krishna Murti-Pub: Tribal Cultural Research and Training Institute : Hyd. (1969)

shape. The victim of 'Meriah' is tied to the trunk portion of the elephant like horizantal piece and it revolves around the up right Post. The Khonds cut away the bits of his flesh and bury them in their fields.

'ಮೆರಿಹ' ದೇವತೆಗೆ ಅಹುತಿಗೊಡಬೇಕಾದ ಮನುಷ್ಯನನ್ನು ಆನೆಯ ಸೊಂಡಿಲಾಕಾರದ ಕಟ್ಟಿಗೆ ತುದಿಗೆಕಟ್ಟಿ ಸುತ್ತಲೂ ತಿರುಗಿಸುವುದು; ಅದು ತಿರುಗಿದಂತೆ ಅವನನ್ನು ಕಡಿದು ಆತನ ರಕ್ತಮಾಂಸವನ್ನೊಯ್ದು ಹೊಲದಲ್ಲಿ ಬೆಳೆ ಸಮೃದ್ಧಿಗೆಂದು ಮಣ್ಣಿನಲ್ಲಿ 'ಖೋಂಡ'ರು ಹೂಳುತ್ತಿದ್ದರು.

ಈ ಆಚರಣೆ ಆ ಬಳಿಕ ಪ್ರಾಣಿಬಲಿಗೆ ಬಂದಿತು ಇದಕ್ಕೆ ಕರ್ನಾಟಕದಲ್ಲಿ ಕೆಲವು ಕೀಳು ಜಾತಿಯವರು ಆಚರಿಸುವ ಪದ್ಧತಿಗಳು ನಮಗೆ ಈಗಲೂ ಕಾಣ ದೊರೆಯುತ್ತವೆ. ಕಿಟ್ಟೆಲ್ ಕೋಶದಲ್ಲಿ 'ಚರುಗ' ಪದಕ್ಕೆ ಕೊಟ್ಟಿರುವ ಅರ್ಥವಿವರಣೆ ಪ್ರಾಯಶಃ ಹಳೆ ಮೈಸೂರಿನಲ್ಲಿ ನಡೆದುಬಂದಿರುವ ಇಂತಹ ಒಂದು ಸಂಪ್ರದಾಯವನ್ನೇ ಆಧರಿಸಿದೆ.

'ಚರುಗ'–an offering to 'Demavva' for which holeyas kill one or more he-buffeloes cut up the flesh, and throw the pieces about, on the fields of the village or town to which they belong''[11]

ಮನುಷ್ಯ ತನ್ನನ್ನೇ ಬಲಿಯಾಗಿ ಅರ್ಪಿಸಿಕೊಳ್ಳುವಂತೆ ಬೆಳೆದು ಬಂದ ನೈಸರ್ಗಿಕ ಭಯ ಪೀಡಿತ ನಂಬುಗೆ ಮುಂದೆ ಪ್ರಾಣಿಗಳನ್ನು ಬಲಿಕೊಡುವ ಅಂಧಶ್ರದ್ಧೆಯಾಗಿ, ಕೊನೆಯಲ್ಲಿ ಅದನ್ನೂ ದಾಟಿ ವಿವೇಕಯುಕ್ತವಾದ ಭಕ್ತಿ ಶ್ರದ್ಧೆಗಳಿಂದ ಆಹಾರವನ್ನು ನೆಲಕ್ಕೆ ಪ್ರಸಾದವಾಗಿ, ಎಡೆಯಾಗಿ ಕೊಡುವ ಭಾವನೆ ಬೆಳೆದು ಬಂದುದು ಈ ಜನಾಂಗದ ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ವಿಕಾಸದ ಹಂತ. ಆದರೆ ಒಂದಿಲ್ಲೊಂದು ಬಗೆಯ ನಂಬುಗೆಗಳಿಂದ ಅವನು ಪಾರಾಗುವಂತಿಲ್ಲ. ಜನಪದ ಜೀವನದಲ್ಲಂತೂ ಇವು ಹಾಸು–ಹೊಕ್ಕಾಗಿರುವ ಅಂಶಗಳು. 'ಚರಗ' ಪದ್ಧತಿ ಇಂದು ಭೂಮಿಯ ಬೆಳೆಗರ್ಪಿಸುವ ಅನ್ನದ ಒಂದು ವ್ರತ. ಅದುವೇ ಹಬ್ಬದಾಚರಣೆಯಾಗಿ ಮುಂದುವರಿದಿದೆ.

ಮಹಾರಾಷ್ಟ್ರದಲ್ಲಿ ಇದರ ಆಚರಣೆ ತುಂಬ ಪ್ರಚಲಿತವಿರುವುದರ ಕುರಿತು ಆರ್. ಇ. ಎಂಥೋವೆನ್ ಬರೆಯುತ್ತಾರೆ. ಆದರೆ ಅಲ್ಲಲ್ಲಿನ ಪದ್ಧತಿಗಳು ಬೇರೆಬೇರೆ.

---

11. ಕಿಟೆಲ್‌ಕೋಶ P 633. ದೆಮವ್ವ > ದ್ಯಾಮವ್ವನಿಗೆ ಕೋಣ ಕಡಿಯುವ ಸಂಪ್ರದಾಯ ಉತ್ತರ ಕರ್ನಾಟಕದಲ್ಲಿಯಾದರೂ ಅದನ್ನೇ 'ಚರಗ'ವಾಗಿ ಚೆಲ್ಲುವ ರೂಢಿ ಈಗ ಕಂಡು ಬರುವದಿಲ್ಲ. ಹಿಂದೆ ಇದ್ದಿರಬೇಕು

At Phonda in the Ratnagiri District a mixture for Sprinkling on the crops (Shivar) generally Composed of boiled rice mixed with curds is kept at the corner of a field at the time of reaping. This ritual is known by the name "Chorawa"[12]

ಮೊಸರು ಕಲಿಸಿದ ಅನ್ನವನ್ನು ಹೊಲದ ಒಂದು ಮೂಲೆಯಲ್ಲಿ ಬೆಳೆಗಳ ಮೇಲೆ ಸಿಂಪಡಿಸುವುದಕ್ಕೋಸ್ಕರ ಸುಗ್ಗಿಯ ಕಾಲದಲ್ಲಿ ಇಡುವರೆಂದೂ ಅದಕ್ಕೆ 'ಚೊರವಾ' ಎಂದು ಸ್ಥಳಿಕ ಜನ ಕರೆಯುವುದಾಗಿಯೂ ಅವರು ಉಲ್ಲೇಖಿಸುತ್ತಾರೆ. ಇಲ್ಲಿನ ಚೊರವಾ ಮತ್ತು ಚರಗ ಶಬ್ದಗಳಲ್ಲಿ ರೂಪಸಾಮ್ಯವಿರುವುದರ ಜೊತೆಗೆ ಅರ್ಥ ಮತ್ತು ಆಚರಣೆಯ ಸಂದರ್ಭ ಕೂಡ ತೀರ ನಿಕಟವಾಗಿವೆಯೆಂದು ಬೇರೆ ಹೇಳಬೇಕಿಲ್ಲ.

ಇನ್ನೂ ವಿಶಿಷ್ಟವಾಗಿರುವ ಉತ್ತರ ಕರ್ನಾಟಕದಲ್ಲಿನ ಚರಗದ ಸ್ವರೂಪ ಅಲ್ಲಿ ಭೂಮಿಗೆ ಅನ್ನ ಚೆಲ್ಲುವ ಚರಗದ ಸಂದರ್ಭ, ಆ ಸಂದರ್ಭದಲ್ಲಿ ಅರ್ಪಿಸುವ ಎಡೆಯ ಪ್ರಕಾರಗಳು ಹಾಗೂ ಅಲ್ಲಿನ ಜನತೆ ಉಚ್ಚಾರ ಮಾಡುವ ಕೆಲವೊಂದು 'ನುಡಿ' ಗಳನ್ನು ಇಲ್ಲಿ ಪರಿಶೀಲಿಸಿದೆ.

ಉತ್ತರ ಕರ್ನಾಟಕದಲ್ಲಿ ಚರಗ, ಆಚರಣೆ :

ಚರಗಳು	ಸಂದರ್ಭ–ವೇಳೆ	ಅಧಿದೈವ ಭೂಮಿ/ ಸಾಂಕೇತಿಕ ದೇವರುಗಳು	ಚರಗದ ಅನ್ನ ಸಾಮಗ್ರಿ
1. ಮೊದಲ ಚರಗ[13]	ಭಾದ್ರಪದ ಅಷ್ಟಮಿ	ಜೋಕುಮಾರ	ಅಳ್ಳಕ ಅಂಬಲಿ (ಹುಳಿ ನುಚ್ಚು)
2. ಎರಡನೆಯ ಚರಗ	ಶೀಗೆಹುಣ್ಣಿಮೆ (ಆಶ್ವಿನ ಶುದ್ಧ)	ಪಾಂಡವರು/ಹಾಗೂ ಶೀಗಮ್ಮ	ಹುರಿಯಕ್ಕಿಯ ಹೋಳಿಗೆ; ಹೂರಣ ಗಡಬು, ಉಂಡಿಗಡಬು ಮುಂ.

---

12. The folklore of Bombay P. 307 by R.E Enthoven (oxf. pre. 1924) ಕೊಡಗು ಜಿಲ್ಲೆಯ ಪಶ್ಚಿಮ ಭಾಗದ ಹಳ್ಳಿಗಳಲ್ಲಿ 'ಹಾಲಕ್ಕಿ ಕಟ್ಟುವದು' ಆಚರಣೆಯುಲ್ಲಿರುವುದಾಗಿ ಡಾ॥ ಕೆ. ಕುಶಾಲಪ್ಪಗೌಡ ಅವರು ತಿಳಿಸಿರುವದಕ್ಕೂ ಲೇಖಕನ ಕೃತಜ್ಞತೆಗಳು.

13 ಧಾರವಾಡ ಜಿಲ್ಲೆಯಲ್ಲಿ ಹೆಚ್ಚು ಪ್ರಚಲಿತ.

3. ಮೂರನೆಯ ಚರಗ[14]	ಎಳ್ಳಮಾಸೆ (ಪುಷ್ಯಮಾಸ)	ಪಾಂಡವರುಗಳು	ಕಡುಬು, ಭಜ್ಜಿ; ಭರ್ತ,
i ಮುಂಜ್ಯಿ ಚರಗ	ದಿನದ ವೇಳೆ		ಹಿಂಡಿಪಲ್ಯ, ಪುಂಡಿಪಲ್ಯ
ii ಕಳ್ಳ ಸರಗ	ನಸುಕಿನ ವೇಳೆ		ಹೋಳಿಗೆ, ಹುಲಸಿನ ಉಂಡಿ. ಮುಂ,
4. ನಾಲ್ಕನೆಯ ಚರಗ[15]	ಹಿಂಗಾರಿಸುಗ್ಗಿ–ರಾಶಿ ಪೂಜೆ	ಕಣದದೈವಗಳು	ರಾಶಿಬುತ್ತಿ ಹೋಳಿಗೆ, ಇಲ್ಲವೆ ಸಜ್ಜಕದ ಉಂಡಿಗಳು.

ಚರಗದಲ್ಲಿನ ಕೆಲವು ಸಂಕೇತಗಳು :

ಚರಗದ ಆಚರಣೆಯಲ್ಲಿ ಅಡಕವಾಗಿರುವ ಕೆಲವೊಂದು ಸಂಕೇತಗಳನ್ನು ಈ ಕೆಳಗಿನ ಹಂತದಲ್ಲಿ ವಿವರಿಸಿದೆ.

1) ದೈವಗಳು
2) ಆಹಾರ ಸಾಮಗ್ರಿ
3) ಶಬ್ದ ಸಂಕೇತಗಳು.

1) ಚರಗದ ದೈವ ಸಂಕೇತಗಳು : ಜೋಕುಮಾರನ ಚರಗ

ಇವನು ಜೋಕು ಮುನಿಯ ಮಗನೆಂದು ಪೌರಾಣಿಕ ಕಥೆಗಳು ಹೇಳುತ್ತವೆ.[16] ಕೊಮರ (<ಕುಮಾರ) ಪದಕ್ಕೆ ಹಾಡು ಹೇಳುವಾಗ ಪಲ್ಲವಿಯಾಗಿ 'ಜೋ' ಎಂಬುದು ಸೇರಿ 'ಜೋಕುಮಾರ' ಪದ ಸೃಷ್ಟಿಯಾದಂತಿದೆ. ಉತ್ತರ ಕರ್ನಾಟಕದ ಹಾಡುಗಳಲ್ಲಿ 'ಕೊಮರಾಮ' 'ಕೊಮರ' ಎಂಬ ಹೆಸರೇ ಪುನಃ ಪುನಃಹಾಡುಗಳಲ್ಲಿ ಬರುತ್ತದೆ.[17] ಇವನ ಹಬ್ಬವನ್ನು 'ಜೋಕ್ಯಾನ ಹಬ್ಬ' ವೆಂದೂ, ಆ ದಿನಗಳಲ್ಲಿ ಬರುವ

---

14 ಕಲಬುರ್ಗಿ ಜಿಲ್ಲೆಯಲ್ಲಿ ಹೆಚ್ಚು ಪ್ರಚಲಿತ.

15 ಧಾರವಾಡ ಜಿಲ್ಲೆಯಲ್ಲಿ 'ಚರಗ' ಎಂದೇ ಹೆಸರಾಗಿದ್ದರೆಕಲಬುರ್ಗಿ ಪ್ರದೇಶದಲ್ಲಿ ಇದು 'ಹಂತಿಪೂಜೆ'ಯಲ್ಲಿ 'ಕಣದ ನೈವೇದ್ಯ'ದಿಂದಾಗಿ ಭೂಮಿಗೆ ಚರಗ ಸಲ್ಲುವುದು. ಅಲ್ಲದೆ ಹಂತಿಗೆ ಕಟ್ಟುವ ಮೊದಲು ಊರ ಜನಕ್ಕೆಲ್ಲ ಅನ್ನ ಸಂತೃಪ್ತಿ ನಡೆಯುವದು.

16 ಅನುಭವ ಶಿಖಾಮಣಿ : 'ಜೋಕುಮಾರ' ನೆಂಬ ಹೆಸರನ್ನು ವಿವರಿಸುವದಕ್ಕೆಂದೇ ಹುಟ್ಟಿದ ಕಥೆ ಇದಾಗಿರಬೇಕೆಂದು ಡಾ॥ ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ವಿಶೇಷಕ್ಕೆ ಅವರ ಜೋಕುಮಾರನನ್ನು ಕುರಿತ ಲೇಖನಗಳನ್ನು ನೋಡಿ ಗ್ರಾಮೀಣ. ಪು. 135-152 ಮತ್ತು 'ಸಾಧನೆ' ಸಂ. 8–3 (1979)

17 ಡಾ॥ ಬಿ. ಎಸ್. ಗದ್ದಗಿಮಠ. ಜಾನಪದ ಗೀತೆಗಳು ಪು. 156.

ಹುಣ್ಣಿಮೆಯನ್ನು 'ಜೋಕ್ಯಾನ ಹುಣ್ಣಿಮೆ' ಎಂದೂ ಕರೆಯುವರು. ಈ ಹಬ್ಬಕ್ಕೆ ಜೋಕುಮಾರನಿಗೆ ಒಕ್ಕಲಿಗರು ಸಲ್ಲಿಸುವ ನೈವೇದ್ಯವೆಂದರೆ ಹುಳಿಯಂಬಲಿ. ಇದನ್ನೇ ರೈತರು ತಾವು ಹೊಲಕ್ಕೊಯ್ದು 'ಚರಗ'ವೆಂದು ಚೆಲ್ಲುವರು. ಜೋಕುಮಾರನ ಕಥೆಗಳು ವಿವರಿಸುವಂತೆ ಅವನೊಬ್ಬ ಭಾರೀ ಕಾಮಣ್ಣನಾಗಿ ಮೆರೆದು, ಅಗಸರ ಹುಡುಗಿಗೆ ಬೆನ್ನು ಹತ್ತಿರಲು, ಈತನ ಪುಂಡಾಟಿಕೆಗೆ ಬೇಸತ್ತ ಜನ ಬೆನ್ನು ಹತ್ತಿ ಅಗಸರ ಕಲ್ಲಿಗೆ ಹಾಕಿ ಅವನ ತಲೆ ಒಡೆದರು. ಆಗ ಅವನು ಹಿಂದೆ ಉಂಡಿದ್ದ ಅಂಬಲಿಯೆಲ್ಲ ಭೂಮಿಯ ಮೇಲೆ ತೂರಾಡಿತು. ಅದೇ ವೇಳೆಗೆ ಕೋಲ್ಮಿಂಚು ಸೆಳೆದು, ಮಳೆಬಂದು, ಮುಂದೆ ಭೂಮಿ ಸಮೃದ್ಧಿಯಿಂದ ಬೆಳೆದು ನಿಂತಿತು. ಈಗಲೂ ಜೋಕುಮಾರನ ಹಬ್ಬವಾದ ಒಂದೆರಡು ದಿನಗಳಲ್ಲಿ ಮಳೆ ಬಂದೇ ಬರುವು ದೆಂಬ 'ನಂಬುಗೆ' ಜನತೆಯಲ್ಲಿದೆ. ಜನಪದ ಹಾಡುಗಳಲ್ಲಿನ, ಪೌರಾಣಿಕ ಕಥೆಗಳ ಲ್ಲಿನ, ವಿಸಂಗತಿಗಳೇನಿದ್ದರೂ ಇಲ್ಲಿ ಈತ ಮುಖ್ಯವಾಗಿ ಫಲವತ್ತತೆಯ ಸಂಕೇತ (Fertility God). ಹಬ್ಬದ ದಿನ ಅವನ ಮಣ್ಣಿನ ಮೂರ್ತಿ ಮಾಡಿ ಬುಟ್ಟಿಯಲ್ಲಿ ಹೊತ್ತು ತರುವಾಗ ಅವನ ಜನನೇಂದ್ರಿಯ ಹೆಚ್ಚು ಪ್ರದರ್ಶಿಸುವಂತೆ ಮಾಡಿರು ವುದೂ ಉಂಟು. ಮಳೆ ಇಂಗಿದುದು ಮತ್ತೆ ಬಂದು ನೆಲದೊಡಲು ತಂಪಾಗುವು ದಕ್ಕೂ ಬೆಳೆ ಬೆಳೆದು ಹುಲುಸು ಹೆಚ್ಚುವುದಕ್ಕೂ ಈತ ಕರುಣಿಸುತ್ತಾನೆಂಬುದು ಜನತೆಯಲ್ಲಿ ಈಗಲೂ ಉಳಿದು ಬಂದಿರುವ ಗಾಢವಾದ ನಂಬುಗೆ.

ಪಾಂಡವರು ಲ ಪಾಂಡೋರುಗಳ ಚರಗ

ಕಲಬುರ್ಗಿ-ಬೀದರ ಜಿಲ್ಲೆಗಳಲ್ಲಿನ ಪ್ರಚಲಿತ ಪದ್ಧತಿಯಂತೆ ಎಳ್ಳಮಾಸೆದಿನ ಹಬ್ಬಕ್ಕೆ ಚರಗ ಚೆಲ್ಲಲು ಹೋದ ಒಕ್ಕಲಿಗರು ಲಕ್ಷ್ಮೀಪೂಜೆ ಮಾಡಿ ಒಂದು ಅಗ ಲನ್ನು (ನೈವೇದ್ಯ) ಆ ದೇವತೆ ಬಳಿಯಲ್ಲಿಟ್ಟು, ಮತ್ತೊಂದು ಅಗಲನ್ನು ಮಾಡಿ ಕೊಂಡು ಹೊಲದಲ್ಲಿನ ಬನ್ನಿಯಗಿಡ ಇಲ್ಲವೆ ಕಂಟಿಯ ಕೆಳಗೆ ಬಂದು ಅಲ್ಲಿ ಬೆಳೆದು ನಿಂತವ ಐದು ಜೋಳದ ದಂಟುಗಳನ್ನು ಕೂಡಿಸಿ ಕಟ್ಟಿ ಅದರ ಕೆಳಗೆ 'ಪಾಂಡವ'ರನ್ನು ಮಾಡುವರು (ಇವು ಐದು ಸಣ್ಣ ಕಲ್ಲು ಅಥವ ಮಣ್ಣ ಹೆಂಟೆಗಳಾಗಿರುತ್ತವೆ.) ಅದಕ್ಕೆ ವಿಭೂತಿ, ಹೂವು ಪತ್ರೆಧರಿಸಿ ನೈವೇದ್ಯ ಹಿಡಿಯುವರು. ಈ ಐದು ಕಲ್ಲುಗಳ ಹಿಂದೆ ಮತ್ತೆ ಬೇರೆ ಮೂರು ಕಲ್ಲುಗಳನ್ನಿಡುವರು. ಇವರನ್ನು 'ಕಳ್ಳರು' ಎಂದು ಕರೆಯುವರು. ಅವಕ್ಕೂ ಸಹ ಜಾಜಿ, ವಿಭೂತಿ ಹಚ್ಚಿ ಪೂಜೆ ಮಾಡುವರು. ಇವಕ್ಕೆ ಪೂಜೆ ಸಲ್ಲಿಸಿದ ಮೇಲೆ ಹೊಲದಲ್ಲಿನ ಬೆಳೆಗೆ ಸುತ್ತಲೂ ಸಂಚರಿಸಿ ಚೆರಗ ಚೆಲ್ಲು ವರು. ಆಗ ಮುಂದೆ ಒಬ್ಬ ಚೆರಗ ಚೆಲ್ಲುವನು, ಹಿಂದೊಬ್ಬ ನೀರು ಸಿಂಪಡಿಸುತ್ತಾ ನಡೆಯುವನು. ಸರಗದ ಊಟ ಮಾಡುವ ಮೊದಲು ಕೆಲವು ಹಳ್ಳಿಗಳಲ್ಲೂ.[18]

---

18 ಕಲಬುರ್ಗಿಯ ನೆರೆಯ ಗ್ರಾಮಗಳಲ್ಲಿ.

'ಸರಗ' ಚೆಲ್ಲಿ ಮನೆಗೆ ಬರುವ ಸಂಜೆಯ ಹೊತ್ತಿನಲ್ಲಿ ಕೆಲವು ಕಡೆಗಳಲ್ಲೂ[19] ಬೇರೊಂದು ಮೋಜಿನ ಪ್ರಸಂಗವೂ ಏರ್ಪಡುವದು. ಅದು 'ಹುಲುಸಿನ ಉಂಡಿ'ಗಳನ್ನೆತ್ತುವುದು. ಪಾಂಡವರಿದ್ದಲ್ಲಿಗೆ ಬಂದು ಒಂದು ಗೊಂಗಡಿ ಹಾಸುವರು. ಅದರ ಮೇಲೆ ಐದು ಕಡುಬುಗಳನ್ನಿಡುವರು. ಒಬ್ಬ ಯುವಕನಿಗೆ ಹಿಂದೆ ಕತ್ತರಿಗೈ ಕಟ್ಟಲು ಹೇಳಿ ಆ ಗೊಂಗಡಿಯ ಮೇಲಿಟ್ಟ ಕಡುಬುಗಳನ್ನು ಎತ್ತಲು ಹೇಳುವರು. ಅವನು ನೆಲಕ್ಕೆ ಕೈಹಚ್ಚದೆ ಬಾಗಿ ಅಥವಾ ಮಲಗಿಕೊಂಡು ಬಾಯಿಯಿಂದಲೇ ಉಂಡಿಗಳನ್ನೆತ್ತಬೇಕು. ಕೆಲವೊಂದುಹಳ್ಳಿಗಳಲ್ಲಿ ಅವನನ್ನು ಮಲಗಿಸಿ ಬೆನ್ನಮೇಲೆ ಎರಡೂ ಕೈಕಟ್ಟಲು ಹೇಳಿ ಬೊಗಸೆಯಲ್ಲಿ ಹುಲುಸಿನ ಉಂಡಿಗಳನ್ನಿಡುವರು. ಆತ ಕೈಬಿಚ್ಚದೆ ಉಂಡಿಗಳು ನೆಲಕ್ಕೆಬೀಳದಂತೆ ಜಾಗ್ರತೆಯಾಗಿ ಎದ್ದು ನಿಲ್ಲಬೇಕು. ಇಲ್ಲಿ ಈ ಉಂಡಿಗಳೂ ಸಹ ಪಾಂಡವರ ಸಂಕೇತಗಳು. ಎಳ್ಳಮವಾಸೆಯಂದು ಹೊಲದಲ್ಲಿ ಮಾಡಿಟ್ಟ ಈ ಪಾಂಡವರನ್ನೇ ಮುಂದೆ ಒಕ್ಕಲಿಗರು ರಾಶಿ ಪೂಜೆಯದಿನದಂದು ರಾಗೋಲದಿಂಡಿನ ಬಳಿಗೆ ತಂದಿಡುವರು. ಅಲ್ಲಿ ಕಣಕ್ಕೆ ಪೂಜೆ ಮಾಡುವಾಗ ಮತ್ತೆ ಪಾಂಡವರಿಗೆ ಪೂಜೆ ಹಾಗೂ ಅನ್ನದ ಶಾಂತಿ ನಡೆಯುವುದು.

ಆಹಾರ ಸಾಮಗ್ರಿ :

(i) ಅಂಬಲಿ (ಹುಳಿನುಚ್ಚು) ಅಳ್ಳಕಿನ. ತೆಳುವಾದ ಅಂಬಲಿ (< ಆಮ್ಲ) ಇದು ಉತ್ತರ ಕರ್ನಾಟಕದಲ್ಲೇ ಹೆಚ್ಚು ಪ್ರಚುರವಾಗಿರುವ ಜೋಕುಮಾರನ ಎಡೆ. ಜೋಕುಮಾರನನ್ನು ಬಡಿದು ಸಾಯಿಸುವಾಗ ಅವನು ಉಂಡಿದ್ದ ಅಂಬಲಿ ಯೆಲ್ಲ ಭೂಮಿಗೆ ಸೂರಾಡಿತು. ಒಕ್ಕಲಿಗ ಅದನ್ನೇ 'ಚರಗ'ವಾಗಿ ಒಗೆದ. ಭೂಮಿ ಫಲವತ್ತಾಗಿ ಬೆಳೆಯಿತು. ಇಲ್ಲಿ 'ಅಂಬಲಿ' ಯನ್ನೇ ಜೋಕುಮಾರನಿಗೆ ನೀಡುವುದೇಕೆ ಎಂಬ ಬಗೆಗೆ ಇದುವರೆಗಿನ ಸಂಶೋಧಕರ ಗಮನ ಹರಿದಂತಿಲ್ಲ. ಸುಗ್ಗಿಯ ಸಂಪ್ರದಾಯದ ಹಾಡುಗಳಲ್ಲಿ 'ನುಚ್ಚು ಜೋಕನು ಚರಗ'[20] ಎಂದಿರುವುದಕ್ಕೂ ಯಾವ ಹೆಚ್ಚಿನ ವಿವರಣೆಯನ್ನು ಡಾ॥ ಗದ್ದಿಗಿಮಠ ಅವರು ನೀಡಿಲ್ಲ. ಮಳೆಗಾಲದಲ್ಲಿ ಸಕಾಲಕ್ಕೆ ಮಳೆಯಾಗದೆ ಬಿತ್ತಿದ ಬೆಳೆಗಳು ಒಣಗ ಹತ್ತಿದಾಗ ಬಡವರಾದ ರೈತರಿಗೆ ಮನೆಯಲ್ಲಿ ಊಟ ಮಾಡುವದಕ್ಕೆ ಅಂಬಲಿಯೇ ಗತಿ (ರಾಗಿ ಬೆಳೆಯುವ ಪ್ರದೇಶದಲ್ಲಿ ರಾಗಿಯೇ ಆಗಬಹುದಿತ್ತು.) ಇಂಥ ಅಂಬಲಿ ಉತ್ತರ ಕರ್ನಾಟಕದ ರೈತರಿಗೆ

---

19 ಜೇವರಗಿ ಆಂದೋಲ ಕಡೆಗಳಲ್ಲಿ.

20. ಡಾ॥ ಗದ್ದಗೀಮಠ ಜನಪದ ಗೀತಗಳು ಪು 139 ಇಲ್ಲಿ ಜೋಕುಮಾರನ ಅಳಕ ಅಂಬಲಿಯೇ ಚರಗವೆಂದಿಷ್ಟು ಹೇಳಿದ್ದಾರೆ. ಡಾ॥ ಚಿದಾನಂದಮೂರ್ತಿಗಳು ಜೋಕುಮಾರನ 'ಅಳಲು' ಎಂದಿರುವುದಕ್ಕೆ ನೀಡಿರುವ ವಿವರಣೆ ಸ್ಪಷ್ಟವಾಗುತ್ತಿಲ್ಲ. ಅದುಜೋಕುಮಾರನ 'ಅಳುಕು ಅಂಬಲಿ'ಯೇ ಆಗಿರಲು ಸಾಧ್ಯ. 'ಚಳಿಗೂ' 'ಅಳಲಿಗೂ' ಏನು ಸಂಬಂಧವೋ ? ತಿಳಿಯುವುದಿಲ್ಲ. ಸಾಧನೆ. ಪು. 22 (8–3)

ಈಗಲೂ ನಿತ್ಯ ಊಟವೇ. ಜೋಕುಮಾರನಿಗೆ ಅದನ್ನೇ ನೀಡುವುದರ ಜೊತೆಗೆ ಉಪ್ಪು ಮೆಣಸಿನಕಾಯಿ ಮುಂತಾದ ಬಡವನ ಊಟದ ಸಾಮಗ್ರಿಯನ್ನೇ ನೀಡುವದು ದುರ್ಭಿಕ್ಷಕಾಲದ ಚಿಹ್ನೆಗಳು. ಈ ಜೋಕುಮಾರ ಬಂದು ಹೋದಮೇಲೆ ಮಳೆ ಬಂದು, ಭೂಮಿ ಬೆಳೆದು ಸಮೃದ್ಧಿ ಹೆಚ್ಚುವುದು. ಈ ದೃಷ್ಟಿಯಿಂದ ಮಳೆ ಇಲ್ಲದಾದಾಗ ಮಳೆ ತರುವ ಫಲಶಕ್ತಿದೇವತೆ. ವಿಶೇಷವಾಗಿ ಇದರಿಂದಾಗಿಯೇ ಈತ ಒಕ್ಕಲಿಗರಿಗೆ ಸಂಬಂಧಪಟ್ಟ ದೈವ. ಒಕ್ಕಲಿಗರ ವ್ರತ ಆಚರಣೆಯಲ್ಲಿನ ಎಷ್ಟೋ ಪ್ರಾದೇಶಿಕ ಅಂಶಗಳು ಇದಕ್ಕೆ ಹಿನ್ನೆಲೆಯಾಗಿವೆ. ಇದರಲ್ಲಿ ಅವನ ಊಟದ ವಿಷಯವೂ ಸಹ ಪ್ರಾದೇಶಿಕ ದೃಷ್ಟಿಯಿಂದ ಇಲ್ಲಿ ಗಮನಾರ್ಹ[21]

ii. ಹುಲಸಿನ ಉಂಡಿಗಳು.

ಪಾಂಡವರು ವನವಾಸದಲ್ಲಿದ್ದಾಗ ಎಷ್ಟೋ ಕಷ್ಟ ನಷ್ಟಗಳನ್ನನುಭವಿಸಿದರು. 'ಕಲ್ಲಕಡಬು ಮಾಡಿ ಮುಳ್ಳ ಶ್ಯಾಂವಿಗಿ ಮಾಡಿ' ಎಂಬ ಜನಪದ ಹಾಡಿನಲ್ಲಿ ಇದಕ್ಕೆ ಹಿನ್ನೆಲೆಯಿದೆ. ಅವರಿಗೆ ಸಂಕೇತವಾಗಿ ಈ ಕಡುಂಬುಗಳನ್ನು ಮಾಡುವದು, ಅವರುಂಡ ಊಟವನ್ನೇ ರೈತರು ಉಣ್ಣುವದು ಎಳ್ಳಮಾಸೆ ಹಬ್ಬದಂದು ನಡೆಯುತ್ತದೆ. ಇಲ್ಲಿ ಇದು ಯಾವುದರ ಸಂಕೇತ ? ಉಂಡಿಗಳನ್ನೆತ್ತುವುದು ಒಂದು ದೃಷ್ಟಿಯಿಂದ ಪೌರುಷ ಅಥವ ಜಯದ ಸಂಕೇತಗಳು. ಹಿಂದಿನಕಾಲದಲ್ಲಿ ನವರಾತ್ರಿಯಲ್ಲಿ ಶಮೀ ಪೂಜೆಗೆಂದು ಅರಸರು ಹೋಗುತ್ತಿದ್ದರು. ಊರಹೊರಗಿನ ಬನ್ನಿಗಿಡಕ್ಕೆ ಹೋಗಿ, ಅಲ್ಲಿನ ಬನ್ನಿಮರದ (Prospis Spicigera) ಕೆಳಗೆ ಒಂದಿಷ್ಟು ನೆಲವನ್ನು ಹಸಿಮಾಡುವರು. ಅದರಲ್ಲಿ ಗೋದಿಯ ಸಸಿಗಳನ್ನು ಅದರೊಡನೆ 'ಶಮಿ (ಬನ್ನಿ) ತೊಪ್ಪಲನ್ನು ಸೇರಿಸಿ ಹಸಿಮಣ್ಣಿನ ಉಂಡಿಕಟ್ಟುವರು. ಅದರ ಮುಂದೆ ಒಂದೊಂದು ಅಡಕೆಯನ್ನಿಟ್ಟು ಆ ಉಂಡಿಗಳಿಗೆಲ್ಲ ಈ ಪೂಜೆ ಸಲ್ಲಿಸಿ ಅವನ್ನು ಎತ್ತಿಕೊಳ್ಳುವರು. ಯಾವುದೇ ಜಯ ಹೋರಾಟ ಕಾರ್ಯಗಳು ಸಂಕೇತವಾಗಿ ಇವನ್ನು ತಮ್ಮೊಡನೆ ಕೊಂಡೊಯ್ಯುವರು. ಈ ವಿಷಯಕ್ಕೆ ಎಂಥೋವನ್ ವಿವರಿಸುತ್ತಾರೆ.

---

21. ಜೋಕುಮಾರನಿಗೆ ನೀಡುವ ಆತಿಥ್ಯ ಅನಾದರದ್ದು. ಕಾರಣ ಈ ಜೋಕುಮಾರ ಕೀಳು ವರ್ಗದ ದೈವ. ಮೇಲುವರ್ಗದವರಲ್ಲಿ ಇವನ ಹಬ್ಬ ತಮಾಷೆಯ ಧೋರಣೆಯದು ಎಂದಿರುವ ಡಾ॥ ಚಿದಾನಂದಮೂರ್ತಿ ಅವರ ವಿಚಾರಗಳಲ್ಲಿ (ಸಾಧನೆ 8-3 ಪು. 22.) ಬಹುಶಃ ಅವರಿಗೆ ಮಾಹಿತಿ ನೀಡಿರುವ ಪ್ರತಿವಕ್ತರು (informants) ಸಮಂಜಸ ಧೋರಣೆಯವರಾಗಿಲ್ಲ ಎನ್ನಿಸುತ್ತದೆ. ಈ ಬಗೆಯ 'ನಂಬುಗೆ'ಯ ಆಚರಣೆಯಲ್ಲಿನ ದೇವರುಗಳ ಬಗೆಗೆ ಮೇಲು–ಕೀಳು ಭಾವನೆಯ ಪ್ರಶ್ನೆ ಉದ್ಭವಿಸಲಾರದು.

Travellers carry such balls with them on their journies for luck. Kings carry the same to obtain with them on the battle field. The Pandavas had such balls with them on the field of Kurukshetra when they obtained a victory over the Kauravas''[22]

ರೈತರು ಎತ್ತುವ ಈ ಹುಲುಸಿನ ಉಂಡಿಗಳು ಈ ಹಳೆಯ ನಂಬುಗೆ ಪರಂಪರೆಗೆ ಸಾದೃಶ್ಯ ಕಲ್ಪಿಸುವಂತಿವೆ. ಇವರು ಪಾಂಡವರ ಜೀವನದ ಅನೇಕ ಪ್ರಸಂಗಗಳನ್ನು ತಮ್ಮ ಆಚರಣೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಒಕ್ಕಲಿಗನ ಬಾಳು ಮಣ್ಣಿನೊಡನೆ ಹೋರಾಟ ಮಾಡುವುದೇ ಆಗಿದೆ. ಭೂಮಿ ಬೆಳೆದರೆ ಮಾತ್ರ ಒಕ್ಕಲಿಗನಿಗೆ ಜಯ. ಈ ಉಂಡಿಗಳನ್ನೆತ್ತುವದು ಈಗಲೂ ಪುರುಷರಿಗೆ ಮಾತ್ರ, ಅದರಲ್ಲೂ ಯುವಕರಿಗೆ ಮೀಸಲು. ಈ ದೃಷ್ಟಿಯಿಂದ 'ಹುಲುಸು' ಪದಸಮೃದ್ಧಿ ಸೂಚಕ. ಹಿಂದೆ ಕೈಕಟ್ಟಿ ಉಂಡಿಗಳನ್ನೆತ್ತುವಲ್ಲಿ ಇವು ನಿನಗೆ ಶುಭದ ಸಂಕೇತವಾಗಿರುವುದರಿಂದ ನಿನ್ನ ಪ್ರಯತ್ನಕ್ಕೆ 'ನಿನ್ನ' ಬೆನ್ನ ಹಿಂದೆಯೇ ಜಯ ಅಡಕವಾಗಿದೆ ಎಂಬುವದರ ಪ್ರತೀಕವಾಗಲೂಬಹುದು. ಚರಗ ಒಗೆಯುವ ರೈತ ಭೂಮಿತಾಯಿಗೆ ಅನ್ನತರ್ಪಣಮಾಡಿ ಜಯದ ಉಂಡಿಗಳನ್ನು ಕೈಯಲ್ಲಿ ಎತ್ತುವದು ಒಂದು ರೋಚಕ ವಿಷಯ. ಶಮೀ ಪತ್ರದೊಡನೆ ಬೆರೆತ ಮಣ್ಣಿನ ಉಂಡಿಗಳನ್ನು ಎತ್ತಿಹಿಡಿಯುತ್ತಿದ್ದುದು ರಾಜರುಗಳ ಹಾಗೂ ಪಾಂಡವರ ವೀರ ಪ್ರತಿಜ್ಞೆಗಳು. ಅಂತೆಯೇ ಅವನಿಗೆ ಈಗಲೂ ಆದರ್ಶ. 'ಹುಲಸು' ಪದಕ್ಕೆ increse in bulk (ಕಿ. ಕೋ. ಪು. 1747) ಹೆಚ್ಚಳವಾಗುವದು ಎಂಬ ಭಾವನೆಯೇ ಈಗ ಆ ಪದಕ್ಕೆ ಸೀಮಿತವಾಗಿದ್ದರೂ ಕೂಡ ಹಿಂದೆ ಅದಕ್ಕೊಂದು ಪರಂಪರೆ ಇತ್ತೆಂಬುದು ಇಲ್ಲಿ ಮುಖ್ಯ[23]

ಚರಗ ಚೆಲ್ಲುವ ಕಾಲದ ಶಬ್ದಸಂಕೇತಗಳು:

ಚರಗ ಚೆಲ್ಲುವಾಗ ಒಬ್ಬ ರೈತ ಮುಂದೆ ಮುಂದೆ ಬೆಳೆಯಮೇಲೆ ಅನ್ನದ ಚೂರನ್ನು ಚೆಲ್ಲುತ್ತ ನಡೆಯುವನು. ಅವನ ಹಿಂದೊಬ್ಬ ನೀರು ಸಿಂಪಡಿಸುತ್ತ

---

22. Folklore of Bombay p. 83 .Worship of natural objects. 'Earth' R. E. Enthaven.

23 'ನೆಲನಂ ಉಣ್ಡಿಗೆ ಸಾಧ್ಯಂ ಮಾಡಿ' ಎಂದು ಶಾಸನಗಳಲ್ಲಿ ಬರುವ ಪದಕ್ಕೆ a stamp an impression ಎಂಬರ್ಥಗಳನ್ನು ಮಾತ್ರ ಹೇಳಿದೆ. ಆದರೆ ರಾಜರುಗಳು ಯುದ್ಧಕ್ಕೆ ಹೊರಡುವದು ವಿಜಯದಶಮಿಯ ತರುವಾಯದಲ್ಲಿ ಆಗ ತಮ್ಮೊಡನೆ ಒಯ್ಯುತ್ತಿದ್ದ ಈ ಮಣ್ಣಿನ ಜಯದ "ಉಂಡಿ" ಉಂಡಿಗೆಗಳಿಂದ ಅವರಿಗೆ ನೆಲದ ವಿಕ್ರಮ ಸಾಧ್ಯವಾಗುತ್ತಿತ್ತು. ಆ ಸಂದರ್ಭಗಳಿಂದಲೇ 'ನೆಲನಂ ಉಂಡಿಗೆ' ಸಾಧ್ಯಂ ಮಾಡಿ ಎಂಬ ಪದಪ್ರಯೋಗ ಬಳಕೆಗೆ ಬಂದಿರಬೇಕು. ಇದರಂತೆಯೇ ಎಷ್ಟೋ ಪದಗಳಲ್ಲಿ ಜನಪದ ಅಂಶ (Folk Element) ಅಡಕವಾಗಿರುವದು ಇಲ್ಲಿ ಗಮನಾರ್ಹ.

ಆತನನ್ನು ಹಿಂಬಾಲಿಸುವನು. ಆಗ ಇಬ್ಬರೂ ಒಂದೆರಡು ನುಡಿಗಳನ್ನು ಸಾಂಕೇತಿಕವಾಗಿ ಹೇಳುವರು. ಇವು ಒಂದೊಂದು ಪ್ರದೇಶದಲ್ಲಿ ಉಚ್ಚಾರಣೆ ಹಾಗೂ ರೂಪ ವ್ಯತ್ಯಾಸಗಳನ್ನು ಹೊಂದಿವೆ. ನಿದರ್ಶನಕ್ಕೆ ಕೆಲವು :

ಪ್ರದೇಶ	ಪ್ರಾದೇಶಿಕ ಪ್ರಭೇದಗಳು	
	ಮುಂದಿನವ್ಯಕ್ತಿ	ಹಿಂದಿನವ್ಯಕ್ತಿ
(i) ಕಲಬುರ್ಗಿ ಜಿಲ್ಲೆಯ ಜೇವರಗಿ ತಾಲೂಕು	'ಹುಲಗ್ಯೋ, ಹುಲಗ್ಯೋ'	'ಸರ ಮಲಗ್ಯೋ'
(ii) ಬಸವಕಲ್ಯಾಣದ ಸುತ್ತಮುತ್ತ	'ಹುಲಗ್ಯೋ, ಹುಲಗ್ಯೋ'	'ಚಲ್ಲಂ ಪಿಲಿಗ್ಯೋ'
(iii) ಹುಮ್ನಾಬಾದ–ಬೀದರ ಪ್ರದೇಶ	'ಒಲ್ಗ್ಯೊ, ಒಲ್ಗ್ಯೊ'	'ಚಲಂಪಲ್ಗ್ಯೋ'
(iv) ಕಲಬುರ್ಗಿ ಜಿಲ್ಲೆ ತೆಗ್ಗನೂರ ಕಾಳಿಗಿ	'ಹುಲ್ಗ್ಯೋ, ಬಸವೋ'	'ಚಳ್ಳಂಪಿಳ್ಳ್ಯೋ'
(v) ಕಲಬುರ್ಗಿ ಜಿಲ್ಲೆಯ ಆಫಝಲಪುರ	'ಹಿಂಡಿಪಲ್ಯೋ, ಪುಂಡಿಪಲ್ಯೋ'	'ಘೇ, (< ಉಘೇ ಉಗೇ)
(vi) ಕಲಬುರ್ಗಿ ಜಿಲ್ಲೆಯ ನಂದೀಪುರ ಗ್ರಾಮ	ಮೌನವ್ರತ	ಮೌನವ್ರತ

ಮೇಲಿನ ರೂಪದಲ್ಲಿ ಮೊದಲ ವ್ಯಕ್ತಿ ಹೇಳುವ ಮುಖ್ಯವಾದ ಪದ 'ಹುಲಗ್ಯೋ'– ಇದು 'ಹುಲುಸು' ಪದದಿಂದ ಬೆಳೆಯ ಸಮೃದ್ಧಿ (Richness of crop) ಎಂಬರ್ಥ ಕೊಡುತ್ತದೆ. ವಿಧ್ಯರ್ಥಕ ಕ್ರಿಯಾಪದದಲ್ಲಿನ ಹಾರೈಕೆ ಸೂಚನೆಯ ವಾಕ್ಯಗಳು ಇವಾಗಿವೆ. 'ಹುಲಗ್ಯೋ, ಹುಲಗ್ಯೋ' ಎಂಬಲ್ಲಿ ಈ ಒಂದೇ ಅರ್ಥದ 'ಮಾರುಲಿ' (Echo words) ರೂಪವಾಗಿ ಕೇಳಿಬರುತ್ತವೆ. 'ಚಲ್ಲಂ ಪಿಲ್ಲಿ' 'ಚಳ್ಳಂಪಿಳ್ಳಿ' 'ಚಲ್ಲಂ ಪಲ್ಗಿ' ಎಂಬುದು ಈಗಿನ 'ಚೆಲ್ಲಾಪಿಲ್ಲಿ' ಎಂಬ ರೂಪವೇ (ಚೆಲ್ಲು : to scatter ಚೆಲ್ಲಾಟ, ಚೆಲ್ಲಾಡು) ಹೊಲದಲ್ಲಿನ ತೆನೆ ಕಾಳು ತುಂಬಿ ಭೂಮಿಯ ತುಂಬ ಸೂರಾಡುವಂತೆ ಬೆಳೆಯಲಿ ಎಂಬ ಹಾರೈಕೆಯ ಧ್ವನಿಯುಳ್ಳಿದೆ. ಈ ಅರ್ಥವಲ್ಲದೆ 'ಹುಲಗ್ಯೋ ಹುಲಗ್ಯೋ' ಎಂಬಲ್ಲಿ ಹುಲ್ಲುಹುಲ್ಲಿಗೆ ಫಸಲು

ತುಂಬಿ ಚೆಲ್ಲಾ ಪಿಲ್ಲಿಯಾಗಲಿ ಎಂಬರ್ಥವನ್ನೂ ಕೆಲವುಕಡೆ ಹೇಳುವುದುಂಟು. ಆದರೆ 'ಹುಲುಸು' ಪದವೇ ಇಲ್ಲಿ ಮುಖ್ಯವಾಗಿ ತೋರುತ್ತದೆ.[24]

ಒಟ್ಟನಲ್ಲಿ 'ಚರಗ' ಈಗಲೂ ವಿಶಿಷ್ಟವಾದ ಒಂದು ಸಾಂಸ್ಕೃತಿಕ ಪದವಾಗಿ ಒಕ್ಕಲಿಗರ ಹಬ್ಬದ ಆಚರಣೆಯಲ್ಲಿ ಜೀವಂತವಾಗಿ ಉಳಿದುಕೊಂಡು ಬಂದುದು ಇದುವರೆಗಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.[25] ಭೂಮಿಯ ಫಲವತ್ತತೆಗಾಗಿ ಮನುಷ್ಯ ತನ್ನನ್ನೆ ಆಹುತಿಯಾಗಿ ಅರ್ಪಿಸಿಕೊಳ್ಳುವ ವೀರಮನೋಭಾವದಿಂದ ಮೊದಲಾಗಿ ಈಗಲೂ ಒಂದಿಲ್ಲೊಂದು ರೀತಿಯ ನೈವೇದ್ಯವನ್ನು ಚರಗವಾಗಿ ಚೆಲ್ಲುವ ಸಂಪ್ರದಾಯ ಉಳಿದುಕೊಂಡು ಬಂದಿರುವದು ಜನತೆಯ ಶ್ರದ್ಧೆ ಸಂಪ್ರದಾಯಗಳ ಅಧ್ಯಯನದಲ್ಲಿ ಹಾಗೂ ಇಂದಿನ ಕ್ರಿಯಾತ್ಮಕ ಜಾನಪದಾಧ್ಯಯನ (Folklore of action type) ದಲ್ಲಿ ತುಂಬ ಕಾಳಜಿಯ ವಿಷಯಗಳಾಗುತ್ತವೆ.

ಅನುಬಂಧ–(ಚರಗದ ಹಾಡು)

ಸ್ವರ 1, 3, 5, 7, 9, 11, 13 ನಂಬರಿನ ನುಡಿಗಳು ಏರು
2, 4, 6, 8, 10, 12, 14 ನಂಬರಿನ ನುಡಿಗಳು ಇಳುವು.

1 ಎಳ್ಳಾಮಾಸಿ ಹಬ್ಬ ಬಂತಮರೆ ಹ್ಯಾಂಗ ಮಾಡಮುರೇಽ
2 ಬೆಳ್ಳದ ಚಿಕ್ಕ್ಯಾಂಟೇಳಮುರೆ । ಬ್ಯಾಳೆಗ್ವಾಕಮುರೇಽ ।
3 ಬೆಳ್ಳದ ಚಿಕ್ಕ್ಯಾಂಟೇಳಮುರೆ । ಬ್ಯಾಳೆಗ್ವಾಕಮುರೇಽ ।
4 ಉಂಡಿಹಿಂಡಿಪಲ್ಯ ಮಾಡಮುರೆ । ಬುಟ್ಟಿತುಂಬಮುರೇಽ ।
5 ಉಂಡಿ ಹಿಂಡಿ ಪಲ್ಯ ಮಾಡಮುರೆ । ಬುಟ್ಟಿ ತುಂಬಮುರೇಽ
6 ಸೀಲವ್ವ. ನಿಂಬೆವ್ವ ತಯ್ಯಾರ । ನಮ್ಮ ಹ್ವಲದೊರ
7 ಸೀಲವ್ವ ನಿಂಬೆವ್ವ ತಯ್ಯಾರ ನಮ್ಮ ಹ್ವಲದೂರಽ
8 ಸರಗದ ಬುಟ್ಟಿ ಮುಂದ ಗಂಡುಸುರ । ಹಿಂದ ಹೆಂಗುಸುರ
9 ಸರಗದ ಬುಟ್ಟಿ ಮುಂದ ಗಂಡುಸುರ । ಹಿಂದ ಹೆಂಗುಸುರಽ
10 ಸರಗ ಇಳುವರಿ ನಮ್ಮ ಹ್ವಲುದಲ್ಲೆ । ಬನ್ನಿಮರುದಲ್ಲೆ
11 ಸರಗ ಇಳುವರಿ ನಮ್ಮ ಹ್ವಲದಲ್ಲೆ । ಬನ್ನಿಮರುದಲ್ಲೆಽ
12 ಸರಗ ಚೆಲ್ಲರಿ ನಮ್ಮ ಹ್ವಲುದಲ್ಲೆ । ಸಾಲುಪಟ್ಯಲ್ಲೆ
13 ಸರಗ ಚೆಲ್ಲರಿ ನಮ್ಮ ಹ್ವಲುದಲ್ಲೆ । ಸಾಲು ಪಟ್ಯಲ್ಲೇ
14 ಕಾಯಿ ಒಡೆಯರಿ ನಮ್ಮ ಕಣದಲ್ಲೇ । ಭೂಮಿತಾಯಿಬಲ್ಲೆ । +

---

24 'ಹುಲಸು' ಪರವಾದ ಹಾರೈಕೆಯ ಪದಗಳು ಆಯಾ ಪ್ರದೇಶದಲ್ಲಿನ ರೈತರಲ್ಲಿ ಈಗಲೂ ಭಿನ್ನಭಿನ್ನ ರೂಪಗಳಲ್ಲಿ ದೊರೆಯುತ್ತವೆ. ತುಳುವಿನಲ್ಲಿ "ಪೊಲಿಪೊಲಿ" ಎಂಬುದು ಇದಕ್ಕೆ ಸಾದೃಶ್ಯವಾಗಿದೆ. ಒಕ್ಕಣೆಯಾದ ಭತ್ತವನ್ನು ಮನೆ ತುಂಬಿಸುವಾಗ ಇದನ್ನು ಹೇಳುವರು.

25 'ಚರಗ ಚೆಲ್ಲು' ಎಂಬುದು ಒಂದು ಶಕ್ತಿಯುತವಾದ ನುಡಿಗಟ್ಟು. 'ನಿನ್ನ ಕಡಿದು ಚರಗ ಚಲ್ಲಿನು' ಎಂಬಲ್ಲಿ ಹಿಂದೆ ಒಂದು ಕಾಲದಲ್ಲಿ ಇದೂಸಹ ಆಚರಣೆ ಇತ್ತೆಂಬುದು ಸ್ಪಷ್ಟ.

\+ ಕಲಬುರ್ಗಿ ಜಿಲ್ಲೆಯ ಶಹಾಪುರ ಹಳ್ಳಿಯ ಬಸಮ್ಮಅಜ್ಜಿ (80) ಹಾಡಿದ ರೀತಿಯಲ್ಲಿ.

ಉಡುಪಿಯ ಚರಿತ್ರೆಯಲ್ಲಿ ಕೆಲವು ಪ್ರಶ್ನೆಗಳು

ಕೆ. ವೆಂಕಟರಾಯಾಚಾರ್ಯ

ಉಡುಪಿಯಲ್ಲಿ ಜನಿಸಿದ ಶ್ರೀಮಧ್ವಾಚಾರ್ಯರ ಜಾತಿ ಮತ್ತು ಕಾಲಮಾನ, ಅವರು ಅಲ್ಲಿ ಸ್ಥಾಪಿಸಿದ ಕೃಷ್ಣಮೂರ್ತಿಯ ಆಗಮನ, ಅಲ್ಲಿನ ಪೂಜಾ ವಿಚಾರ ಹಾಗೂ ನಿಲುಮೆಗಳನ್ನು ಕುರಿತು ಕೆಲವು ಪ್ರಶ್ನೆಗಳು ಸಂಶೋಧನ ದೃಷ್ಟಿಯಲ್ಲಿ ಕಾಣುವಂತೆ ಇಲ್ಲಿ ಬರೆಯಲಾಗಿದೆ.

1. ಶ್ರೀಮಧ್ವಾಚಾರ್ಯರ ಜಾತಿ (ಕುಲ) :

ಶ್ರೀಮಧ್ವಾಚಾರ್ಯರು ತೌಳವ ಬ್ರಾಹ್ಮಣ [ಶಿವಳ್ಳಿ ವರ್ಗದ ನಡ್ಡಂತಿಲ್ಲಾಯ(=ಮಧ್ಯಗೇಹ)] ಮನೆತನದವರೆಂದು ಹೇಳಿದೆ[1] ಶ್ರೀಮಧ್ವಾಚಾರ್ಯರು ಬಾಲಕನಾಗಿದ್ದಾಗಿನ ಗುರು 'ಪೂಗವನಾನ್ವಯುಜ' ನೆಂದಿದೆ[2] 'ಪೂಗವನಾನ್ವಯ' ವೆಂದರೆ 'ತೋಟಂತಿಲ್ಲಾಯ' ನೆಂದು ಅರ್ಥವಿಸಿದೆ[3] ಈ ಅರ್ಥಗಾರಿಕೆ ಪೂರ್ಣಾಂಗವಾಗಿ ಅನುವಾದಿತವೆಂದು ಹೇಳಲಾಗುವುದಿಲ್ಲ. ಪೂಗ=ಕಂಗು. ಆ ಮೇರೆಗೆ 'ಪೂಗವನಾನ್ವಯಂ' ವೆಂದರೆ 'ಕಂಗಿಲ್ಲಾಯ' ವೆಂದೇ ಅನುವಾದ ಸರಿಯಾದೀತು.

ಈ 'ನಡ್ಡಂತಿಲ್ಲಾಯ ಮತ್ತು 'ಕಂಗಿಲ್ಲಾಯ' ನುಡಿಗಳಿಂದ ಈ ಶಿವಳ್ಳಿ ಮನೆತನಗಳು (ತೌಳವ ವರ್ಗದ ಬ್ರಾಹ್ಮಣರ) ಆ ಕಾಲಕ್ಕೆ ಅಲ್ಲಿ ನೆಲಸಿದ್ದುವೆಂದು ಸ್ಪಷ್ಟವಾಗುತ್ತದೆ. (ಇಂತಹ ವೃಕ್ಷ ಸಂಬಂಧಿ ಹೆಸರುಗಳು–ಪೆಜತ್ತಾಯ, ಕುಕ್ಕಿಲ್ಲಾಯ, ಇ. ಶಿವಳ್ಳಿ ಬ್ರಾಹ್ಮಣರಲ್ಲಿ ಮಾತ್ರ ಇವೆ. ಶ್ರೀಮಧ್ವಾಚಾರ್ಯರು 'ನಡ್ಡಂತಿಲ್ಲಾಯ' ಮನೆತನದವರು, ಅವರ ವಿದ್ಯಾಭ್ಯಾಸ 'ಪೂಗವನಾನ್ವಯ'ದ (ತೋಟಂತಿಲ್ಲಾಯ, ಅಲ್ಲ ; ಕಂಗಿಲ್ಲಾಯ ಮನೆತನದ) ಗುರುವಿನಲ್ಲಿ ನೆರವೇರಿತೆಂದು ಇಲ್ಲಿ ಸುಸ್ಪಷ್ಟ ಆ ಕಾಲದಲ್ಲಿ, ಈಗಿನಂತೆ, ಬೇರೆ ಜಾತಿಯ ಮಂದಿಯಲ್ಲಿ ವಿದ್ಯಾಭ್ಯಾಸ ವಿಹಿತವಾಗಿದ್ದಿಲ್ಲ.

'ಶ್ರೀಮಧ್ವಾಚಾರ್ಯರು ಗೌಡ ಸಾರಸ್ವತ ಬ್ರಾಹ್ಮಣರು' ಎಂದು ಇತ್ತೀಚೆಗೆ ವಾದವೆದ್ದಿದೆ[4] ಈ ಮೇಲಿನ ಮಾತಿನಿಂದ, ಈ ವಾದವು ಕೇವಲ ಕೃತಕವೂ ನಿರಾಧಾರವೂ ಆಗಿದೆ. ಗೌಡ ಸಾರಸ್ವತ ಬ್ರಾಹ್ಮಣರಲ್ಲಿ 'ನಡ್ಡಂತಿಲ್ಲಾಯ',

'ಕಂಗಿಲ್ಲಾಯ' ಮನೆತನಗಳಿರುವುದಿಲ್ಲ. ಶ್ರೀಮಧ್ವಾಚಾರ್ಯರು ಗೌಡ ಸಾರಸ್ವತ ಬ್ರಾಹ್ಮಣರೆನ್ನುವುದು ಒಂದು ವಿಕೃತ ಪ್ರಶ್ನೆಯಾಗಿದೆ.

2. ಶ್ರೀಮಧ್ವಾಚಾರ್ಯರ ಕಾಲಮಾನ:

ಶ್ರೀಮಧ್ವಾಚಾರ್ಯರು ಬರೆದ 'ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಂ' ದಲ್ಲಿ ಅವರ ಜನನದ ಕಾಲಮಾನ ಸ್ಪಷ್ಟವಾಗಿ ಹೇಳಲಾಗಿದೆ[5] :

"ಚತುಸ್ಸಹಸ್ರೇ ತ್ರಿಶತೋತ್ತರೇಗತೇ |
ಸಂವತ್ಸರಾಣಾಂತು ಕಲೌ ಪೃಥಿವ್ಯಾಂ |
ಜಾತಃ ಪುನಃ ವಿಪ್ರತನುಃ ಸ ಭೀಮೋ ।
ದೈತ್ಯೈರ್ನಿಗೂಢಂ ಹರಿತತ್ತ್ವಮಾಹ ॥"

ಕಲಿಯುಗದಲ್ಲಿ ನಾಲ್ಕು ಸಾವಿರದ ಮುನ್ನೂರು (4300) ವರ್ಷ ಕಳೆಯು ತ್ತಿರಲು (ಗತೇ ಸತಿ), ಆ ಭೀಮನೇ ಪುನಃ ಬ್ರಾಹ್ಮಣನಾಗಿ (ಮಧ್ವರಾಗಿ) ಹುಟ್ಟಿದ ರೆಂದು ಇಲ್ಲಿ ವಿದಿತ. ಈ ಕಾಲಮಾನ ಕ್ರಿ.ಶ. 1199–1200ಕ್ಕೆ ಸರಿಯಾಗುತ್ತದೆ. (ಇಲ್ಲಿಯ 'ಸತಿ ಸಪ್ತಮಿ' ಪ್ರಯೋಗದಿಂದ ಒಂದೆರಡು ವರ್ಷದ ಹಿಂದು ಮುಂದು ಸಮೀಪದ ಕಾಲವೆಂದು ತಿಳಿಯಬಹುದು). ಪಲಿಮಾರು ಮಠ, ಪೇಜಾವರ ಮಠ ಮತ್ತು ಅದಮಾರು ಮಠಗಳ 'ಕೈಫಿಯತ್'ಗಳು (ಗುರು ಪೀಳಿಗೆಯ ಕಾಲಾದಿ ವಿಚಾರ ಸಂಕಲನಗಳು) ಈ ಕಾಲಮಾನವನ್ನು ಪುಷ್ಟೀಕರಿಸುತ್ತವೆ[6].

ಶ್ರೀ ಮಧ್ವಾಚಾರ್ಯರ ಸಂಚಾರ ಕಾಲದಲ್ಲಿ ರಾಜನೊಬ್ಬನು (ಈಶ್ವರ ದೇವ ಸಂಜ್ಞನು) ತಡೆದು, ನೆಲವನ್ನು ಅಗೆಯಲು ಹೇಳಿದನು. 'ಈ ಕೆಲಸದಲ್ಲಿ ಕೌಶಲ್ಯ ವಿಲ್ಲದ ನಮಗೆ ತೋರಿಸಿಕೊಡು ಎಂದು ಹೇಳಿ, ಶ್ರೀಮಧ್ವಾಚಾರ್ಯರು ಹೋದರು. ಆ ರಾಜ ಹಲವು ಹೊತ್ತು ಅಗೆಯುತ್ತಲೆ ಇದ್ದನು 'ಎಂದು 'ಮಧ್ವವಿಜಯ'ದಲ್ಲಿ ಹೇಳಿದೆ[7]. ಇದಕ್ಕೆ ಅರ್ಥವಿಸುವಲ್ಲಿ, ಶ್ರೀವಾದಿರಾಜಸ್ವಾಮಿಗಳು ಬರೆದ 'ಮಧ್ವ ನಾಮಾವಲಿ' ನೋಡಬಹುದು[8] :

"ಕೇರಳಾ ದೇಶವನ್ನು ತೋಡು ಅಗಳುಯೆಂದರೆ ।
ನೀ ತೋರಿಸಿ ಕೊಟ್ಟರೆ ನಾ ತೊಡುವೆ ನೆಂದರು ॥"

ಕ್ರಿ.ಶ. 1254–65 ರಲ್ಲಿ ಕರ್ನಾಟಕ ಪ್ರಾಂತ್ಯ ಮತ್ತು ಕೇರಳ ಪ್ರಾಂತ್ಯ (ಕಣ್ಣಾನೂರ್)ಗಳನ್ನು ಆಳುತ್ತಿದ್ದ. ಹೊಯ್ಸಳ ಮನೆತನದಲ್ಲಿ ಸುಪ್ರಸಿದ್ಧ ರಾಜ ನಾದ ವೀರ ಸೋಮೇಶ್ವರ ರಾಜನೇ ಈ ಮೇಲಿನ ವಾಕ್ಯದಲ್ಲಿ (ಈಶ್ವರ ದೇವ ನೆಂದು ಸಂಜ್ಞಿಸಿ) ಹೇಳಿರಬೇಕು[9]. ಶ್ರೀಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯ ರಾಗಿದ್ದು, ಕಲಿಂಗದಲ್ಲಿ ರಾಜರಾಗಿದ್ದ ಶ್ರೀನರಹರಿತೀರ್ಥರ ಹೆಸರುಳ್ಳ ಶಾಸನಗಳು (1264–94ನೆ ಇಸವಿಯಲ್ಲಿ ಬರೆದವು) ಈ ಮೇಲಿನ ಕಾಲಮಾನಕ್ಕೆ ಹೊಂದಿಕೆ

ಯಾಗುತ್ತವೆ. ಹೀಗೆ, ಈ ನಾಲ್ಕು ಬಗೆಯ ಆಧಾರಗಳಿಂದ ಶ್ರೀಮಧ್ವರು ಕ್ರಿ ಶ. 1200–78 ರಲ್ಲಿದ್ದರೆಂದು ಸುಸ್ಪಷ್ಟ (ಅವರು 79 ವರ್ಷ ಬಾಳಿದ್ದರೆಂದು ಎಲ್ಲರೂ ಒಪ್ಪುವರು). ಆದರೆ, ವಾಯು ಪುರಾಣ, ಅಣುಮಧ್ವ ವಿಜಯ, ಇತ್ಯಾದಿ ಆಧಾರದಿಂದ, ಶ್ರೀಮಧ್ವರು ಕ್ರಿ.ಶ 1238–1318 ಇಸವಿಯಲ್ಲಿದ್ದರೆಂಬುದು ಇನ್ನೊಂದು ಪ್ರಶ್ನೆಯಾಗಿದೆ.

3. ಕೃಷ್ಣವಿಗ್ರಹದ ಆಗಮನ (ಪ್ರಾಪ್ತಿ) :

ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಬಾಲಗೋಪಾಲನನ್ನು, ಕೃಷ್ಣನನ್ನು ಪ್ರತಿಷ್ಠೆ ಮಾಡಿದರು. ಈ ಪ್ರತಿಮೆ ದ್ವಾರಕೆಯಿಂದ ಬಂದುದು, ಇದರೊಂದಿಗೆ 'ವಡಭಾಂಡೇಶ್ವರ'ದಲ್ಲಿ ಇರಿಸಿದ 'ಬಲರಾಮ'ನ ಪ್ರತಿಮೆಯಿತ್ತೆಂದು ಹೇಳುತ್ತಾರೆ[10]. ಇದರೊಟ್ಟಿಗೆ, ಎರ್ಮಾಳಿನಲ್ಲಿರುವ 'ಜನಾರ್ದನ' ವಿಗ್ರಹವೂ ಶ್ರೀ ಮಧ್ವರಿಗೆ ದೊರೆತುದೆಂದು ಹೇಳುತ್ತಾರೆ[11]. ಈ ಬಲರಾಮ–ಜನಾರ್ದನ ವಿಗ್ರಹಗಳ ಪ್ರಾಪ್ತಿಯ ಪ್ರವಾದಕ್ಕೆ ಯಾವ ಆಧಾರಗಳು ಚಾರಿತ್ರಿಕಗಳಾಗಿಲ್ಲ.

ಈ ಕತೆಯಲ್ಲಿ ಹೇಳಿರುವಂತೆ, ಉಡುಪಿಯ ಕೃಷ್ಣನ ವಿಗ್ರಹದಲ್ಲಿ 'ಮಂಥಾನ (ಬೆಣ್ಣೆಯನ್ನು ಕಡೆವ ಕೋಲು)' ಇರುವುದಿಲ್ಲ. ಉಡುಪಿಯ ಕೃಷ್ಣನ ಕೈಯಲ್ಲಿ 'ಯಷ್ಟಿ (ಸಾದಾ ಕೋಲು)' ಇರುತ್ತದೆ. ಈ ವಿಗ್ರಹ ಬಾಲಗೋಪಾಲನ ಲಕ್ಷಣಾಂಕಿತವಿದೆ[12]. 'ವಡಭಾಂಡೇಶ್ವರ'ವೆಂಬಲ್ಲಿ ಬಲರಾಮನ ವಿಗ್ರಹವಿರುವುದಿಲ್ಲ; ಸುಬ್ರಹ್ಮಣ್ಯ ಸ್ವಾಮಿಯ ಮೂರ್ತಿಯಿದೆ; ಅಲ್ಲಿನ ಧ್ವಜಸ್ತಂಭದಲ್ಲಿ ಮಯೂರ ಚಿಹ್ನವಿದೆ[13]. ಎರ್ಮಾಳಿನ ಜನಾರ್ದನ ದೇವರು ಇದರೊಂದಿಗೆ ಸಿಕ್ಕಿದುದೆಂಬ ಮಾತುಗಳಿಗೆ ಚಾರಿತ್ರಿಕ ಪುರಾವೆಗಳಿಲ್ಲ. ಈ ಬಲರಾಮ-ಜನಾರ್ದನರ ವಿಚಾರಗಳೂ ಪ್ರವಾದಗಳೂ ಪ್ರಶ್ನಾರ್ಥಕಗಳೇ ಆಗಿವೆ. ಉಡುಪಿಯ ಕೃಷ್ಣನಂತೆ, ಗೋವೆಯಲ್ಲಿ ಒಂದು ಪ್ರತಿಮೆಯಿದೆ[13ಎ]. ಶ್ರೀ ಮಧ್ವರು ಗೋವೆಯಿಂದಲೆ ಉಡುಪಿಗೆ ಕೃಷ್ಣನ ವಿಗ್ರಹವನ್ನು ಹಡಗಿನಲ್ಲಿ ತರಿಸಿದರೆನ್ನಬರುತ್ತದೆ[13ಬಿ].

4. ಕೃಷ್ಣನ ಪೂಜೆಯ ಪರ್ಯಾಯ ಕ್ರಮ :

ಶ್ರೀ ಮಧ್ವಾಚಾರ್ಯರು ಕೃಷ್ಣನ ನಿರಂತರ ಪೂಜೆಗಾಗಿ ಎಂಟು ಮಂದಿ ಬಾಲ ಸನ್ಯಾಸಿಗಳನ್ನು ನೇಮಿಸಿದರು. ಪ್ರತಿಯೊಬ್ಬ ಸ್ವಾಮಿ (ಸನ್ಯಾಸಿ) ಎರಡು ವರ್ಷಗಳಲ್ಲಿ ಕೃಷ್ಣನ ಪೂಜೆ ಮಾಡಬೇಕು. ಅನಂತರ ಇನ್ನೊಬ್ಬ ಸ್ವಾಮಿ ಎರಡು ವರ್ಷ ಪೂಜಿಸಬೇಕು. ಈ ಪರ್ಯಾಯ (ಬದಲಿಕೆ) ಕ್ರಮ ಶ್ರೀ ಮಧ್ವಾಚಾರ್ಯರೇ ನಿಯಮಿಸಿದರೆಂದಿದೆ[14].

ಈ ಪರ್ಯಾಯ ಕ್ರಮ ಶ್ರೀ ಮಧ್ವಾಚಾರ್ಯರ ನಿರೂಪದಂತೆ ಎರಡು ತಿಂಗಳ ಅವಧಿ ಮಾತ್ರವಾಗಿತ್ತು; ಶ್ರೀ ವಾದಿರಾಜ ಸ್ವಾಮಿಗಳೇ ಕ್ರಿ.ಶ. (1480-1600),

ಎರಡು ವರ್ಷದ ಅವಧಿಯಾಗಿ ಮಾಡಿದವರೆಂದು ತಿಳಿದುಬರುತ್ತದೆ[15]. ಈ ಪರ್ಯಾಯದ ಅವಧಿ ಪ್ರಶ್ನೆಯಾಗಿದೆ.

5. ಕೃಷ್ಣನ ನಿಲುಮೆ :

ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಕೃಷ್ಣನನ್ನು ಪೂರ್ವಾಭಿಮುಖವಾಗಿ ಸ್ಥಾಪಿಸಿದರು. ಶ್ರೀ ವಾದಿರಾಜರ ಕಾಲದಲ್ಲಿ (16 ನೆ ಶತಮಾನ), ಉಡುಪಿಗೆ ಕನಕದಾಸ ಬಂದನು. ಆಗಿನ ಕ್ರಮದಂತೆ, ಆತನಿಗೆ ದೇವಾಲಯಕ್ಕೆ ಪ್ರವೇಶವಿದ್ದಿಲ್ಲ. ಆತ ದೇವರ ಹಿಂಬದಿ–ಪಶ್ಚಿಮದಲ್ಲಿ ನಿಂತು ಭಕ್ತಿಯಿಂದ ಹಾಡಿದನು. ಆಗ ಕೃಷ್ಣ ಮೆಚ್ಚಿದ. ಆ ಮೇರೆಗೆ, ಕೃಷ್ಣನ ಪ್ರತಿಮೆ ಪಶ್ಚಿಮಾಭಿಮುಖವಾಯಿತು ಎಂದು ಜನಜನಿತ ಕಥೆಯಿದೆ.[16]

ಇತ್ತೀಚೆಗೆ ಪ್ರಕಟವಾದ ಪುಸ್ತಕದಲ್ಲಿ ಈ ವಿಚಾರಕ್ಕೊಪ್ಪುವುದಿಲ್ಲ; ಶ್ರೀ ಮಧ್ವಾಚಾರ್ಯರೇ ಕೃಷ್ಣನನ್ನು ಪಶ್ಚಿಮಾಭಿಮುಖವಾಗಿ ಸ್ಥಾಪಿಸಿದ್ದರೆಂದು ಹೇಳಿದೆ.[17] ಆ ಪುಸ್ತಕವಲ್ಲಿನ ವಿವರಗಳು ಸರಿಯಾಗಿಲ್ಲೆಂದು ನನ್ನ ಲೇಖನದಲ್ಲಿ ಬೇರೆಡೆ ವಿವೇಚಿಸಿದ್ದೇನೆ.[18] ಈ ಪುಸ್ತಕದಲ್ಲಿ ನಮೂದಿಸಿದ ಒಂದು ಶಿಲಾಶಾಸನದ ಬಗೆಯನ್ನು ಇಲ್ಲಿ ಬರೆಯಲೆಳಸಿದ್ದೇನೆ. ಉಡುಪಿಯ ಕೃಷ್ಣದೇವಾಲಯದ ಮುಂಗಡೆ ದೀಪಸ್ತಂಭದ ಬಳಿ ತುಳಸಿಯ ವೃಂದಾವನ ಇದೆ. ಅದರಲ್ಲಿ ಒಂದು ಶಾಸನ ಬರೆದಿದೆ.[19] ಅದರಲ್ಲಿ ಕಾಲಮಾನ ಹೇಳಿಲ್ಲ, ಅದರಲ್ಲಿ ಹೇಳಿದ ರಾಜರ, ಯತಿಗಳ ಕಾಲಮಾನದಿಂದ ಅದು 14 ನೆ ಶತಕಕ್ಕೆ ಸೇರಿದುದೆಂದು ಹೇಳಲಡ್ಡಿಯಿಲ್ಲ. ಆ ಶಾಸನದ ಮುದ್ರಣದ ಪ್ರತಿಯಿದು :

1. ಸ್ವಸ್ತಿ ಶ್ರೀಮತು ಪೂಜ್ಯ ಯಾದವೇಂದ್ರತೀರ್ಥ ಶ್ರೀಪಾದಂಗಳಿಗೆ
2. ಬಾರಕೂರ ಮಲಪವೊಡೆಯರು ಶ್ರೀಕೃಷ್ಣದೇವರ ದರುಶನಕೆ ಬರಲಾಗಿ
3. ಸುರಲುಸ್ತಳಂ ಕೊಡವ ಧನಂ ಕೊಂಡು ಮಲ್ಲಪವೊಡೆಯರ ಅಪ್ಪಣೆಯಿಂದ
4. ಪರಭವಸಂದ ಕ್ರುಸ್ನ ಅಷ್ಟಮಿ ದ್ವದಸಿಕಾಗಿ ೧೬ರ ಬುಧಾವರದಲು ಕೆಕಸೆಯನು
5. ಮುದೆಲಾ ನಿಡುಂಬುರವರ ಗ್ರಾಮದವರ ಕರೆಸಿ ಒಡಗಲೂ ಬಲದಲಿ ಶ್ರೀ
6. ಕೃಷ್ಣ ದೇವರಂಗ ಹರಿಸೆ ಕೊಡಲಿ ಧಾರೆಯರೆಸಿ ಕೊಂಡ ಚತಂಸೀಮೆಯ ವಿವರ

12 ಯಂದು ಮಲಪವೊಡೆಯರು ಬರೆಸಿದ ಬರಹ ದೇವರ ಶ್ರೀಮುಂಬಾಗದಲಿ ತಾಂಬರ

13 ಹೊದಕೆಗಳು ಮಂಟ್ಟಪ ಕಟ್ಟಿಸಿ ಕಂಚಿನ ತೊಳಸಿ ವೃಂದವನ ಹಕಿಸಿದುಮಲ್ಲಪವೊಡೆಯರು

ಈ ಮೇಲಿನ ಶಾಸನದಲ್ಲಿ ಮೊದಲಿಗೆ ಹೆಸರುಳ್ಳ ಯಾದವೇಂದ್ರರು ಉಡುಪಿಯ ಅಷ್ಟಮಠಗಳಲ್ಲೊಂದಾದ ಪುತ್ತಿಗೆ ಮಠದವರಿರಬೇಕು. (ಪುತ್ತಿಗೆ ಮಠದ ಸ್ವಾಮಿಗಳ ಬಗೆಗೆ 16ನೆ ಶತಕದ ವರೆಗೆ ಯಾವುದೇ ಲಿಖಿತಾಧಾರಗಳಿಲ್ಲ ವೆಂದುದು ಬರೆದಿರುವುದು [1978ರ 'ಉದಯವಾಣಿ'ಯ ಪರ್ಯಾಯಸಂಚಿಕೆ] ಸರಿಯಾಗಿಲ್ಲ [19]ಎ.

ಈ ಶಾಸನದಲ್ಲಿ ಹೆಸರಿಸಿದ ಬಾರಕೂರ ಮಲ್ಲಪ್ಪವೊಡೆಯ ಕ್ರಿ ಶ. 1386–7 ರಲ್ಲಿಯ ಶಾಸನದಲ್ಲಿ ಹೆಸರಿಸಲ್ಪಟ್ಟವನು.[20] ಹಾಗಾಗಿ, ಈ ಶಾಸನ 14ನೆ ಶತಕದಲ್ಲಿ ಬರೆದುದು. 'ಪರಾಭವಸಂ।ದ ಕೃಷ್ಣಾಷ್ಟಮಿ ದ್ವಾದಶಿ ಬುಧವಾರ'ವೆಂದು ಇಲ್ಲಿ ಹೇಳಿರುವುದರಿಂದ, ಇದರ ಕಾಲಮಾನ ನಿಷ್ಕರ್ಷೆಗೆ ಸಾಧ್ಯ. (ಸು 1366-7 ಇಸವಿ ಇರಬಹುದು).

ಈ ಶಾಸನದ 5ನೆ ಸಾಲಿನಲ್ಲಿ 'ಬಡಗಲೂ ಬಲದಲಿ' ಎಂದಿರುವುದು; ಬಡಗುದಿಕ್ಕು 'ಬಲದಲಿ' ಇರಬೇಕಾದರೆ, ಶ್ರೀಕೃಷ್ಣದೇವರು ಈ ಶಾಸನದ ಕಾಲಕ್ಕೇ ಪಶ್ಚಿಮಾಭಿಮುಖವಾಗಿರಬೇಕು ಎನ್ನುವ ಆಶಯವಿದೆ.[21] ಈ ವಾದಕ್ಕೆ ಇಲ್ಲಿ ಎಡೆಯಿಲ್ಲವೆಂದು ತಿಳಿಯಬೇಕು.

ಈ ಶಾಸನದ ಅಚ್ಚೊತ್ತಿನಲ್ಲಿ 'ಬಡಗಲೂ ಬಲದಲಿ' ಎಂಬುದಾಗಿಲ್ಲ; ಬಡಗಲಂ ಬಲದಲ್ಲಿ ಎಂದಿದೆ.[22] ಈ ಶಾಸನದ ದಾನವಿತ್ತಾಗ 'ಬಡಗಲಂ ಬಲದಲಿ' ಇದ್ದತಿಂದೇ ಅರ್ಥವಾಗುತ್ತದೆ. ಈ ಶಾಸನದ ಕಾಲಕ್ಕೇನೇ (14ನೇ ಶ.) ಕೃಷ್ಣನು ಪಶ್ಚಿಮಾಭಿಮುಖವಾಗಿದ್ದನೆನ್ನುವುದಕ್ಕೆ ಇಲ್ಲಿ ಅವಕಾಶವಿಲ್ಲ; ಅದೊಂದು ಪ್ರಶ್ನೆಯಾಗುತ್ತದೆ.

ಕನಕದಾಸನು ಶ್ರೀವಾದಿರಾಜರ ಕಾಲದಲ್ಲಿ (16 ಶ.) ಉಡುಪಿಗೆ ಬಂದನು.[2೬] ಆ ವೀರಭಕ್ತನಿಗೆ ಶ್ರೀವಾದಿರಾಜರೇ 'ಕನಕದಾಸ' ನೆಂದು ಹೆಸರಿತ್ತರೆಂದಿದೆ[23]ಎ. (23A). ಉಡುಪಿಯಲ್ಲಿದ್ದ 'ಚಿನ್ನವರದ'ನು ಕೃಷ್ಣನಿ ದತ್ತಿಯನ್ನು ಕೊಟ್ಟ ದಾಖಲೆಯಿದೆ.[24] ಕನಕದಾಸನಿಗೆ 'ಚಿನ್ನವರದ'ನೇ ಪಡಿಯಕ್ಕಿಗಳನ್ನು ನೀಡಿದವ ನೆಂದು ಬೇರೆಡೆ ಹೇಳಿದೆ.[24]ಎ ಕನಕದಾಸ ಇತ್ಯಾದಿ ಭಕ್ತರಿಗಾಗಿ, ಶ್ರೀವಾದಿರಾಜರ ನಿರೂಪದಂತೆ, ಅವರ ಸಾಕ್ಷಾತ್ ಶಿಷ್ಯರಾದ ಶ್ರೀವೇದವೇದ್ಯರ ಕಾಲದಲ್ಲಿ ಶ್ರೀಕೃಷ್ಣನ ಪುನಃ ಪ್ರತಿಷ್ಠೆಯಾದಾಗ.[25] ಕೃಷ್ಣ ಪಶ್ಚಿಮಾಭಿಮುಖನಾಗಿ ಸ್ಥಾಪಿತನೆಂದು

ಕಾಣುತ್ತದೆ. ಶ್ರೀಕೃಷ್ಣನು ಶ್ರೀಮಧ್ವಾಚಾರ್ಯರಿಂದ ಪಶ್ಚಿಮಾಭಿಮುಖನಾಗಿಯೇ ಸ್ಥಾಪಿತನೆನ್ನುವುದು ಪ್ರಶ್ನಾರ್ಥಕವಾಗಿದೆ.

ಕೊನೆ : ಸಂಶೋಧನ ದೃಷ್ಟಿಯಲ್ಲಿ ಈ ಬಗೆಗಳನ್ನು ಕುರಿತು ವಿವೇಚಿಸಬೇಕಾಗಿದೆ. ನಿರ್ದಾಕ್ಷಿಣ್ಯ ಹಾಗೂ ಸಾಧಾರ ಪ್ರಮಾಣಗಳನ್ನು ಆಧರಿಸಿ ಸತ್ಯಾಂಶ ನಿರ್ಧರಿಸಬೇಕಾಗಿ ಅರಿಕೆ.

ಟಿಪ್ಪಣಿಗಳು

1. ನಾರಾಯಣ ಪಂಡಿತಾಚಾರ್ಯ ; ಮಧ್ವವಿಜಯ (2-9)
2. ಅದೇ (3-49)
3. ನಾರಾಯಣಾಚಾರ್ಯ : ಭಾವಪ್ರಕಾಶಿಕೆ (3-49)
4. ಪದ್ಮನಾಭ ಪುರಾಣಿಕ, ಕಾರ್ಕಳ
5. 32 ಅ-131 ಶ್ಲೋಕ

6ಎ. ಪಲಿಮಾರು ಮಠದ ಗುರುಪೀಳಿಗೆ (ಉದ್ಧಿಪ್ರತಿ)

ಬಿ. ಪೇಜಾವರ ಮಠದ ಕೈಫಿಯತ್, ಮದ್ರಾಸ್ ಪ್ರಾಚ್ಯ ಪುಸ್ತಕ ಭಂಡಾರ ಡಿ. 1827.
ಅದಮಾರು ಮಠದ ಕೈಫಿಯತ್-ಪ್ರಾಚೀನ ಕರ್ನಾಟಕ 1-1

7. ಮಧ್ವವಿಜಯ (10-4)
8. ಉಡುಪಿ ಮುದ್ರಣ (67ನೆ ಪದ್ಯ)
9. M.A.R. 1914-5

9ಎ. ಕೆ. ವೆಂಕಟರಾಯಾಚಾರ್ಯ: ಸಾಹಿತ್ಯದ ಹಿನ್ನೆಲೆ, ಪುಣೆಯ ಡಾ. ಪಿ. ಕೆ. ಗೋಡೆಯವರ ಸಂಭಾವನ ಗ್ರಂಥ ಮತ್ತು ಡಾ. ಎಸ್. ಶ್ರೀಕಂಠಶಾಸ್ತ್ರಿಗಳ ಸಂಭಾವನ ಗ್ರಂಥ

10. ಬಿ. ರಾಮಾಚಾರ್ಯ : ಉಡುಪಿ ಕ್ಷೇತ್ರ (ಪು. 57)
11. ಶ್ರೀ ಅಡ್ಡೆ ವೇದವ್ಯಾಸಾಚಾರ್ಯರು ನನಗೆ ಬರೆದ ಪತ್ರ
12. ವೈಖಾನಸಾಗಮ
13. ಡಾ. ಪಿ. ಗುರುರಾಜ ಭಟ್ಟ : ಉಡುಪಿಯ ಇತಿಹಾಸ (ಐ. ಬಿ. ಎಚ್. ಪುಟ. 25)

13ಎ. ಡಾ. ವಿ. ಟಿ. ಗುಣೆ: ಗೋವೆಯ ಪ್ರಾಚೀನ ಪ್ರತಿಮೆಗಳು ಮತ್ತು ಶ್ರೀ ಎಂ. ಎಂ. ಪ್ರಭು : ಪ್ರದೀಪಿಕೆಯ ಲೇಖ.

13ಬಿ. ಎಂ. ಎಂ. ಪ್ರಭು—ಪ್ರದೀಪಿಕೆಯಲ್ಲಿ ಬರುವ ಲೇಖನ

14. ಕೆ. ವೆಂಕಟರಾಯಾಚಾರ್ಯ : ಕೃಷ್ಣನನ್ನು ಕುರಿತ ಕುತೂಹಲ. ಸಂಯುಕ್ತ ಕರ್ನಾಟಕ (21-8-66), ಶರಣ ಸಾಹಿತ್ಯ 1969 ಜ.

14ಎ. ಪೇಜಾವರ ಮಠದ ಕೈಫಿಯತ್

15. ಅಗ್ರಹಾರ ನಾರಾಯಣ ತಂತ್ರಿ : ರಜತ ಪೀಠಪುರ
16. ಪಡುಪೇಟೆ ನರಸಿಂಹಾಚಾರ್ಯ : ಪೇಜಾವರ ಮಠದ 1 ಗರಿ. 1953 (2 ನೇ ಮು)

17. ಅಗ್ರಹಾರ ನಾರಾಯಣ ತಂತ್ರಿ
18. ಕೆ. ವೆಂಕಟರಾಯಾಚಾರ್ಯ : ಸಂ. ಕ. (21-8-66)
19. S. J. J. VII No. 305
19ಎ. ಉದಯವಾಣಿ, 1978 ಜ. ಪರ್ಯಾಯಾಂಕ
20. ಡಾ. ಬಿ. ಎ. ಸಾಲೆತ್ತೂರ್, ತುಳುವ ಚರಿತ್ರೆ (ಪು. 31)
21. ಡಾ. ಪಿ. ಜಿ. ಭಟ್ : ಉಡುಪಿಯ ಇತಿಹಾಸ
22. ಶಾಸನ ಇಲಾಖೆಯ ಮುಖ್ಯಾಧಿಕಾರಿಗಳು, ಮೈಸೂರು ನನಗೆ ಬರೆದ ಪತ್ರ
23. ಪೇಜಾವರ ಮಠದ ತಾಳೆಗರಿ
23ಎ. ಅಗ್ರಹಾರ ನಾರಾಯಣ ತಂತ್ರಿ : ರಜತಪೀಠಪುರ
24. S. J. J. VII No. 297
24ಎ. ಪೇಜಾವರ ಮಠದ ತಾಳೆಗರಿ
25. ಕೆ. ವೆಂಕಟರಾಯಾಚಾರ್ಯ : ಯುಗಪುರುಷ (1972 ಜ)

ಪು.ತಿ.ನ. ರವರ 'ರಾಮಾಚಾರಿಯ' ನೆನಪು

ಎಂ. ಬಿ. ಕೋಟಿ

ಪು. ತಿ. ನರಸಿಂಹಾಚಾರ್ ಎಂದೊಡನೆ ನೆನಪಾಗುವುದು ಮಲೆದೇಗುಲ, ಯದುಗಿರಿ, ಬೃಂದಾವನ, ಕೃಷ್ಣ, ರಾಧೆ, ಮುರಳೀಗಾನ. ನವೋದಯ ಕಾವ್ಯದ ಅಗ್ರಮಾನ್ಯ ಕವಿಯಾದ ಪು.ತಿ.ನ. ಈ ಸಲದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. 1931ರಲ್ಲಿ ಅವರ ಸಾಹಿತ್ಯಸೇವೆಯು ಪ್ರಾರಂಭವಾಯಿತಾದ್ದರಿಂದ ಈ ವರ್ಷವೇ ಅವರ ಚಿನ್ನದ ಹಬ್ಬವೂ ಹೌದು !

'ರಾಮಾಚಾರಿಯ ನೆನಪು' ಐವತ್ತು ವರ್ಷಗಳ ಹಿಂದೆ ರಚಿತವಾದ ಎಂಟು 'ಭಾವನಾ ಚಿತ್ರ'ಗಳನ್ನೊಳಗೊಂಡ ಒಂದು ಕಿರು ಪುಸ್ತಕ. ಈ ಪುಸ್ತಕ 1961ರಲ್ಲಿ ನಾಲ್ಕನೆಯ ಮುದ್ರಣವನ್ನು ಕಂಡಿದೆ. ಈ ನಾಲ್ಕನೆಯ ಮುದ್ರಣಕ್ಕೆ ಒಂದು ವಿಸ್ತಾರವಾದ ಪ್ರಸ್ತಾವನೆಯನ್ನು ಪು.ತಿ.ನ. ನೀಡಿದ್ದಾರೆ. ತುಂಬಾ ಮಹತ್ವಪೂರ್ಣವಾದ ಈ ಪ್ರಸ್ತಾವನೆಯಲ್ಲಿ 'ನಾನು ಏಕೆ ಗದ್ಯವನ್ನು ಬರೆಯುತ್ತೇನೆ ?' ಗದ್ಯದ ಪ್ರಯೋಜನ ಎಷ್ಟು ?' 'ಇದನ್ನು ಭಾವನಾ ಚಿತ್ರವೆಂದು ಏಕೆ ಕರೆಯುತ್ತೇನೆ ?' 'ಭಾವನಾ ಚಿತ್ರಗಳ ವೈಶಿಷ್ಟ್ಯವೇನು ?' ಉತ್ತಮ ಪುರುಷ ವಾಚ್ಯನಾದ 'ನಾನು' ಎಂಬುದರ ಪರಿಕಲ್ಪನೆ ಮುಂತಾದವುಗಳ ಬಗ್ಗೆ ಹೇಳಿ, ನಂತರ ಇಲ್ಲಿರುವ ಎಂಟು ಭಾವನಾ ಚಿತ್ರಗಳು ರೂಪಗೊಂಡ ಬಗೆ ಅವುಗಳ ಮೂಲವನ್ನು ಹೇಳುತ್ತಾರೆ. ಹೀಗಾಗಿ ಸ್ವಂತ ಲೇಖಕನೇ ತನ್ನ ಕೃತಿಯನ್ನು ಮೂವತ್ತು ವರ್ಷಗಳ ನಂತರ (1961) ಮತ್ತೆ ತಿರುವಿ ಹಾಕಿದಾಗ ಅವನಿಗೆ ಅನ್ನಿಸಿದ ಅನ್ನಿಸಿಕೆಗಳ ದಾಖಲೆಯಾಗಿ ಉಳಿದಿರುವುದರಿಂದ, ಅದು ನಮ್ಮ ಸಾಹಿತ್ಯ ಕ್ಷೇತ್ರಕ್ಕೆ ಮುಖ್ಯ ಮಾಹಿತಿಯಾಗುತ್ತದೆ.

ಇಲ್ಲಿರುವ ಎಂಟು ಲೇಖನಗಳಲ್ಲಿ 'ರಾಮಾಚಾರಿಯ ನೆನಪು' ಮತ್ತು 'ಶಿವನ ಕಣಸು' ಒಂದು ಗುಂಪಿಗೆ ಸೇರಿದರೆ 'ನನಗಿಂತಲೂ ನಿಜವಾದ ಕಣಸು' 'ಕೃಷ್ಣಶಾಸ್ತ್ರಿಯ ತ್ಯಾಗ' 'ರಂಗರಾಯನು ಸಂಗೀತವನ್ನು ಕೇಳಿದುದು' 'ಮೂರ್ತಿಯ ಹುಡುಗಾಟ' ಗಳನ್ನು ಒಂದು ಗುಂಪಾಗಿ ನೋಡಬಹುದು. 'ವೆಂಕೋಬರಾಯರು ಒಂದು ಪದ್ಯವನ್ನು ವಿಮರ್ಶಿಸಿದ್ದು', 'ಹ ಹ್ಹಾ ! ಒಂದು ನಕ್ಷತ್ರ'ಗಳು ಬೇರೆ ಬೇರೆಯಾಗಿ ನಿಲ್ಲುತ್ತವೆ.

'ರಾಮಾಚಾರಿಯ ನೆನಪು' ಎಂಬ ಭಾವಚಿತ್ರ ಪು.ತಿ.ನ. ರವರ 'ಎಳೆತನದ ಹೊಂಗನಸುಗಳ ಕೇಂದ್ರ ಬಿಂದು'ವಾದರೆ 'ಶಿವನ ಕಣಸು'ನಲ್ಲಿ ಬರುವ ''ಶಿವ ಮತ್ತು

'ನಾಣಿ' ಈ ಪಾತ್ರಗಳು ನನ್ನ ಆಶೋತ್ತರಗಳ ಎರಡು ಮುಖ. ಅಥವಾ ಯೌವನದ ಕನಸುಗಳ ಆದರ್ಶದ ಪ್ರತಿರೂಪ. 'ರಾಮಾಚಾರಿಯ ನೆನಪಿ'ನಲ್ಲಿರುವ ಮುಖ್ಯಲಕ್ಷಣ ವೆಂದರೆ ಮುಗ್ಧ ಮನಸ್ಸಿನ ಹಂದರದ ಮೇಲೆಯೇ ಎಲ್ಲ ಬದುಕನ್ನು ನಿರೂಪಿಸುವುದು. "ಪಾಪ, ರಾಮುವಿಗೆ ಮೂಟೆಯನ್ನು ಕಂಡು ಹೊರಬೇಕಲ್ಲಾ ಎಂಬ ಸಂಕಟವಾಯಿತೇ ಹೊರತು, ಇಷ್ಟೊಂದು ದೊರಕಿತಲ್ಲಾ ಎಂದು ಸಂತೋಷವಾಗಲಿಲ್ಲ. ಅವನ ಮನಸ್ಸಿನಲ್ಲಿ ನಾಳೆಯ ಶ್ರಮದ ಕಲ್ಪನೆಯೂ ಸುಳಿದು ನೆಮ್ಮದಿಗೆ ಭಂಗ ಆಯಿತು."

ನಂತರದ ಮೂರು-ನಾಲ್ಕು ಬರಹಗಳ ವಸ್ತುವಿನ್ಯಾಸ ಹೆಚ್ಚುಕಡಿಮೆ ಒಂದೇ ತರದ್ದು. ಇವುಗಳ ಬಹುಪಾಲು ನಾಯಕರು 'ನವ್ಯ' ನಾಯಕರನ್ನು ನೆನಪಿಗೆ ತರುತ್ತಾರೆ. ಬದುಕಿನ ಹಲವಾರು ಸಾಧ್ಯತೆಗಳನ್ನು ಕನಸಿನಲ್ಲಿ ಕಾಣುತ್ತಾ, ಕಲ್ಪನೆಗಳ ಹುಚ್ಚುಹೊಳೆಯಲ್ಲಿ ತೇಲುವುದರಿಂದ ಯಾತನೆಗಳನ್ನು ಅನುಭವಿಸುತ್ತಾರೆ. ಪ್ರೇಮ, ಹೆಣ್ಣು, ಕಾಮ, ಮನೆ, ಸಮಾಜ ಇವೇ ಇವರ ಸಮಸ್ಯೆ. ನಾಯಕರ ನೆನಪಿನ ಸುಳಿಯಿಂದಲೇ ನೆನಪುಗಳು ಮರುಕಳಿಸುತ್ತಾ ಸಾಗುವುದೇ ಇಲ್ಲಿಯ ಧಾಟಿ. 'ರತ್ನ' 'ನಾಣು'ಗೆ ದಕ್ಕದೆ ಹೋಗುವುದು, 'ವೇಣಿ' 'ಕೃಷ್ಣಶಾಸ್ತ್ರಿ'ಗೆ ದಕ್ಕದೆ ಹೋಗುವುದು, 'ಲಲಿತೆ' 'ರಂಗರಾಯ'ನಿಗೆ ದಕ್ಕದೆ ಹೋಗುವುದು. ಹೀಗಾಗಿ ಇವು ಕುತೂಹಲ ಭರಿತ ಕತೆಗಳ ಛಾಪನ್ನು ಪಡೆದುಕೊಂಡಿವೆ.

'ನನಸಿಗಿಂತಲೂ ನಿಜವಾದ ಕನಸಿನಲ್ಲಿ'ರುವ ಮುಖಾಮುಖಿ ಕನಸು ಮತ್ತು ನನಸುಗಳಿಗಿರುವುದಾದರೆ 'ಕೃಷ್ಣಶಾಸ್ತ್ರಿಯ ತ್ಯಾಗ'ದಲ್ಲಿ, ಸೃಷ್ಟಿಸಿಕೊಂಡ ಆದರ್ಶವಾದ ಮತ್ತು ಸಮಾಜದ ಕಟ್ಟುಪ್ಪಣೆಯ ನಡುವಿನದು. "ರಾಮ ರಾಮ! ಬಾಲವಿಧವೆ! ಅಬ್ಬ ಅವರ ಸ್ಥಿತಿಯನ್ನು ನೆನೆದರೆ ಮೈಜುಮ್ಮೆನ್ನುತ್ತದೆ. ಪುರುಷರೆಷ್ಟು ಸ್ವಾರ್ಥ ಪರಾಯಣರು! ಎಷ್ಟು ನಿರ್ಘಾಣಿಗಳು! ಅರಿಯದ ಹುಡುಗಿಯರ ಬಾಳು ಆಗತಾನೆ ಬಿರಿಯುವಾಗ ಹೊಸಕಿಬಿಡುವುದೆ? ಹೀಗೆ ಅವರನ್ನು ನಿಲ್ಲಿಸುವುದಕ್ಕಿಂತ ಪತಿ ಯೊಂದಿಗೆ ಚಿತೆಗೇರಿಸುವುದೇ ಉತ್ತಮ ಇರಲಿ. ಇವರಿಗೆ ಬುದ್ಧಿ ಕಲಿಸುತ್ತೇನೆ. ಸಮಾಜ ನೆಟ್ಟಿರುವ ಮುಳ್ಳುಬೇಲಿಯನ್ನು ಕಿತ್ತು ಉನ್ನತಧ್ಯೇಯದ ಮಾರ್ಗವನ್ನು ನಿಷ್ಕಂಟಕವಾಗಿ ಮಾಡಿಬಿಡುತ್ತೇನೆ. ನಮ್ಮಂಥವರು ಮಾಡದಿದ್ದರೆ ಇನ್ಯಾರು ಮಾಡುವುದು? ನಾನು ವಿಧವೆಯನ್ನೇ ಮದುವೆಯಾಗುವುದು ಖಂಡಿತ, ಶಪಥ ಮಾಡುತ್ತೇನೆ. ಬಾಲ ವಿಧವೆಯನ್ನೇ–ಹುಂ–ಇನ್ನೂ ಒಂದು ಹೆಜ್ಜೆ ಮುಂದಿಡು ತ್ತೇನೆ. ವಿತಂತುವಿಗೆ ಒಂದು ಕೂಸಿದ್ದರೂ ಸರಿಯೆ" ಎನ್ನುವುದು ಒಂದು ಕಡೆ. ಇನ್ನೊಂದು ಕಡೆ "ಆ ಗೊಡ್ಡು ವೈದಿಕ ಬ್ರಾಹ್ಮಣ, ಅದರಲ್ಲೂ ಬಡವ ಮಗಳ ಪುನರ್‌ವಿವಾಹಕ್ಕೆ ಒಪ್ಪುತ್ತಾನೆಯೇ? ಕೇಳಿದರೆ ಶಿರಚ್ಛೇದನ ಮಾಡಿಯಾನು? ಕೇಳುವುದು ತಾನೆ ಹೇಗೆ?" ಈ ಎರಡೂ ಸಂಘರ್ಷಗಳ ಮಧ್ಯೆ ಕೃಷ್ಣಶಾಸ್ತ್ರಿ 'ಮ್ಯಾಕ್‌ಬೆತ್'' ಅನುಭವಿಸಿದ ಯಾತನೆಗಳನ್ನು ಆತ್ಮೀಕರಿಸಿಕೊಳ್ಳುತ್ತಾನೆ. ಕೊನೆಗೆ

ತಾನೇ ಸೃಷ್ಟಿಸಿಕೊಂಡ ಆ ಕಲ್ಪನೆಯನ್ನು ಅವತ್ತೆ ತೋಡಿ ಹೂಳಿದ್ದರೆ' ಎಂದು ಕೊಳ್ಳುತ್ತಾನೆ.

'ರಂಗರಾಯನು ಸಂಗೀತವನ್ನು ಕೇಳಿದುದು' ಇಲ್ಲಿಯ ಮುಖಾಮುಖಿಗೆ ವಸ್ತು 'ಲಲಿತೆ' ಎಂಬ ಹೆಣ್ಣು ಮತ್ತು ಎರಡು ಭಿನ್ನ ಸ್ವಭಾವಗಳನ್ನು ಹೊಂದಿದ ಗಂಡುಗಳು. "ರಂಗರಾಯನನ್ನು ಹೋಲಿಸಬಹುದಾಗಿದ್ದರೆ ಸಂಜೆಯ ಬೂದು ಬಣ್ಣದ ಆಕಾಶ ವನ್ನು ದೃಷ್ಟಿಸಿ ನೋಡಿದರೆ ಸ್ವಲ್ಪ ಹೊತ್ತಿನಮೇಲೆ ಕಾಣಿಸಿಕೊಳ್ಳುವ ಕಿರುತಾರಗೆಗೆ ಹೋಲಿಸಬಹುದಾಗಿತ್ತು. ಶ್ರೀನಿವಾಸನನ್ನೇ ಎಲ್ಲೆಡೆಯಲ್ಲೂ ನುಸುಳಿ ಅಂಧಕಾರ ವನ್ನು ಚೆದರಿಸಿ, ಸಂತಸವನ್ನು ಚೆಲ್ಲುವ ಸಜೀವವಾದ ಸೂರ್ಯಕಿರಣಕ್ಕೆ ಹೋಲಿಸ ಬಹುದಾಗಿತ್ತು." ರಂಗರಾಯ ಲಲಿತೆಯನ್ನು ಮನಸ್ಸಿನಲ್ಲೇ ಪ್ರೀತಿಸಿದ್ದ. ತನ್ನ ಸ್ನೇಹಿತನಾದ ಶ್ರೀನಿವಾಸನನ್ನು ತನ್ನ ಊರಿಗೆ ಕರೆದುತಂದಾಗ ಶ್ರೀನಿವಾಸನನ್ನು ಕಂಡು "ವಿಸ್ಮಯದಿಂದ ಆಕೆಯ (ಲಲಿತೆಯ) ಕಣ್ಣುಗಳು ಅರಳಿವೆ, ನಗೆಯೊಡನೆ ಲಜ್ಜೆ ಬೆರೆದಿದೆ. ಆ ವಿಸ್ಮಯ, ಆ ಮೃದುಹಾಸ, ಆ ಲಜ್ಜೆ, ಶ್ರೀನಿವಾಸನು ಅರಿಯ ದಂತೆ ಅವಳು ಅವನಲ್ಲಿ ನೆಡುವ ದೃಷ್ಟಿಯನ್ನು ಅವಳ ನಾಚಿಕೆಯನ್ನು ಹಿಂದಿರುಗಿಸಲು ಹೆಣಗಾಡಿದ ಪ್ರಯತ್ನಪಡುತ್ತಿರುವುದನ್ನು ಕಂಡು, 'ಇವು ತನ್ನ ಎದೆಯಲ್ಲಿ ಅಲಿ ಕಲ್ಲೆಸದಂತೆ ಆಗುತ್ತದೆ. ಆ ಗಳಿಕೆಯು ತನ್ನ ಬಾಳನ್ನು ಕವಲೊಡೆದುದು' ಎಂದು. ಯಮಯಾತನೆಗಳನ್ನು ಹಲವು ಪರಿಯಲ್ಲಿ ಅನುಭವಿಸುತ್ತಾನೆ. ["ಸ್ವಾರ್ಥ ನಿಸ್ವಾರ್ಥ ಗಳ, ಆಶೆ ನಿರಾಶೆಗಳ, ರಾಗತ್ಯಾಗಗಳ ತುಮುಲದಲ್ಲಿ." "ಅಯ್ಯೋ, ತಾನೇಕೆ ಲಲಿತೆಯನ್ನು ಪ್ರೀತಿಸಿದೆನು? ಅವುಗಳನ್ನಗಲಿದ ಮೇಲೆ, ಉರಿ, ಸಂಕಟ, ಆ ಅನಿರ್ವಚನೀಯವಾದ ಯಾತನೆ!" "ಇರಿತಗಳನ್ನು ತಾಳದವರಿಗೊಲವು ಗೊಡವೆ ಯೇತಕೆ?"]

'ಮೂರ್ತಿಯ ಹುಡುಗಾಟ'ವಲ್ಲಿಯೂ ಯಾತನೆಯನ್ನು ಅನುಭವಿಸುವುದೇ ವಸ್ತು. ಆದರ್ಶ ಮತ್ತು ಸತ್ಯದ ಬದುಕು ಇವುಗಳ ನಡುವೆ, 'ನಾಣು' ಇಲ್ಲಿ day dreaming. Inter Communal ವಿವಾಹವನ್ನು ಪ್ರತಿಪಾದಿಸುತ್ತಾ ತಿರುಗಾಡುವ ಆದರ್ಶವಾದಿ. ಮೂರ್ತಿ ಬಾಯಲ್ಲಿ ಹೇಳುವುದು ಸುಲಭವಯ್ಯ, ಹೇಳು, ಬೇಕಾದಷ್ಟು ಹೇಳು ಎನ್ನುತ್ತಾ ಇರುವವ. ಈ ಎರಡೂ ಭಿನ್ನ ಭಿನ್ನ ಆಲೋಚನೆಯಲ್ಲಿ ಸಿಕ್ಕಿಕೊಂಡ ನಾಣುನ ಹಲವಾರು ದ್ವಂದ್ವಗಳ ಸುರುಳಿ ಇಲ್ಲಿದೆ. ತನ್ನ ಆದರ್ಶವನ್ನು ಕಾಪಾಡಿಕೊಳ್ಳುವ ತಂದೆತಾಯಿಯನ್ನು ಒಪ್ಪಿಸುವ ಸಾಧ್ಯತೆ ಯನ್ನು ಯೋಚಿಸುವ, ಮೂರ್ತಿಯ ಸ್ನೇಹವನ್ನು ಕಳೆದುಕೊಳ್ಳಲಾರದ. ಮದುವೆಗೆ ಹೋಗುವುದೋ? ಹೋಗದೇ ಇರುವುದೋ? ಆತ್ಮಹತ್ಯೆ ಮಾಡಿಕೊಳ್ಳಬೇಕೆನ್ನು ವುದು. ಅದನ್ನು ಮುಂದೆ ಹಾಕುತ್ತಲೇ ಬರುವ ಜೀವನದ ಆದಮ್ಯ ಸೆಳೆತ. ಹೀಗೆ

ಮಾತುಗಳ ಮತ್ತು ವಸ್ತು ಸಮಸ್ಯೆಗಳ ನಡುವೆ ನಡೆಯುವ ಕುತೂಹಲಕಾರಿ ಮುಖಾಮುಖಿ ಇಲ್ಲಿದೆ.

'ವೆಂಕೋಬರಾಯರು ಒಂದು ಪದ್ಯವನ್ನು ವಿಮರ್ಶಿಸಿದ್ದು' ಈ ಬರಹ ಒಬ್ಬ ವ್ಯಕ್ತಿಯ ಅಥವಾ ಪು.ತಿ.ನ. ರವರ ವಿಮರ್ಶಾ ವಿಧಾನದಂತಿದೆ. ಒಂದು ಕೃತಿ ನಮ್ಮ ಜೊತೆ ಸಂವಹನಿಸಬೇಕಾದರೆ ಅದರಲ್ಲಿಯ ಸಾಧಾರಣ ಅಂಶಗಳು ನಮ್ಮ ಜೀವನಾನುಭವದಲ್ಲೂ ಬಂದಿರಬೇಕು ಎನ್ನುವ ವೆಂಕೋಬರಾಯರು. ಯುವ ಕವಿಗಳನ್ನು ಬೈಯುತ್ತಾ, ಹೊಸ ಜಾಡನ್ನು ಒಪ್ಪಿಕೊಳ್ಳದೆ ಇರುವುದು. ಒಂದು ಪದ್ಯವನ್ನು ಓದುತ್ತಾ, ಅದರಲ್ಲಿಯ ಅಂಶಗಳು ತಮ್ಮ ಜೀವನ ಅನುಭವದಲ್ಲೂ ಬಂದವು, ಘಟಿಸಿದವು, ಯೋಚಿಸಿದವು ಎಂದಾಗ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ಸ್ಥಿತಿಯೇ ಇಲ್ಲಿಯ ವಸ್ತು. "ತಾನೇ ಅದು (ವೆಂಕೋಬರಾಯರು) ತಮ್ಮ ಜೀವನವೇ ಹೆಚ್ಚು ಪೂರ್ಣವಾಗಿ ಹೆಚ್ಚು ಸಂತುಷ್ಟವಾಗಿ ಇದರಲ್ಲಿ ವಿಕಾಸಗೊಂಡಿದೆ." ಎಂದುಕೊಳ್ಳುವುದು.

ಮೂಲತಃ ಈ ಬರಹಗಳ ಹಿಂದೆ ಕೆಲಸ ಮಾಡಿದ ಮನಸ್ಸು Romantic ಆದದ್ದು. 'ಅಂದು ಲಲಿತೆಯಷ್ಟು ಚೆಲುವೆ! ಗುಲಾಬಿಯ ಹೂವನ್ನು ಏನು ಸೊಗಸಿನಿಂದ ಮುಡಿದಿದ್ದಳು! ಸೀರೆಯುಟ್ಟ ಸೊಬಗೋ, ಕೊಂಕು ಕೊರಳಿನ ಭಾವವೋ, ಸುಳಿಗುರುಳಿನ ವಿನ್ಯಾಸವೋ ಎಲ್ಲದಕ್ಕಿಂತಲೂ ಆ ಕಣ್ಣುಗಳೋ, ಇಂತಹ ಸೌಂದರ್ಯವನ್ನು ನೋಡಿದಾಗ ಅವನ ಮನಸ್ಸಿನಲ್ಲಿ ಹುಟ್ಟಿದ ಆ ವಿಸ್ಮಯ, ಆ ಪರವಶತೆ, ಮತ್ತು ಆಶ್ಚರ್ಯ! ಆ ಮಹದ್ಭಯ!!'' ಇಂತಹ ಉದಾಹರಣೆಗಳನ್ನು ಕೃತಿಯುದ್ದಕ್ಕೂ ಕಾಣಬಹುದು. ಮತ್ತೊಂದು ಒಳ್ಳೆಯ ಉದಾಹರಣೆ ಎಂದರೆ, ''ಹಹ್ಹಾ! ಒಂದು ನಕ್ಷತ್ರ" 'ಮನಸ್ಸು ರಸಸ್ತರಕ್ಕೇರಿದಾಗ ಸೂರಿನ ತೂತೂ' ಸಹ ಒಂದು ನಕ್ಷತ್ರವಾಗಿಬಿಡುತ್ತದೆ. ಆದ್ದರಿಂದ ಕೆಲವು ಕಡೆ ಭಾಷೆ ಹೆಚ್ಚು ಭಾವ ಗೀತಾತ್ಮಕವಾಗುತ್ತದೆ. [''ಅಂದಿನಿರುಳು ಕಾರಿರುಳು, ಬಾನಿನ ಕಾಲುಭಾಗವನ್ನು ಕರಿಮೋಡವು ಆಕ್ರಮಿಸಿ ಇರುಳಿನ ಕಪ್ಪನ್ನು ಇಮ್ಮಡಿಸಿತ್ತು. ಸದ್ದಡಗಿತ್ತು. ನೀರವತೆಯು ಹಬ್ಬಿತ್ತು. ಮೃದುವಾಗಿ ಮಂದವಾಗಿ ತಣ್ಣನೆ ಗಾಳಿಯು ಬೀಸುತ್ತಿತ್ತು. ಅದು ಭಯೋತ್ಪಾದಕ ಕಾಳರಾತ್ರಿ! ವಿಲಯಕ್ಕೆ, ಶಾಂತಿಯ ನೆಮ್ಮದಿಯ, ಗಾಂಭೀರ್ಯದ ಜವನಿಕೆಯನ್ನು ಹೊದಿಸಿತ್ತಾ ಕಾಳರಾತ್ರಿ'']. ಅಲ್ಲಲ್ಲಿ ಪುರಾಣ ಸಂದರ್ಭಗಳನ್ನು ನೆನೆಯುತ್ತಾ ಸಾಗುತ್ತಾರೆ. ''ರಾಮನೋ ಕರ್ಣನಂತೆ ತನ್ನ ನಾಶವನ್ನು ತಾನೇ ಕಾಣದಷ್ಟರಮಟ್ಟಿಗೆ ಉದಾರಿಯು ಇಂಥವನು ಕುಬೇರನಲ್ಲದೆ ಮತ್ತೇನು ?''

'ಶಿವನ ಕಣಸು' ಎಂಬ ಬರಹದ ಮುಖ್ಯ 'ದರ್ಶನ' "ಈ ಪ್ರೇಮವು ರೂಪ ಭೇದಗಳನ್ನು ದಾಟಿ ಜೀವನವನ್ನು ಅದು ಇರುವಂತೆ'' ನೋಡು. ನೋಡಬೇಕು

ಎನ್ನುವುದು. ಈ ಸಂಸಾರದಲ್ಲಿ ಪ್ರವಹಿಸುವ ಶಕ್ತಿ ಮನುಷ್ಯತ್ವವೊಂದೆ ಆಗಬೇಕು. ಹೀಗೆ ಆಗಬೇಕಾದರೆ 'ಸಮದರ್ಶಿಯಾಗಿ ಪ್ರೇಮಿಯಾಗಬೇಕು'. 'ಈ ಬಹಿರಾವರಣ ಗಳನ್ನು ಭೇದಿಸಿ ತಾಗುವ ದೃಷ್ಟಿಯುಳ್ಳವನಾಗಿರಬೇಕು. ಪ್ರೇಮವೆಂಬುದು ಒಂದು ತರಹದ X-ray' ಇಂತಹ ಹೊಸ ದೃಷ್ಟಿಯನ್ನು ಕಲ್ಪಿಸಿಕೊಂಡರೂ ಸಹ ಅದನ್ನು ಕಾರ್ಯಗತಕ್ಕೆ ತರುವುದು ಸಹ 'ಒಂದು ಕಣಸು' ಎಂದು ಮುಕ್ತಾಯವಾಗುತ್ತದೆ.

ಐವತ್ತು ವರ್ಷದ ನಂತರ ಇದನ್ನು ತಿರುವಿ ಹಾಕಿದಾಗ ದಕ್ಕಿದ್ದು ಇಷ್ಟು. ಇದಕ್ಕೆ ಕಾರಣ ಕೃತಿಯುದ್ದಕ್ಕೂ ಮಾನವ ಸಹಜ ಪ್ರವೃತ್ತಿಗಳೂ, ತುಮುಲಗಳು ಯಾತನೆಗಳು ಲೇಖಕನ ಮಟ್ಟದಲ್ಲೇ ನಿಲ್ಲದೆ ನಮ್ಮ ಜೊತೆಯಲ್ಲಿ ಸಾಧಾರಣೀಕರಣ ಗೊಳ್ಳುವುದರಿಂದ. ಮತ್ತು ಮುಖಾಮುಖಿಯನ್ನು ಎಲ್ಲೂ ತೇಲಿಸದಂತೆ ನೋಡಿ ಕೊಳ್ಳುವ ಸಾಧ್ಯತೆಯನ್ನು ಪು.ತಿ.ನ. ಬರವಣಿಗೆ ಕರಗತ ಮಾಡಿಕೊಂಡಿದ್ದರಿಂದ.

ಹವಾಮಾನ ವೀಕ್ಷಣಾಲಯದ ವರದಿ

ಎಸ್ ವಿಜಯಾ ಸುಬ್ಬರಾಜ್

ಹವಾಮಾನ ವೀಕ್ಷಣಾಲಯದ
ವರದಿಯ ಮುನ್ಸೂಚನೆಯಂತೆ,
ಈ ದಿನ—
ಉಸಿರು ಕಟ್ಟುವ
ಮೇಲ್ಗಣ್ಣು ತೇಲ್ಗಣ್ಣು ಹಾಕುವ
ಸುಟ್ಟು ಸೀಯಿಸುವ
ಅತೃಪ್ತಿ ಅಸಮಾಧಾನಗಳು
ಧಗೆ—
ಉಷ್ಣಾಂಶ !
ಅಳತೆ ಮೀರಿದ್ದು,
ಒಳಗೊಳಗೇ ಹೊತ್ತಿ
ಉರಿಯುವ
ಅಸಹಾಯಕ
ದಲಿತ ದಾವಾನಲ ಜೀವಿಗಳು
ಹೊಗೆಯಾಡದ
ಸಿಡಿಯದ ಅನಲ ಗಿರಿಗಳ
ಸ್ಫೋಟದನಿರ್ದಿಷ್ಟತೆಯು
ಭೀತಿಯ ಭಾರದ
ವಾತಾವರಣ.
ಮುಗಿಲ ನೀಲಿಯು
ಮುಚ್ಚಿ ಮರೆಯಾಗಿಸಿದ
ನಿರಾಸೆ ನಿಟ್ಟುಸಿರುಗಳ
ದಟ್ಟ ಕಾರ್ಮೋಡಗಳ–
ಎದೆ ಹಿಂಡಿದಾಗ ಬರುವ
ಭಾರೀ ರಕ್ತಮಳೆಯಾಗುವ
ಮುಂನ್ಸೂಚನೆ.

ಉತ್ತರ ಪ್ರದೇಶಗಳಲ್ಲಿ
ಈಗಾಗಲೇ ಎದ್ದ
ಭಾರೀ ಬಿರುಗಾಳಿಗಳ
ತಂಡೋಪತಂಡ
ಮುತ್ತಿಗೆಯು ಏಕಕಾಲಕ್ಕೆಂಬ
ಮುನ್ಸೂಚನೆ.
ಹೀಗೆ ಏಳುವ ಬಿರುಗಾಳಿಗೆ–
ನೆಲ ಕೊಚ್ಚುವ
ತಲೆ ಕೆತ್ತುವ
ಗಾದಿ ಉರುಳಿಸುವ
ಟೋಪಿ ಹಾರಿಸುವ,
ಭರವಸೆಗಳ ಲೊಟಿಸುವ–
ನಾಲಗೆಗಳ, ತರಿವ,
ಗಿರಿ ಶಿಖರಗಳೆತ್ತರಕ್ಕೆ
ಅಪ್ಪನದೆಂದೆಣಿಸಿದಧಿಕಾರದ
ಆಸರೆಯ ಏಣಿಗೊರಗಿ
ನಿಂತವರ, ಉರುಳಿಸುವ
ಹಣೆ ಬರಹಕೆ
ಹೊಣೆ ಹೊರಿಸಿ
ದಮ್ಮಿಲ್ಲದೆದೆ ಮುದುಡಿ
ಮಲಗಿದ್ದವರನೆಬ್ಬಿಸುವ
ಉಬ್ಬಿಸುವ
ಕೊಬ್ಬಿಸುವ
ಸೇಡಿನುತ್ಸಾಹಕ್ಕೆ
ಮಂತ್ರಿಸುವ
ತಂತ್ರಿಸುವ,
ಅರಾಜಕ ರಾಜ್ಯಗಳ
ಧೂಳಿಪಟ ಮಾಡುವ,
ಧೂರ್ತ ದುಷ್ಟರ
ದೈತ್ಯ ಕವಳವಾಗಿಸುವ,
ಕಡಲುಗಳ ಕರೆತಂದು
ಜಲ ಸಮಾಧಿಯಾಗಿಸುವ

ಇರುವುದೆಲ್ಲವನೂ
ಇಲ್ಲವೇ ಇಲ್ಲವಾಗಿಸುವ
ಬದುಕೇ ಸೊನ್ನೆಯಾಗಿಸುವ
ಭಯಾನಕ
ವರದಿಯ ಮುನ್ಸೂಚನೆ.

" ಮಹಾಪಂಡಿತ " "ತ್ರಿಪಿಟಕಾಚಾರ್ಯ " " ಅಭಿನವ ಬುದ್ಧ " ರಾಹುಲ ಸಾಂಕೃತ್ಯಾಯನ

ಷಣ್ಮುಖಯ್ಯ ಅಕ್ಕೂರ ಮಠ

ರಾಹುಲು ಸಾಂಕೃತ್ಯಾಯನರ ಹೆಸರನ್ನು ಕೇಳದ ವಿದ್ವಾಂಸರು ಬಹುಶಃ ಇರಲಾರರು. ಜಾಗತಿಕ ವಿದ್ವನ್ಮಂಡಲಿಯಲ್ಲಿ ಅವರ ಸ್ಥಾನ-ಮಾನ ಉನ್ನತವಾದುದು. ಕೆಲವರಿಗೆ ಸತ್ತ ನಂತರ ಕೀರ್ತಿ ಲಭಿಸುತ್ತದೆ. ಆದರೆ ಮಹಾಪಂಡಿತ ರಾಹುಲ ಸಾಂಕೃತ್ಯಾಯನರು ಪಾಂಡಿತ್ಯ ಪ್ರತಿಭೆಗಳ ದಿಗ್ಗಜ. ಅವರಿಗೆ ಬದುಕಿದ್ದಾಗಲೂ ಕೀರ್ತಿ, ಸತ್ತಮೇಲೂ ಕೀರ್ತಿ. ಅದರ ಬೆಲೆ ಹೆಚ್ಚು ಕಡಿಮೆಯಾಗಲಿಲ್ಲ ಎಂದು ಅವರ ಸ್ನೇಹಿತ ಆಂಧ್ರ ಸಾಹಿತಿಯ ಹೇಳಿಕೆ ಅರ್ಥಪೂರ್ಣವಾಗಿದೆ. ಇಂತಹವರ ಸಂಖ್ಯೆ ಜಾಗತಿಕ ವಿದ್ವನ್ಮಂಡಲಿಯಲ್ಲಿ ವಿರಳವೆ ಸರಿ.

ಜನನ ಮತ್ತು ಬಾಲ್ಯ :

ರಾಹುಲ ಸಾಂಕೃತ್ಯಾಯನರು ದಿನಾಂಕ 9–4–1893 ರಲ್ಲಿ ಉತ್ತರ ಭಾರತದ ಉತ್ತರ ಪ್ರದೇಶದ ಅಜಮುಗಡ ಜಿಲ್ಲೆಯ 'ಪಂದಹಾ' ಎಂಬ ಹೆಸರಿನ ಒಂದು ಸಾಮಾನ್ಯ ಕುಟುಂಬದಲ್ಲಿ ಜ್ಯೇಷ್ಠ ಪುತ್ರನಾಗಿ ಜನ್ಮವೆತ್ತಿದರು. ತಂದೆ ಗೋವರ್ಧನ ಪಾಂಡೆ, ತಾಯಿ ಕುಲಪತೀ ದೇವಿ. ಇವರದು ಸಾಂಕೃತ್ಯ ಗೋತ್ರ. ಇವರ ಮನೆತನದ ಮುಖ್ಯ ಉದ್ಯೋಗ ವ್ಯವಸಾಯವಾಗಿತ್ತು. ರಾಹುಲಜಿಯವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಸ್ವಗ್ರಾಮದಲ್ಲಿಯೇ ಮುಗಿಸಿದರು. ನಂತರ ನಿಜಾಮಾಬಾದದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದರು. ಬಾಲ್ಯದಲ್ಲಿ ತಂದೆ ತಾಯಿಗಳು ಇವರನ್ನು ಕೇದಾರನಾಥ ಪಾಂಡೇಯ ಎಂದು ಕರೆಯುತ್ತಿದ್ದರು. ಅದೇ ತೊಟ್ಟಿಲ ನಾಮವೂ ಆಗಿತ್ತು. ಕೇದಾರನಾಥ ಪಾಂಡೆಯ ಚಿಕ್ಕವಯಸ್ಸಿನಲ್ಲಿಯೇ 'ಚುರುಕು' ಸ್ವಭಾವದವನಾಗಿದ್ದ ಸುಂದರನೂ ಆಗಿದ್ದ. ಶಾಲೆಯಲ್ಲಿ 'ಜಾಣ' ವಿದ್ಯಾರ್ಥಿ ಎಂಬ ಹೆಸರನ್ನು ಪಡೆದಿದ್ದ. ಅಷ್ಟೇ ಅಲ್ಲದೆ ಸ್ವಚ್ಛಂದ ಪ್ರವೃತ್ತಿಯವನೂ ಆಗಿದ್ದನು. ಮಾಧ್ಯಮಿಕ ಶಿಕ್ಷಣ ಪೂರೈಸಿದ ಮೇಲೆ (17 ವರ್ಷ) ಕೇದಾರನಾಥ ಪಾಂಡೇಯ ಮನೆಯನ್ನು ಬಿಟ್ಟು ಹೊರಟ ಕಾರಣ ಮಗನು ಇಂಗ್ಲೀಷ್ ಕಲಿತು ಆಫೀಸರ್ ಆಗಬೇಕೆಂದು ತಂದೆಯ ಬಯಕೆ. ಆದರೆ ಇದು ಕೇದಾರನಾಥ ಪಾಂಡೇಯನಿಗೆ

ಸರಿಗಾಣಲಿಲ್ಲ. ಮನೆಯಿಂದ ಕಾಲ್ತೆಗೆದ ; ಕಲ್ಕತ್ತೆಗೆ ಓಡಿಹೋದ, ತಿರುಗಿ ಮನೆಯನ್ನೇ ಸೇರಲಿಲ್ಲ. ಆಗಲೇ ದೇಶ ಪರ್ಯಟಣೆಗೆ ಆರಂಭವಾಯಿತು. ಅಯೋಧ್ಯೆ, ಹರಿದ್ವಾರ, ಗಂಗೋತ್ರಿ, ಜಮುನೋತ್ರಿ ಮುಂತಾದ ಕ್ಷೇತ್ರಗಳನ್ನು ಸುತ್ತಿದನು. ದೇಶ ಸುತ್ತುವುದಕ್ಕೂ ಅರ್ಹತೆ ಬೇಕು ಎನ್ನುವ ಅರಿವು ಉಂಟಾಗಿ ವಿದ್ಯಾರ್ಜನೆಯ ಹಂಬಲ ಬೆಳೆಯಿತು. ಬಿಹಾರದಲ್ಲಿ ಅಲೆದಾಡುತ್ತಿದ್ದಾಗ ಈ ಹುಡುಗನ 'ತೇಜಸ್ಸು' ಜಾಣ್ಮೆಯನ್ನು ಗುರುತಿಸಿ ಪರ್ಸಾ ಮಠದ ಸ್ವಾಮಿಯೊಬ್ಬರು ತಮ್ಮ ಪಟ್ಟದ ಶಿಷ್ಯನನ್ನಾಗಿ ಸ್ವೀಕರಿಸಿದರು. ಹಾಗೂ ಇವರಿಗೆ ದಾಮೋದರ ಸ್ವಾಮಿ ಎಂದು ನಾಮಂಕರಣ ಮಾಡಿದರು. ಆಗ ಇವರು ದಕ್ಷಿಣ ಭಾರತ ಪ್ರವಾಸವನ್ನೂ ಮಾಡಿದರು. ವಿಯದ್ ವಿಷ್ಣು ಪಥಗಾಮಿಯಾದ ಇವರ ಸ್ವಚ್ಛಂದ ಮನಸ್ಸಿಗೆ ಮಠದ ವಾತಾವರಣ ಸರಿಗಾಣಲಿಲ್ಲ. ಅಲ್ಲಿ ಸುಖ, ಭೋಗಕ್ಕೆ ಸಕಲ ಸೌಕರ್ಯಗಳಿದ್ದವು. ಸ್ವಭಾವತಃ ವಿರಕ್ತ ಮನಸ್ಸಿನ ಪ್ರಾಮಾಣಿಕ ವ್ಯಕ್ತಿಗೆ ಇದು ಸರಿ ಎನಿಸಲಿಲ್ಲ. ಹಾಗೂ ಇನ್ನೂ ಅಧ್ಯಯನ ಮುಂದುವರಿಸಬೇಕೆಂದು ಹಂಬಲ ಇವರಲ್ಲಿ ಬಲವಾಗಿ ಮೂಡಿತು. ಅಲ್ಲದೆ ಅಧ್ಯಯನದ ಒಲವು ಬಾಲ್ಯದಿಂದ ಬೆಳೆದು ಬಂದಿತ್ತು. ಹೀಗಾಗಿ ಅಲ್ಲಿ ಹೆಚ್ಚುಕಾಲ ನಿಲ್ಲಲಿಲ್ಲ. ಪ್ರೌಢ ವ್ಯಾಸಂಗಕ್ಕಾಗಿ ಕಾಶಿಗೆ ಪ್ರಯಾಣ ಮಾಡಿದರು. ಆಗ ಇವರಿಗೆ ಕೇವಲ 22 ವರ್ಷ.

ವಿದ್ಯಾಭ್ಯಾಸ :

ರಾಹುಲಜಿಯವರು ಭಾರತದ ವಿದ್ಯಾ ಕೇಂದ್ರವೆನಿಸಿದ್ದ ಕಾಶಿಯಲ್ಲಿ ಅನೇಕ ವರ್ಷಗಳ ಕಾಲ ನೆಲಸಿ ವ್ಯಾಕರಣ, ಸಾಹಿತ್ಯ ಹಾಗೂ ವಿವಿಧ ದರ್ಶನಗಳನ್ನು ಸಮಗ್ರ ವಾಗಿ ಅಧ್ಯಯನ ಮಾಡಿದರು. ಸಾಂಖ್ಯ ಯೋಗ, ನ್ಯಾಯ, ವೈಶೇಷಿಕ, ಮೀಮಾಂಸೆ, ವೇದಾಂತ ಇವುಗಳಲ್ಲಿ ಆಳವಾದ ಪಾಂಡಿತ್ಯ ಅಮೋಘ ಪ್ರೌಢಿಮೆಯನ್ನು ಗಳಿಸಿದ್ದರು.

ವಿವಿಧ ಮತ-ಧರ್ಮಗಳ ಅಧ್ಯಯನ

ರಾಹುಲಜಿಯವರು ಹಲವು ವರ್ಷಗಳ ಕಾಲ ವಾರಣಾಸಿಯಲ್ಲಿ ನೆಲೆ ನಿಂತು ಅಗಾಧ ಶ್ರದ್ಧೆ ಅದಮ್ಯ ಉತ್ಸಾಹದಿಂದ ಸನಾತನ ಹಿಂದೂ ಧರ್ಮದ ವೇದ, ಉಪನಿಷತ್, ಸ್ಮೃತಿ, ಪುರಾಣ ದರ್ಶನಗಳ ಪ್ರೌಢ ಗ್ರಂಥಗಳನ್ನೆಲ್ಲ ಅಭ್ಯಸಿಸಿ ಪ್ರಕಾಂಡ ಪಾಂಡಿತ್ಯವನ್ನು ಪಡೆದರು. ಧರ್ಮ ಜಿಜ್ಞಾಸೆಯಿಂದಾಗಿ ಅನೇಕ ಮತಗಳ ವಿದ್ವಾಂಸರೊಂದಿಗೆ ಆಗಾಗ ಚರ್ಚೆ ನಡೆಸುತ್ತಿದ್ದರು. ಇವರು ಕಾಶಿಯಲ್ಲಿ ಸಾಂಪ್ರದಾ ಯಿಕ ಶಿಕ್ಷಣ ಪದ್ಧತಿಯ ಪಾಂಡಿತ್ಯ ಪಡೆದಿದ್ದರೂ ಇವರ ಪಾಂಡಿತ್ಯ 'ಗಿಣಿ ಓದಿನಂತೆ' ಶುಷ್ಕವಾಗಿರಲಿಲ್ಲ. ಸ್ವಭಾವತಃ ಸ್ವತಂತ್ರ ವಿಚಾರ ಶೀಲರೂ ಪ್ರಗತಿ ಮನೋಭಾವ ದವರೂ ಆಗಿದ್ದರು. ಯಾವುದೇ ವಿಷಯವನ್ನು ತಮ್ಮ ನಿಶ್ಚಿತವಾದ ಸೂಕ್ಷ್ಮಮತಿ

ಯಿಂದ ಪರಾಮರ್ಶಿಸುವ ಪ್ರಜ್ಞೆ ಇವರಿಗಿತ್ತು. ವೇದವೇದಾಂತದ, ಸನಾತನ ಧರ್ಮದ ತತ್ವಗಳನ್ನೆಲ್ಲಾ ತಲಸ್ಪರ್ಶಿಯಾಗಿ ತಮ್ಮ ಪ್ರಖರ ವೈಚಾರಿಕ ಒರೆಗಲ್ಲಿನಲ್ಲಿ ಉಜ್ಜಿ ಪರೀಕ್ಷಿಸುವ ಪ್ರಾಮಾಣಿಕ ಸ್ವಭಾವವುಳ್ಳವರಾಗಿದ್ದರು. ಇಂತಹ ಮಹಾನ್ ವಿಚಾರವಾದಿಗಳಾದ ರಾಹುಲಜಿಯವರಿಗೆ ತಮ್ಮ ವ್ಯಾಸಂಗ ಮುಗಿದ ನಂತರ ಸನಾತನ ಹಿಂದೂ ಧರ್ಮಕ್ಕಿಂತ ದಯಾನಂದ ಸರಸ್ವತಿಗಳ ಆರ್ಯ ಸಮಾಜದ ಉದಾರ ಹಾಗೂ ಉದಾತ್ತ ತತ್ವಗಳು ಇವರನ್ನು ಆಕರ್ಷಿಸಿದುದರಲ್ಲಿ ಆಶ್ಚರ್ಯ ವೇನೂ ಇಲ್ಲ. ಹೀಗಾಗಿ ಇವರು ಆರ್ಯ ಸಮಾಜವನ್ನು ಪ್ರವೇಶಿಸಿ 'ಕೃಣ್ವಂತು ವಿಶ್ವಮಾರ್ಯಂ' ಎನ್ನುವ ವೇದ ಸಂದೇಶವನ್ನು ಕೆಲವು ವರ್ಷಗಳ ಕಾಲ ಭಾರತದ ತುಂಬಾ ಪ್ರಚಾರ ಮಾಡಿದರು. ವಿಶೇಷವಾಗಿ ಪಂಜಾಬ್ ಪ್ರಾಂತ್ಯದಲ್ಲಿ ಸಂಚರಿಸಿ ಆರ್ಯ ಧರ್ಮ ತತ್ವಗಳನ್ನು ಪ್ರಚಾರ ಮಾಡಿದರು.

ನಂತರ ಆರ್ಯ ಸಮಾಜದ ಹಿರಿಮೆ ಗರಿಮೆಗಳನ್ನು ಸಾರಲು ಇಸ್ಲಾಂ ಧರ್ಮದ ಅಧ್ಯಯನ ಅವಶ್ಯಕವೆನಿಸಿತು. ರಾಹುಲಜಿಯವರು ದೃಷ್ಟಿ ಇಸ್ಲಾಂ ಧರ್ಮದ ಕಡೆ ಹೊರಳಿತು. ಅದಕ್ಕಾಗಿ ಅರಬ್ಬಿ, ಪರ್ಶಿಯಾ, ಭಾಷೆಗಳ ಪ್ರಗಾಢ ಅಧ್ಯಯನ ನಡೆಸಿದರು. ಕುರಾನ್ ಸೂಫಿ ಮತಗಳನ್ನು ಕುರಿತು ಉದಾರ ಮನಸ್ಸಿನಿಂದ ಪ್ರೌಢವ್ಯಾಸಂಗ ನಡೆಸಿದರು. ಅದರ ಫಲವಾಗಿ 'ಇಸ್ಲಾಂ ಧರ್ಮ' ಎಂಬ ಕೃತಿ ಯನ್ನು ರಚಿಸಿದರು. ನಂತರ 1917 ರಲ್ಲಿ ನಡೆದ ರಶ್ಯಾದ ಕ್ರಾಂತಿ ಜಾಗತಿಕ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಬರೆದ ಅಧ್ಯಾಯವಾಗಿದೆ. ಅದರ ಪ್ರಭಾವ ಪಾಶ್ಚಾತ್ಯ ರಾಷ್ಟ್ರಗಳ ಮೇಲೂ ಪ್ರಬಲವಾಗಿ ಆಯಿತು. ಆ ಕ್ರಾಂತಿಯನ್ನು ಗಮನಿಸಿದ ಈ ಕ್ರಾಂತ ದರ್ಶಿ ರಾಹುಲಜಿಯವರು ನಮ್ಮ ಸಮಾಜದಲ್ಲೂ ಇಂಥಹ ಬದಲಾವಣೆಗಳು ಏಕಾಗಬಾರದು ಎನ್ನುವ ತೀವ್ರ ವಿಚಾರಕ್ಕೊಳಗಾದರು.

ದೇಶ-ಭಕ್ತಿ ಮತ್ತು ದೀನದಲಿತರ ಸೇವೆ :

ಇವರ ಮನಸ್ಸಿನಲ್ಲಿ ಕ್ರಾಂತಿಯ ವಿಚಾರ ಚಕ್ರ ಪರಿಭ್ರಮಣ ಮಾಡಿತು. ಅದರ ಫಲವಾಗಿ (ಬಾಯೀಸ್ ಸದೀ ಭಾರತ್) 22ನೇ ಶತಮಾನದ ಭಾರತವೆಂಬ ಬೃಹತ್ ಕಾದಂಬರಿಯನ್ನು ರಚಿಸಿದರು. ಭಾರತದ ಸಮತಾವಾದದ ಭವ್ಯ ಆದರ್ಶದ ಕಲ್ಪನಾ ಚಿತ್ರವನ್ನು ಅದರಲ್ಲಿ ನಾವು ಕಾಣುತ್ತೇವೆ. ಭಾರತದಲ್ಲಿ ಅಸಹಕಾರ ಚಳುವಳಿ ಒಂದು ಸಾವಿರದೊಂಬೈನೂರ ಇಪ್ಪತ್ತರಲ್ಲಿ (1920) ಉಗ್ರವಾಗಿ ಸಾಗಿತ್ತು. ರಾಷ್ಟ್ರ ಪ್ರೇಮಿಯಾಗಿದ್ದ ರಾಹುಲಜಿ ಈ ಆಂದೋಲನದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಅದರ ಪರಿಣಾಮವಾಗಿ ಜೇಲು ಕಂಡರು. 2 ವರ್ಷ ಜೈಲಿನಲ್ಲಿದ್ದಾಗ ಗಣಿತ ಜ್ಯೋತಿಷ್ಯ ಶಾಸ್ತ್ರದ ಅಧ್ಯಯನ ಮಾಡಿದರು. ಮತ್ತು ತಮ್ಮ ಬಾಯಿಸ್ ಸದೀ ಭಾರತವೆಂಬ ಬೃಹತ್ ಕಾದಂಬರಿಯನ್ನು ಸಂಸ್ಕೃತದಲ್ಲಿ ಅನುವಾದಿಸಿದರು. ನಂತರ ಜೈಲಿನಿಂದ

ಬಿಡುಗಡೆ ಹೊಂದಿ ಬಂದರು. ಮತ್ತೆ ಬಿಹಾರದಲ್ಲಿ ರೈತರ ಸಂಘಟನೆ ಮಾಡಿದರು. ನೆರೆ ಹಾವಳಿ ಸಾಂಕ್ರಾಮಿಕ ರೋಗಗಳಿಂದ ಪೀಡಿತರಾದ ದೀನದಲಿತರ ಸೇವೆ ಮಾಡಿದರು. ಆಮೇಲೆ ರಾಜಕೀಯ ರಂಗದಲ್ಲಾದ ಬದಲಾವಣೆಗಳು ಇವರಿಗೆ ಸರಿಗಾಣಲಿಲ್ಲ. ರಾಜಕಾರಣದಿಂದ ನಿವೃತ್ತಿ ಪಡೆದರು. ಕೂಡಲೆ ಕಾಶ್ಮೀರಕ್ಕೆ ಸಂಚಾರ ಹೊರಟರು.

ಬೌದ್ಧ ಧರ್ಮದ ಅಧ್ಯಯನ :

ವೈದಿಕ ಧರ್ಮದ ಯಜ್ಞಯಾಗಾದಿಗಳನ್ನು ಬೌದ್ಧಮತ ನಿಷೇಧಿಸುತ್ತದೆ. ಅದೂ ಹೇಳುವುದರಲ್ಲೂ ಸತ್ಯವಿರಬೇಕೆಂದು ಅನಿಸಿದ್ದೇ ತಡ ರಾಹುಲಜಿಯವರು ಜ್ಞಾನಭಿಕ್ಷುವಾಗಿ ಬೌದ್ಧ ಧರ್ಮದ ತತ್ವಗಳತ್ತ ತಮ್ಮ ಗಮನ ಹರಿಸಿದರು. ಪಾಲಿ ಪ್ರಾಕೃತ ಭಾಷೆಗಳ ಅಧ್ಯಯನ ಜೈನ ಬೌದ್ಧದ ಮೂಲ ಗ್ರಂಥಗಳ ಅಭ್ಯಾಸ ಸಾಗಿತು. ಆರ್ಯ ಧರ್ಮ ತತ್ವಗಳಿಗಿಂತ ಇಸ್ಲಾಂ ಧರ್ಮದ ತತ್ವಗಳಿಗಿಂತ, ತೀರ ಉದಾರವಾದ ಹಾಗೂ ನವ ಸಮಾಜ ನಿರ್ಮಾಣಕ್ಕೆ ಅನುಕೂಲವಾದ ಮಹಾ ಮಾನವ, ಲೋಕ ಕಾರುಣ್ಯ ಮೂರ್ತಿ ಬುದ್ಧನ ತತ್ವಗಳು ಇವರನ್ನು ಆಕರ್ಷಿಸಿದವು. ಬೌದ್ಧ ಸಾಹಿತ್ಯ ಮತ ತತ್ವಗಳನ್ನು ಆಳವಾಗಿ ಅಧ್ಯಯನ ಮಾಡಿದಂತೆ ಅವರ ವಿಚಾರ ಕ್ಷಿತಿಜ ವಿಸ್ತಾರವಾಯಿತು. ಆಗ ಅವರು ಒಂದು ಕಡೆ ತಮ್ಮ ಅಭಿಪ್ರಾಯ ಹೀಗೆ ತಿಳಿಸುತ್ತಾರೆ, "ಎಲ್ಲಿಯ ಸ್ವೇಚ್ಛಾ ಜೀವಿಯಾದ ಬುದ್ಧ ? ಎಲ್ಲಿ ವೇದಗಳಿಗೂ, ದೈವಕ್ಕೂ, ಆತ್ಮಕ್ಕೂ ಗುಲಾಮರಾದ ದಯಾನಂದ ಸರಸ್ವತಿ ?" ಎಂದು ಕಟುವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ರಾಹುಲಜಿ 1927 ರಲ್ಲಿ ಬೌದ್ಧ ಧರ್ಮದ ವಿಸ್ತೃತ ಅಧ್ಯಯನಕ್ಕಾಗಿ ಸಿಂಹಳಕ್ಕೆ ಹೋದರು. ಅಲ್ಲಿ ಅವರಿಗೆ 'ವಿದ್ಯಾಲಂಕಾರ' ಮಹಾ ವಿದ್ಯಾಲಯದಲ್ಲಿ ಪ್ರಾಧ್ಯಾಪಕ ಹುದ್ದೆ ಲಭಿಸಿ ಬೌದ್ಧ ಭಿಕ್ಷುಗಳಿಗೆ ಪಾಲಿ ಭಾಷೆಯಲ್ಲಿ ಸಂಸ್ಕೃತವನ್ನು ಬೋಧಿಸುತ್ತಿದ್ದರು. ಸಿಂಹಳದಲ್ಲಿ ಬೌದ್ಧ ಧರ್ಮದ ಪ್ರಗಾಢ ವ್ಯಾಸಂಗದೊಂದಿಗೆ ಬೌದ್ಧರ ತ್ರಿಪಿಟಕಗಳನ್ನು ಪ್ರಾಕೃತದಿಂದ ಹಿಂದಿಗೆ ಅನುವಾದ ಮಾಡಿದರು. ಅವರ ಈ ಪಾಂಡಿತ್ಯಕ್ಕೆ ಮೆಚ್ಚಿ ಸಿಂಹಳದ ಬೌದ್ಧ ವಿದ್ವಾಂಸರು ತ್ರಿಪಿಟಕಾಚಾರ್ಯ ಎಂಬ ಬಿರುದನ್ನು ಕೊಟ್ಟರು. ನಂತರ ರಾಹುಲಜಿ ಯವರು ಲಂಕಾ, ಬರ್ಮಾ, ಟಿಬೇಟ್, ಚೀನಾ, ಯುರೋಪ್, ಹಾಗೂ ಮಧ್ಯಏಷ್ಯ ಮೊದಲಾದ ರಾಷ್ಟ್ರಗಳ ಸಂಚಾರವನ್ನು ಕೈಗೊಂಡರು. ಸಾಂಸ್ಕೃತಿಕ ರಾಯಭಾರಿಯಾಗಿ ವಿದೇಶಗಳನ್ನು ಸುತ್ತಿದರು. ನಂತರ ಕೆಲವು ಕಾಲ ಸಿಂಹಳ ದಲ್ಲಿಯೇ ನೆಲೆಸಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಆಗ ಅವರು 'ರಾಹುಲ ಸಾಂಕೃತ್ಯಾಯನ' ಎಂಬ ನೂತನ ಹೆಸರನ್ನು ಪಡೆದರು. ಅದೇ ಹೆಸರಿನಿಂದ ಜಗ ದ್ವಿಖ್ಯಾತರಾದರು.

ಬೌದ್ಧ ಭಿಕ್ಷುವಾಗಿ : ಸಂಶೋಧನೆ ಮತ್ತು ಗ್ರಂಥ ಸಂಪಾದನೆ ;

ಬೌದ್ಧ ಭಿಕ್ಷುವಾಗಿ ಭಾರತಕ್ಕೆ ಮರಳಿ ಬಂದನಂತರ ಬೌದ್ಧ ಧರ್ಮದ ಅನೇಕ ಉದ್ಗ್ರಂಥಗಳನ್ನು ಹಿಂದಿಗೆ ಅನುವಾದಿಸಿದರು. ಮತ್ತು ಭಾರತದಲ್ಲಿ ಬೌದ್ಧ ಧರ್ಮದ ತತ್ವಗಳ ಪ್ರಚಾರದಲ್ಲಿ ಕೆಲವು ವರ್ಷ ನಿರತರಾಗಿದ್ದರು. ನಂತರ 1930ರಲ್ಲಿ ರಾಹುಲಜಿ ನೇಪಾಳ ಮತ್ತು ಟಿಬೇಟಿನ ಯಾತ್ರೆಯನ್ನು ಕೈಗೊಂಡರು. ಈ ಯಾತ್ರೆ ಬೌದ್ಧ ಧರ್ಮದ ವಿಶೇಷ ವ್ಯಾಸಂಗ ಹಾಗೂ ಸಂಶೋಧನೆಗಾಗಿಯೇ ಇತ್ತು. ಆದರೆ ಅವರು ಟಿಬೇಟಿಗೆ ಹೋಗಲು ಸರ್ಕಾರದ ಒಪ್ಪಿಗೆ ಆ ಸಮಯದಲ್ಲಿ ಸುಲಭವಾಗಿ ದೊರೆಯುವಂತಿರಲಿಲ್ಲ. ಟಿಬೆಟ್‌ಗೆ ಹೋಗಬೇಕಾದರೆ ದುರ್ಗಮ ಮಾರ್ಗವನ್ನು ಕ್ರಮಿಸಿ ನೇಪಾಳದ ಮೇಲೆ ಹಾಯ್ದು ಹೋಗಬೇಕಾಗಿತ್ತು. ಮಹಾಶಿವರಾತ್ರಿಯ ಪರ್ವಕಾಲದಲ್ಲಿಯೇ ಹಿಂದುಗಳಿಗೆ ಪ್ರವೇಶಾವಕಾಶ ಇತ್ತು. ಆ ಕಾಲದಲ್ಲಿ ನೇಪಾಳಿಗಳ ಹೊರತು ಇತರರನ್ನು ಟಿಬೆಟ್‌ನಲ್ಲಿ ಬರಗೊಡುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಬಹಳ ಪರಿಶ್ರಮದಿಂದ ನೇಪಾಳಿ ವೇಷ ಭೂಷಣ ಧರಿಸಿ ಟಿಬೇಟ್ ಅನ್ನು ಸೇರಿದರು. ಅಲ್ಲಿ 15 ತಿಂಗಳು ಅವರು ಇದ್ದರು. ರಾಹುಲಜಿಯವರಿಗೆ ಟಿಬೇಟ್ ಭಾಷಾ ಪರಿಚಯವೂ ಇತ್ತು. ಸಂಕಲ್ಪ, ಶ್ರದ್ಧೆ, ಸಾಹಸಗಳ ಸಾಕಾರ ಮೂರ್ತಿ ರಾಹುಲಜಿಯವರಿಗೆ ಎಲ್ಲಾ ಭಾಷೆ ಜ್ಞಾನಗಳು ತುಂಬಾ ಸರಳವೆಂದು ತೋರುತ್ತಿದ್ದವು. ಆದ್ದರಿಂದ ಭರತಖಂಡದಲ್ಲಿ ಅಷ್ಟೇ ಅಲ್ಲ ಜಾಗತಿಕ ರಂಗದಲ್ಲಿ ಅವರು ಬಹು ಭಾಷಾ ವಿಶಾರದರಾಗಿದ್ದರು. ಸಂಸ್ಕೃತ, ಪಾಲಿ, ಪ್ರಾಕೃತ, ಅಪಭ್ರಂಶ, ಪಾರಸೀ, ಇಂಗ್ಲೀಷ್, ಟಿಬೇಟ್, ಚೀಣಿ, ರಷ್ಯಾ, ಮಂಗೋಲಿಯನ್, ಫ್ರೆಂಚ್, ಜರ್ಮನಿ, ಅಲ್ಲದೆ ಭಾರತೀಯ ಎಲ್ಲಾ ಪ್ರಾಂತೀಯ ಭಾಷೆಗಳಲ್ಲಿ ಅವರಿಗೆ ಬರಿ ಪರಿಚಯವಿರಲಿಲ್ಲ, ಮಹಾ ಪಾಂಡಿತ್ಯವಿತ್ತು. ನಿರರ್ಗಳವಾಗಿ ನೀರು ಕುಡಿದಂತೆ ಅವರು ಹಲವು ಭಾಷೆಗಳಲ್ಲಿ ಸಂಭಾಷಿಸುತ್ತಿದ್ದರು. ಇಂತಹ ಬಹುಭಾಷಾ ಕೋವಿದ ರಾಹುಲಜಿ ಭಾಷಾ ಶಾಸ್ತ್ರಜ್ಞರಲ್ಲಿ ಅಗ್ರಗಣ್ಯ ಹಾಗೂ ಅಗ್ರಮಾನ್ಯರಾಗಿದ್ದರು. ತಮ್ಮ ಟಿಬೇಟ್ ಯಾತ್ರೆಯಲ್ಲಿ ಕಂಬಳಿ ಹೊದಿದುಕೊಂಡು ಬೌದ್ಧ ಭಿಕ್ಷುವಾಗಿ ಹಿಮಾಲಯ ಪ್ರದೇಶದಲ್ಲಿ ಟಿಬೇಟ್ ನೇಪಾಳದ ಭಾಗಗಳಲ್ಲಿ ಸಂಚಾರ ಮಾಡಿದರು. ಟಿಬೇಟ್‌ನಲ್ಲಿ ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಅಲ್ಲದೆ ಐತಿಹಾಸಿಕ ಮಹತ್ವದ ಚಿತ್ರಗಳನ್ನು ಕಲಾಕೃತಿಗಳನ್ನು 22 ಹೇಸರಗತ್ತೆಗಳ ಮೇಲೆ ಹೇರಿಸಿ ಕೊಂಡು ಭಾರತಕ್ಕೆ ಬಂದರು. ಅವನ್ನೆಲ್ಲಾ ಪಾಟ್ನಾ ಸಂಗ್ರಹಾಲಯಕ್ಕೆ ಕೊಟ್ಟರು. ಕೆಲವಾರು ತಿಂಗಳು ಭಾರತದಲ್ಲಿ ನೆಲಸಿ ಪುನಃ 1934 ರಲ್ಲಿ ಅವರು ಟಿಬೇಟ್ ಯಾತ್ರೆ ಕೈಗೊಂಡರು. ಈ ಸಾರಿ ಅವರಿಗೆ ಪ್ರಭಾಕರ ಗುಪ್ತನ 'ಪ್ರಮಾಣ ವಾರ್ತಿಕ ಭಾಷ್ಯ'ದ ಅಲಭ್ಯ ಹಾಗೂ ಅಪೂರ್ವ ಗ್ರಂಥ ಲಭಿಸಿತು. 'ಬಡವನು ಕಂಡ ಕಡವರ'ದಂತೆ ಇವರಿಗೆ ಅತೀವ ಸಂತೋಷವಾಯಿತು. ಅವರು ಪಡೆದ ಯಶಸ್ಸನ್ನು ಜಗತ್ತೇ ಕೊಂಡಾಡಿತು. ಅನೇಕ ಜನ ಸಂಶೋಧಕರಿಗೆ ಬಹಳ ವರ್ಷಗಳಿಂದ ಈ

ಕೃತಿ ಲಭಿಸಿರಲಿಲ್ಲ. ಕೆಲವಾರು ತಿಂಗಳು ಅಲ್ಲಿದ್ದು ಬೌದ್ಧ ಗ್ರಂಥಗಳ ಅಧ್ಯಯನ ಸಂಶೋಧನೆಯಲ್ಲಿ ನಿರತರಾಗಿದ್ದರು. ಪುನಃ ಭಾರತಕ್ಕೆ ಮರಳಿ ಬಂದರು. ಬೌದ್ಧ ಧರ್ಮದ ಮೇಲೆ ಗ್ರಂಥಗಳನ್ನು ಬರೆಯುತ್ತಿದ್ದರು. ಸಿಂಹಳದಿಂದ ಯೂರೋಪ್‌ಗೆ ಹೋದ ಬೌದ್ಧ ವಿದ್ವಾಂಸರಲ್ಲಿ ಇವರಿಗೂ ಗಣ್ಯ ಸ್ಥಾನವಿತ್ತು. ಆದ್ದರಿಂದ ಆಗ ಇಂಗ್ಲೆಂಡ್, ಫ್ರಾನ್ಸ್, ಜರ್ಮನ್‌ಗಳನ್ನು ಸಂದರ್ಶಿಸಿ ಶ್ರೇಷ್ಠ ಪಾಶ್ಚಿಮಾತ್ಯ ವಿದ್ವಾಂಸರ ಪರಿಚಯ ಮಾಡಿಕೊಂಡರು.

ಸನ್ಯಾಸದಿಂದ ಗೃಹಸ್ಥಾಶ್ರಮಕ್ಕೆ

1937ರಲ್ಲಿ ರಾಹುಲಜಿಯವರಿಗೆ ರಷ್ಯಾದೇಶದ ಲೆನಿನ್‌ಗ್ರಾಡ್ ವಿಶ್ವವಿದ್ಯಾನಿಲಯದಿಂದ ಸಂಶೋಧನೆ ಕರೆಬಂದಿತು. ರಾಹುಲಜಿಯವರು ರಷ್ಯಾಕ್ಕೆ ಪ್ರಯಾಣ ಮಾಡಿದರು. ಅಲ್ಲಿ ಲೆನಿನ್ ಗ್ರಾಡ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ, ಅಧ್ಯಾಪನ, ಸಂಶೋಧನೆ ಹಾಗೂ ಗ್ರಂಥ ರಚನೆಯ ಕಾರ್ಯವನ್ನು ಕೈಗೊಂಡರು. ಅದೇ ವಿಶ್ವವಿದ್ಯಾನಿಲಯದಲ್ಲಿ ಇವರ ಸಂಶೋಧನಾ ವಿಭಾಗದಲ್ಲಿ ಸಹಾಯಕ ಸಂಶೋಧಕರಾಗಿದ್ದ 'ಎಲ್ಸೆನಾ' ಎಂಬ ವಿದೂಷಿಯೊಂದಿಗೆ ಪರಸ್ಪರ ಪರಿಚಯ ಪ್ರೀತಿ ಬೆಳೆದು ಪರಿಣಯದಲ್ಲಿ ಪರ್ಯಾವಸಾನವಾಯಿತು. ಆಗ ಅವರ ವಯಸ್ಸು 44. ಅವಳದು 35 ವರ್ಷಗಳು ಪರಸ್ಪರ ಒಪ್ಪಿ ಗಾಂಧರ್ವ ವಿವಾಹವಾದರು. ಕೆಲವು ತಿಂಗಳ ಕಾಲ ಅಲ್ಲಿದ್ದರು. ಕರ್ತವ್ಯದ ಕರೆ ಅವರನ್ನು ಭಾರತಕ್ಕೆ ಮತ್ತೆ ಕೈಮಾಡಿ ಕರೆಯುತ್ತಿತ್ತು. ಆಗ ಅವರ ನೆಚ್ಚಿನ ಅಚ್ಚುಮೆಚ್ಚಿನ ಮಡದಿ 'ಎಲ್ಸೆನಾ' ಆಗ ತುಂಬು ಗರ್ಭಿಣಿಯಾಗಿದ್ದಳು. ಆದರೂ ಹೆಂಡತಿಯ ಮೋಹ, ಮುಂದೆ ಜನಿಸಲಿರುವ ಮಗನ ವಾತ್ಸಲ್ಯ ಮಮತೆಗಳು ಇವರನ್ನು ತಡೆಹಿಡಿಯಲು ಸಮರ್ಥವಾಗಲಿಲ್ಲ. ಆಗ ರಾಹುಲಜಿಯವರು ಮೋಹ ಮಮಕಾರಗಳನ್ನು ತ್ಯಜಿಸಿ ಸಿದ್ಧಾರ್ಥನಂತೆ ಹೊರಟುಬಿಟ್ಟರು, ಸಂಶೋಧನಾ ಕ್ಷೇತ್ರದಲ್ಲಿ ಸಮರ್ಪಕವಾಗಿ ಅಲ್ಲಿ ಸೇವೆ ಸಲ್ಲಿಸಿದ್ದರು. ಪುನಃ ಭಾರತಕ್ಕೆ ಮರಳಿದರು. ಅವರು ಇತ್ತಬಂದ ನಂತರ ಒಂದೆರಡು ತಿಂಗಳುಗಳಲ್ಲಿ ಎಲ್ಸಿನಾ ಗಂಡು ಮಗುವಿನ ತಾಯಿಯಾದಳು. ಆ ಮಗುವಿನ ಹೆಸರು 'ಇದಾರ್'. ನಂತರ ಕೆಲವು ವರ್ಷದ ಮೇಲೆ ಭಾರತದಲ್ಲಿ ಸ್ಥಿರವಾಗಿ ನೆಲೆನಿಲ್ಲಬೇಕೆಂದು ಗೃಹಸ್ಥಾಶ್ರಮಿಯಾಗಬೇಕೆಂದು ಭಾರತೀಯ ಮಹಿಳೆಯೊಂದಿಗೆ ಪುನಃ ವಿವಾಹವಾದರು. ಆಗ ಇವರ ವಯಸ್ಸು 56. ಭಾರತೀಯ ಮಡದಿಯ ಹೆಸರು 'ಕಮಲ' ಡಾರ್ಜಿಲಿಂಗಿನಲ್ಲಿ ಇವರು ವಾಸಿಸುತ್ತಿದ್ದರು. ಅವರಿಗೂ ಜಯ, ಜೇಲಾರ್ ಎಂಬ ಇಬ್ಬರು ಗಂಡು ಮಕ್ಕಳಾದರು.

ಪುನಃ ಟಿಬೇಟಿಗೆ

ಈ ಮಧ್ಯೆ ಸರ್ಕಾರದ ಪ್ರತಿನಿಧಿಯಾಗಿ ರಾಹುಲರು ಟಿಬೇಟಿಗೆ ಹೋಗಬೇಕಾಗಿ ಬಂದಿತು. ಅಲ್ಲಿಯ ಸಂಸ್ಕೃತ ಗ್ರಂಥಗಳ ಸುಮಾರು ಒಂದೂವರೆ ಲಕ್ಷ

ಶ್ಲೋಕಗಳ ಫೋಟೋ ತೆಗೆದುಕೊಂಡರು. 50 ಸಾವಿರ ಶ್ಲೋಕಗಳ ನಕಲು ಮಾಡಿಕೊಂಡರು. ಆಗ ಇವರಿಗೆ ಕ್ರಿ.ಶ. 9ನೇ ಶತಮಾನದ ನಾಥ ಪಂಥದ ಒಂದು ಕಾವ್ಯ ದೊರಕಿತು. ಸರ್ಕಾರದ ಪ್ರತಿನಿಧಿಯಾಗಿ ಹೋಗಿದ್ದರೂ ತಮ್ಮ ವೆಚ್ಚಕ್ಕಾಗಿ ಕೇವಲ 100 ರೂಪಾಯಿಗಳನ್ನು ತೆಗೆದುಕೊಂಡಿದ್ದರು. ಅಂತಹ ಪ್ರಾಮಾಣಿಕ ಜೀವನ ಅವರದ್ದಾಗಿತ್ತು.

ಜ್ಞಾನ ಜಂಗಮ

ರಾಹುಲಜಿಯವರು ಪ್ರವಾಸದಲ್ಲಿ ಹೆಚ್ಚು ಅಭಿರುಚಿಯುಳ್ಳವರಾಗಿದ್ದರು. ಅವರು ಚಲಿಸುವ ವಿಶ್ವಕೋಶವಾಗಿದ್ದರು. ಹಿಮಾಲಯ ಪ್ರದೇಶದ ಪೂರ್ವದಿಂದ ಪಶ್ಚಿಮದವರೆಗೆ ದಕ್ಷಿಣದಿಂದ ಉತ್ತರದವರೆಗೆ ಅವರು ಕಾಲಿಡದ ಪ್ರದೇಶವೇ ಇರಲಿಲ್ಲ. ರಾಕ್ಷಸ ಮೇಧಾವಿ ವ್ಯಾಸಂಗ ತಪಸ್ವಿ, ವಿಮರ್ಶಕ, ವಿಶ್ಲೇಷಕ, ಸಂಶೋಧಕ, ತರ್ಕ ಶುದ್ಧ ಜ್ಞಾನಿಯಾಗಿದ್ದರು. ಅಲ್ಲದೆ ಇತಿಹಾಸಕಾರ, ದಾರ್ಶನಿಕ, ಸಮಾಜ ತತ್ವಜ್ಞಾನಿಯೂ ಹೌದು. ಅವರು ಬರೆದ ಪ್ರವಾಸ ಸಾಹಿತ್ಯದ ಕೃತಿಗಳಲ್ಲಿ ಜಾಗತಿಕ ಜನಜೀವನದ ಪ್ರಾಚೀನ ಹಾಗೂ ಅರ್ವಾಚೀನ ನಾಗರೀಕತೆಗಳನ್ನು ಸೃಷ್ಟಿಯ ಸೊಬಗನ್ನೂ ಕಾಣುತ್ತೇವೆ.

ಮಹಾ ಪಂಡಿತ ಮಹಾನ್ ಲೇಖಕ

ರಾಹುಲಜಿಯವರು ಕಥೆ ಕಾದಂಬರಿ ನಾಟಕದಿಂದ ಹಿಡಿದು ಧರ್ಮ, ಇತಿಹಾಸ, ಸಮಾಜ ಶಾಸ್ತ್ರ, ಭಾಷಾಶಾಸ್ತ್ರ-ಲಿಪಿಶಾಸ್ತ್ರ-ಪುರಾತತ್ವ. ಪ್ರವಾಸ ಸಾಹಿತ್ಯ ಹೀಗೆ ಎಲ್ಲಾ ವಿಷಯಗಳ ಮೇಲೂ ಅಧಿಕೃತವಾದ ಗ್ರಂಥಗಳನ್ನು ಬರೆದು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. 'ಅವು ಮುಟ್ಟದ ಗಿಡವಿಲ್ಲ' ಎನ್ನುವ ಗಾದೆಯಂತೆ ಅವರು ಅರಿಯದ ಜ್ಞಾನವಿರಲಿಲ್ಲ. ತಿಳಿಯದ ಭಾಷೆಯಿರಲಿಲ್ಲ, ನೋಡದ ದೇಶವಿರಲಿಲ್ಲ. ಇವರು ಬರೆದ ಕೃತಿಗಳು ಸಂಸ್ಕೃತದಲ್ಲಿ 3, ಹಿಂದಿಯಲ್ಲಿ ಕಾದಂಬರಿ, ನಾಟಕ, ಕತೆ, ಪ್ರಬಂಧ –ಇತಿಹಾಸ ಪ್ರವಾಸ–ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ಸುಮಾರು 100ಕ್ಕೆ ಹೆಚ್ಚು ಕೃತಿಗಳನ್ನು ಇವರು ರಚಿಸಿದ್ದಾರೆ. ಇವರ ಗ್ರಂಥ ರಾಶಿಯಲ್ಲಿ ಬುದ್ಧ ಚರ್ಯ, ಬೌದ್ಧ ಸಂಸ್ಕೃತಿ, ದೀರ್ಘನಿಕಾಯ, ವಿನಯ ಪೀಠಕ, ಅಭಿಧರ್ಮ ಕೋಶ, 22ನೇ ಶತಮಾನದ ಭಾರತ, ಬೌದ್ಧ ದರ್ಶನ, ಮಜ್ಜಿಮ ನಿಕಾಯ, ಧಮ್ಮಪದ, ಓಲಗಾಗಂಗಾ, ಮಾನವ ಸಮಾಜ, ವೈಜ್ಞಾನಿಕ ಭೌತಿಕವಾದ, ವಿಶ್ವಕೀ ರೂಪ ರೇಖಿ, ದರ್ಶನ ದಿಗ್ದರ್ಶನ, ಇವು ಅವರ ಶ್ರೇಷ್ಠ ಕೃತಿಗಳೆಂದು ಹೆಸರಾಗಿವೆ. ಅವು ಅಲ್ಲದೆ ಜಗತ್ತಿನ ವಿದ್ವಾಂಸರ ಗಮನವನ್ನು ಸೆಳೆದು ವಿವಿಧ ಭಾಷೆಗಳಿಗೆ ಭಾಷಾಂತರಗೊಂಡಿವೆ. ರಾಹುಲಜಿಯವರು ತಮ್ಮ ಹೆಚ್ಚು ಕೃತಿಗಳನ್ನು ಹಿಂದಿಯಲ್ಲಿಯೇ ಬರೆದಿದ್ದಾರೆ. ಅವರ ಶೈಲಿ ಸರಳ ಸುಂದರ

ವಾಗಿದ್ದು ಜನರ ಆಡು ನುಡಿಗೆ ಚಿರ ಪರಿಚಿತವಾದದ್ದು. ಅವರ ಸಂಸ್ಕೃತ ಶೈಲಿಯನ್ನು ಕಂಡು ಪಾಶ್ಚಿಮಾತ್ಯ ವಿದ್ವಾಂಸರು (ಫ್ರಾನ್ಸಿಸ ರೆವಿ, ಜಾರ್ಜ್ ಕೋರಿಕ್ ಪ್ರಕಾಂಡ ಕೀರ್ತಿ ಪಂಡಿತರು), ಇವರನ್ನು ಅಶ್ವಘೋಷ, ನಾಗಾರ್ಜುನ, ವಸುಬಂಧರಿಗೆ ಹೋಲಿಕೆ ಮಾಡಿದ್ದಾರೆ. ಇವರಲ್ಲಿದ್ದ ಅಗಾಧಧೀ ಶಕ್ತಿ ಅನುಪಮ ಗ್ರಂಥರಚನಾ ಶಕ್ತಿ ಅಪ್ರತಿಮ ಸಂಶೋಧನಾ ಶಕ್ತಿ ಎಂಥಾ ವಿದ್ವಾಂಸರನ್ನೂ ಬೆರಗುಗೊಳಿಸುತ್ತಿದ್ದವು. ಇದೇ ಸಂದರ್ಭದಲ್ಲಿ ಅವರ ಘನವಾದ ಪಾಂಡಿತ್ಯಕ್ಕೆ ಬೆರಗಾಗಿ ಕಾಶಿಯ ವಿದ್ವತ್‌ಮಂಡಳಿ 'ಮಹಾ ಪಂಡಿತ' ಎನ್ನುವ ಪ್ರಶಸ್ತಿಯನ್ನು ದಯಪಾಲಿಸಿತು. ರಾಹುಲಜಿ ಮಹೋನ್ನತ ಬರಹಗಾರರಾಗಿದ್ದರು. ಒಂದೇ ರಾತ್ರಿ ಸಹಸ್ರ ಸಹಸ್ರ ಪುಟ ಬರೆಯುವಷ್ಟು ಅವರ ಲೇಖನ ವೇಗವಾಗಿತ್ತು. ಬಹುಮುಖ ಪ್ರತಿಭೆಯ ಬಹುಭಾಷಾ ವಿಶಾರದರಾಗಿದ್ದ ರಾಹುಲಜಿಯವರ ಭಾಷೆಯ ಪ್ರಯೋಗ ಅದ್ಭುತ. ಶಬ್ದ ಸಂಪತ್ತು ಅಪಾರ.

ಮಹಾ ಮಾನವ

ರಾಹುಲಜಿಯವರು ಭಾರತೀಯ ಷಡ್ದರ್ಶನಗಳನ್ನು ಆಳವಾಗಿ ಅಭ್ಯಸಿಸಿದಂತೆ ಪಾಶ್ಚಾತ್ಯದರ್ಶನವನ್ನು ಅಭ್ಯಾಸ ಮಾಡಿದ್ದರು. ಶಂಕರ, ರಾಮಾನುಜ, ಮಧ್ವ, ನಿಂಬಾರ್ಕರ, ಜೈನ ಬೌದ್ಧ ತತ್ವಗಳ ಮೇಲಿನ ಪ್ರಭುತ್ವದಷ್ಟೆ ಸಾಕ್ರೆಟೀಸ್, ಪ್ಲೇಟೋ, ಅರಿಸ್ಟಾಟಲ್, ಮಾರ್ಕ್ಸ್ ಏಂಗಲ್ಸ್, ಜೀನ್‌ಪಾಲ್ ಸಾತ್ರೆ ಮೊದಲಾದವರ ತತ್ವಗಳಮೇಲೂ ಅವರ ಪ್ರಭುತ್ವವಿತ್ತು. ಇಷ್ಟೆಲ್ಲಾ ವಿದ್ವತ್ತಿನ ಮೇರು ಪರ್ವತವಾಗಿದ್ದರೂ ರಾಹುಲಜಿ ವೈಯಕ್ತಿಕ ಜೀವನದಲ್ಲಿ ಸಾದಾ, ಸರಳ, ನಿರಾಡಂಬರ, ಹಾಗೂ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಎಲ್ಲರೊಂದಿಗೂ ಆತ್ಮೀಯ ಭಾವದಿಂದ ನಿರಹಂಕಾರದಿಂದ ವರ್ತಿಸುತ್ತಿದ್ದರು. ಅದು ಅವರ ಮಹೋನ್ನತ ಗುಣವಾಗಿತ್ತು. ಅವರು ವಿಶ್ವ ಪ್ರೇಮಿ, ಮಾನವ ಪ್ರೇಮಿ, ಹೃದಯ ಸಂಪನ್ನರೂ ಆಗಿದ್ದರು. ಅಷ್ಟೇ ಅಲ್ಲದೆ ಕರುಣೆ ಅನುಕಂಪಗಳ ಸಾಕಾರ ಮೂರ್ತಿಯಾಗಿದ್ದರು. ಇವರ ಉಡುಪು ಸಾದಾ ಆಗಿತ್ತು. ಬಿಳಿಯ ಖದ್ದರು ಧೋತಿ ಅಥವಾ ಪೈಜಾಮು ಉದ್ದವಾದ ಬಿಳಿಯ ಖದ್ದರಂಗಿ. ನೋಡಲು ಅತಿಸಾಮಾನ್ಯ ವ್ಯಕ್ತಿಯಂತೆ ಕಾಣುತ್ತಿದ್ದರು. ರಾಹುಲಜಿಯವರ ವ್ಯಕ್ತಿತ್ವ ಹಲವು ವಿರೋಧಾಭಾಸಗಳಿಂದಲೂ ಕೂಡಿತ್ತು. ದೌರ್ಬಲ್ಯ ಅವರಲ್ಲಿ ಇರಲಿಲ್ಲವೆಂದಲ್ಲ. ಆದರೂ ಅವರ ಘನವಾದ ವಿದ್ವತ್ತು ಮಹೋನ್ನತ ಮಾನವೀಯ ಗುಣಗಳು ದೌರ್ಬಲ್ಯಗಳನ್ನು ಮೆಟ್ಟಿ ಎದ್ದು ಕಾಣುತ್ತಿದ್ದವು. ಅವರ ಸ್ವಭಾವ ವಿಚಿತ್ರವಾದುದು. ಆದರೂ ಅವರು ಭಯಭೀರುವಾಗಿರಲಿಲ್ಲ. ಏಕಾಂಗ ವೀರರಾಗಿದ್ದರು, ಭಯವನ್ನು ಜಯಿಸಿದ ಮೃತ್ಯುಂಜಯ ಅವರು. ಜೀವನದ ಅಮರತ್ವದ ಮೇಲೆ ಅವರಿಗೆ ಆಶೆ ಕಡಿಮೆ ಇತ್ತು. ಕ್ಷಣಭಂಗುರತೆಗೆ ಭಯವೇಕೆ ? ಅಮರತ್ವ ಶಾಶ್ವತತ್ವ ಎನ್ನುವುದು

ಕೂಡ ಜೀವಿಗೆ ಒಂದು ವಿಧವಾದ ಬಂಧನಗಳೇ ಎಂದು ಅವರ ವಾದವಾಗಿತ್ತು ಹೀಗೆಂದು ಅವರನ್ನು ತೀರಾ ಹತ್ತಿರದಿಂದ ಕಂಡ ಆಂಧ್ರದ ಸಾಹಿತಿ ಸಂಜೀವದೇವ ಅಭಿಪ್ರಾಯ ಪಡುತ್ತಾರೆ.

ರಾಹುಲಜಿಯವರ ಜೀವನ ಸನಾತನ ಪಂಥದಲ್ಲಿ ಆರಂಭವಾಗಿ ಆಧುನಿಕ ಪ್ರಗತಿಪರ ವೈಜ್ಞಾನಿಕ ವೈಚಾರಿಕ ಪಥದಲ್ಲಿ ಅರಳಿತು. ಈ ಮಹಾನ್ ಚೇತನ ವೈದಿಕದಲ್ಲಿ ಜನಿಸಿ ಆರ್ಯಸಮಾಜದಲ್ಲಿ ಬೆಳೆದು ಬೌದ್ಧ ಮತದಲ್ಲಿ ವಿಕಾಸ ಹೊಂದಿತು. ಅವರ ಅಧ್ಯಯನ ವೇದ ಉಪನಿಷತ್ತಿನಿಂದ ಆರಂಭವಾಗಿ ಬೌದ್ಧ ದರ್ಶನ ಸಾಮ್ಯವಾದದಲ್ಲಿ ವಿಕಾಸ ಪಡೆಯಿತು.

ಭಾರತೀಯ ತತ್ವಜ್ಞಾನಿ ಭೌತಿಕ ವಿಜ್ಞಾನಿ

ರಾಹುಲರದು ಸ್ವತಂತ್ರ ವೃತ್ತಿ ಹಾಗೂ ಪ್ರವೃತ್ತಿ. ಮೂಢನಂಬಿಕೆ ಇವರಿಗೆ ದೂರ ಬಹುದೂರ. ಕಂದಾಚಾರಗಳನ್ನು ಖಂಡಿಸುತ್ತಿದ್ದರು. ಸರ್ವಾಧಿಕಾರವನ್ನು ಅವರು ಸಹಿಸುತ್ತಿರಲಿಲ್ಲ. ವಾಸ್ತವವಾದಿ, ಸಾಮ್ಯವಾದಿ, ಸಮಾಜವಾದಿ, ಹಾಗೂ ಭೌತಿಕ ವಾದಿಯಾಗಿದ್ದರು. ರಾಹುಲಜಿ ವೇದ ಉಪನಿಷತ್ತು ಬ್ರಹ್ಮಸೂತ್ರ, ಬೈಬಲ್, ಕುರಾನ್, ಬೌದ್ಧರ ತ್ರಿಪಿಟಕ, ಯಾವುದೇ ಗ್ರಂಥಗಳಾದರೂ ಅವರು ಭೌತಿಕ ವ್ಯಾಖ್ಯಾನವನ್ನೇ ಮಾಡುತ್ತಿದ್ದರು. ವೇದಗಳ ಋಷಿಗಳೂ ಭೌತಿಕ ದೃಷ್ಟಿ ಪ್ರಧಾನರೆ ಎಂಬುದು ಅವರ ವಾದವಾಗಿತ್ತು. ಈ ಮಾತನ್ನು ಗ್ರಂಥಪ್ರಮಾಣ ದಿಂದ ರುಜುವಾತು ಮಾಡುತ್ತಿದ್ದರು. ರಾಹುಲಜಿ ಪ್ರಧಾನವಾಗಿ ಮೇಧಾವಿ ಆಲೋಚಕ, ನಿಶಿತಮತಿ, ಶಾಸ್ತ್ರದಲ್ಲಿ ಅನುರಾಗ. ಆದರೆ ಕಲೆಯಲ್ಲಿ ರಸಾನುಭೂತಿ ಕಡಿಮೆ ತರ್ಕವೇ ಅವರಿಗೆ ರಸಾನುಭೂತಿಯಾಗಿತ್ತು. ವಾಗ್ಮಿಗಳಾಗಿರಲಿಲ್ಲ. ರಾಜ ಕೀಯ ಜೀವನದಲ್ಲಿ ರಾಹುಲಜಿ ವಾಮ ಪಂಥಿ, ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರು. ಶ್ರೇಷ್ಠ ಲೇಖಕ, ಸ್ವಾತಂತ್ರ್ಯ ಪ್ರೇಮಿ, ಭೌತಿಕವಾದಿ, ಅತೀಂದ್ರಿಯ ವಿಷಯಗಳಿಗಿಂತ ಇಂದ್ರಿಯ ಗ್ರಾಹ್ಯ ವಿಷಯಗಳ ಮೇಲೆ ಇವರಿಗೆ ಹೆಚ್ಚು ಮಮತೆ. ಹೀಗೆಂದು ಅವರ ಸೋದರ ಸಾಹಿತಿಗಳ ವಿದ್ವಾಂಸರ ಅಭಿಪ್ರಾಯ.

ಒಂದೆಡೆ ಬೌದ್ಧ ಧರ್ಮವನ್ನು ಕುರಿತು ರಾಹುಲಜಿ ಹೀಗೆ ಅಭಿಪ್ರಾಯ ಪಡುತ್ತಾರೆ. "ಬೌದ್ಧ ಧರ್ಮ ವೇದ ವಿರುದ್ಧವಾದುದು. ಯಜ್ಞ ಯಾಗಾದಿಗಳಿಗೆ ವಿರುದ್ಧವಾದುದು. ಆತ್ಮ ಪರಮಾತ್ಮರ ಅಸ್ತಿತ್ವ ಸಂಬಂಧ ವಿಲ್ಲದುದು. ಬೌದ್ಧರಲ್ಲಿ ಅನಾತ್ಮವಾದವೇ ಪ್ರಧಾನವಾಗಿದೆ. ಪುನರ್ಜನ್ಮ ಬೌದ್ಧರಲ್ಲಿದೆ, ಅದು ಅನಾತ್ಮ ವಾದದಮೇಲಿದೆ. ಪುನರ್ಜನ್ಮವೆಂದರೆ ಮರಣ ಹೊಂದಿದ ವ್ಯಕ್ತಿಯೇ ಪುನಃ ಜನಿಸುತ್ತಾನೆ ಎಂದಲ್ಲ. ಒಂದು ಪಾತ್ರೆಯಲ್ಲಿಯ ನೀರನ್ನು ಸಮುದ್ರದಲ್ಲಿ

ಹೊಯ್ದು ಅದೇ ಪಾತ್ರೆಯಿಂದ ಸಮುದ್ರದ ನೀರನ್ನು ತುಂಬಿಕೊಂಡರೆ ಮತ್ತೆ ಪಾತ್ರೆ ತುಂಬುತ್ತದೆ. ಪಾತ್ರೆಯ ಜಲ ವೈಯಕ್ತಿಕ ಅಲ್ಲ; ಸಾಮೂಹಿಕ ಜಲ. ಬೌದ್ಧರ ಪುನರ್ಜನ್ಮವಾದ ಅಂತಹುದೇ. ಇದೇನೂ ವೈಜ್ಞಾನಿಕ ದೃಷ್ಟಿಕೋನವಲ್ಲ. ಧಾರ್ಮಿಕ ವಿಶ್ವಾಸ" ಎನ್ನುತ್ತಾರೆ.

ಭೌತಿಕವಾದ ಅಥವಾ ವಿಜ್ಞಾನವನ್ನು ಕುರಿತು ಅವರ ವಿಚಾರ ಲಹರಿ ಹೀಗಿದೆ "ಮಾನವನಲ್ಲಿ ಭೌತಿಕ ದೃಷ್ಟಿ ಲೋಪವಾದರೆ ಮಿಕ್ಕ ಎಲ್ಲಾ ದೃಷ್ಟಿಗಳೂ ಲೋಪ ವಾದಂತೆಯೇ" ಎಲ್ಲ ದೃಷ್ಟಿಗಳೂ ನಿರ್ದಿಷ್ಟವಾಗಿ ವಿಕಸಿಸಬೇಕಾದರೆ ಭೌತಿಕ ವಿಕಾಸ ವಾಗಿರಬೇಕು. ಭೌತಿಕ ಪದಾರ್ಥ ಇಲ್ಲವೇ ಜಡ ಎಂಬುದು ವಿಶ್ವ ಸೃಷ್ಟಿಗೆ ಮೂಲ ಜಡದಿಂದಲೇ ಜೀವವೂ ಕೂಡ ಚಲಿಸುತ್ತದೆ. ಜಡವೆಂಬುದು ನಿರ್ಜೀವ ಪದಾರ್ಥವಲ್ಲ. 'ಜೀವ' ಎಂಬುದು ಜಡದಲ್ಲಿ ನಿಷ್ಪ್ರಾಣವಾಗಿರುತ್ತದೆಯೇ ಹೊರತು ನಿರ್ಜೀವವಾಗಿರು ವುದಿಲ್ಲ. ಜೀವ ನಿಷ್ಪ್ರಾಣವಾದರೆ 'ಜಡ', ಎಚ್ಚೆತ್ತರೆ–ಜೀವ. ನೀರು ಘನೀಭವಿಸಿದರೆ ಮಂಜುಗಡ್ಡೆ. ಮಂಜುಗಡ್ಡೆ ದ್ರವೀಭವಿಸಿದರೆ ನೀರು. 'ಮಂಜುಗಡ್ಡೆ ಚಲಿಸುವುದಿಲ್ಲ: ನೀರು ಚಲಿಸುತ್ತದೆ, ಜಡಕ್ಕೆ ಚಲನೆಯಿಲ್ಲ, ಜೀವ ಚಲಿಸುತ್ತದೆ, ಜಡವೆಂಬುವುದು ಜೀವ ವೆಂಬುವುದು, ಎರಡೂ ಪದಾರ್ಥಗಳಲ್ಲಿ ಒಂದರದೇ ಎರಡು ಅವಸ್ಥೆಗಳು. ಭೌತಿಕ ವಾದವೆಂದರೆ ಒಂದು ರೀತಿಯಲ್ಲಿ ಇಂದ್ರಿಯ ಗ್ರಾಹ್ಯವಾದ ಜಡ, ಜಡದಿಂದಲೇ ಜನಿಸಿದ ಜೀವ (ಅಣು). ಜೀವದಿಂದ ಜನಿಸಿದ ಮನಸ್ಸು. ಮಾನವನಲ್ಲಿ ಆತ್ಮವೆಂಬು ವುದು ಇಲ್ಲ. ಆತ್ಮವಿಲ್ಲದಿದ್ದಾಗ ಅಮರತ್ವ ಇಲ್ಲ. ಅಮರತ್ವ ಇಲ್ಲದಿದ್ದಾಗ ಪುನರ್ಜನ್ಮವಿಲ್ಲ. ಇಂದ್ರಿಯಾತೀತ 'ಸತ್ತ'ಎಂಬುದು ಇಲ್ಲ. ಆದ್ದರಿಂದ ಭೌತಿಕ ವಾದದಲ್ಲಿ ನಿರೀಶ್ವರನಾದ ಕೂಡ ಇದೆ. ಇಹವೇ 'ಪ್ರಧಾನ ಹೊರತು, ಪರದ ಹಂಗು ಇಲ್ಲ. ಭೌತಿಕವಾದವೇ ಮಾನವತಾವಾದವಲ್ಲದಿದ್ದರೂ, ಮಾನವತಾ ವಾದದಲ್ಲಿ ಭೌತಿಕವಾದ ಕೂಡ ಸೇರಿಕೊಂಡಿದೆ...

ಮಹಾಪಂಡಿತ ರಾಹುಲಸಾಂಕೃತ್ಯಯನರು ಭೌತಿಕವಾದಿ. ದಾರ್ಶನಿಕವಾಗಿ ಅವರು ಭೌತಿಕವಾದಿ. ಬುದ್ಧನ ತತ್ವಾನುಯಾಯಿ. ರಾಜಕೀಯವಾಗಿ ಸಾಮ್ಯವಾದಿ (ಕಮ್ಯೂನಿಸ್ಟ್). ಮತಕ್ಕೂ ಸಾಮ್ಯವಾದಕ್ಕೂ ವಿರೋಧ ಎನ್ನುತ್ತಾರೆ. ಆದರೆ ರಾಹುಲಜಿ ಸಾಮ್ಯವಾದಿಯಾಗಿ ಬೌದ್ಧ ಅನುಯಾಯಿಯಾಗಿ ಬದುಕಿದ್ದರು. ಭೌತಿಕವಾದ ಬುದ್ಧನವಾದಗಳು ಹತ್ತಿರ ಹತ್ತಿರ ಸಂಬಂಧವುಳ್ಳವು.

ಜೀವನದ ಸಂಧ್ಯಾ ಕಾಲ

ರಾಹುಲಜಿಯವರು ಜೀವನದುದ್ದಕ್ಕೂ ಅಧ್ಯಯನ ಅಧ್ಯಾಪನಾ ಸಂಶೋಧನಾ ಗ್ರಂಥ ಸಂಪಾದನೆ ಹಾಗೂ ಗ್ರಂಥ ಸೃಜನಗಳಲ್ಲಿ ತಮ್ಮ ಬದುಕನ್ನು ಸವೆಸಿದರು. ಒಂದು ಸಂಸ್ಥೆಯಂತೆ ದುಡಿದರು. ಅವರೊಬ್ಬ ವ್ಯಕ್ತಿಯಾಗಿರಲಿಲ್ಲ ; ಮಹಾನ್

ಶಕ್ತಿಯಾಗಿದ್ದರು. ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಕೃಷಿಗೈದು ನೂರಾರು ಅಮೂಲ್ಯ ಕೃತಿಗಳನ್ನು ರಚಿಸಿದರು. ಜ್ಞಾನ ಯಾತ್ರಿಕನಾಗಿ ಜಗತ್ತನ್ನೇ ಸುತ್ತಿಬಂದರು. ಹಲವು ಭಾಷೆಗಳಲ್ಲಿ ಪಾಂಡಿತ್ಯ ಪಡೆದರು. ಬೌದ್ಧ ದರ್ಶನದ ಮೇಲೆ ಅವರ ಕೃತಿಗಳು ಇಂದಿಗೂ ಪ್ರಮಾಣಭೂತವಾಗಿವೆ. ಮಹಾಪಂಡಿತರಾಗಿ ಪ್ರಾಮಾಣಿಕರಾಗಿ ರಾಷ್ಟ್ರ ಭಕ್ತರಾಗಿ ಮಹಾಮಾನವ ಪ್ರೇಮಿಯಾಗಿ ರಾಹುಲಜಿಯವರು ಬಾಳಿದರು. ಜೀವನದ ಸಂಧ್ಯಾಕಾಲದಲ್ಲೂ ಗ್ರಂಥ ರಚನೆಯಲ್ಲಿ ನಿರತರಾಗಿದ್ದರು. ಅವರದು ವಿಶ್ರಾಂತಿ ಯಿಲ್ಲದ ಜೀವನ. ಹೀಗಾಗಿ ಅವರ ಮೈ–ಮನಗಳು ದುಡಿದು ದಣಿದು ಪ್ರಕೃತಿ ಧರ್ಮಕ್ಕೆ ಅನುಸಾರವಾಗಿ ಶಿಥಿಲವಾದವು. ಆದ್ದರಿಂದಾಗಿ ರಾಹುಲಜಿಯವರು ತಮ್ಮ ತೀರ ಇಳಿವಯಸ್ಸಿನಲ್ಲಿ ಮಧುಮೇಹ ವ್ಯಾಧಿಯಿಂದ ಬಳಲಿದರು. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಇವರ ಸೇವೆಯನ್ನು ಪರಿಗಣಿಸಿ—'ಪದ್ಮಭೂಷಣ' ಎಂಬ ಶ್ರೇಷ್ಠ ರಾಷ್ಟ್ರಪ್ರಶಸ್ತಿಯನ್ನು ನೀಡಿತು. ರಾಹುಲಜಿಯವರು ಅಪೂರ್ವ ಸ್ಮರಣೆ ಸ್ಫುರಣ ಶಕ್ತಿಯನ್ನು ಪಡೆದಿದ್ದರು. ಬೌದ್ಧಿಕ ಶ್ರಮದಿಂದಾಗಿ ಜೀವನದ ಕೊನೆಯಲ್ಲಿ ಅವರಿಗೆ ಮರೆವೆಯ, ಸ್ಮೃತಿ ಲುಪ್ತಸ್ಥಿತಿ ಒದಗಿತ್ತು. ಸ್ಮೃತಿ ವಿಭ್ರಮ ರಾಗಿದ್ದ ರಾಹುಲಜಿಯವರಿಗೆ ಅವರು ರಚಿಸಿದ ಕೃತಿಗಳನ್ನು ತೋರಿಸಿದರೂ ಅವು ಗಳನ್ನು ಗುರುತಿಸದಂತಾದರು. ರಷ್ಯಾದಲ್ಲಿದ್ದ ಮೊದಲನೆಯ ಹೆಂಡತಿಯ ಮಗುವನ್ನು ತೋರಿಸಿದರೂ ಅದನ್ನು ಗುರುತಿಸದಷ್ಟು ಸ್ಮೃತಿ ವ್ಯಾಧಿಯಿಂದ ಬಳಲಿದರು. ಸೂಕ್ತವಾದಕಡೆ ಶುಶ್ರೂಷೆ ಜರುಗಿದರೂ ಕಾಯಿಲೆ ಉಲ್ಬಣಗೊಂಡು ಡಾರ್ಜಲಿಂಗದ (ಪಶ್ಚಿಮ ಬಂಗಾಳ) ಮಸೂರಿಲ್ಲಿನ ತಮ್ಮ ರಾಹುಲ ನಿವಾಸದಲ್ಲಿ 14–4–1963 ರಂದು ನಿಧನರಾದರು. ಭಾರತದ ಈ ಮಹಾಪಂಡಿತ, ಪುರುಷ ಸರಸ್ವತಿಯು ದೇಹ ಅಳಿದು ಹೋಗಿದ್ದರೂ, ಕೀರ್ತಿ ಕಾಯ ಶಾಶ್ವತವಾಗಿದೆ ಅವರ ಅಮರ ಕೃತಿಗಳಿಂದ. ಇಂತಹ ಮಹಾ ಮೇಧಾವಿ ನಮ್ಮ ದೇಶದಲ್ಲಿಯೇ ಅಲ್ಲ, ಜಗತ್ತಿನಲ್ಲಿಯೇ ಅಪರೂಪವೆಂದರೆ ಆಶ್ಚರ್ಯಪಡಬೇಕಾದುದು ಏನೂ ಇಲ್ಲ. ರಾಹುಲಜಿ ನಿಸ್ಪೃಹ ಸೇವೆ ಪ್ರಾಮಾಣಿಕ ಜೀವನ, ಮಹಾ ಪಾಂಡಿತ್ಯ ಹಾಗೂ ಬಹುಮುಖ ಪ್ರತಿಭೆಯಿಂದ ಭಾರತದ ಬಾನಿನಲ್ಲಿ ಮೂಡಿ–ಬೆಳಗಿ–ಕಣ್ಮರೆಯಾದ ನಕ್ಷತ್ರ.

ಕವಿಯ ಸ್ವೋಪಜ್ಞತೆಯೆಲ್ಲಿ?

ಬಿ. ಎ. ಸನದಿ

ಕಾವ್ಯಮಾಧ್ಯಮದಲ್ಲಿ ತನ್ನ ಅಭಿವ್ಯಕ್ತಿಯ ಸಾಧ್ಯತೆಗಳನ್ನು ದುಡಿಸಲು ತೊಡಗಿದ ಪ್ರತಿಯೊಬ್ಬ ಕವಿಯೂ ತನ್ನ ಕಾವ್ಯ ಸೃಷ್ಟಿಯಲ್ಲಿ ಸ್ವಂತಿಕೆ ಅಥವಾ ಸ್ವೋಪಜ್ಞತೆ ತರಲು ಯತ್ನಿಸುತ್ತಾನೆ. 'ಹತ್ತರ ಕೂಡ ಹನ್ನೊಂದಾ' ಎಂಬ ಘೋಷಣೆ ಕ್ರಿಯಾಶೀಲ ಪ್ರವೃತ್ತಿಗೆ ಪ್ರೇರಣೆ ನೀಡುವಂತಹದಲ್ಲ. ಹತ್ತರೊಳಗಿದ್ದೂ ಒಂಬತ್ತು ಜನಕ್ಕಿಂತ ಭಿನ್ನವಾಗಿರುವ, ಭಿನ್ನವಾಗಿದ್ದರೂ ಇತರರಿಗೆ ಹತ್ತಿರ ಹತ್ತಿರವಾಗಿರುವ ಕ್ರಿಯಾಕೌಶಲ್ಯ ಅವನದಾಗಿರಬೇಕು. ಈ ಕ್ರಿಯಾಕೌಶಲ್ಯಕ್ಕೆ ನಿರಂತರ ಪರಿಶ್ರಮ ಬೇಕು; ಸ್ವಂತ ಸಾಧ್ಯತೆಗಳನ್ನು ಒರೆಗೆ ಹಚ್ಚಿನೋಡಿ ತನ್ನ ಇತಿ-ಮಿತಿಗಳ ಅಳವಿನಲ್ಲೂ ಆಳಕ್ಕಿಳಿಯುವ ಕಾರ್ಯಕ್ಷಮತೆ ಬೇಕು. ತಾನು ಕಂಡುಂಡ ಜೀವನಾನುಭವದಗಣಿಯಿಂದ ತನ್ನ ಕಾವ್ಯಕರ್ಮಕ್ಕಾಗಿ ಮೂಲ ದ್ರವ್ಯವನ್ನಾಯ್ದುಕೊಳ್ಳುವಲ್ಲಿ, ಮೂಲದ್ರವ್ಯಕ್ಕೆ ಕಲಾತ್ಮಕವಾದ ಮೂರ್ತರೂಪ ಕೊಡುವಲ್ಲಿ ಕವಿ ತುಂಬಾ ಎಚ್ಚರಿಕೆ ವಹಿಸಬೇಕಾಗುತ್ತದೆ. ನಿದ್ದೆಗಣ್ಣಲ್ಲಿ ಮಾಡುವ ಕುಸುರಿಗೆಲಸ ಕೆಟ್ಟು ಹೋಗಬಹುದು. ಅದನ್ನು ಮನೆಯಲ್ಲಿಟ್ಟರೆ ಮನಸ್ಸಿಗೆ ಕಿರಿಕಿರಿ; ಪೇಟೆಯಲ್ಲಿಟ್ಟರೆ ಜನರಿಂದ ಛೀಮಾರಿ. ಅಂತೆಯೇ ಒಳ್ಳೆಯ ಕವಿ ತನ್ನ ಜೀವನಾನುಭವಕ್ಕೆ, ಸೂಕ್ಷ್ಮಸಂವೇದನೆಗಳಿಗೆ ಮರುಹುಟ್ಟು ನೀಡಲು ವೀರ್ಯವತ್ತಾದ ಸಾಧನೆ ನಡೆಸುತ್ತಾನೆ; ತನ್ನ ಶಕ್ತಿ-ಸಾಮರ್ಥ್ಯಗಳಿಗೆ ಸಾಧ್ಯವಾದಷ್ಟು ಕಲಾತ್ಮಕವಾದ ಕೃತಿಗಳನ್ನು ಕೈಗೂಡಿಸುತ್ತಾನೆ. ಇಂಥ ಕಲಾತ್ಮಕ ಕೃತಿ ರಮ್ಯ ಪಂಥದ್ದಾಗಿರಬಹುದು, ನವ್ಯ ಪಂಥದ್ದಾಗಿರಬಹುದು, ಜನಕಾವ್ಯ ಪಂಥದ್ದಾಗಿರಬಹುದು. ಇಲ್ಲಿ ಪಂಥ ಮುಖ್ಯವಲ್ಲ: ಆಯಾ ಪಂಥದಲ್ಲಿ ಸೇರಿಕೊಳ್ಳಬಹುದಾದ ಒಂದೊಂದು ಕೃತಿ ಕವಿಯ ಸ್ವಂತದ್ದೇ, ಎಂಬುದು ಮುಖ್ಯ.

ಒಳ್ಳೆಯ ಕವನಗಳು ಯಾವ ಸಂಪ್ರದಾಯದವಾದರೂ ಆಯಾ ಸಂಪ್ರದಾಯದ expressive element ಅನ್ನು ಆತ್ಮಸಾತ್ತಾಗಿ ಮಾಡಿಕೊಳ್ಳಬಲ್ಲವು; Intuition ಮೂಲಕ ಅದರ inscape (ಅಂತರ್ರಚನೆ)ಯಲ್ಲಿ ಹೊಂದಿಕೊಳ್ಳಬಲ್ಲವು'[1]. ಒಮ್ಮೊಮ್ಮೆ ಒಬ್ಬ ಕವಿ ಒಂದು ಸಂಪ್ರದಾಯದ ಕಾವ್ಯಪ್ರಯೋಗ ಮಾಡಿ ಸಮಾಧಾನ ದೊರೆಯದೆ ಹೊಸ ಸಂಪ್ರದಾಯದ ಹೊಸ ಸೀಮೆಯಲ್ಲಿ

1. ಹೊಸ ಕಾವ್ಯದ ಮುನ್ನೆಲೆ: ಶಂಕರ ಮೊಖಾಶಿಯವರ ಲೇಖನ ಪು. 13

ಹೊಸ ಸಂಸಾರ ಹೂಡಿ, ತನ್ನ ಸೃಜನಶೀಲತೆಯನ್ನು ಒರೆಗೆ ಹಚ್ಚಿ ನೋಡುವುದುಂಟು; ಹೊಸ ಹೊಸ ಕೃತಿಗಳಲ್ಲಿ ತನ್ನತನದ ಹೊಸ ವಿನ್ಯಾಸಗಳನ್ನು ರೇಖಿಸಲೆತ್ನಿಸುವುದೂ ಉಂಟು. ಹೀಗೆ, ಒಂದು ಸಂಪ್ರದಾಯದಿಂದ ಇನ್ನೊಂದು ಸಂಪ್ರದಾಯಕ್ಕೆ ಪದಾರ್ಪಣಗೈಯುವುದು ಆ ಕವಿಯ ವಿಕಾಸ ಕ್ರಮವೋ, ಪರಿವರ್ತನಾ ಕ್ರಮವೋ ಎಂಬುದು ಪ್ರಸ್ತುತವಲ್ಲ. ಆಯಾ ಸಂಪ್ರದಾಯದಲ್ಲಿ ಕವಿ ಸ್ಥಾಪಿಸಿದ ಅಥವಾ ಪ್ರಸ್ಥಾಪಿಸಿದ ಹೊಸತನ–ತನ್ನದೆಂಬುವ ಹೊಸತನ–ಗಮನಾರ್ಹವಾದದ್ದು. ಪ್ರಯೋಗ ಶೀಲ ಮತ್ತು ಪ್ರಗತಿಶೀಲ ಕವಿಗೆ ವಿವಿಧ ಪಂಥಾವರಣಗಳು ಬಂಧನಕಾರಿಯಾಗದೆ ಅವನ ಸೃಜನ ಶೀಲತೆಗೆ ಆಹ್ವಾನಗಳನ್ನೇ ನೀಡುತ್ತವೆ. ಇಂಥ ಆಹ್ವಾನಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬಲ್ಲ ಕವಿ ನಿತ್ಯ ನೂತನ ಪ್ರೇಮಿ; ಶ್ರೇಷ್ಠ ಸಂತಾನ ಕಾಮಿ.

There are enough mineral deposits, enough raw material in every one of us. You must bring them forth and work them over rather than make use of what others before you have prepared......A poor thing but, mine own : That is what is of value in literature and this is where the reader finds his interest ಎಂದ ಅಮೇರಿಕೆಯ ಲೇಖಕ-ಡೆರಿಸಿಕ್ ಡೆಮಿರ್ಜಿಯನ್ ಅವರ ಅಭಿಪ್ರಾಯಕ್ಕೂ, ರಷಿಯದ ಲೇಖಕ ತುರ್ಗನೇವ್ ಅವರ ಈ ಮುಂದಿನ ಮಾತಿಗೂ ಇರುವ ಸಾಮ್ಯವನ್ನು ಗುರುತಿಸಬಹುದು: "The Important thing for a literary.....or any talent, is what I would call one's own voice. One needs a living melody of one's own notes, notes that not every one has at his command." ಇತರರಿಗಿಂತಲೂ ವಿಭಿನ್ನವಾದ ಧ್ವನಿಯೊಂದು ತನ್ನ ಕಾವ್ಯಕ್ಕೆ ದೃಷ್ಟಿಯೊದಗಿಸಬೇಕು; ತನ್ಮೂಲಕ ತನಗೂ ತನ್ನ ವಾಚಕರಿಗೂ ಪುಷ್ಟಿಯೊದಗಿಸಬೇಕು-ಎಂಬ ಅಪರೋಕ್ಷ ಹಂಬಲವೊಂದು ಕವಿಯ ಅಂತರಾಳದಲ್ಲಿದ್ದೇ ಇರುತ್ತದೆ. ಹಲವೊಮ್ಮೆ ಈ ಹಂಬಲವಿಲ್ಲದೆಯೂ ಕಾವ್ಯರಚನೆ ನಡೆಯುತ್ತದೆ, ನಿಜ. ಆದರೆ ಅದು ಶಬ್ದಜೋಡಣೆಯ ಚಾತುರ್ಯ ಪ್ರದರ್ಶನವೆನಿಸುವುದೇ ಹೊರತಾಗಿ ಶಬ್ದಾಂತರಾಳದಲ್ಲಿ ತುಂಬಿ ಬರುವ ಜೀವನ-ದರ್ಶನವೆನಿಸಲಾರದು. ಕಾವ್ಯ ಕೇವಲ ಪದಪುಂಜವಲ್ಲ; ಬರೆವಣಿಗೆಯ ಹಂತದಲ್ಲಿ ಕವಿಯ ಮತ್ತು ತದನಂತರ ವಾಚಕನ ಮನದ ಮಂಜು ಕರಗಿಸುವ ಪ್ರತಿಭಾದರ್ಶನ.

ಕವಿ ಕಂಡುಂಡ ಜೀವನಾನುಭವ ಅವನ ಅಂತರಾಳದಲ್ಲಿ ಭಟ್ಟಿಗೊಂಡು, ಅವನ ಪ್ರತಿಭೆಯಲ್ಲಿ ಪುಟಗೊಂಡು ಪ್ರಕಟಗೊಳ್ಳುವ ರೀತಿಯಲ್ಲಿ ಅವನ ಸ್ವಂತಿಕೆ

ಗೋಚರಿಸುತ್ತದೆ. ಇದು ಎಲ್ಲ ಕವಿಗಳಲ್ಲೂ ಏಕಪ್ರಕಾರವಾಗಿಯೂ ನಡೆಯುವುದಿಲ್ಲ; ಒಬ್ಬನೇ ಕವಿಯಲ್ಲಿ ಸದಾಕಾಲ ಏಕಪ್ರಮಾಣದಲ್ಲೂ ನಡೆಯುವುದಿಲ್ಲ. ಯಾವ ಕಾಲಾವಧಿಯಲ್ಲೇ ಆಗಲಿ, ಹತ್ತು ಜನದಲ್ಲಿದ್ದೂ ಒಂದು ಪ್ರತ್ಯೇಕತೆಯ ಮುದ್ರೆಯೊತ್ತುವ ಅಘೋಷಿತ ಸಾಹಸ ಕವಿಯಲ್ಲಿ ನಡದೇ ಇರುತ್ತದೆ. ಆದರೆ, ಇತರರಿಗಿಂತ ಪ್ರತ್ಯೇಕವಾಗಿದ್ದ ಮಾತ್ರಕ್ಕೇ ಕವಿಯ ಕಾವ್ಯಕ್ಕೆ ಘನತೆಯೊದಗಿಬರುತ್ತದೆಂದು ಭಾವಿಸಲಾಗದು. ತನ್ನ ಸ್ವಂತಿಕೆಯ ರಚನಾಕೌಶಲ್ಯದೊಡನೆ, ಈ ಮೊದಲೇ ತನ್ನ ನಾಡು–ನುಡಿಗಳಲ್ಲಿ ಉಳಿದುಕೊಂಡಿರುವ ಸಾಂಸ್ಕೃತಿಕ ಸಂಪತ್ತಿಗೆ, ಸಾಹಿತ್ಯನಿಧಿಗೆ ಗುಂಜಿ ತೂಕದಷ್ಟಾದರೂ ಹೊಸ ಕಾಣಿಕೆಯಾಗಿ ನಿಲ್ಲಬಲ್ಲ ಕಾವ್ಯಸೃಷ್ಟಿ ಮಾಡುವುದು ಸಾಧ್ಯವಾದರೆ ಮಾತ್ರ ಅವನ ಕಾವ್ಯಕ್ಕೆ ಅಷ್ಟರ ಮಟ್ಟಿಗೆ ಘನತೆ, ಅವನಿಗೆ ಗೌರವವೂ ಪ್ರಾಪ್ತವಾಗುತ್ತದೆ. ಈ ಅಪೂರ್ವ ಗುಣಾಧಿಕ್ಯದಿಂದೊಡಗೂಡಿದ ಮಾತಿನ ಮಾಣಿಕ್ಯಗಳನ್ನು ತನ್ನ ಕಾವ್ಯರಾಶಿಯಲ್ಲಿ ತುಂಬಿಡಬಲ್ಲ ಕವಿ ಸಾರ್ಥಕ ಕವಿಯೆನಿಸುತ್ತಾನೆ. (ಕಾವ್ಯ ಮಾಧ್ಯಮವನ್ನು ಗಂಭೀರವಾಗಿ ಅಂಗೀಕರಿಸಿದವರಿಗೆ ಈ ಮಾತು ಅನ್ವಯಿಸುತ್ತದಲ್ಲದೆ, ಅದೊಂದು ಬಿಡುಗಾಲದ ಹವ್ಯಾಸ—liesure time hobby—ಎಂದು ಭಾವಿಸದವರಿಗಲ್ಲ) ಕವಿ ತನ್ನ ಸ್ವಜನಶೀಲತೆ ಹೊಸತನ ತರಲು ಪಡಬೇಕಾದ ಪರಿಶ್ರಮದ ಕುರಿತು ಬರೆಯುತ್ತ ರೇ. ಬಿ. ವೆಸ್ಟ (Jr.) ಅವರು ವ್ಯಕ್ತಪಡಿಸಿದ ಅಭಿಪ್ರಾಯವನ್ನಿಲ್ಲಿ ಗಮನಿಸಬಹುದು : The highest art requires a blending of creative power with an understanding of just how far that force may go without curb or control. A poet's originality consists in his vital struggle to break the old forms, but his final excellence must be judged by his success in creating new ones.[2]

ಹಾಗೆ ನೋಡಿದರೆ ಕವಿಯ ವಿಚಾರಧಾರೆ, ಭಾವ, ಅನುಭವಗಳನ್ನೊಳಗೊಂಡ ಸೂಕ್ಷ್ಮ ಸಂವೇದನೆಗಳಿಗೆ, ಸಾರ್ವತ್ರಿಕ ಮೌಲ್ಯಗಳಿಗೆ ಅಭಿವ್ಯಕ್ತಿ ನೀಡುವುದಕ್ಕಾಗಿ ಕಾವ್ಯಮಾಧ್ಯಮವನ್ನು ಆಯ್ದುಕೊಳ್ಳುವುದೆಂದರೊಂದು ಸ್ವಯಂ-ಆಹ್ವಾನ ಸ್ವೀಕರಿಸಿದಂತೆಯೇ ಸರಿ. ಸಾಹಿತ್ಯದ ಇನ್ನಿತರ ಪ್ರಕಾರಗಳಿಗಿಲ್ಲದ ಸಂಕ್ಷಿಪ್ತತೆ ಮತ್ತು ಸೂಚ್ಯತೆಗಳ ಪರಿಮಿತಿಯಲ್ಲಿಯೇ ಪರಮಾವಧಿ ಪರಿಣಾಮವುಂಟಾಗುವಂತೆ ಹೊಸ ವಸ್ತು, ತಂತ್ರ, ಭಾಷೆ ಇತ್ಯಾದಿಗಳನ್ನೆಲ್ಲ ಸಂಗತಗೊಳಿಸಿ ತನ್ನ ವ್ಯಕ್ತಿತ್ವವನ್ನೇ ಎರಕ ಹೊಯ್ಯುವ ಜವಾಬುದಾರಿ ಕವಿಗಿರುತ್ತದೆ. ಈ ಜವಾಬುದಾರಿಯ ಯಶಸ್ವೀ ನಿರ್ವಹಣೆಗಾಗಿ ಸ್ವ-ವಿವೇಕಮಾನ್ಯತೆ ಪಡೆಯುವುದು ಅವನ ಪ್ರಥಮ ಕರ್ತವ್ಯ.

2. The writer in the Room : Ray B. West (Jr) page : 24

ಕವಿಯ ಸ್ವ-ವಿವೇಕಮಾನ್ಯತೆಯಿಲ್ಲದ ಕಾವ್ಯ ವಾಚಕರ ವಿವೇಕವನ್ನೂ ತಟ್ಟಲಾರದು; ವಿಮರ್ಶಕರ ಬಾಗಿಲವರೆಗೂ ಮುಟ್ಟಲಾರದು. ತನ್ನ ವಿವೇಕಮಾನ್ಯವಾದ ಅನುಭವಗಳ ಮೂಲಸಾಮಗ್ರಿಯನ್ನು ಅದಕ್ಕೆ ತಕ್ಕ ತಂತ್ರಕ್ಕೊಳಪಡಿಸಿ ಹೊಸ ದೊಂದು ಶಬ್ದಶಿಲ್ಪವನ್ನು ನಿರ್ಮಾಣಗೈಯುವುದು ಸುಲಭವೇನಲ್ಲ. ವಸ್ತುವಿಗೆ ತಕ್ಕ ವಿನ್ಯಾಸ, ಚಿಂತನಕ್ಕೆ ತಕ್ಕ ಸಂವಿಧಾನ, ಪರಿಭಾವನೆಗೆ ತಕ್ಕ ಭಾಷೆ ಮತ್ತು ಶೈಲಿಗಳು ಮೇಳವಿಸಿದಾಗ ಕವಿಯ ಸೃಜನಕೌಶಲ್ಯಕ್ಕೆ ಕಳೆದುಂಬುತ್ತದೆ; ಅಷ್ಟರ ಮಟ್ಟಿಗೆ ಅದು ಕವಿಯ ಸ್ವಂತದ್ದೆನಿಸಿ ತನ್ನ ಪ್ರತ್ಯೇಕತೆಯನ್ನೂ ಮೆರೆಯುತ್ತದೆ. ಅದು ಕವಿಯ ವೈಯುಕ್ತಿಕ ಸಾಧನೆಯಾದುದರಿಂದ ಅವನ ವೈಯುಕ್ತಿಕತೆಯ ಮುದ್ರೆ ಹೊತ್ತುಕೊಂಡೇ ಸಹೃದಯರ ಕೈಸೇರುತ್ತದೆ. ಹೀಗೆ, ಜೀವನದ ಸಂಕೀರ್ಣಾನು ಭವಗಳ ಸಂಘರ್ಷದ ನಡುವೆಯೇ ತನ್ನತನವನ್ನರಸುವ ಪ್ರಯತ್ನದ ಫಲವಾಗಿ ಮೂಡಿಬರುವ ಕಾವ್ಯಸಹೃದಯರನ್ನೂ ಅದೇ ಕೆಲಸಕ್ಕೆ ತೊಡಗಿಸುತ್ತದೆ.

ಇಲ್ಲಿ ವೈಯುಕ್ತಿಕತೆ ಮತ್ತು ಸ್ವಂತಿಕೆ ಪದಗಳ ಬಗೆಗೊಂದಿಷ್ಟು ಎಚ್ಚರಿಕೆ ವಹಿಸಬೇಕಾದುದು ಅಗತ್ಯವೆಂದು ತೋರುತ್ತದೆ: ಕಾವ್ಯಕರ್ಮವೆಂಬುದು ಕವಿಯ ಸ್ವಂತ ಅಥವಾ ವೈಯುಕ್ತಿಕ ಸಾಧನೆಯೆಂದರೆ ಅವನು ತನ್ನ ಸುತ್ತಲಿನ ಪರಿಸರಕ್ಕೆ, ಆಗು-ಹೋಗುಗಳಿಗೆ ತನಗೆ ತಿಳಿದಂತೆಯೋ ಹೊಳೆದಂತೆಯೋ ಪ್ರತಿಕ್ರಿಯೆ ನೀಡುವ ಪ್ರಯತ್ನವೆಂದಿಷ್ಟೇ ಅರ್ಥವಾಗಕೂಡದೆಂಬ ಎಚ್ಚರಿಕೆ. ಕವಿ ತನ್ನ ಸುತ್ತಲಿನ ಪರಿಸರದ ಚೈತನ್ಯಪೂರ್ಣ ಕೇಂದ್ರಬಿಂದುವಾಗಿರುವುದರಿಂದ ಆತ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರತಿಸ್ಪಂದಿಸುವುದು ಸಮಾಜದ ಸಾಮೂಹಿಕ ಚೈತನ್ಯವಾಹಿನಿಯಾಗಿ, ಜಾಗೃತ ಜನಸಂಕುಲದ ಜ್ವಲಂತವಾಣಿಯಾಗಿ, ಸಮಾಜದಲ್ಲಿ ಚೆಲ್ಲಾಪಿಲ್ಲಿಯಾಗಿ ಚದರಿದ ಕ್ರಿಯೆ-ಪ್ರತಿಕ್ರಿಯೆಗಳ ಸೂತ್ರಬದ್ಧ ಪ್ರತಿಧ್ವನಿಯಾಗಿ. ಈ ಮಾನಸಿಕ ವ್ಯವಹಾರ ಕವಿಯ ವೈಯುಕ್ತಿಕ ಕಾಯಕ ಎನಿಸಿದರೂ ಅದೊಂದು ಸಾಮಾನ್ಯಾರ್ಥದಲ್ಲಿ ವೈಯುಕ್ತಿಕವಾಗಿರದೆ, ಜನಸಮುದಾಯದ ಸಂಕೀರ್ಣ ಅನುಭವಗಳನ್ನೆಲ್ಲ ತನ್ನ ವಿವೇಕ ದಲ್ಲಿ ಸೋಸಿ ನೋಡುವ ಸಂಸ್ಕರಣಕ್ರಿಯೆಯಾಗಿರುತ್ತದೆ. ಇದರಲ್ಲಿ ಸ್ವಯಂ-ಪ್ರತಿಷ್ಠೆಗಿಂತಲೂ ಸಮಾಜನಿಷ್ಠೆ ಹೆಚ್ಚು ಕ್ರಿಯಾಶೀಲವಾಗಿರುತ್ತದೆ. ತನ್ನನ್ನೂ ಒಳಗೊಂಡ ಸಮಾಜದ ಸಂಕೀರ್ಣ ಅನುಭವಗಳನ್ನು ಕವಿಯ ಅಂತರಾಳದಲ್ಲಿ ಸಂಸ್ಕರಣಗೊಳಿಸುತ್ತಿರುವಂತೆಯೇ ಅಭಿವ್ಯಕ್ತಿಯ ಬೀಜ ಮೊಳೆತು ತರುವಾಗಿ ಮರವಾಗಿ ಬೆಳೆದು ನಿಲ್ಲುವುದುಂಟು. ಸಮೂಹಪ್ರಜ್ಞೆಯುಳ್ಳ ಕವಿಯ ಅಂತಸ್ಸತ್ವ ದಿಂದ ದಷ್ಟಪುಷ್ಟವಾಗಿ ಮೂಡಿ ನಿಲ್ಲುವ ಕಾವ್ಯ ಒಮ್ಮೊಮ್ಮೆ ಕವಿಯನ್ನೇ ದಂಗು ಗೊಳಿಸುವುದುಂಟು. ಅದು ಹತ್ತೇ ಹತ್ತು ಸಾಲುಗಳ ಹನಿಗವನವಾಗಿರಬಹುದು;; ಮಹಾಛಂದಸ್ಸಿನ ಮೇರುಕೃತಿಯಾಗಿರಬಹುದು. ಇಲ್ಲಿ ಅದರ ಗಾತ್ರ ಮುಖ್ಯವಲ್ಲ ಇದ್ದಷ್ಟು ಆಕಾರದಲ್ಲಿಯೇ ಕವಿಯ ಸ್ವಂತ-ಸ್ವತಂತ್ರ ಕೃತಿಯಾಗಿ ಸಾಕಾರ ಗೊಂಡಿದೆಯೇ ಎಂಬುದು ಮುಖ್ಯ.

‘ಲಂಬಾಣಿ’—ಒಂದು ವಿವೇಚನೆ

ಖಂಡೋಬಾ ಪಿ. ಕೆ.

ಯಾರು ? ಹೇಗೆ ?

ಲಂಬಾಣಿಗಳು ತಮ್ಮನ್ನು ತಾವು ‘ಗೋರಮಾಟಿ’ ಎಂದು ಕರೆದುಕೊಳ್ಳುವರು. ಹಿಂದೂ ಧರ್ಮಾವಲಂಬಿಗಳಾದ ಲಂಬಾಣಿಗಳಿಗೆ ತಮ್ಮದೇ ಆದ ಒಂದು ಜಾತಿಯಿದೆ. ಈ ಬುಡಕಟ್ಟು ಜನಾಂಗದ ಜಾತಿ ಎಲ್ಲ ಕಡೆಯಲ್ಲಿಯೂ ಒಂದೇ ಆದರೂ ಆಯಾ ಪ್ರಾಂತಗಳಲ್ಲಿ ಇವರನ್ನು ಕರೆಯುವ ಹೆಸರುಗಳಲ್ಲಿ ಭಿನ್ನತೆ ಕಂಡು ಬರುತ್ತದೆ. ಗುಜರಾತ ಪ್ರಾಂತದಲ್ಲಿ ಇವರು ಬಣಜಾರ, ಚಾರಣ ಎಂದೂ, ರಾಜಸ್ಥಾನದಲ್ಲಿ ಬಂಜಾರ್, ಲಂದೆಣಿಯಾ, ಗವುಳಿಯಾ, ಗವಲಿಯಾ ಎಂದೂ, ಆಂಧ್ರ ಪ್ರದೇಶದಲ್ಲಿ—ಸುಗಾಲಿ, ಸುಕಾಲಿ, ಲಂಬಾಡಾಗಳೆಂದೂ, ತಮಿಳು ನಾಡಿನಲ್ಲಿ ಸುಗಾಲ, ಲಬಾಡಿ ಎಂದೂ, ಬಿಹಾರದಲ್ಲಿ ಬಂಜಾರ್, ಓರಿಸ್ಸಾದಲ್ಲಿ–ಲಬಾನಿ, ಬಂಜಾರಿ ಎಂದೂ ಕರ್ನಾಟಕದಲ್ಲಿ ಲಮಾಣಿ, ಲಂಬಾಣಿ, ಲಂಬಾಡಿ, ಲಮಾನ, ಸುಗಾಲಿ, ಸುಕಾಲಿ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಾರೆ.

ಈ ಜನಾಂಗವನ್ನು ವಿಭಿನ್ನ ಹೆಸರುಗಳಿಂದ ಕರೆಯಲು ಸಾಮಾನ್ಯವಾಗಿ ಮೂರು ಕಾರಣಗಳು ಕಂಡುಬರುತ್ತವೆ. 1) ಬಂಜಾರಾ ಅಥವಾ ಲಮಾಣಿ ಶಬ್ದಗಳ ಮೇಲೆ ಸ್ಥಾನೀಯ ಭಾಷೆಗಳ ಪ್ರಭಾವ. 2) ವಿಭಿನ್ನ ವ್ಯವಸಾಯಗಳನ್ನು ಆಧರಿಸಿ ಹಾಗೂ 3) ಕೆಲವು ಹೆಸರುಗಳು ತಮ್ಮ ಸಮಾಜದಲ್ಲಿಯ ಕೀವರ್ಗವನ್ನು ಸೂಚಿಸುವಂಥವುಗಳು.

ಸಮಸ್ತ ಭರತಖಂಡದಲ್ಲಿ ನೆಲೆಯಾಗಿರುವ ಬಂಜಾರ ಇಲ್ಲವೆ ಲಂಬಾಣಿ ಜನಾಂಗದಲ್ಲಿ ಒಟ್ಟು 16 ಉಪಜಾತಿಗಳು ಹಾಗೂ 27 ಪರ್ಯಾಯನಾಮಗಳಿರುವದು ಕಂಡುಬರುತ್ತದೆ*.

---

*ಸರಕಾರಿ ಹಿಂದುಳಿದ ಜಾತಿಗಳ ಅನುಸೂಚಿಯಲ್ಲಿ ನಮೂದಿಸಿದ ಮೇರೆಗೆ.
ಕೃಪೆ–Report of All India Banjar Sevak Sibir held on 24th to 26th Aug. 1966.

ಉಪಜಾತಿಗಳು :

1) ಗೋರ ಬಂಜಾರಾ
2) ಧಾಡಿ ಬಂಜಾರಾ
3) ಸನಾರ ಬಂಜಾರಾ
4) ನಾವಿ ಬಂಜಾರಾ
5) ಢಾಲಿಯಾ ಬಂಜಾರಾ
6) ಸಿಂಗಾಡಿಯಾ ಬಂಜಾರಾ
7) ಬಾಗೋರಾ ಬಂಜಾರಾ
8) ಡಿಗೋರಾ ಬಂಜಾರಾ
9) ಬಾಮಣಿಯಾ ಬಂಜಾರಾ
10) ಪಾರು ಬಂಜಾರಾ
11) ಜೋಗಿ ಬಂಜಾರಾ
12) ಭಾಟ ಬಂಜಾರಾ
13) ಮಥುರಾ ಬಂಜಾರಾ
14) ಚಾರಣ ಬಂಜಾರಾ
15) ರೋಹಿದಾಸ ಬಂಜಾರಾ
16) ಧನಕುಟೆ ಬಂಜಾರಾ

ಪರ್ಯಾಯನಾಮಗಳು :

1 ಬಂಜಾರಾ
2 ಬಣಜಾರಾ
3 ಬನಜಾರಾ
4 ಬಂಜಾರಿ
5 ಬ್ರಿಂಜಾರಿ
6 ಬಂಜಾರೆ
7 ಬ್ರಿಜವಾಸಿ
8 ಲಮಾಣಿ (ಲಂಬಾಣಿ)
9 ಲಮಾನ
10 ಲಂಬಾಡಾ
11 ಲಂಬಾಡಿ
12 ಲಬಾನ (ಲಬಾನಾ)
13 ಲಭಾನ
14 ಲಭಾನಿ
15 ಲಭಾನಾ (ಲೋಭಾನಾ)
16 ಬಳದಿಯಾ
17 ಲಾದೇನಿಯಾ
18 ಸಂಗಾಲಿ
19 ಗವಾರ (ಗೌರಿಯಾ)
20 ಗವಾರಿಯಾ
21 ಗಂವಾರಿಯಾ (ಗಮಳಿಯಾ)
22 ಗಾವಾಲಾ
23 ಕಂಗಿ (ಕಂಗಸಿಯಾ)
24 ಘಾಣದ
25 ಶಿರಕಿಬಂದ
26 ಶಿಂಗಾಡೆ ಬಂಜಾರಿ
27 ಶಿರಕಿವಾಲಾ

ಮೇಲ್ಕಾಣಿಸಿದ ಜಾತಿ, ಉಪಜಾತಿ ಹಾಗೂ ಪರ್ಯಾಯಜಾತಿ ಶಬ್ದಗಳನ್ನು ಭಾಷಾಶಾಸ್ತ್ರೀಯ ದೃಷ್ಟಿಯಿಂದ ಪರಾಮರ್ಶಿಸಿ, ಆಯಾ ಶಬ್ದೋತ್ಪತ್ತಿಯ ಹೊಂದಿರುವ ಔಚಿತ್ಯವನ್ನು ಇಲ್ಲಿ ಗಮನಿಸಬಹುದಾಗಿದೆ.

ಸಾಮಾನ್ಯವಾಗಿ ಲಂಬಾಣಿಗರನ್ನು ಹೆಚ್ಚಾಗಿ 'ಬಂಜಾರಾ' ಎಂಬ ಹೆಸರಿನಿಂದ ಕರೆಯುವುದು ಕಂಡುಬರುತ್ತದೆ. ಹಾಗೆಯೇ 'ಲಂಬಾಣಿ' ಎಂಬುದು ಅವರ ಜಾತಿಗೆ ಸಾಮಾನ್ಯವಾಗಿ ವಾಡಿಕೆಯಾಗಿರುವ ಹೆಸರು. 'ಬಂಜಾರ' ಅಥವಾ 'ಬಣಜಾರ್' ಎಂಬುದು ಇವರು ಮೂಲತಃ ವರ್ತಕರಾಗಿದ್ದರೆಂಬುದನ್ನು ಸೂಚಿಸುತ್ತದೆ.

ಉತ್ತರ ಹಿಂದೂಸ್ತಾನ ಮುಂತಾದ ಕಡೆಗಳಲ್ಲಿ ಆಹಾರಧಾನ್ಯಗಳ ವ್ಯವಹಾರವನ್ನು ಕೈಕೊಂಡಿದ್ದರಿಂದ 'ವಣಜಾರಾ' (ವಣಜ (ಸಂ)=ಧಾನ್ಯ) 'ಬಣಜಾರಾ' ಎಂಬ ಹೆಸರುಗಳಿಂದ ಕರೆಯಲ್ಪಟ್ಟರು. 'ವಾಣಿಜ್ಯಂ' ಎಂಬ ಶಬ್ದ ಪ್ರಾಂತೀಯ ಭಾಷೆಗೆ ಸಿಲುಕಿ ಅಪಭ್ರಂಶಗೊಂಡು ಬನಜಾರಾ (ರಾಜಸ್ಥಾನೀ), ವನಜಾರಾ (ಗುಜರಾತಿ), ಬನಜಾರೆ (ಉರ್ದು), ಬಂಜಾರಿ (ಮರಾಠಿ) ಎಂದಾಗಿ ಕರೆಯಲ್ಪಟ್ಟಿರಬೇಕು.[1] ಇವರು ವ್ಯಾಪಾರಕ್ಕಾಗಿ ಸಂಚರಿಸುತ್ತಿದ್ದುದರಿಂದ ವನಚರ>ವನಜಾರ>ಬನಜಾರ> ಬನಜಾರಾ>ಬಣಜಾರ ಆಗಿರಬೇಕು.

'ಲಮಾಣಿ' ಅಥವಾ 'ಲಂಬಾಣಿ' ಎಂಬುದು ಸಂಸ್ಕೃತದ 'ಲವಣ' ಶಬ್ದದಿಂದ ಬಂದುದಾಗಿದೆ.[2] 'ಲವಣ' ಇದರ ಅಪಭ್ರಂಶ 'ಲಮಣ'. ಇದರ ವಿಶೇಷಣ 'ಲಮಾಣಿ'. ಪೂರ್ವದಲ್ಲಿ ಈ ಜನರು ಲವಣದ ವ್ಯಾಪಾರವನ್ನು ಕೈಕೊಂಡಿರುವುದರಿಂದ ಲವಣಿಗರು, ಲಮಾಣಿಗರು, ಲಂಬಾಣಿಗರು, ಲಂಬಾಡಿಗಳೆಂಬ ಹೆಸರುಗಳಿಂದ ಕರೆಯಲ್ಪಟ್ಟರು.

'ಲಾದೇನಿಯಾ' ಎಂಬುದು ಇವರ ವೃತ್ತಿಯನ್ನು ಸೂಚಿಸುತ್ತದೆ. ಈ ಜನರು ಪೂರ್ವದಲ್ಲಿ ರೈಲು ಮುಂತಾದ ವಾಹನ ಸೌಕರ್ಯವಿಲ್ಲದಾಗ, ಭಾರವಾದ ವಸ್ತುಗಳನ್ನು ಹಾಗೂ ಆಹಾರ ಸಾಮಗ್ರಿಗಳನ್ನು ತಮ್ಮ ದನಕರುಗಳ ಮೇಲೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸರಬರಾಜು ಮಾಡುತ್ತಿದ್ದುದರಿಂದ ಇವರಿಗೆ 'ಲಾದೇಣಿಯಾ' ಎಂಬ ಹೆಸರು ಬಂದಿರಬೇಕು. ಹಿಂದೀಯ 'ಲಾದ್' ಪದದಿಂದ 'ಲದಣಿಯಾ' ಎಂದಾಗಿದೆ. 'ಲದಣಿಯಾ' ಇನ್ನೊಂದು ಅರ್ಥದಲ್ಲಿ ಸಂಚಾರಿ ಜನಾಂಗವೆಂದರ್ಥ. ರಾಜಸ್ಥಾನ ಹಾಗೂ ಗುಜರಾತ ಪ್ರಾಂತಗಳಲ್ಲಿರುವ ಈ ಜನರಿಗೆ 'ಲಧೇಣಿಯಾ' ಎಂದು ಹೆಸರು.

ಆಂಧ್ರಪ್ರದೇಶ, ಮದ್ರಾಸ ಹಾಗೂ ಕೇರಳ ಪ್ರಾಂತಗಳಲ್ಲಿ ಲಂಬಾಣಿಗಳಿಗೆ 'ಸುಗಾಲಿ,' 'ಸುಕಾಳಿ,' 'ಸುಕಾಲಿ' ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. 'ಸುಗಾಲಿ' ಎಂದರೆ 'ಆಕಳು' ಎಂದರ್ಥ ಈ ಜನರು ಮೊದಲಿನಿಂದಲೂ ಹೆಚ್ಚಾಗಿ ಗೋಪಾಲಕರಾಗಿರುವುದು. ಕಂಡುಬರುತ್ತದೆ. ಗೋವುಗಳಿಂದಲೇ 'ಗೋರಮಾಟಿ' (ಲಮಾಣಿ) ಗಳಾದರೆಂಬ ಮಾತು ಅವರಲ್ಲಿ ಜನಜನಿತವಾಗಿದೆ.

---

1. "Lamani Language, its Grammar & Relation with Rajasthani and Hindi" — A. K. Rathod. Unpublished Ph.D. thesis, Karnatak University, Dharwar. 1971. page 286.
2. ಲಂಬಾಣಿ ಅಥವಾ ಲಂಬಾಡಿ ಎಂಬುದು ಲಮಾನ್ ಅಥವಾ ಲಭಾನ್ ಎಂಬ ಪದದ ಇನ್ನೊಂದು ರೂಪವೆಂದು ಹೇಳುತ್ತಾರೆ. 'ಲಭಾನ್' ಎಂಬುದು ಬಣಜಾರ ಜಾತಿಯ ಪ್ರಭೇದಗಳಲ್ಲೊಂದು (H. V. Nanjundayya and L. K. Anantha, Krishna Iyer: The Mysore Tribes and Castes, II,p. 136.

ಗೌರ, ಗೌರಿಯ, ಗವಾರಿಯಾ, ಗಂವಾರಿಯಾ, ಗಾವುಲಾ, ಗಂವಾರಾ–ಎಂಬ ಹೆಸರುಗಳು 'ಗೌಡ' ಎನ್ನುವ ಪದದಿಂದ ಬಂದಿವೆ 'ಗೌರ' ಇದಕ್ಕೆ ಮೂಲ 'ಗೌಡ' ವೆಂದಿದೆ. ಪಂಜಾಬಿಯಲ್ಲಿ 'ಗೌಡ'ಕ್ಕೆ 'ಗೌರ' ವೆಂದು ಉಚ್ಚರಿಸುವರು. ಮೂಲತಃ ರಾಜಸ್ಥಾನದಿಂದ ಹೊರಟ ಈ 'ಗೌಡ' ಜನಾಂಗ ಪಂಜಾಬಕ್ಕೆ ಹೋಗಿ 'ಗೌರ' ಎಂದಾಗಿರಬೇಕು. ತಮ್ಮ ವ್ಯಾಪಾರ ಹೇತುವಿನಿಂದಾಗಿ ಈ ಜನರಿಗೆ 'ನಾಯಕ್' ಎಂಬ ಬಿರುದುಗಳು ರಾಜಸನ್ನದುಗಳಿಂದ ಕೊಡಲ್ಪಟ್ಟಿದ್ದವೆಂದು ಗೊತ್ತಾಗುತ್ತದೆ. ನಾಯಕ್' ಎನ್ನುವ ಹೆಸರು ಈಗಲೂ ಇವರ ಹೆಸರಿನ ಮುಂದೆ (ಕೆಲವೆಡೆಗಳಲ್ಲಿ), ಇರುವುದು ಕಂಡುಬರುತ್ತದೆ.

ಕಂಗಿ, ಕಂಗಸಿಯಾ, ಹಾಗೂ ಘಾಣದ—ಎಂಬುವುಗಳು ಇವ್ರ ಕಸಬಗಳನ್ನು ಅವಲಂಬಿಸಿವೆ. ಪಂಜಾಬಿ ಭಾಷೆಯಲ್ಲಿ 'ಕಂಘಿ' ಎನ್ನುವ ಪದವನ್ನೇ ರಾಜಸ್ಥಾನದಲ್ಲಿ 'ಕಾಂಗಸಿಯಾ,' ಕಾಂಘಟಿಯಾ' ಎಂದು ಕರೆಯುತ್ತಾರೆ. ಇದನ್ನೆ ಮಹಾರಾಷ್ಟ್ರದಲ್ಲಿ 'ಫಣಾಡಾ','ಘಾಣದ' ಎಂದೆನ್ನುತ್ತಾರೆ. ಕನ್ನಡದಲ್ಲಿ ಇವುಗಳಿಗೆ 'ಬಾಚಣಿಗೆ'ಎಂದರ್ಥ.

ಶಿರಕಿಬಂದ, ಶಿರಕಿ ಬಂಜಾರಾ ಎಂದು ಕರೆಯಲ್ಪಡುವ ಈ ಜನರು ಉತ್ತರ ಪ್ರದೇಶ, ರಾಜಸ್ಥಾನ ಹಾಗೂ ಪಂಜಾಬಗಳಲ್ಲಿ ಕಂಡುಬರುತ್ತಾರೆ. 'ಶಿರಕಿ' ಎಂದರೆ ಒಂದು ಪ್ರಕಾರದ ಚಾಪೆ, ಹಗ್ಗಗಳನ್ನು ತಯಾರಿಸುವ ಹುಲ್ಲು. ಈ ಜನರು ತಮ್ಮ ಉಪಜೀವನಕ್ಕಾಗಿ ಈ ಕೆಲಸವನ್ನು ಕೈಗೊಂಡಿದ್ದರಿಂದ ಇವರಿಗೆ ಶಿರಕಿ ಬಂದ, ಶಿರಕಿ ಬಂಜಾರಾಗಳೆಂದು ಹೆಸರು ಬಂದಿವೆ.

ಧಾಡಿ, ಢಾಲಿಯಾ, ಸನಾರ, ನಾವಿ, ಜೋಗಿ ಮಾರವಾ, ವಾಡಿ, ವಾಜೀಗರ, ರೋಹಿದಾಸ ಮುಂತಾದವು ಬಂಜಾರ ಜಾತಿಯಲ್ಲಿ ಕೆಳವರ್ಗವನ್ನು ಸೂಚಿಸುತ್ತವೆ. ಈ ಹೆಸರುಗಳನ್ನು ಹೊಂದಿರುವ ಜನರು ತಮ್ಮ ಸಮಾಜದಲ್ಲಿ ಉಚ್ಚಜನರಿಗಾಗಿ ತಮ್ಮ ಸೇವೆಯನ್ನು ಮೀಸಲಾಗಿಡಬೇಕಾಗುತ್ತದೆ. ಇವರೆಲ್ಲ ವಿಭಿನ್ನ ವೃತ್ತಿಗಳನ್ನು ಹೊಂದಿದವರಾಗಿದ್ದಾರೆ.

ಹೀಗೆ ಸಮಸ್ತ ಭಾರತದಲ್ಲಿ ಪ್ರತಿಯೊಂದು ಭಾಗಗಳಲ್ಲಿ ನೆಲೆಯಾಗಿರುವ ಲಂಬಾಣಿ ಜನಾಂಗದ ಜಾತಿ ಒಂದೇ ಆಗಿದ್ದರೂ ಕರೆಯುವ ಹೆಸರುಗಳಲ್ಲಿ ಭಿನ್ನತೆ ಕಂಡುಬರುತ್ತದೆ.

ಲಂಬಾಣಿಗಳ ಮೂಲ:

ರಜಪೂತ, ಗುರ್ಜರು, ಹಾಗೂ ಲಂಬಾಣಿ ಸಮಾಜಗಳಲ್ಲಿ ಪರಸ್ಪರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಬಂಧವಿರುವುದು ಕಂಡುಬರುತ್ತದೆ ಇವುಗಳ ಪಂಗಡ (ಬೆಡಗು) ಗಳಲ್ಲಿಯೂ ಪರಸ್ಪರ ಹೋಲಿಕೆಗಳಿರುವುದರಿಂದ ಈ ಮೂರೂ ಸಮಾಜ ಗಳು ಒಂದೇ ಮೂಲದಿಂದ, ಒಂದೇ ಸ್ರೋತದಿಂದ ಉಗಮವಾಗಿರುವುದರಲ್ಲಿ ಯಾವ ಸಂದೇಹವಿಲ್ಲ. ಹೀಗಾಗಿ ರಾಜಪುತಾಣದ ರಜಪೂತರೊಡನೆ ಲಂಬಾಣಿಗಳ

ಸಂಬಂಧವಿರುವುದು ಕಂಡುಬರುತ್ತದೆ. ಇದರಿಂದಾಗಿ ಲಂಬಾಣಿಗಳ ಮೂಲಸ್ಥಾನ ರಾಜಸ್ಥಾನವೇ ಆಗಿದೆ.

ಲಂಬಾಣಿಗಳು ಅಥವಾ ಬಣಜಾರರು ಉತ್ತರದಿಂದ, ಬಹುಶಃ ರಾಜಪುತಾಣ ದಿಂದ ದಕ್ಷಿಣ ಭಾರತದ ತುಂಬೆಲ್ಲಾ ಪಸರಿಸಿ ಅಲ್ಲಲ್ಲಿ ಬೀಡುಬಿಟ್ಟಿರಬೇಕು. ಈ ವಿಷಯವಾಗಿ ಅನೇಕ ಭಿನ್ನಾಭಿಪ್ರಾಯಗಳು ತಲೆದೋರಿದರೂ ನಿರ್ವಿವಾದವಾಗಿ ಲಂಬಾಣಿಗಳು ರಜಪೂತ ಪರಂಪರೆಯವರೆಂಬುದು ಉಚಿತ. ಇಲ್ಲಿ ಇವರನ್ನು ಕುರಿತು ಒಂದು ಐತಿಹ್ಯ ಹೀಗಿದೆ:—

ಭಾರತದಲ್ಲಿ ಮೊಗಲರ ಆಳ್ವಿಕೆ ಪ್ರಾರಂಭವಾಗುವುದಕ್ಕಿಂತ ಮುಂಚೆ ಸಣ್ಣ ಪುಟ್ಟ ಸಂಸ್ಥಾನಿಕ ರಾಜರುಗಳು ತಮಗೆ ಸಂಬಂಧಿಸಿದ ಪ್ರದೇಶಗಳನ್ನಾಳುತ್ತಿದ್ದರು. ಇವರಲ್ಲಿ ರಜಪೂತ ವಂಶದ ಮೂಲಪುರುಷ ರಾಣಾಪ್ರತಾಪನೂ ಒಬ್ಬನಾಗಿ, ರಾಜಸ್ಥಾನ ಹಾಗೂ ದೆಹಲಿಯ ಕೆಲಪ್ರದೇಶಗಳನ್ನು ಆಳುತ್ತಿದ್ದನು ಈ ವೇಳೆ ಗಾಗಲೇ ಭಾರತದಲ್ಲಿ ಮುಸ್ಲಿಮರ ಆಳ್ವಿಕೆ ಪ್ರಾರಂಭವಾಗಿತ್ತು. ಕೆಲಕಾಲ ನಂತರ ದಲ್ಲಿ ಮೊಗಲಸಾಮ್ರಾಟನೆನಿಸಿದ ಅಕಬರನು ಉದಯಪುರದ ಮೇಲೆ ಧಾಳಿ ಮಾಡಿದನು. ಇದರಿಂದಾಗಿ ಪ್ರತಾಪನು ಹತ್ತಿರದಲ್ಲಿಯ 'ಹಳದೀಘಾಟಿ' ಎಂಬ ಪರ್ವತದಲ್ಲಿ ಹೋಗಿ ಮರೆಯಾದನು. ಈತನೊಂದಿಗೆ ಹಲವಾರು ಜನ ರಾಷ್ಟ್ರ ಭಕ್ತರೂ ಹೋದರು. ಪುನಃ ಅಲ್ಲಿಯೂ ಆಕ್ರಮಣ ನಡೆಯಿತು. ರಜಪೂತರ ಸೈನ್ಯ ಮೊಗಲರ ಸೈನ್ಯಕ್ಕಿಂತ ತುಂಬಾ ಚಿಕ್ಕದಾಗಿದ್ದರಿಂದ ಪ್ರತಾಪನು 'ಹಳದೀ ಘಾಟಿ' ಯುದ್ಧದಲ್ಲಿ ಸೋಲನ್ನನುಭವಿಸಬೇಕಾಯಿತು. ವಿಜಯಿಯಾದ ಅಕಬರನು "ನೀನು ಶರಣಾಗತನಾಗಿ ಬಂದರೆ ಪುನಃ ನಿನ್ನ ರಾಜ್ಯವನ್ನು ಮರಳಿ ಕೊಡುವೆನೆಂದು" ಸಂದೇಶ ಕಳಿಸಿದನು. ವೀರಕ್ಷತ್ರಿಯ ಕುಲಜನಾದ ಪ್ರತಾಪನು ಈ ಒಡಂಬಡಿಕೆಗೆ ಒಳಗಾಗದೆ— "ಸ್ವಸಾಮರ್ಥ್ಯದಿಂದ ರಾಜ್ಯವನ್ನು ಮರಳಿ ಪಡೆಯುವೆನೇ ವಿನಃ ಶರಣಾಗತನಾಗಲಾರೆ" ಎಂದುತ್ತರಿಸಿದನಲ್ಲದೆ, ತನ್ನ ರಾಜ್ಯವನ್ನು ಮರಳಿ ಪಡೆಯುವ ವರೆಗೆ ತಾನು 'ಹುಲ್ಲು ಹಾಸಿಗೆಯನ್ನು ಮಾಡಿಕೊಂಡು, ಎಲೆಗಳಲ್ಲಿಯೇ ಆಹಾರ ವನ್ನು ಸೇವಿಸಿ. ಅರಣ್ಯದಲ್ಲಿಯೇ ವಾಸಿಸುವೆ'ನೆಂದು ಪ್ರತಿಜ್ಞೆಗೈದು ಅಡವಿಗೆ ಹೊರಟು ಹೋದನು. ಆತನೊಡನೆ ಹಲವಾರು ಜನ ಸೈನಿಕರೂ ಹೋದರು. ಇದರೊಂದಿಗೆ ರಜಪೂತರ ಮೇಲೆ ಮೊಗಲರ ಅತ್ಯಾಚಾರಗಳು ಹೆಚ್ಚಾಗಿ ಅನೇಕ ರಜಪೂತ ಕುಟುಂಬಗಳೂ ಕೂಡ ಅಡವಿಗೆ ಹೋಗಿ ಅಡಗಿಕೊಂಡವು.

ಹೀಗೆ, ಅಡವಿಗೆ ಹೋದ ಜನರು ತಮ್ಮ ರಾಜ ಪ್ರತಾಪನೊಂದಿಗೆ ಅಡವಿಯಲ್ಲಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತ, ರಾಜನ ಪ್ರತಿಜ್ಞಾ ಪಾಲನೆ ಮಾಡುತ್ತಾ ಕಾಲಕಳೆದರು. ದುರ್ಭಾಗ್ಯದಿಂದ ರಾಜನ ಪ್ರತಿಜ್ಞೆ ಫಲಿಸಲಿಲ್ಲ. ಮುಂದೆ ಅದೇ ಚಿಂತೆಯಲ್ಲಿ ಮುಳುಗಿ ಪ್ರತಾಪನು ಮರಣ ಹೊಂದಿದನು. ಇದರಿಂದಾಗಿ ಮೊಗಲರು ಸುಮ್ಮನೇ ಕುಳಿತುಕೊಳ್ಳದೇ ಈ ವೀರವಂಶಜರನ್ನು ಅಡವಿಯಲ್ಲಿ ಹುಡುಕಲೆತ್ನಿ

ಸಿದರು. ಇಂಥ ಪ್ರಸಂಗದಲ್ಲಿ ಮೊಗಲರಿಂದ ಸಂರಕ್ಷಿಸಿಕೊಳ್ಳಲು ಅವರ ತುಂಬಾ ಕಷ್ಟವನ್ನೆದುರಿಸಬೇಕಾಯಿತು. ತಮ್ಮ ವೇಷ-ಭೂಷಣಗಳನ್ನು ಬದಲಿಸಿಕೊಂಡು ಭಿಲ್, ಪಾರಧೀ ಮುಂತಾದ ಜಂಗಲಿ ಜಾತಿಯವರೊಡನೆ ಸೇರಿಕೊಂಡರು.

ಹೀಗಾಗಿ, ಯಾವುದಕ್ಕೂ ನಿರಾಶ್ರಿತರಾದ ಈ ಜನರು ಬದುಕುವುದಕ್ಕೂ ಕಷ್ಟವಾಗಿ ಕಾಲಾಂತರದಲ್ಲಿ ಜೀವನೋಪಾಯಕ್ಕಾಗಿ ಅಲ್ಲಿಂದ ಕಾಲುಕೀಳಬೇಕಾಗಿ ಬಂದಿತು. ದೀರ್ಘಕಾಲಾವಧಿಯವರೆಗೆ ಅಡವಿಯಲ್ಲಿ ವಾಸಿಸಿದ ಈ ಜನರು ಪಶು ಪಾಲನೆ ಮಾಡಿರುವದು ಸ್ವಾಭಾವಿಕ. ಇವರು ಕ್ರಮೇಣ "ತಮ್ಮ ದನ-ಕರು ಗಳೊಂದಿಗೆ ಮಾತೃಭೂಮಿ 'ರಾಜಸ್ಥಾನ' ಹಾಗೂ 'ಪಹಾಡ' ಪ್ರದೇಶಗಳನ್ನು ತೊರೆದು 'ಮಾಳವಾ' ಮುಖಾಂತರವಾಗಿ ಹೊರಬಿದ್ದರು. ಹೀಗೆ ಹೊರಬಿದ್ದ ಈ ಜನ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಂಚರಿಸುತ್ತ ಅನೇಕ ಕಷ್ಟ ಕಷ್ಟನಷ್ಟಗಳನ್ನು ಎದುರಿಸುತ್ತ 19ನೇ ಶತಮಾನದ ಉತ್ತರಾರ್ಧದಲ್ಲಿ 'ತಾಂಡಾ'ದ ರೂಪದಲ್ಲಿ ನಿಶ್ಚಿತವಾಗಿ ಒಂದೊಂದು ಕಡೆಗೆ ನೆಲೆಯಾದರು. ರಾಜಸ್ಥಾನದಿಂದ ಹೊರಡುವಾಗ ತಮ್ಮ ಜೀವನೋಪಾಯಕ್ಕಾಗಿ ಯುದ್ಧೋಪಕರಣಗಳನ್ನು ತೊರೆದು ವ್ಯಾಪಾರವನ್ನೇ ತಮ್ಮ ಪ್ರಮುಖ ಉದ್ಯೋಗವನ್ನಾಗಿ ಮಾಡಿಕೊಂಡರು. ಈ ಜನರು ಒಂದೇ ಸ್ಥಳದಿಂದ ಹೊರಟಿದ್ದರೂ ಅನೇಕ ಗುಂಪುಗಳಲ್ಲಿ ಸೇರಿಕೊಂಡು ವ್ಯಾಪಾರಮಾಡುತ್ತಾ ಭಾರತದ ತುಂಬೆಲ್ಲಾ ಪಸರಿಸಿದರು".[1] ಹೀಗೆ ಬಂದ ಇವರಲ್ಲಿ ಕೆಲವರು ಲವಣದ ವ್ಯಾಪಾರವನ್ನು, ಆಹಾರಧಾನ್ಯಗಳ ವ್ಯವಹಾರವನ್ನು, ಹಲ ಕೆಲವರು ಖಾದ್ಯಪದಾರ್ಥಗಳನ್ನು ಹಾಗೂ ಮುತ್ತಿನ ವ್ಯಾಪಾರವನ್ನು ಕೈಕೊಂಡರು. ಹೆಚ್ಚು ಜನರು ತಮ್ಮ ದನಕರುಗಳನ್ನು ಉಪಯೋಗಿಸಿಕೊಂಡು ಸರಬರಾಜು ಮಾಡುವ ಕೆಲಸವನ್ನೇ ಕೈಕೊಂಡರು. ಇವರನ್ನು ರಾಜ-ಮಹಾರಾಜರುಗಳು ವಿಶ್ವಾಸದಿಂದ ತಮ್ಮ ಸೈನ್ಯಗಳಿಗೆ ಆಹಾರಧಾನ್ಯಗಳನ್ನು ಪೂರೈಸಲು ನೇಮಿಸಿ ಕೊಂಡರು. ದೇಶದಲ್ಲಿ ರೈಲುಮುಂತಾದ ವಾಹನ ಸೌಕರ್ಯವಿಲ್ಲದ ಆ ಕಾಲದಲ್ಲಿ ಇವರು ಭಾರೀವಸ್ತುಗಳನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗಿಸುವ ಸಾಹಸಿಗಳಾಗಿದ್ದರು.

ಇದರಿಂದಾಗಿ, ಲಂಬಾಣಿಗಳು ಮೂಲತಃ ರಾಜಸ್ಥಾನದವರಾಗಿದ್ದು, ಸಂಚಾರಿ ಜನಾಂಗವಾಗಿ ದಕ್ಷಿಣಕ್ಕೆ ಬಂದು ಅಲ್ಲಲ್ಲಿ ತಂಡೋಪತಂಡಗಳಾಗಿ ಇಳಿದು ಹೆಚ್ಚಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶಗಳನ್ನೇ ತಮ್ಮ ತಾಯ್ನಾಡನ್ನಾಗಿ ಮಾಡಿ ಕೊಂಡಿರುವುದು ಕಂಡುಬರುತ್ತದೆ.

---

1 "A Literary study of Lamani Folk songs in Karnatak" —H. D. Lamani. Unpublished Ph.D. Ehesis, K.U.D. 1976.

ಸಾಹಿತ್ಯ ಪರಂಪರೆ

ಡಿ. ಮಂಗಳಾಪ್ರಿಯದರ್ಶಿನಿ

ಸಾಹಿತ್ಯದ ಚಾರಿತ್ರಿಕ ಆಯಾಮವನ್ನು 'ಸಾಹಿತ್ಯಪರಂಪರೆ' ಎನ್ನಬಹುದು. ಟಿ. ಎಸ್. ಎಲಿಯಟ್ ಸಾಹಿತ್ಯಪರಂಪರೆಯನ್ನು ಸೃಜನಾತ್ಮಕ ಪರಂಪರೆಯ ಒಂದು ಒಳವಿಭಾಗ ಎಂದು ಗುರುತಿಸುತ್ತಾನೆ.

ಸಾಹಿತ್ಯದ ಚಾರಿತ್ರಿಕ ಆಯಾಮವನ್ನು ಸಾಹಿತ್ಯಪರಂಪರೆ ಎಂದು ಕರೆಯಬಹುದಾದರೂ 'ಸಾಹಿತ್ಯ ಚರಿತ್ರೆ' ಸಾಹಿತ್ಯಪರಂಪರೆಯಲ್ಲ. ಸಾಹಿತ್ಯ ಚರಿತ್ರೆ ಸಾಹಿತ್ಯಪರಂಪರೆಯನ್ನು ಅಧ್ಯಯನಮಾಡಲು ಸಹಾಯ ಮಾಡುತ್ತದೆ. ಸಾಹಿತ್ಯ ಚರಿತ್ರೆ ಬೆಳೆಯುವಂತಹದು. ಆದರೆ ಸಾಹಿತ್ಯಪರಂಪರೆ ಬೆಳೆಯಲೇಬೇಕಾಗಿಲ್ಲ. ಅದು ಬದಲಾವಣೆಗೂ ಒಳಗಾಗಬಹುದು, ಬೆಳೆದರೂ ಬೆಳೆಯಬಹುದು.

ಒಂದು ಸಾಹಿತ್ಯಪರಂಪರೆ ಅನೇಕ ಪರಂಪರೆಗಳನ್ನು ಒಳಗೊಳ್ಳುತ್ತದೆ. ಸಾಹಿತ್ಯ ಎನ್ನುವುದನ್ನು ಒಂದು ದೊಡ್ಡ ವಲಯವನ್ನಾಗಿ ಭಾವಿಸಿದರೆ, ಆ ದೊಡ್ಡ ವಲಯದ ಒಳಗೆ ಅನೇಕ ಪರಂಪರೆಗಳು ಸೇರುತ್ತವೆ. ಎಂದರೆ, ಒಂದು ಕೃತಿ ಆ ಕಾಲದ ಸಾಮಾಜಿಕ ಒತ್ತಡ ಹಾಗೂ ಲೇಖಕನ ಮನಸ್ಥಿತಿ, ಧೋರಣೆಗಳನ್ನು ಒಳಗೊಂಡಿರುತ್ತದೆ. ಹೀಗಾಗಿ ಆ ಕೃತಿಯ ಒಳಗೆ ಒಂದು ಸಂಸ್ಕೃತಿ, ಧರ್ಮ, ಜನಜೀವನ–ಇವುಗಳು ಪ್ರಕಟವಾಗಿರುತ್ತವೆ. ಎಂದರೆ ಆ ಸಾಂಸ್ಕೃತಿಕ ವಿಚಾರಗಳು ಸಮಕಾಲೀನ ಸಾಂಸ್ಕೃತಿಕ ವಿಚಾರಗಳಿಂದ ನಿಯಂತ್ರಣಗೊಂಡಿರುತ್ತವೆ, ಅವುಗಳ ಒತ್ತಡಕ್ಕೆ ಗುರಿಯಾಗಿರುತ್ತವೆ. ಈ ದೃಷ್ಟಿಯಿಂದ ನೋಡುವುದಾದರೆ, ಒಂದು ಸೃಜನಾತ್ಮಕ ಪರಂಪರೆ ಸಾಮೂಹಿಕ ಪರಂಪರೆಯ ಅಂಶಗಳನ್ನೂ ಒಳಗೊಂಡಿರುತ್ತದೆ.

ಸಾಹಿತ್ಯಕ್ಕೆ ಪರಂಪರೆಯಿರುವಂತೆ, ಒಂದು ಸಾಹಿತ್ಯಕೃತಿಗೂ ತನ್ನದೇ ಆದ ಪರಂಪರೆಯಿರುತ್ತದೆ. ಎಂದರೆ, ಒಂದು ಸಾಹಿತ್ಯಕೃತಿಗೆ ವಸ್ತುವಿನ ಪರಂಪರೆ, ಕಾವ್ಯ ಛಂದಸ್ಸಿನ ಪರಂಪರೆ, ಧೋರಣೆಗಳ ಪರಂಪರೆಯಿರಬಹುದು. ರಾಮಾಯಣ, ಮಹಾಭಾರತದಂತಹ ವಸ್ತುಗಳಿಗೆ ನಮ್ಮ ಸಾಹಿತ್ಯಪರಂಪರೆಯ ಸಂದರ್ಭದಲ್ಲಿ ತಮ್ಮದೇ ಆದ ಪರಂಪರೆಯಿರುವುದನ್ನೂ ಗಮನಿಸಲು ಸಾಧ್ಯವಿದೆ. ಸಾಹಿತ್ಯ ಪರಂಪರೆಯ ಸಂದರ್ಭದಲ್ಲಿ ಮತ್ತೆ ಮತ್ತೆ ಅದೇ ವಸ್ತುಗಳನ್ನು ನಮ್ಮ ಕವಿಗಳು ಸ್ವೀಕರಿಸಿದರೂ, ಅದನ್ನು ಅವರು ತಮ್ಮ ಸಮಕಾಲೀನ ಸಾಂಸ್ಕೃತಿಕ ಒತ್ತಡಗಳಿಗೆ ಸಿಕ್ಕಿ ಬಿದ್ದು, ತಮ್ಮ ಧೋರಣೆ, ಧರ್ಮ, ತಾವು ನಂಬಿದ ರಾಜಕೀಯ ವಿಚಾರಗಳಿಗೆ ತಕ್ಕಂತೆ ಬಳಸಿಕೊಂಡಿದ್ದನ್ನು ಕಾಣಬಹುದು. ಹೀಗಾಗಿ ಇಲ್ಲಿ ಒಂದು ವಸ್ತುವಿನ

ಪರಂಪರೆ ಬೆಳೆದದ್ದು, ಬದಲಾದದ್ದು, ಅಥವಾ ನಶಿಸಿಹೋದದ್ದು ಆಯಾ ಕಾಲದ ಸಮಕಾಲೀನ ಸ್ಥಿತಿಗಳನ್ನು ಅವಲಂಬಿಸಿ. ಪ್ರತಿಯೊಂದು ಕೃತಿಯೂ ಸಾಹಿತ್ಯ ಪರಂಪರೆಗೆ ತನ್ನ ಕೊಡುಗೆಯನ್ನು ನೀಡುತ್ತದೆ. ಆದರೆ ಸಾಹಿತ್ಯಪರಂಪರೆಯ ಸರಪಳಿಗೆ ಸಾಹಿತ್ಯಕೃತಿಯ ಕೊಡುಗೆ ಒಂದು ಕೊಂಡಿಯಾಗಿ ನಿಲ್ಲುವುದು ಅದರ ಮೌಲ್ಯಾತ್ಮಕ ಧೋರಣೆಗಳಿಂದಾಗಿ. ಸಾಹಿತ್ಯಕೃತಿ ಸತ್ವಶಾಲಿಯಾಗಿದ್ದರೆ, ಅದು ಸಾಹಿತ್ಯಪರಂಪರೆಯ ಜ್ಯೋತಿಗೆ ತೈಲವಾಗುತ್ತದೆ.

ಸಾಹಿತ್ಯಪರಂಪರೆಯ ಸಂದರ್ಭದಲ್ಲಿ ಸಾಹಿತ್ಯಕೃತಿಯ ಪರಂಪರೆಯಿರುವಂತೆಯೇ ಛಂದಸ್ಸಿಗೂ ತನ್ನದೇ ಆದ ಪರಂಪರೆಯಿರುತ್ತದೆ. ಈ ಛಂದಸ್ಸು ಕಾಲದಿಂದ ಕಾಲಕ್ಕೆ ಮಾರ್ಪಾಡುಗೊಂಡದ್ದು ಕೂಡ ಆಯಾ ಕಾಲದ ಸಾಮಾಜಿಕ ರಾಜಕೀಯ, ಧಾರ್ಮಿಕ–ಒಟ್ಟಾರೆಯಾಗಿ ಹೇಳುವುದಾದರೆ ಸಾಂಸ್ಕೃತಿಕ ಸ್ಥಿತಿಗತಿಗಳನ್ನವಲಂಬಿಸಿ, ಚಂಪೂ ಪರಂಪರೆ, ವಚನ ಪರಂಪರೆ, ರಗಳೆ, ಷಟ್ಪದಿ ಪರಂಪರೆಯುತ್ತತಿರುಗಿದ್ದನ್ನು ನಮ್ಮ ಸಾಹಿತ್ಯಪರಂಪರೆಯ ಸಂದರ್ಭದಲ್ಲಿ ಉದಾಹರಿಸಬಹುದು. ಪರಂಪರೆಯಲ್ಲಿ ಕೇವಲ ಜೈವಿಕ ಅಂಶಗಳು ಕ್ರಿಯಾಶೀಲವಾಗಿವರ್ತಿಸುತ್ತವೆ, ಜಡ ಅಂಶಗಳು ತಮ್ಮ ಕ್ರಿಯಾಶೀಲತೆಯನ್ನು ಕಳೆದುಕೊಂಡು ಕೇವಲ ಸಂಪ್ರದಾಯಗಳಾಗುತ್ತವೆ. ಕನ್ನಡ ಸಾಹಿತ್ಯಪರಂಪರೆಯನ್ನು ಗಮನಿಸಿದರೆ ಅದು ಎಲ್ಲೆಲ್ಲಿ ಸಮಕಾಲೀನ ಬದುಕಿನ ಹೊಸತನವನ್ನು ಸ್ವೀಕರಿಸುತ್ತಾ ಬಂದಿದೆಯೋ ಅಲ್ಲಲ್ಲಿ ಜೀವಂತಿಕೆಯಿಂದ ಕಂಗೊಳಿಸಿದೆ. ಅದು ಎಲ್ಲಿ ಅದನ್ನು ಕಳೆದುಕೊಂಡಿದೆಯೋ ಅಲ್ಲಿ ಬರಡಾಗಿದೆ.

ಸಾಮಾನ್ಯವಾಗಿ ನಾವು ಪಂಪನನ್ನು ಕನ್ನಡ ಸಾಹಿತ್ಯಪರಂಪರೆಯ ನಿರ್ಮಾಪಕ ಎಂದು ಕರೆಯುವ ವಾಡಿಕೆಯಿದೆ. ಈ ಮಾತುಗಳನ್ನು ಗಮನಿಸಿದರೆ, ಪ್ರತಿಯೊಬ್ಬ ಶ್ರೇಷ್ಠ ಕವಿಯನ್ನೂ ಸಾಹಿತ್ಯಪರಂಪರೆಯ ನಿರ್ಮಾಪಕ ಎಂದು ಕರೆದಂತಾಗುತ್ತದೆ. ಆದರೆ ಇಲ್ಲಿ ಪಂಪನನ್ನು ನಾವು ಕವಿಯಾಗಿ ಗಮನಿಸಬೇಕೇ ಹೊರತು ವ್ಯಕ್ತಿಯಾಗಲ್ಲ. ಇಲ್ಲಿ ಪಂಪನ ಕೃತಿ ಇದ್ದಕ್ಕಿದ್ದಂತೆ ಉದ್ಭವಿಸಿದುದಲ್ಲ. ಅದಕ್ಕೆ ಛಂದಸ್ಸಿನ ಪರಂಪರೆಯಿದೆ, ವಸ್ತುವಿನ ಪರಂಪರೆಯಿದೆ, ಭಾಷಾಪರಂಪರೆಯಿದೆ. ಇವೆಲ್ಲವನ್ನೂ ಮರೆತು ಯಾವುದೇ ಒಬ್ಬ ಕವಿಯನ್ನು ಪರಂಪರೆಯ ನಿರ್ಮಾಪಕ ಎಂದು ಕರೆಯಲು ಸಾಧ್ಯವಿಲ್ಲ. ಸಾಹಿತ್ಯ ಪರಂಪರೆಯಲ್ಲಿ ಆಯಾ ಕವಿಗಳ ಕೃತಿ ತಮ್ಮ ಮೌಲ್ಯಾತ್ಮಕ ಕೊಡುಗೆಯಿಂದ ಹರಿಯುತ್ತಿರುವ ಪರಂಪರೆಗೆ ಬದಲಾವಣೆ ತಂದು ಕೊಡಬಹುದು, ಹೊಸ ಸ್ವರೂಪವನ್ನು ತೊಡಿಸಬಹುದು. ಈ ಬದಲಾವಣೆ, ರೂಪಾಂತರ ಹೊಸದೇ ಎಂಬಂತೆ ಕಾಣಬಹುದು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಯಾವುದೇ ಒಬ್ಬ ನಿರ್ದಿಷ್ಟ ಕವಿಯನ್ನೂ ಪರಂಪರೆಯ ನಿರ್ಮಾಪಕ ಎಂದು ಕರೆಯಲು ಸಾಧ್ಯವಿಲ್ಲ. ಪಂಪನ ಸಂದರ್ಭದಲ್ಲಿ ಗಮನಿಸುವುದಾದರೆ, ಪಂಪನಿಗಿಂತ ಹಿಂದೆಯೇ ಚಂಪೂ ರೀತಿ ಇತ್ತು. ಸಮಕಾಲೀನ ಚರಿತ್ರೆಯನ್ನು ಪುರಾಣಿಕತೆಯಲ್ಲಿ ಸಮೀಕರಿಸುವ ವಾಡಿಕೆ ಇದ್ದದ್ದನ್ನು ಗುಣವರ್ಣನ ಸಂದರ್ಭದಲ್ಲಿ ನೋಡಬಹುದು. 'ರೀತಿಯಲ್ಲಾಗಲಿ, ರಚನಾ ತಂತ್ರದಲ್ಲಾಗಲಿ, ಪಂಪ ತನ್ನ ಹಿಂದಿನ ಪರಂಪರೆಯಿಂದ ಭಿನ್ನವಾದಂತೆ ತೋರುವುದಿಲ್ಲ. ಹಿಂದಿನ ಕವಿಗಳ ದೃಷ್ಟಿ, ಧೋರಣೆಗಳಿಂದ ಪಂಪ

ಹೇಗೆ ಭಿನ್ನನೆಂದು ಹೇಳಲು ಹಿಂದಿನ ಕೃತಿಗಳು ಯಾವುವೂ ಸಿಕ್ಕಿಲ್ಲ. ಈ ಎಲ್ಲ ಕಾರಣಗಳಿಂದ ಪಂಪ ಅದುವರೆಗೆ ಇದ್ದ, ಆದರೆ, ನಮಗೆ ಉಪಲಬ್ಧವಾಗದ ಕಾವ್ಯ ಪರಂಪರೆಯೊಂದರ ಶಿಖರದಂತೆ ತೋರುತ್ತಾನೆ. ಅವನಿಗಿಂತ ಹಿಂದಿನ ಬೇರೆ ಯಾವ ಕೃತಿಗಳೂ ದೊರೆಯದ ಕಾರಣ ಆದಿಕವಿ ಎನಿಸಿಕೊಂಡಿರುವ ಪಂಪ ಈ ಅರ್ಥದಲ್ಲಿ ಕನ್ನಡ ಸಾಹಿತ್ಯಕ್ಕೆ ಹೊಸ ತಿರುವನ್ನು ತಂದನೆಂದು ಹೇಳಲು ಸಾಧ್ಯವಿಲ್ಲ'[1] ಎಂದು ಡಾ॥ ಜಿ. ಎಸ್. ಶಿವರುದ್ರಪ್ಪನವರು ಅಭಿಪ್ರಾಯಪಡುತ್ತಾರೆ. ಹೀಗೆ ನೋಡಿದರೆ ಪಂಪ ಅವನಿಗಿಂತ ಹಿಂದೆ ಇದ್ದ ಚಂಪೂ ಪರಂಪರೆಯನ್ನು ಉತ್ತುಂಗಕ್ಕೇರಿಸುತ್ತಾನೆ. ಆದ್ದರಿಂದ ಅವನು ಪರಂಪರೆಯ ನಿರ್ಮಾಪಕನಲ್ಲ, ಪ್ರವರ್ತಕ ಎನ್ನಬಹುದು. ಒಬ್ಬ ಕವಿ ಒಂದು ಸಾಹಿತ್ಯಪರಂಪರೆಯನ್ನು ಪ್ರಾರಂಭಿಸಿದ ಎಂದರೆ, ಆ ಪರಂಪರೆ ಅವನಿಂದ ಒಮ್ಮಿಂದೊಮ್ಮೆಗೆ ದಿಢೀರನೆ ರೂಪುಗೊಂಡಿತು ಎಂದರ್ಥವಲ್ಲ. ಅದಕ್ಕೆ ಅವನ ಮನಸ್ಸಿನ ತಳಾತಳದಲ್ಲಿ ಹುದುಗಿದ್ದ ಸಮಷ್ಟಿ ಪ್ರಜ್ಞೆಯೇ (collective consciousness) ಕಾರಣವಾಗಿರುತ್ತದೆ. ಆದರೆ ಪ್ರಜ್ಞೆ ಸ್ಫೋಟಗೊಳ್ಳುವಂತಹ ವಾತಾವರಣ ಕವಿಯ ಸಂದರ್ಭದಲ್ಲಿ ಉಂಟಾಗಿರುತ್ತದೆ ಎಂಬುದನ್ನು ಗಮನಿಸಬೇಕು.

ಸಾಹಿತ್ಯಪರಂಪರೆಗೆ ಸಾಹಿತ್ಯಕೃತಿ ಒಂದು ಅಂಗವಾಗುತ್ತದೆ. ಸಾಹಿತ್ಯ ಚರಿತ್ರೆ ಸಾಹಿತ್ಯಪರಂಪರೆಯ ಅಧ್ಯಯನಕ್ಕೆ ಸಹಾಯವನ್ನು ಒದಗಿಸುತ್ತದೆ. ಸಾಹಿತ್ಯ ಒಂದು ಸಂಸ್ಥೆಯಾದುದರಿಂದ ಕೃತಿ ಮುಖೇನ ನಡೆದ ಚರ್ಚೆಯೇ ನಮಗೆ ಮುಖ್ಯವಾಗುತ್ತದೆ. ಹೀಗಾಗಿ ಯಾವೊಂದು ಸಾಹಿತ್ಯಕೃತಿಯೂ ಪರಂಪರೆಯ ಅರಿವಿಲ್ಲದೆ ಹುಟ್ಟಲು ಸಾಧ್ಯವಿಲ್ಲ. ಕಡೇ ಪಕ್ಷ ಅಲ್ಲಿ ಸಮಷ್ಟಿಪ್ರಜ್ಞೆಯಾದರೂ ಕೆಲಸ ಮಾಡಿರುತ್ತದೆ. ಸಾಹಿತ್ಯಪರಂಪರೆ ಒಂದು ವಿಸ್ತಾರವಲಯವನ್ನು ನಿರ್ಮಾಣ ಮಾಡಿಕೊಂಡಿರುವುದರಿಂದ, ಅದು ತನ್ನೊಳಗೆ ಅನೇಕ ಪರಂಪರೆಗಳನ್ನು ಒಳಗೊಂಡಿರುತ್ತದೆ.

ಯಾವುದೇ ಸಾಹಿತ್ಯಪರಂಪರೆ ಬೆಳವಣಿಗೆ ಮತ್ತು ಬದಲಾವಣೆಗಳನ್ನು ಕಂಡುಕೊಳ್ಳುವುದು ವ್ಯಕ್ತಿಪ್ರತಿಭೆ ಹಾಗೂ ಪ್ರಯೋಗಶೀಲತೆಯಿಂದಾಗಿ, ಈ ಪ್ರಯೋಗಶೀಲತೆಯನ್ನು ಕವಿ ನಡೆಸುವಾಗ ಆತ ತನ್ನ ಸಾಹಿತ್ಯಪರಂಪರೆಗೆ ಪ್ರತಿಭಟನೆಯನ್ನು ಸೂಚಿಸಬಹುದು, ಅಥವಾ ಒಡಂಬಡಿಕೆಯನ್ನಾದರೂ ಮಾಡಿಕೊಳ್ಳಬಹುದು. ಹೀಗಾಗಿ ಕವಿ ತನಗೇ ಅರಿವಿಲ್ಲದಂತೆ ಸಾಹಿತ್ಯಪರಂಪರೆಯೊಡನೆ ಸಂಬಂಧವನ್ನು ಹೊಂದಿರುತ್ತಾನೆ. ಒಬ್ಬ ಕವಿ ಕೃತಿಯನ್ನು ರಚಿಸುತ್ತಿದ್ದಾನೆ ಎಂದರೆ ಆತ ತನ್ನನ್ನು ತಾನು ತನ್ನ ಸಾಹಿತ್ಯಪರಂಪರೆಯಲ್ಲಿ ಗುರುತಿಸಿಕೊಳ್ಳುತ್ತಲೂ ಇರುತ್ತಾನೆ, ಸಾಹಿತ್ಯಪರಂಪರೆಗೆ ತನ್ನ ಕೊಡುಗೆಯನ್ನು ನೀಡುವುದರ ಮೂಲಕ ತನ್ನ ವ್ಯಕ್ತಿ ಪ್ರತಿಭೆಯನ್ನು ತೋರಿಸುತ್ತಲೂ ಇರುತ್ತಾನೆ.

---

1. ಕನ್ನಡ ಸಾಹಿತ್ಯ ಸಮೀಕ್ಷೆ; ಜಿ. ಎಸ್. ಶಿವರುದ್ರಪ್ಪ; ಪುಟ. 17–18.

ಅಲ್ಲಮಪ್ರಭುವೂ ಗೋರಕ್ಷನಾಥನೂ

ಮ. ಸು. ಕೃಷ್ಣಮೂರ್ತಿ

ಅಲ್ಲಮಪ್ರಭು ಮತ್ತು ಗೋರಕ್ಷನಾಥರ ನಡುವೆ ನಡೆದ ಸ್ಪರ್ಧೆ, ದ್ವಂದ್ವ ಮೊದಲಾದವುಗಳನ್ನು ಕುರಿತು ಸಾಕಷ್ಟು ವಿವರಗಳು ‘ಪ್ರಭುದೇವರ ರಗಳೆ’, ‘ಪ್ರಭುಲಿಂಗಲೀಲೆ’, ‘ಶೂನ್ಯ ಸಂಪಾದನೆ’ ಮೊದಲಾದವುಗಳಲ್ಲಿ ದೊರೆಯುತ್ತವೆ. ಅಷ್ಟೇ ಅಲ್ಲ ‘ಗೋರಕ್ಷನಾಥ’ನ ಉಲ್ಲೇಖ ಬಸವಣ್ಣನವರ ವಚನಗಳಲ್ಲೇ ದೊರೆಯುತ್ತದೆ.

> “ಒಲೆಯಡಿಯನುರುಹಿದಡೆ
> ಹೊಗೆಗೋಳಕನಾಥನ ಕೊರಳಸುತ್ತಿತ್ತು ;
> ಮಹೀತಳನ ಜಡೆಸೀಯಿತ್ತು, ಮರೀಚಕನ ಸಿರ ಬೆಂದಿತ್ತು ;
> ರುದ್ರನ ಹಾವುಗೆ ಉರಿಯಿತ್ತು. ದೇವಗಣಂಗಳು ನಿವಾಳವಾದರು ;
> ಮಡದಿಯೆಯ್ವರು ಮಂಡಿಯ ಹಿಡಿದುಕೊಂಡು ಹೋದರು.
> ಕೂಡಲ ಸಂಗಮದೇವ ಭಸ್ಮಧಾರಿಯಾದ !”[1]

ಪ್ರಭುದೇವ ನವನಾಥರನ್ನು ಉಲ್ಲೇಖಿಸಿದ್ದಾನೆ:—

“ಕೊಂಕಣ ದ್ವೀಪದಲ್ಲಿ ಒಂದು ಕಪಿ ಹುಟ್ಟಿತ್ತು, ತಪವ ಮಾಡುವ ಸಪ್ತ ಋಷಿಯರ ನುಂಗಿತ್ತು. ನವನಾಥಸಿದ್ಧರ ಕೊತ್ತೀದುಳಿಯಿತ್ತು. ಅರು-ಹಿರಿಯರ ತಲೆಯ ಮೆಟ್ಟಿ ಅರಿಯಿತ್ತು. ಕಪಿಜನ ವೈರಿಸರ್ಪನ ಹೇಳಿಗೆಯಲ್ಲಿ ನಿದ್ರೆಗೆಯ್ದಿತ್ತು. ಯೋಗಿಗಳ ಭೋಗಿಗಳ ಕೊಲ್ಲದ ಕೊಲೆಯ ಕೊಂದಿತ್ತು......”[2]

“ಹಠಯೋಗ ಲಂಬಿಕೆಯೆಂದು ಆಕುಂಚನವೆಂದು ವಜ್ರಿಅಮರಿಯ ಕಲ್ಪವೆಂದು ಮಲಮೂತ್ರಂಗಳಂ ಸೇವಿಸುತ, ಇದು ಪೂರ್ವನವನಾಥಸಿದ್ಧರ ಮತೋಕ್ತವೆಂದು ಕಾಪಾಲಿಕಾಚರಣೆಯನಾಚರಿಸವರಲ್ಲ ಶರಣರು ; ಮೇಣುತಲೆಯೊಳಗಣವಾತ ಪಿತ್ತ ಶ್ಲೇಷ್ಮವ ತೆಗೆದು ಅಮೃತವೆಂದು ಬಿನುಗುದೃಷ್ಟವ ತೋರುವರಲ್ಲ ಶರಣರು. ದ್ರವಿಸುವ ದೇಹದಲ್ಲಿ ಅಪ್ಪುವಿನ ಫಲರಸಕ್ಷೀರ ಮೊದಲಾದವ ಸೇವಿಸುತ್ತ, ಅನ್ನವ ಬಿಟ್ಟೆವೆಂಬ ಭೂತಚೇಷ್ಟಕರಲ್ಲ ಶರಣರು. ಇವೆಲ್ಲ ಸಾಕು ನಟಭ್ರಾಂತೆಂದು ತಿಳಿದು ನಿರ್ಧರ ನಿಜದಿನಿಂದರು ಗುಹೇಶ್ವರ, ನಿಮ್ಮ ಶರಣರು ಅಗ್ರಗಣ್ಯರು.”[3]

ಆದರೆ ಪ್ರಭುದೇವ ಗೋರಕ್ಷನಾಥನ ಹೆಸರನ್ನು ಸ್ಪಷ್ಟವಾಗಿ ಹೇಳದಿರುವುದು ಇಲ್ಲಿ ಗಮನಾರ್ಹ. ವೀರಶೈವ ಸಂತರ ವಚನಗಳಲ್ಲಿ ಅಲ್ಲಲ್ಲಿ ಯೋಗಮಾರ್ಗದ

ಪಾರಿಭಾಷಿಕ ಶಬ್ದಗಳು ದೊರೆಯುತ್ತವೆ. ಅಲ್ಲಮಪ್ರಭುವಿಗೆ ಲಿಂಗದೀಕ್ಷೆ ನೀಡಿದವನು ಅನಿಮಿಷಯ್ಯ; ಈ ಅನಿಮಿಷಯ್ಯನೇ ಮತ್ಸ್ಯೇಂದ್ರನಾಥನಾಗಿರಬಾರದೇಕೆ–ಎಂದು ವಿದ್ವಾಂಸರು ಕೇಳಿದ್ದುಂಟು. "ರೇವಣಸಿದ್ಧೇಶ್ವರ ರಗಳೆ", 'ಸಿದ್ಧರಾಮ ಚರಿತ್ರೆ' ಮೊದಲಾದವುಗಳಲ್ಲಿ ಕೆಲವು ಸಿದ್ಧರ ಉಲ್ಲೇಖ ಬರುತ್ತದೆ. ನಾಥಪಂಥದ 'ಹಠಯೋಗ ಪ್ರದೀಪಿಕೆ' ಮೊದಲಾದ ಗ್ರಂಥಗಳಲ್ಲಿ ಪ್ರಭುದೇವ, ರೇವಣನಾಥ ಮೊದಲಾದವರು ನಾಥಪಂಥದವರೆಂದು ಉಲ್ಲೇಖವಿದೆ. ರೇವಣಸಿದ್ಧ, ಮರುಳಸಿದ್ಧ, ಕಪಿಲಸಿದ್ಧ ಮೊದಲಾದ ಹೆಸರುಗಳು ಈ ಸಂತರ ಪೂರ್ವಭಿತ್ತಿಯಮೇಲೆ ಬೆಳಕು ಬೀರುತ್ತವೆಂದು ಪ್ರೊ. ಕುಂದಣಗಾರರು ಅಭಿಪ್ರಾಯಪಟ್ಟದುಂಟು. ಇವುಗಳ ಜೊತೆಗೆ ಕರ್ಣಾಟಕದಲ್ಲಿ ಅನೇಕ ಕಡೆ ನಾಥಪಂಥದ ಅವಶೇಷಗಳು ಇನ್ನೂ ಕಂಡುಬರುತ್ತವೆ. ಈ ಎಲ್ಲ ಕಾರಣಗಳಿಂದ ಒಂದಾನೊಂದು ಕಾಲದಲ್ಲಿ ಕನ್ನಡ ನಾಡಿನಲ್ಲಿ ನಾಥಪಂಥ ಜೀವಂತವಾಗಿತ್ತೆಂದೂ, ಅದಕ್ಕೂ ವೀರಶೈವಕ್ಕೂ ದ್ವಂದ್ವ ನಡೆದಿತ್ತೆಂದೂ ಊಹಿಸಬಹುದಾಗಿದೆ.

ಪ್ರಕೃತ ಅಲ್ಲಮಪ್ರಭು ಮತ್ತು ಗೋರಕ್ಷನಾಥ ಇವರಿಬ್ಬರೂ ಸಮಕಾಲೀನರೇ. ಇವರಿಬ್ಬರಲ್ಲಿ ನಡೆದ ದ್ವಂದ್ವ ಎಷ್ಟು ನಿಜ. ಇವರಿಬ್ಬರಲ್ಲಿ ಯಾರು ಯಾರಿಂದ ಪ್ರಭಾವಿತರಾಗಿದ್ದಾರೆ ಮೊದಲಾದ ಅಂಶಗಳನ್ನು ಪರಿಶೀಲಿಸುವುದು ಅಗತ್ಯ. ಏಕೆಂದರೆ ಧಾರ್ಮಿಕಪುರುಷರ ಬದುಕು ಪವಾಡಗಳ ಪೊದೆಯಿಂದ, ದಂತಕಥೆಗಳು, ಕಿಂವದಂತಿಗಳು ಹಾಗೂ ಇತಿ ಶೃತಿಗಳ ಹಾವಸೆಯಿಂದ ಮುಚ್ಚಿಹೋಗಿರುವುದುಂಟು. ಎಂಟನೆಯ ಶತಮಾನದ ಶಂಕರಾಚಾರ್ಯರಿಗೂ ೧೧ನೆಯ ಶತಮಾನದ ರೇವಣರಿಗೂ ತಳುಕು ಹಾಕಿರುವುದುಂಟು. ಇದೇ ರೀತಿ ಗೋರಖನಾಥನಿಗೂ ದತ್ತಾತ್ರೇಯನಿಗೂ ಗಂಟುಹಾಕಿರುವುದುಂಟು. ಗೋರಖ, ಕಬೀರ ಹಾಗೂ ಗೋರಖ, ನಾನಕ್ ಮೊದಲಾದವರೂ ಒಂದೆಡೆ ಕಲೆತು ಗೋಷ್ಠಿ ನಡೆಸಿ ವಿಚಾರವಿನಿಮಯ ನಡೆಸಿದರು ಎಂದು ಹೇಳುವ ಸಂವಾದಮಯವಾದ 'ಗೋರಖಗಣೇಶ ಗೋಷ್ಠಿ. 'ಗೋರಖಮಹೇಶ ಗೋಷ್ಠಿ' 'ಗೋರಖದತ್ತಗೋಷ್ಠಿ' ಮೊದಲಾದ ಗೋಷ್ಠಿಸಾಹಿತ್ಯ ಹಿಂದಿಯಲ್ಲಿ ವಿಪುಲವಾಗಿದೆ. ಇಲ್ಲೆಲ್ಲ ತಮ್ಮ ತಮ್ಮ ಧಾರ್ಮಿಕ ನಾಯಕರ ಮಹಿಮಾಮಂಡನೆ ಪರೋಕ್ಷವಾಗಿ ಅನ್ಯಮತ ಖಂಡನೆ ಇವು ಪ್ರಧಾನವಾದವು. ಶಿವಪಾರಮ್ಯ ಪ್ರತಿಪಾದಕ ಗ್ರಂಥಗಳಲ್ಲಿ ವಿಷ್ಣು ಶಿವಭಕ್ತನಾದರೆ, ವಿಷ್ಣುಪಾರಮ್ಯ ಗ್ರಂಥಗಳಲ್ಲಿ ಶಿವವಿಷ್ಣುವಿನ ಕಿಂಕರ. ಪುರಾಣಗಳಲ್ಲಿ ಕಂಡುಬರುವ ಈ ಪ್ರವೃತ್ತಿ ಸಹಜವಾಗಿಯೇ ಮಧ್ಯಯುಗದ ಧಾರ್ಮಿಕ ಸಾಹಿತ್ಯಕ್ಕೂ ಇಳಿದು ಬಂದಿತ್ತು. ದೃಷ್ಟಿಯಂತೆ ಸೃಷ್ಟಿ, ಭಾವದಂತೆ ದೇವ.

ಈ ದೃಷ್ಟಿಯಲ್ಲಿ ಪ್ರಭುದೇವ ಹಾಗೂ ಗೋರಕ್ಷನಾಥರ ನಡುವಣ ದ್ವಂದ್ವ, ಸಂಬಂಧವನ್ನು ಐತಿಹಾಸಿಕವಾಗಿ ವಿವೇಚಿಸಬೇಕು. ಗೋರಕ್ಷನಾಥನನ್ನು ಕುರಿತು

ವೀರಶೈವ ಸಾಹಿತ್ಯದಲ್ಲಿ ಬರುವ ಕಥೆಗಳಂತೆ ಪ್ರಭುದೇವರ ಬಗೆಗೆ ನಾಥಪಂಥೀಯ ಸಾಹಿತ್ಯದಲ್ಲಿ ಏನಾದರೂ ಸಾಮಗ್ರಿ ದೊರೆಯುವುದೆ ಎಂಬುದನ್ನು ನೋಡಬೇಕು. 'ಹಠಯೋಗ ಪ್ರದೀಪಿಕೆ'ಯಲ್ಲಿ ನಾಥಸಿದ್ಧರ ಪಟ್ಟಿಯಲ್ಲಿ "ಅಲ್ಲಾಮಃ ಪ್ರಭುದೇವಃ" ಎಂದು ಮಾತ್ರ ಅಲ್ಲಮಪ್ರಭುವಿನ ಉಲ್ಲೇಖವಿದೆ. ಇದನ್ನು ಬಿಟ್ಟರೆ ಬೇರೇನೂ ದೊರೆಯುವುದಿಲ್ಲ. ಅದೇ ರೀತಿ ಗೋರಕ್ಷನಾಥನನ್ನು ಕುರಿತ ಕಥೆಗಳಲ್ಲಿಯೂ ಪ್ರಭುದೇವನ ಪ್ರಸಂಗ ಬರುವುದಿಲ್ಲ. ಗೋರಕ್ಷವಾಣಿಯಲ್ಲಿ ಎಲ್ಲೂ ಪ್ರಭುದೇವನ ಉಲ್ಲೇಖವಿಲ್ಲ. ಇದಕ್ಕೆ ಕಾರಣ ಗೋರಕ್ಷನಾಥ ಪ್ರಭುದೇವನಿಗಿಂತ ಪೂರ್ವವರ್ತಿಯಾಗಿರಬೇಕು; ಇಲ್ಲವೆ ಪ್ರಭುದೇವನ ಪರಿಚಯ ಗೋರಕ್ಷನಾಥನಿಗೆ ಇಲ್ಲದಿರಬಹುದು.

ಗೋರಕ್ಷನಾಥನ ದೇಶಕಾಲದ ನಿರ್ಣಯವಾದರೆ ಈ ಸಮಸ್ಯೆ ಪರಿಹಾರವಾದಂತೆಯೇ. ಅದಕ್ಕೆ ಮುಂಚೆ ಇವರ ಬಗೆಗೆ ಪ್ರಚಲಿತವಿರುವ ಕಥೆಗಳನ್ನು ನೋಡೋಣ. ಬಂಗಾಳಿಯಲ್ಲಿ ಗೋರಕ್ಷ ಹಾಗೂ ಮತ್ಸ್ಯೇಂದ್ರರನ್ನು ಕುರಿತು 'ಗೋರಕ್ಷವಿಜಯ' (ಫಯಜುಲ್ಲಾ) ಹಾಗೂ ಶ್ಯಾಮದಾಸನ 'ಮೀನಚೇತನ' ಎಂಬ ಎರಡು ಗ್ರಂಥಗಳು ದೊರೆಯುತ್ತವೆ. ಇವುಗಳ ವಸ್ತು ಒಂದೇ. ಇವುಗಳಲ್ಲಿ ಬರುವ ಕಥೆಯನ್ನು ಶ್ರೀ ಸುಕುಮಾರಸೇನರು ತಮ್ಮ ಬಂಗಾಳೀ ಸಾಹಿತ್ಯ ಚರಿತ್ರೆಯಲ್ಲಿ ಕೊಟ್ಟಿದ್ದಾರೆ. ಅದರ ಸಂಗ್ರಹ ಹೀಗಿದೆ :—

ಆದ್ಯ ಮತ್ತು ಆದ್ಯಾ ಮೊದಲು ದೇವತೆಗಳನ್ನು ಸೃಷ್ಟಿಸಿದರು. ಅನಂತರ ನಾಲ್ಕು ಸಿದ್ಧರ ಸೃಷ್ಟಿಯಾಯಿತು. ಇವರ ತರುವಾಯ ಒಬ್ಬಳು ಕನ್ಯೆ ಹುಟ್ಟಿದಳು; ಅವಳಿಗೆ ಗೌರಿ ಎಂದು ಹೆಸರಿಡಲಾಯಿತು. ಆದ್ಯನ ಅಣತಿಯಂತೆ ಶಿವ ಗೌರಿಯನ್ನು ಮದುವೆಯಾಗಿ ಭೂಲೋಕಕ್ಕೆ ತೆರಳಿದ. ಮೀನನಾಥ, ಗೋರಕ್ಷನಾಥ, ಹಾಡಿಪಾ (ಜಾಲಂಧರನಾಥ) ಮತ್ತು ಕಾನಪಾ (ಕೃಷ್ಣಪಾದ) ಈ ನಾಲ್ವರು ಸಿದ್ಧರೂ ಕೇವಲ ವಾಯುವಿನ ಸೇವನೆಯಿಂದ ಯೋಗಾಭ್ಯಾಸಕ್ಕೆ ತೊಡಗಿದರು. ಗೋರಕ್ಷನಾಥ ಮೀನನಾಥನ ಸೇವಕನಾದರೆ ಕಾನಪಾನು ಹಾಡಿಪಾನ ಸೇವಕನಾದ. ಅತ್ತ ಒಂದು ದಿನ ಗೌರಿ ಶಿವನ ಕೊರಳಿನಲ್ಲಿದ್ದ ಮುಂಡಮಾಲೆಯನ್ನು ಕಂಡು ಅದರ ಕಾರಣವನ್ನು ಕೇಳಿದಳು. ಅವು ಗೌರಿಯ ಮುಂಡಗಳೇ ಎಂದು ಶಿವ ಹೇಳಿದ. ಅದನ್ನು ಕೇಳಿ ಚಕಿತಳಾದ ಗೌರಿ ತಾನೇಕೆ ಈ ಹುಟ್ಟು ಸಾವುಗಳ ಪರಿಭ್ರಮಣಕ್ಕೆ ಸಿಲುಕಿಕೊಂಡಿದ್ದೇನೆ; ಶಿವನೇಕೆ ಅಮರ ಎಂದು ಕೇಳಿದಳು. ಅದಕ್ಕೆ "ಆ ರಹಸ್ಯ ಎಲ್ಲರಿಗೂ ಗೊತ್ತಾಗಬಾರದು. ಆದ್ದರಿಂದ ನಡೆ, ನಾವು ಕ್ಷೀರಸಾಗರಕ್ಕೆ ಹೋಗಿ ದೋಣಿಯೊಂದರ ಮೇಲೆ ಕುಳಿತು ಈ ಜ್ಞಾನದ ಬಗೆಗೆ ಚರ್ಚೆ ಮಾಡೋಣ." ಎಂದು ಶಿವ ಹೇಳಿದ. ಇಬ್ಬರೂ ಕ್ಷೀರಸಾಗರಕ್ಕೆ ಹೋದರು. ಇತ್ತ ಮೀನನಾಥ ಮೀನಾಗಿ ದೋಣಿಯ ಅಡಿಯಲ್ಲಿ ಕುಳಿತುಕೊಂಡ. ಗೌರಿ ಗಂಡನ ಮಾತನ್ನು ಕೇಳಕೇಳುತ್ತ ತೂಕಡಿಸತೊಡಗಿದಳು. ಆಗಲೂ ಮೀನನಾಥ ಹ್ಞೂಗುಟ್ಟುತ್ತಿದ್ದ. ಅವನ ದನಿ

ಕೇಳಿ ದೇವಿಯ ನಿದ್ರಾಭಂಗವಾಯಿತು. ಅವಳು ತಾನು ಮಹಾಜ್ಞಾನವನ್ನು ಕೇಳಲೇ ಇಲ್ಲ ಎಂದು ಹೇಳಿದಳು. ಹಾಗಾದರೆ 'ಹ್ಞೂ'ಗುಟ್ಟಿದವರು ಯಾರು ಎಂದು ಶಿವನಿಗೆ ಶಂಕೆಯಾಯಿತು. ಹುಡುಕಿದಾಗ ದೋಣಿಯ ಕೆಳಗೆ ಮೀನನಾಥನಿದ್ದ. ಆತ ಕ್ರುದ್ಧನಾಗಿ–'ನಿನಗೆ ಒಂದು ಕಾಲಕ್ಕೆ ಮಹಾಜ್ಞಾನ ಮರೆತು ಹೋಗಲಿ' ಎಂದು ಶಾಪ ಕೊಟ್ಟ.

ಆದಿಗುರು ಶಿವ ಕೈಲಾಸಕ್ಕೆ ಹಿಂತಿರುಗಿದ. ಸಿದ್ಧರಿಗೆ ಮದುವೆ ಮಾಡಿಕೊಂಡು ತಮ್ಮ ವಂಶವೃದ್ಧಿ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದು ಗೌರಿ ಶಿವನನ್ನು ಮತ್ತೆ ಮತ್ತೆ ಒತ್ತಾಯ ಮಾಡಿದಳು. ಸಿದ್ಧರಲ್ಲಿ ಕಾಮವಿಕಾರವಿರುವುದಿಲ್ಲ ಎಂದು ಶಿವ ಹೇಳಿದ. ಅದಕ್ಕೆ ಮನುಷ್ಯ ಶರೀರ ಹೊತ್ತಮೇಲೆ 'ಕಾಮವಿಕಾರವಿಲ್ಲವೆಂದರೇನು?' ''ನೀವು ಅನುಮತಿ ಕೊಡುವುದಾದರೆ ನಾನು ಅವರನ್ನು ಪರೀಕ್ಷಿಸುತ್ತೇನೆ– ಎಂದು ಗೌರಿ ಕೌತುಕದಿಂದ ಹೇಳಿದಳು. ಶಿವ ಒಪ್ಪಿ ಅನುಮತಿ ನೀಡಿದ. ನಾಲ್ಕು ಸಿದ್ಧರೂ ನಾಲ್ಕು ದಿಶೆಗಳಲ್ಲಿ ತಪಸ್ಸು ಮಾಡುತ್ತಿದ್ದರು. ಪೂರ್ವದಲ್ಲಿ ಹಾಡಿಪಾ, ದಕ್ಷಿಣದಲ್ಲಿ ಕಾನಪಾ, ಪಶ್ಚಿಮದಲ್ಲಿ ಗೋರಕ್ಷನಾಥ, ಹಾಗೂ ಉತ್ತರದಲ್ಲಿ ಮೀನನಾಥ. ದೇವಿ ಪರೀಕ್ಷಿಸಲೆಂದು ಶಿವಧ್ಯಾನ ಬಲದಿಂದ ನಾಲ್ಕುಮಂದಿ ಸಿದ್ಧರನ್ನೂ ಆಹ್ವಾನಿಸಿದ. ನಾಲ್ವರೂ ಬಂದರು. ದೇವಿ ಭುವನಮೋಹಿನಿಯ ರೂಪ ತಳೆದು ಸಿದ್ಧರಿಗೆ ಊಟ ಬಡಿಸಿದಳು. ನಾಲ್ವರೂ ಸಿದ್ಧರೂ ಆಕೆಯ ರೂಪವನ್ನು ಕಂಡು ಮೋಹಗೊಂಡರು. ಮೀನನಾಥ ಮನಸ್ಸಿನಲ್ಲಿ ಅಂದುಕೊಂಡ–ಇಂಥ ಸುಂದರಿ ದೊರೆತರೆ ಆನಂದದಿಂದ ರಾತ್ರಿ ಕಳೆದೇನು. 'ನೀನು ಮಹಾಜ್ಞಾನವನ್ನು ಮರೆತು ಕದಳೀ ದೇಶದಲ್ಲಿ ಸಾವಿರದ ಆರುನೂರು ಮಂದಿ ಸುಂದರಿಯೊಂದಿಗೆ ಕಾಮಕೌತುಕದಲ್ಲಿ ಮುಳುಗಿರು'– ಎಂದು ದೇವಿ ಆತನಿಗೆ ಶಾಪವಿತ್ತಳು. 'ಇಂಥ ಸುಂದರಿ ಸಿಕ್ಕಿದರೆ ಅವಳ ಮನೆಯ ಕಸವನ್ನಾದರೂ ಬಳಿದೇನು'–ಎಂದುಕೊಂಡ ಹಾಡಿಪಾ. ಅವನಿಗೆ ನೀನು ಕಸ ಗುಡಿಸುವವನಾಗು ಎಂದು ಶಾಪವಿತ್ತಳು. ಅದರಂತೆ ಅವನು ರಾಣಿ ಮೈನಾವತಿಯ ಮನೆಯಲ್ಲಿ ಕಸ ಗುಡಿಸುವವನಾಗಿ ದುಡಿಯಬೇಕಾಯಿತು. ಕಾನಪಾ 'ಇಂಥ ಸುಂದರಿ ದೊರೆತರೆ ಪ್ರಾಣವನ್ನಾದರೂ ತೊರೆದೇನು'–ಎಂದುಕೊಂಡ, ಅದಕ್ಕೆ ದೇವಿ 'ನೀನು ತುರಮಾನ ದೇಶದಲ್ಲಿ ಡಾಹುಕ (?) ನಾಗು' ಎಂದು ಶಾಪ ಕೊಟ್ಟಳು. ಗೋರಕ್ಷ– ಇಂಥ ಸುಂದರಿಯ ಹೊಟ್ಟೆಯಲ್ಲಿ ಹುಟ್ಟಿದರೆ ಆಸೆಯ ಮಡಿಲಲ್ಲಿ ಕುಳಿತು ಸ್ತನ್ಯಪಾನ ಮಾಡಿಯೇನು ಎಂದುಕೊಂಡ.

ಈ ರೀತಿ ಗೋರಕ್ಷನಾಥ ಈ ಅಗ್ನಿಪರೀಕ್ಷೆಯಲ್ಲಿ ಗೆದ್ದ, ಅದರಂತೆ ವರವನ್ನು ಪಡೆದ. ಆದರೆ ದೇವಿ ಆತನನ್ನು ಇನ್ನೂ ಉಗ್ರವಾದ ಪರೀಕ್ಷೆಗೆ ಒಳಪಡಿಸ ಬಯಸಿದಳು. ಶಾಪಾನುಸಾರ ಎಲ್ಲ ಸಿದ್ಧರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಶಾಪವನ್ನು ಅನುಭವಿಸತೊಡಗಿದರು.

ಒಮ್ಮೆ ಗೋರಕ್ಷನಾಥ ವಕುಳವೃಕ್ಷದಡಿಯಲ್ಲಿ ಕುಳಿತು ಸಮಾಧಿಸ್ಥನಾಗಿದ್ದ. ದೇವಿ ಆತನನ್ನು ಯೋಗಭ್ರಷ್ಟನನ್ನಾಗಿ ಮಾಡಲು ಪರಿಪರಿಯಾಗಿ ಪ್ರಯತ್ನಿಸಿದಳು. ಆದರೆ ಆತ ಏನು ಮಾಡಿದರೂ ವಿಚಲಿತನಾಗಲಿಲ್ಲ. ಆಕೆ ಆತನ ಹಾದಿಯಲ್ಲಿ ಬತ್ತಲೆಯಾಗಿ ಮಲಗಿದಳು. ಗೋರಕ್ಷ ಬಿಲ್ವಪತ್ರೆಯಿಂದ ಆಕೆಯ ಶರೀರವನ್ನು ಮುಚ್ಚಿದ; ನೊಣವಾಗಿ ಆತನ ಹೊಟ್ಟೆಯನ್ನು ಹೊಕ್ಕು ಕಾಡತೊಡಗಿದಳು. ಗೋರಕ್ಷ ಶ್ವಾಸವನ್ನು ನಿರೋಧವಾಡಿ ಆಕೆಗೆ ಬುದ್ಧಿ ಕಲಿಸಿದ. ಕೊನೆಗೆ ದೇವಿ ರಕ್ಕಸಿಯಾಗಿ ಮನುಷ್ಯನನ್ನು ಬಲಿತೆಗೆದುಕೊಳ್ಳತೊಡಗಿದಳು. ಶಿವನ ಅನುರೋಧದಂತೆ ಗೋರಕ್ಷನಾಥ ದೇವಿಯನ್ನು ಉದ್ಧರಿಸಿ ಆಕೆಯ ಸ್ಥಾನದಲ್ಲಿ ಒಂದು ವಿಗ್ರಹವನ್ನು ಪ್ರತಿಷ್ಠಿಸಿದ. ಈ ವಿಗ್ರಹವೇ ಕಲ್ಕತ್ತೆಯ ಕಾಳಿಯೆಂದು ನಂಬಿಕೆ. ದೇವಿ ಆತನಿಗೆ ಪ್ರಸನ್ನಳಾಗಿ ಸುಂದರ ಸ್ತ್ರೀರತ್ನವನ್ನು ಪಡೆಯುವಂತೆ ವರವನ್ನು ಕರುಣಿಸಿದಳು. ದೇವಿ ಕೊಟ್ಟ ವರವನ್ನು ಉಳಿಸಿಕೊಳ್ಳಲು ಶಿವ ತನ್ನ ಮಾಯೆಯಿಂದ ಒಂದು ಕನ್ಯೆಯನ್ನು ಸೃಷ್ಟಿಸಿದ; ಆಕೆ ಗೋರಕ್ಷನಾಥನನ್ನು ವರಿಸಿದಳು. ಗೋರಕ್ಷ ಆಕೆಯ ಮನೆಗೆ ಹೋಗಿ ಆರು ತಿಂಗಳ ಮಗುವಾಗಿಬಿಟ್ಟ. ಅವಳ ಸ್ತನ್ಯಪಾನ ಮಾಡಲು ಚಡಪಡಿಸಿದ. ಕನ್ಯೆ ತುಂಬ ಗೊಂದಲಕ್ಕೀಡಾದಳು. ಆಗ ಗೋರಕ್ಷ ಅವಳಿಗೆ ಹೇಳಿದ. "ನನ್ನಲ್ಲಿ ಕಾಮವಿಕಾರ ಅಸಾಧ್ಯ. ನೀನು ನನ್ನ ಕೌಪೀನ ಇಲ್ಲವೆ ಕರಪಟಿಯನ್ನು ನೆನಸಿ ಅದರ ನೀರನ್ನು ಕುಡಿ. ಅದರಿಂದ ನಿನಗೆ ಪುತ್ರಪ್ರಾಪ್ತಿಯಾಗುವುದು. ಅದರಂತೆ ಆ ಕನ್ಯೆ ಕೌಪೀನವನ್ನು ನೆನಸಿ ಅದರ ನೀರು ಕುಡಿದಳು. ಅವಳಿಗೆ ಹುಟ್ಟಿದ ಮಗನೇ ಚರ್ಪಟೀನಾಥ.

ಇದರ ತರುವಾಯ ಗೋರಕ್ಷನಾಥ ವಕುಲವೃಕ್ಷದ ಅಡಿಯಲ್ಲಿ ಧ್ಯಾನಸ್ಥನಾಗಿ ಕುಳಿತ. ಕಾನಪಾ ನೇರವಾಗಿ ಅವನ ತಲೆಯಮೇಲೆ ಹಾರುತ್ತ ಆಕಾಶಮಾರ್ಗದಲ್ಲಿ ಎಲ್ಲೋ ಹೋಗುತ್ತಿದ್ದ. ಅವನ ನೆರಳನ್ನು ಕಂಡು ಗೋರಕ್ಷನಾಥ ಕಣ್ತೆರೆದು ನೋಡಿದ. ಕೋಪದಿಂದ ತನ್ನ ಪಾದುಕೆಗಳನ್ನು ತೆಗೆದು ಎಸೆದ. ಅದರ ಏಟಿಗೆ ಕಾನಪಾ ನೆಲಕ್ಕೆ ಬಿದ್ದ. ಗೋರಖನಾಥನ ತಲೆಯಮೇಲೆ ಹಾರಿದುದರ ಫಲ ಅವನಿಗೆ ದೊರೆಯಿತು. ಆದರೆ ಕಾನಪಾ ಅವನನ್ನು ಮೂದಲಿಸುತ್ತ ಹೇಳಿದ, "ದೊಡ್ಡ ಸಿದ್ಧನಾಗಿದ್ದೀಯೆ. ಆದರೆ ನಿನ್ನ ಗುರು ಎಲ್ಲಿದ್ದಾನೆ, ಅವನ ಗತಿ ಏನಾಯಿತು ಗೊತ್ತೋ? ಕದಳೀ ದೇಶದಲ್ಲಿ ಮಹಾಜ್ಞಾನವನ್ನು ಮರೆತು ಆತ ಸ್ತ್ರೀಯರೊಡನೆ ಲಲ್ಲೆ ಹೊಡೆಯುತ್ತ ಬಿದ್ದಿದ್ದಾನೆ. ಅವನ ಶಕ್ತಿ ಮುಗಿದು ಹೋಯಿತು. ನಾನು ಯಮನ ಕಾರ್ಯಾಲಯಕ್ಕೆ ಹೋಗಿ ನೋಡಿ ಬಂದೆ. ಇನ್ನು ಆತನಿಗೆ ಮೂರೇ ದಿನ ಆಯುಷ್ಯ. ದೊಡ್ಡ ಸಿದ್ಧನಾದರೆ ಹೋಗು ಗುರುವನ್ನು ಉಳಿಸು."

ಗೋರಕ್ಷನಾಥ ಹೇಳಿದ, "ನನ್ನ ಗುರುವಿನ ವಿಷಯ ಹೇಳಿದೆಯಲ್ಲ, ನಿನ್ನ ಗುರುವಿನ ಕಥೆ ಗೊತ್ತಿಲ್ಲವೇನು? ಮೆಹರ ಕುಲದ ಮಹಾಜ್ಞಾನಿ ರಾಣಿ ಮಯನಾವತಿಯ ಮಗ ಗೋಪೀಚಂದ ಅವನನ್ನು ನೆಲದಲ್ಲಿ ಹೂಳಿಬಿಟ್ಟಿದ್ದಾನೆ."

ಈ ರೀತಿ ತಮ್ಮ ತಮ್ಮ ಗುರುಗಳ ಅಧೋಗತಿಯನ್ನು ತಿಳಿದು ಇಬ್ಬರು ಸಿದ್ಧರೂ ಅವರ ಉದ್ಧಾರಕ್ಕಾಗಿ ತೆರಳಿದರು. ಮೊದಲಿಗೆ ಗೋರಖನಾಥ ಯಮನ ಪಟ್ಟಣಕ್ಕೆ ಹೋಗಿ ಗುರುವಿನ ಆಯುಃಕ್ಷೀಣತೆಯನ್ನೇ ತೊಡೆದುಹಾಕಿದ. ಅನಂತರ ಲಿಂಗ ಮತ್ತು ಮಹಾಲಿಂಗ ಎಂಬ ಇಬ್ಬರು ಶಿಷ್ಯರನ್ನು ಕರೆದುಕೊಂಡು ತನ್ನ ಗುರುವಿನ ಉದ್ಧಾರಕ್ಕಾಗಿ ಕದಳೀವನವನ್ನು ಹೊಕ್ಕ ಅವನು ಬ್ರಾಹ್ಮಣ ವೇಷವನ್ನು ಧರಿಸಿದ. ಬ್ರಾಹ್ಮಣನನ್ನು ಕಂಡು ಜನ ಆತನಿಗೆ ನಮಸ್ಕಾರ ಮಾಡತೊಡಗಿದರು. ವಿಧಿಯಿಲ್ಲದೆ ಆತ ಅವರಿಗೆ ಆಶೀರ್ವಾದ ಮಾಡಬೇಕಾಯಿತು. ಆದರೆ ಆ ಆಶೀರ್ವಾದ ಸಾಧಾರಣ ಬ್ರಾಹ್ಮಣನದಲ್ಲ. ಆದ್ದರಿಂದ ಎಲ್ಲ ಪಾಪಿಗಳೂ ದುಃಖ ಮುಕ್ತ ರಾದರೂ ಕೊನೆಗೆ ಗೋರಖನಾಥ ಆ ವೇಷವನ್ನು ತೊರೆದು ಯೋಗಿಯ ವೇಷ ತಳೆದ. ಕದಳೀ ದೇಶದ ಒಂದು ಸರೋವರದ ತೀರದಲ್ಲಿ ವಕುಳ ವೃಕ್ಷದ ಅಡಿಯಲ್ಲಿ ಕುಳಿತ. ಆ ಸರೋವರದಿಂದ ಒಬ್ಬ ಕದಳೀ ನಾರಿ ಬಂದಳು. ಆಕೆ ಗೋರಖನಾಥನನ್ನು ಕಂಡು ಮಾರುಹೋದಳು. ಅವಳಿಂದಲೇ ಗೋರಖನಾಥನಿಗೆ ತನ್ನ ಗುರು ಮೀನನಾಥ ಹದಿನಾರು ನೂರು ಮಂದಿ ಸೇವಕಿಯರಿಂದ ಪರಿವೃತನಾಗಿ ಮಂಗಳಾ ಮತ್ತು ಕಮಲಾ ಎಂಬ ಪಟ್ಟದ ರಾಣಿಯರೊಂದಿಗೆ ವಿಹರಿಸುತ್ತಿದ್ದಾನೆಂದು ಗೊತ್ತಾಯಿತು. ಅಲ್ಲಿ ಯೋಗಿಗೆ ಪ್ರವೇಶನಿಷಿದ್ಧ. ಹಾಗೆ ಹೋದರೆ ಪ್ರಾಣದಂಡ. ಬರಿಯ ನರ್ತಕಿಯರಿಗೆ ಮಾತ್ರ ಅಲ್ಲಿ ಪ್ರವೇಶ, ಗುರುವಿನ ಉದ್ಧಾರಕ್ಕಾಗಿ ಗೋರಖನಾಥ ಒಬ್ಬ ನರ್ತಕಿಯ ವೇಷ ತಳೆದ. ಆದರೆ ದ್ವಾರಪಾಲಕಿಯಿಂದ ಈ ಅಪೂರ್ವ ಸುಂದರಿಯ ರೂಪ ಸಂಪತ್ತುಗಳನ್ನು ಕೇಳಿ ರಾಣಿಯರು ಆಕೆಯನ್ನು ಮೀನನಾಥನ ಕಣ್ಣಿಗೆ ಬೀಳಲು ಬಿಡಲಿಲ್ಲ. ಕೊನೆಗೆ ಗೋರಖನಾಥ ಬಾಗಿಲಿನಿಂದಲೇ ಮದ್ದಳೆಯನ್ನು ಬಾಜಿಸಿದ ದನಿ ಕೇಳಿ ಮೀನನಾಥ ಆ ನರ್ತಕಿಯನ್ನು ಬರಮಾಡಿಕೊಂಡ. ಮದ್ದಳೆಯ ದನಿಯ ಮೂಲಕವೇ ಗೋರಖನಾಥ ತನ್ನ ಗುರುವಿಗೆ ಪೂರ್ವ ಸ್ಮರಣೆಯಾಗುವಂತೆ ಮಾಡಿದ; ಮಹಾಜ್ಞಾನವನ್ನು ಉಪದೇಶಿಸಿದ. ಅದನ್ನು ಕೇಳಿ ಮೀನನಾಥನಿಗೆ ಜ್ಞಾನೋದಯವಾಯಿತು. ರಾಣಿಯರು ತಮ್ಮ ಮಗ ಬಿಂದುನಾಥನನ್ನು ಕರೆದು ಕೊಂಡು ಬಂದು ಅತ್ತು, ಕರೆದು ಅವನನ್ನು ಕದಲಿಸಲು ಯತ್ನಿಸಿದರು. ಆದರೆ ಮೀನನಾಥ ವಿಚಲಿತನಾಗಲಿಲ್ಲ. ಗೋರಖನಾಥ ಬಿಂದುನಾಥನನ್ನು ಮೃತನನ್ನಾಗಿ ಮಾಡಿ ಮತ್ತೆ ಬದುಕಿಸಿ ಅನಂತರ ಅವನಿಗೆ ತತ್ವ ಜ್ಞಾನವನ್ನು ಬೋಧಿಸಿದ. ಕದಳೀ ನಾರಿಯರು ಗೋರಖನಾಥನ ಪ್ರಾಣಹರಣ ಮಾಡಲು ಸಂಚು ಹೂಡಿದರು. ಗೋರಖ ನಾಥ ಅವರಿಗೆ ಶಾಪ ಕೊಟ್ಟ. ಅದರಂತೆ ಅವರು ಬಾವಲಿಯಾದರು. ಅನಂತರ ಗುರು ಮತ್ತು ಬಿಂದುನಾಥನನ್ನು ಕರೆದುಕೊಂಡು ಗೋರಖನಾಥ ತನ್ನ ಸ್ಥಾನವಾದ ವಿಜಯನಗರಕ್ಕೆ ಮರಳಿದ.

'ಯೋಗಿ ಸಂಪ್ರದಾಯಾ ವಿಷ್ಕೃತಿ'ಯಲ್ಲಿ ಮತ್ಸ್ಯೇಂದ್ರನಾಥ ಹಾಗೂ ಗೋರಖ ನಾಥರ ಬಗೆಗೆ ಈ ಕಥೆಯಿದೆ.

ಶಿವನ ಕೊರಳಿನಲ್ಲಿರುವ ಮುಂಡ ಮಾಲೆ ತನ್ನ ಪೂರ್ವ ಜನ್ಮದ ತಲೆಗಳು ಎಂದು ಪಾರ್ವತಿಗೆ ನಾರದನಿಂದ ಗೊತ್ತಾಯಿತು. ಅಮರ ಕಥೆಯನ್ನು ಅರಿಯದುದರಿಂದ ತಾನು ಹುಟ್ಟು ಸಾವುಗಳ ಚಕ್ರದಲ್ಲಿ ತೊಳಲಾಡುತ್ತಿರುವುದಾಗಿಯೂ ಅದನ್ನು ತಿಳಿದಿರುವುದರಿಂದಲೇ ಶಿವ ಅಮರನಾಗಿದ್ದಾನೆಂದೂ ಅವಳಿಗೆ ತಿಳಿಯಿತು. ಪಾರ್ವತಿಯ ತೀವ್ರ ಒತ್ತಾಯಕ್ಕೆ ಮಣಿದು ಶಿವ ಆಕೆಗೆ ಅಮರ ಕಥೆಯನ್ನು ಹೇಳಲು ಸಮುದ್ರ ತೀರದಲ್ಲಿ ಒಂದು ನಿರ್ಜನ ಸ್ಥಾನವನ್ನು ಆರಿಸಿಕೊಂಡ. ಇತ್ತ ಕವಿನಾರಾಯಣ ಮತ್ಸ್ಯೇಂದ್ರನಾಥನಾಗಿ ಒಬ್ಬ ಭೃಗುವಂಶೀಯ ಬ್ರಾಹ್ಮಣನ ಮನೆಯಲ್ಲಿ ಜನಿಸಿದ್ದ, ಆದರೆ ಗಂಡಾಂತ ಯೋಗದಲ್ಲಿ ಹುಟ್ಟಿದ್ದರಿಂದ ಆ ಬ್ರಾಹ್ಮಣ ಮಗುವನ್ನು ಸಮುದ್ರಕ್ಕೆ ಎಸೆದಿದ್ದ. ಒಂದು ಮೀನು ಆ ಮಗುವನ್ನು ನುಂಗಿತು. ಅದು ಹನ್ನೆರಡು ವರುಷಗಳತನಕ ಅದರ ಹೊಟ್ಟೆಯಲ್ಲೇ ಬೆಳೆಯುತ್ತ ಹೋಯಿತು. ಪಾರ್ವತಿ ಕೇಳುತ್ತಿದ್ದ ಅಮರ ಕಥೆಯನ್ನು ಮೀನಿನ ಹೊಟ್ಟೆಯೊಳಗಿನಿಂದಲೇ ಆ ಬಾಲಕ ಕೇಳಿಸಿಕೊಂಡ. ಅನಂತರ ಶಿವನ ಅನುಗ್ರಹಕ್ಕೆ ಪಾತ್ರನಾಗಿ ಹೊರಬಂದು ಅವನು ಮಹಾಸಿದ್ಧನಾದ. ಆತ ತನ್ನ ಅಪೂರ್ವ ಸಿದ್ಧಿಯಿಂದ ಹನುಮಂತ, ವೀರಭದ್ರ, ಭದ್ರಕಾಳಿ, ಚಾಮುಂಡಿ ಮೊದಲಾದವರನ್ನು ಸೋಲಿಸಿದ. ಆದರೆ ಎರಡು ಸಲ ಗೃಹಸ್ಥ ಜೀವನದ ಬಲೆಗೆ ಬಿದ್ದ. ಪ್ರಯಾಗದ ರಾಜ ಸತ್ತಿದ್ದ. ಅದರಿಂದ ಶೋಕಾರ್ತರಾದ ಜನರನ್ನು ಸಂತೈಸಲು ರಾಜನ ಶರೀರದಲ್ಲಿ ಪರಕಾಯ ಪ್ರವೇಶ ಮಾಡಬೇಕೆಂದು ಮತ್ಸ್ಯೇಂದ್ರನಾಥನನ್ನು ಗೋರಖನಾಥ ಕೇಳಿಕೊಂಡ. ತನ್ನ ಮೃತಶರೀರವನ್ನು ಹನ್ನೆರಡು ವರ್ಷಗಳವರೆಗೆ ಕಾಪಾಡಬೇಕೆಂದು ಹೇಳಿ ಮತ್ಸ್ಯೇಂದ್ರನಾಥ ರಾಜನ ಮೃತ ಶರೀರವನ್ನು ಹೊಕ್ಕ. ಹನ್ನೆರಡು ವರ್ಷಗಳವರೆಗೆ ಅವನು ಆನಂದದಿಂದ ಗೃಹಸ್ಥ ಜೀವನವನ್ನು ನಡೆಸಿದ. ಅವನ ಪರಕಾಯ ಪ್ರವೇಶದ ರಹಸ್ಯ ಹೇಗೋ ರಾಣಿಯರಿಗೆ ಗೊತ್ತಾಯಿತು. ಅವರು ಆತನ ಮೃತ ಶರೀರವನ್ನು ನಾಶಮಾಡಲು ಹವಣಿಸಿದರು. ಆದರೆ ವೀರಭದ್ರ ಅದನ್ನು ಉಳಿಸಿದ. ತನ್ನ ಹಳೆಯ ವೈರಸಾಧಿಸಲು ಅವನು ಅದನ್ನು ಹಿಂದಿರುಗಿಸದೇ ಇದ್ದ. ಆದರೆ ಗೋರಕ್ಷನಾಥನ ಅದ್ಭುತ ಶಕ್ತಿಯ ಮುಂದೆ ಅವನು ಮಣಿಯಬೇಕಾಯಿತು; ಮತ್ಸ್ಯೇಂದ್ರನಾಥನಿಗೆ ಮರಳಿ ಅವನ ಶರೀರ ದೊರೆಯಿತು. ಈ ಸಮಯದಲ್ಲೇ ಮತ್ಸ್ಯೇಂದ್ರನಾಥನಿಗೆ ಮಾಣಿಕನಾಥನೆಂಬ ಮಗ ಹುಟ್ಟಿದ. ಅವನು ದೊಡ್ಡವನಾದ ಮೇಲೆ ದೊಡ್ಡ ಸಿದ್ಧ ಯೋಗಿಯಾದ.

ಇನ್ನೊಂದು ಸಲ ಸ್ತ್ರೀರಾಜ್ಯದೇಶ (ಸಿಂಹಳ ದೇಶ)ದ ರಾಣಿ ರೋಗಿಯಾದ ಗಂಡನಿಂದ ಬೇಸತ್ತು ಬೇರೊಬ್ಬ ಯೋಗ್ಯ ಪುರುಷನನ್ನು ಬಯಸಿ ಹನುಮಂತನ ಕೃಪೆಯನ್ನು ಯಾಚಿಸಿದಳು. ಗೃಹಸ್ಥ ಜೀವನದ ಜಂಜಡ ತನಗೆ ಬೇಡವೆಂದು ಹೇಳಿ ಹನುಮಂತ ಮತ್ಸ್ಯೇಂದ್ರನಾಥನನ್ನು ಕರೆದೊಯ್ದ. ರಾಣಿಯವರು ತಮ್ಮ

ರಾಜ್ಯಕ್ಕೆ ಯಾವ ಯೋಗಿಯೂ ಬರಕೂಡದೆಂದು ನಿಷೇಧ ಹಾಕಿದರು. ಗೋರಕ್ಷ ನಾಥ ತನ್ನ ಗುರುವನ್ನು ಉದ್ಧರಿಸಲು ಹೋದಾಗ ಹನುಮಂತ ಅಡ್ಡಿಒಡ್ಡಿದ. ಸುಮ್ಮನೆ ಜಗಳವೇಕೆ ಎಂದು ಗೋರಕ್ಷನಾಥ ಬಾಲಕನವೇಷದಲ್ಲಿ ಅಲ್ಲಿಗೆ ಹೋದ. ಅದೇವೇಳೆಗೆ ಸರಿಯಾಗಿ ಕಳಿಂಗಾ ಎಂಬ ಅಪೂರ್ವ ಸುಂದರಿ ಮತ್ಸ್ಯೇಂದ್ರನಾಥನ ಅಂತಃಪುರದಲ್ಲಿ ನರ್ತನಮಾಡಲು ಹೋಗುತ್ತಿದ್ದಳು. ಗೋರಕ್ಷನಾಥ ಅವಳ ಜೊತೆ ಹೋಗಬಯಸಿದ. ಸ್ತ್ರೀವೇಷ ಹಾಕುವುದರಲ್ಲಿ ಹಾಗೂ ಮೃದಂಗ ವಾದನದಲ್ಲಿ ತನ್ನ ನೈಪುಣ್ಯವನ್ನು ತೋರಿಸಿ ಅವಳು ತನ್ನ ಜೊತೆಗೆ ಕರೆದುಕೊಂಡು ಹೋಗು ವಂತೆ ಅವಳ ಮನ ಒಲಿಸಿದ. ರಾಜನ ಅಂತಃಪುರದಲ್ಲಿ ಕಳಿಂಗಳ ಮನೋಹರ ನೃತ್ಯವಾಯಿತು. ಮತ್ಸ್ಯೇಂದ್ರನಾಥ ಮುಗ್ಧನಾಗಿಹೋದ. ಗೋರಕ್ಷನಾಥ ಮಂತ್ರ ಬಲದಿಂದ ಮೃದಂಗವಾದಕನಿಗೆ ಹೊಟ್ಟೆನೋವು ಬರುವಂತೆ ಮಾಡಿದ. ಕೊನೆಗೆ ಆ ನರ್ತಕಿ ನಿರುಪಾಯಳಾಗಿ ಗೋರಕ್ಷನಾಥನನ್ನು ತಬಲ ಬಾರಿಸುವಂತೆ ಕೇಳಿ ಕೊಂಡಳು. ಸಮಯ ಸಾಧಿಸಿ ಅವನು ತಬಲದಲ್ಲೇ "ಗೋರಕ್ಷನಾಥ ಬಂದ ಎಚ್ಚ ರೆಚ್ಚರ!" ಎಂದು ನುಡಿಸಿದ. ಗುರುವಿಗೆ ಜ್ಞಾನೋದಯವಾಯಿತು. ರಾಣಿ ಅನೇಕ ರೀತಿಯಲ್ಲಿ ಗೋರಕ್ಷನನ್ನು ಮರುಳುಗೊಳಿಸಲು ಯತ್ನಿಸಿದಳು. ಮತ್ಸ್ಯೇಂದ್ರ ನಾಥ ಕೂಡ ಆ ಮೋಹದ ಬಲೆಯನ್ನು ಬಿಟ್ಟು ಬರಲೋ ಬೇಡವೋ ಎಂದು ಹಿಂದೆ ಮುಂದೆ ನೋಡುತ್ತಿದ್ದ. ಕೊನೆಗೂ ತನ್ನಗುರುವಿನ ಮೋಹಸಂಕೋಲೆಯನ್ನು ಮುರಿಯುವುದರಲ್ಲಿ ಗೋರಕ್ಷನಾಥ ಸಫಲನಾದ. ಈ ಅವಧಿಯಲ್ಲಿ ಮತ್ಸ್ಯೇಂದ್ರನಿಗೆ ಪರಶುರಾಮ ಮತ್ತು ಮೀನರಾಮ ಎಂಬ ಇಬ್ಬರು ಮಕ್ಕಳಾದರು.

ನಾಥಚರಿತ್ರದ ಪ್ರಕಾರ ಮತ್ಸ್ಯೇಂದ್ರನಾಥ ತನ್ನ ಇಬ್ಬರು ಮಕ್ಕಳನ್ನು ಹತ್ತಿರದಲ್ಲೇಇದ್ದ ಒಂದು ಊರಿಗೆ ಭಿಕ್ಷಾಟನೆಗೆ ಕಳುಹಿಸಿದ. ಅವರಲ್ಲಿ ಒಬ್ಬ ಪವಿತ್ರ ಭಿಕ್ಷೆ ದೊರೆಯದುದರಿಂದ ಬರಿಗೈಯಲ್ಲಿ ಹಿಂತಿರುಗಿದ್ದ. ಮತ್ತೊಬ್ಬ ಚಮ್ಮಾರ ಕೊಟ್ಟ ಉತ್ತಮ ಭೋಜ್ಯ ಪದಾರ್ಥಗಳನ್ನು ತಂದ. ಇವನ್ನು ಕಂಡು ಮತ್ಸ್ಯೇಂದ್ರನಾಥ ತನ್ನ ಮೊದಲನೆಯ ಮಗನಿಗೆ ಪಾರ್ಶ್ವನಾಥನಾಗೆಂದು ವರ ಕೊಟ್ಟ, ಎರಡನೆಯವನಿಗೆ ಶ್ವೇತಾಂಬರ ಜೈನನಾಗೆಂದು ಶಾಪಕೊಟ್ಟ. ಇದರ ತರುವಾಯ ಅವರು ಕದಳೀವನಕ್ಕೆ ಹೋದರು. ಅಲ್ಲಿ ಮತ್ಸ್ಯೇಂದ್ರ ಹಾಗೂ ಗೋರಕ್ಷನ ನಡುವೆ ಅನೇಕ ವಿಷಯಗಳ ಬಗೆಗೆ ಚರ್ಚೆನಡೆಯಿತು.

ಈ ಕಥೆಗಳಲ್ಲೆಲ್ಲೂ ಅಲ್ಲಮ ಪ್ರಭುವಿನ ಪ್ರಸಂಗವಾಗಲೀ ಉಲ್ಲೇಖವಾಗಲೀ ಬರುವುದಿಲ್ಲ. ಕಬೀರ, ನಾನಕ್, ಮೊದಲಾದವರೊಡನೆ ಗೋರಖನಾಥನ ಸಂಭಾಷಣೆ ನಡೆಯಿತು ಎಂದು ಹೇಳುವ ದಂತಕಥೆಗಳು, ಗ್ರಂಥಗಳು ಹಿಂದಿಯಲ್ಲಿ ದೊರೆಯುತ್ತವೆ. ಆದರೆ ಅಲ್ಲಮಪ್ರಭುವಿಗೂ ಗೋರಖನಾಥನಿಗೂ ನಡೆದ ದ್ವಂದ್ವ ವಾಗ್ವಾದದಕಥೆ ದೊರೆಯುವುದು ಕನ್ನಡದಲ್ಲಿಮಾತ್ರ. ಮೇಲಣ ಕಥೆಗಳಲ್ಲಿ ಅಲ್ಲಮ

ಪ್ರಭುವಿಗೂ, ಗೋರಕ್ಷನಿಗೂ ಸಮಾನವಾದ ಅಂಶವೇದರೆ ಇಬ್ಬರನ್ನೂ ಪಾರ್ವತಿ ಪರೀಕ್ಷಿಸಬಯಸುತ್ತಾಳೆ. ಇಬ್ಬರೂ ಮದ್ದಳೆ ಇಲ್ಲವೆ ಮೃದಂಗವಾದನ ಪಟುಗಳು. ಗೋರಕ್ಷನಾಥ ತನ್ನ ಗುರುವನ್ನು ಉದ್ಧರಿಸಲು ಅವನ ಅಂತಃಪುರಕ್ಕೆ ಹೋಗಿ ಮೃದಂಗವಾದನ ಮಾಡುತ್ತಾನೆ. ಅಲ್ಲಮಪ್ರಭು ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಮದ್ದಳೆ ಬಾರಿಸುತ್ತಿರುತ್ತಾನೆ. ಗೋರಕ್ಷನಾಥ ಮೊದಲಾದಸಿದ್ಧರನ್ನು ಪರೀಕ್ಷಿಸಲು ಪಾರ್ವತಿ ಭುವನಮೋಹಿನಿಯರೂಪ ತಳೆಯುತ್ತಾಳೆ. ಆ ಪರೀಕ್ಷೆಯಲ್ಲಿ ಗೆದ್ದಾಗ ಮತ್ತೂ ಉಗ್ರಪರೀಕ್ಷೆಯನ್ನು ಒಡ್ಡಿ ಆತನನ್ನು ಯೋಗಭ್ರಷ್ಟನನ್ನಾಗಿ ಮಾಡಲು ಪ್ರಯತ್ನಿಸುತ್ತಾಳೆ. ಕೊನೆಗೆ ಅವಳು ವಿಫಲಳಾಗುತ್ತಾಳೆ. 'ಪ್ರಭುಲಿಂಗ ಲೀಲೆ'ಯ ಪ್ರಕಾರ ಅಲ್ಲಮಪ್ರಭುವನ್ನು ಪರೀಕ್ಷಿಸಲು ಪಾರ್ವತಿ ತನ್ನ ತಾಮಸೀ ಕಳೆ ಹಾಗೂ ಸಾತ್ವಿಕಕಳೆಯನ್ನು ಕಳಿಸುತ್ತಾಳೆ. ಇಲ್ಲೂ ಅವಳು ವಿಫಲಳಾಗುತ್ತಾಳೆ. ಕದಳಿಯ ಬನಕ್ಕೆ ಗೋರಕ್ಷ, ಅಲ್ಲಮ ಇಬ್ಬರೂ ಹೋಗುತ್ತಾರೆ. ಕದಳಿಯಬನ ನಾಥಸಾಹಿತ್ಯದಲ್ಲಿ ಸ್ತ್ರೀದೇಶ ಎಂಬ ಅರ್ಥದಲ್ಲಿ ಬರುತ್ತದೆ. ಆದರೆ ವೀರಶೈವ ಸಾಹಿತ್ಯದಲ್ಲಿ ಕದಳಿ, ಕದಳೀಬನ ಹಲವಾರು ಅರ್ಥಗಳಲ್ಲಿ ಬಳಕೆಗೊಂಡಿದೆ. ಅಕ್ಕಮಹಾದೇವಿ, ಶ್ರೀಶೈಲದಲ್ಲಿದ್ದ ಕದಳಿಯಬನದಲ್ಲಿ ಬಯಲಾದಳೆಂದು ಐತಿಹ್ಯ.

ಯೋಗಿಯಾದವನು ಸಿದ್ಧಿಗಾಗಿ ಕದಳೀವನಕ್ಕೆ ಹೋಗುತ್ತಾನೆ ಎಂಬ ನಂಬಿಕೆ ಹಿಂದೀಸಾಹಿತ್ಯದಲ್ಲೂ ಇದ್ದಂತೆ ಕಾಣುತ್ತದೆ. ಮಲಿಕ್‌ಮಹಮದ್ ಜಾಯಸಿಯ 'ಪದ್ಮಾವತ್' ಕಾವ್ಯದಲ್ಲಿ ರಾಜಾಗೋಪೀಚಂದ ಜೋಗಿಯಾಗಿ ಕಜರೀಬನಕ್ಕೆ ಹೋದನೆಂದು ಹೇಳಿದೆ. ಮಹಾಭಾರತದಲ್ಲಿ ಕದಲೀವನದ ಚರ್ಚೆಯಿದೆ (ವನಪರ್ವ ಅ 146) ಈ ಕದಳೀದೇಶದಲ್ಲಿ ಅಶ್ವತ್ಥಾಮ, ಬಲಿ, ವ್ಯಾಸ, ಹನುಮಂತ, ವಿಭೀಷಣ, ಕೃಪಾಚಾರ್ಯ ಮತ್ತು ಪರಶುರಾಮ ಈ ಏಳುಮಂದಿ ಚಿರಂಜೀವಿಗಳು ವಾಸಮಾಡುವರಂತೆ. ಇದರಿಂದಾಚೆಗೆ ದುರಾರೋಹ ಪರ್ವತವಿದೆ. ಅಲ್ಲಿಗೆ ಸಿದ್ಧರು ಮಾತ್ರ ಹೋಗಬಲ್ಲರು. ಮನುಷ್ಯರಿಗೆ ಅದು ಅಗಮ್ಯ (ವನಪರ್ವ 146-92–93) ಇದರಿಂದ ಕದಳಿ ಎನ್ನುವುದು ಆಧ್ಯಾತ್ಮಸಾಧನೆಯ ಚರಮ ಪರಮಸ್ಥಾನ. ಆದ್ದರಿಂದ ಅಂಥ ಸ್ಥಾನಗಳನ್ನು ಅಲ್ಲಲ್ಲಿ ಕಲ್ಪಿಸಿಕೊಂಡಿರಬಹುದು. ಇಲ್ಲವೆ ಅಂಥ ಸ್ಥಾನಗಳಿಗೆ ಈ ಹೆಸರನ್ನು ಕೊಟ್ಟಿರಬಹುದು. ವೀರಶೈವ ಸಾಹಿತ್ಯದಪ್ರಕಾರ ಶ್ರೀಶೈಲದಲ್ಲಿ ಒಂದು ಕದಳಿಯ ಬನವಿದ್ದಿತು. ಗೋರಕ್ಷನಾಥ ಬಂದಿದ್ದ ಮಂಗಳೂರಿನ ಸಮೀಪದ 'ಕದರಿ' ಕೂಡ 'ಕದಳಿ'ಯ ರೂಪಾಂತರವಿದ್ದಿರಬೇಕು.

ಇದಿಷ್ಟು ಇವರಿಬ್ಬರ ಬದುಕಿನ ಘಟನೆಗಳಲ್ಲಿ ಕಂಡುಬರುವ ಸಾಮ್ಯ. ಪ್ರಭುದೇವನ ವಚನ ಹಾಗೂ ಗೊರಖನಾಥನ 'ಬಾನಿ' ಯಲ್ಲಿಕೊಂಚ ಸಾಮ್ಯವಿದೆ. ಅಲ್ಲಮಪ್ರಭುವಿನ ಬೆಡಗಿನ ವಚನಗಳಂತೆಯೇ ಗೋರಖನಾಥನ 'ಉಲಟಬಾಂಸಿ' (ಉಲ್ಲುಂಠಭಾಷಿತ) (ಬೆಡಗು) ಗಳೂಕೂಡ ಗೂಢಾರ್ಥಗಳಿಂದ ಕೂಡಿದ ಕೂಟಪದ

ಗಳಾಗಿವೆ. ಸಹಜ, ಶೂನ್ಯ, ನಿರಂಜನ, ಕದಳಿ, ಶ್ರೀಗಿರಿ, ನಾದ, ಬಿಂದು, ಷಟ್ಚಕ್ರ, ಉನ್ಮನಿ, ಸಹಸ್ರಾರ ಮೊದಲಾದ ಪಾರಿಭಾಷಿಕ ಶಬ್ದಗಳನ್ನು ಅದೇ ಸಂದರ್ಭ ಮತ್ತು ಅರ್ಥದಲ್ಲಿ ಇಬ್ಬರೂ ಬಳಸಿದ್ದಾರೆ. ಜ್ಞಾನಸಹಾಗೂ ಅನುಭವವಿಲ್ಲದ ಶುದ್ಧ ಹಠಯೋಗದಿಂದ ಮುಕ್ತಿ ದೊರಕದೆಂದು ಇಬ್ಬರೂ ಹೇಳಿರುವರು. ಅಲ್ಲಮಪ್ರಭು:– "ಹಠಯೋಗ ಲಂಬಿಕೆಯೆಂದು, ಆಕುಂಚನವೆಂದು, ವಜ್ರಿ ಅಮರಿಯು ಕಲ್ಪವೆಂದು ಮಲ ಮೂತ್ರಗಳು ಸೇವಿಸುತ, ಇದು ಪೂರ್ವನವನಾಥ ಸಿದ್ಧರ ಮತ್ತೋಕ್ತವೆಂದ ಕಾಪಾಲಿಕಾಚರಣೆಯನಾಚರಿಸುವರಲ್ಲ ಶರಣರು! ಮೇಣುತಲೆಯೊಳಗಣವಾತಪಿತ್ತ ಶ್ಲೇಷ್ಮವ ತೆಗೆದು ಅವ್ಯತವೆಂದು ಬಿನುಗು ದೃಷ್ಟವ ತೋರುವರಲ್ಲ ಶರಣರು! ದ್ರವಿಸುವದೇಹದಲ್ಲಿ ಅಪ್ಪುವಿನ ಫಲರಸಕ್ಷೀರ ಮೊದಲಾದವ ಸೇವಿಸುತ್ತ, ಅನ್ನವಬಿಟ್ಟೆವೆಂಬ ಭೂತಚೇಷ್ಟಕರಲ್ಲ ಶರಣರು. ಇವೆಲ್ಲವು ಸಾಕುಸಟೆ ಭ್ರಾಂತೆಂದು ತಿಳಿದು ನಿರ್ಧರ ನಿಜದಿ ನಿಂದರು ಗುಹೇಶ್ವರ, ನಿಮ್ಮ ಶರಣರು, ಅಗ್ರಗಣ್ಯರು."[3]

ಗೋರಕ್ಷನಾಥ :–

ತತ್ರಾನ್ತರ್ನಾದಘೋಷಂ ಗಗನಗುಣಮಯಂ ವಜ್ರದಂಡೀ ಕ್ರಮೇಣ!
ಯೇಕುರ್ವಂತೀಹ ಕಷ್ಟಾತ್ ಪರಮಪದಮಹೋನಾಸ್ತಿತೇಷಾಂಸಿರುತ್ಥಮ್ ॥೮೩॥
ಸಮ್ಯಕ್‌ಚಾಲನ ದೋಹನೇನ ಸತತಂ ದೀರ್ಘೀಕೃತಾಂಲಂಚಿಕಾಮ್ ।
ವೀತ್ವಾಷಡ್ ವಿಧ ಪಾನಕಾಪ್ಸಿತ ಜನಾಂ ಮೂರ್ಚ್ಛಾಚಿರಂಮೋಹಿತಾಃ ॥೮೪॥
ಶಸ್ತ್ರಾಕುಂಚನ ಮಗ್ನಿದೀಪ್ತಿ ಕರಣತ್ಯಾಧಾರ ಸಂಪೀಡಿನಾತ್ ।
ಸ್ಥಾನಾನ್ ಕುಂಡಲಿನೀ ಪ್ರಬೋಧಮನಃ ಕೃತ್ವಾತತೋಮೂರ್ಧನಿ ॥೮೫॥
ನೀತ್ವಾಪೂರ್ಣಗಿರಿಂ ನಿವಾತನಮಧಃ ಕುರ್ವಂತಿ ತಸ್ಯಾಶ್ಚಯೇ ।
ಖಂಡಜ್ಞಾನರತಾಸ್ತೇ ತೇ ನಿಜಪದಂ ತೇಷಾಂಹಿದೂರಂಪದಮ್ ॥೮೬॥
ವೈರಾಗ್ಯತ್ಯಣಶೌಕ ಪಲ್ಲವ ಜಲಂ ಕಂದಂ ಫಲಂ ಮೂಲಕಮ್ ।
ಭುಕ್ತ್ವಾಯೇವನವಾಸಮೇವ ಭಜನ್ತೇ ಚಾನ್ಯೇಚದೇಶಾನ್ತರಮ್ ॥
ಬಾಲೋನ್ಮತ್ತಪಿಶಾಚ ಮೂಕ ಜಡವತ್ ಚೇಷ್ಟಾಶ್ಚನಾನಾವಿಧಾಃ ।
ಯೇಕುರ್ವತಿ ಪರಂವಿನಾ ಮತಿ ಬಲಾದ್ ಭ್ರಷ್ಟಾವಿಮುಹ್ಯಂತಿ ತೇ ॥೮೭॥

ಗತೇನ ಶೋಕಂ ವಿಭವೇ ನವಾಂಛಾಂ
ಪ್ರಾಪ್ತೇಚ ಹರ್ಷಂ ನಕರೋತಿಯೋಗೀ ।
ಆನಂದ ಪೂರ್ಣೋ ನಿಜಬೋಧಲೀನೋ
ನಬಾಧ್ಯತೇ ಕಾಲಪಥೇನ ನಿತ್ಯಮ್ ॥೮೮॥[4]

ನಿರಂತರಸಾಧನೆಯಿಂದ ಜೀವನೇ ದೇವನಾಗಬಲ್ಲ ಶಿವನಾಗಬಲ್ಲ. ತನ್ನೊಳಗಿರುವ ದೇವನನ್ನು ಜಾಗೃತಗೊಳಿಸಬೇಕು ಅಷ್ಟೆ. 'The Kingdom of heaven is within thee' ಎಂದ ಯೇಸು ಈ ರೀತಿ ಜೀವನೇ ದೇವನಾಗಬಲ್ಲ ಎಂಬ ತತ್ವವನ್ನು ಅಲ್ಲಮಪ್ರಭು ಹಾಗೂ ಗೋರಕ್ಷಕರು ಒಂದೇ ರೀತಿಯಲ್ಲಿ ಹೇಳಿದ್ದಾರೆ.

ಅಲ್ಲಮ :– "ನಿಮ್ಮಲ್ಲಿ ನೀವು ತಿಳಿದು ನೋಡಿದರೆ ಅನ್ಯವಿಲ್ಲ ಕಾಣಿರಣ್ಣಾ ।
ಅರಿವು ನಿಮ್ಮಲ್ಲಿಯೆ ತದ್ಗತವಾಗಿರೆ, ಅನ್ಯಭಾವವ ನೆನೆಯದೆ
ತನ್ನೊಳಗೆ ತಾನೆ ಎಚ್ಚರವಿರಬಲ್ಲರೆ ತನ್ನಲ್ಲಿಯೇ ತನ್ಮಯಾ
ಗುಹೇಶ್ವರಲಿಂಗವು"[5]

ಗೋರಕ್ಷ :– ಗುರುದೇವ ಸ್ವಯಂಭೂದೇವ ಸರೀರಭೀತರಿಯೇ
ಆತ್ಮಾ ಉಕಿ ಮ ದೇವ ತಾಹೀ ಕೋ ಜಾಂಣಾಂಸೇವ್
ಆಂನ ದೇವ ಪೂಜಿ ಪೂಜಿ ಹಮಹೀಮ್ಮರಿಯೇ ॥[6]

ಗುರುದೇವ ಶಂಭು ಈ ಶರೀರದೊಳಗೇ ಇದ್ದಾನೆ. ಆತ್ಮನೇ ಉತ್ತಮ ದೇವ. ಅದನ್ನೇ ಅರಿತು ಸೇವಿಸು. ಅನ್ಯ ದೈವವ ಪೂಜಿಸಿ ಪೂಜಿಸಿ ನಾವೇ ಸಾಯುತ್ತೇವೆ.

ಪ್ರಭುದೇವನ ಬೆಡಗಿನ ವಚನಗಳಿಗೂ ಗೋರಖನಾಥನ 'ಉಲಟ ಬಾಂನಿಗೂ' ಸಾಕಷ್ಟು ಸಾಮ್ಯವಿದೆ. ಒಂದೆರಡನ್ನು ನೋಡಬಹುದು.

ಪ್ರಭುದೇವ :– "ಕರಿಯು ತಲೆಯ ಅರಮನೆಯ
ಸುರಧೇನು ಹಯನಾಯಿತ್ತು
ಕಱಿದುಂಬಾತಂಗೆ ಕೈಕಾಲಿಲ್ಲ.
ಇದಕಱಿದುಂಬಾತನೆ, ದೇವಗುಹೇಶ್ವರ[7]

ಗೋರಕ್ಷನಾಥ : "ಏಕ ಕಾಮಧೇನಿ ಬಾರಿಸಿಧಿಕೈಗಗನನಿಪರ್‌ಲೈ ಬಾಂಧೀಲಾಗಜೀವ
ಉಸರಿಬಾರಿಸಿಧಿ ಕೋತ್ಯಾಂ ನಿರಂಜನಸೂಸಾಂಧೀ ॥ [8]

ಸಿದ್ಧನ ಮನೆಯ ಬಾಗಿಲಲ್ಲಿ ಒಂದು ಕಾಮಧೇನುವಿದೆ (ಆಧ್ಯಾತ್ಮಿಕ ಅನುಭೂತಿ ಅಥವಾ ಸಮಾಧಿ). ಅದನ್ನು ಅವನ ಗಗನ ಶಿಖರದಲ್ಲಿ ಕಟ್ಟಿಹಾಕಿದ್ದಾನೆ. (ಅಲ್ಲೇ ಅದರ ನೆಲೆ) ಅದನ್ನು ಪಡೆಯಬಯಸುವ ಜೀವ, ಸ್ವತಃ ಬೇಲಿಯಲ್ಲಿ ಬಂಧನಕ್ಕೊಳಗಾಗಿದೆ (ನಿರುದ್ಧಾವಸ್ಥೆಯಲ್ಲಿದೆ). ಅದು ನಿರಂಜನನಲ್ಲಿ ಅನುರಕ್ತವಾಗಿದೆ.

ಗಗನ ಮಂಡಲದಲ್ಲಾಗುವ ಅಮೃತಸ್ರಾವ ಅದರಿಂದಾಗುವ ಅಭೂತಪೂರ್ವ ಆನಂದವನ್ನು ಇಬ್ಬರೂ ಒಂದೇತೆರನಾಗಿ ಬಣ್ಣಿಸಿದ್ದಾರೆ.

ಪ್ರಭುದೇವ : ಗಗನಮಂಡಲದ ಸೂಕ್ಷ್ಮನಾಳದಲ್ಲಿ
ಸೋಹಂ ಸೋಹಂ ಎನುತಿದ್ದಿತು ಒಂದು ಬಿಂದು.
ಅಮೃತದ ವಾರಿಯ ದಣಿಯಲುಂಡು ತೃಪ್ತಿಯಿಂದ
ಗುಹೇಶ್ವರ, ನಿಮ್ಮಲ್ಲಿಯೆ ಎನಗೆ ನಿವಾಸವಾಯಿತ್ತು.[9]

ಗೋರಕ್ಷನಾಥ : ಉತ್ತರ ಖಂಡ ಜಾಇಬಾ, ಸುನಿಫಲ ಖಾಇಬಾ
ಬ್ರಹ್ಮ ಅಗಿನಿ ಪಹರಿಬಾ ಬೀರಂ ।
ನೀಝರ ಝರಣ್ಯಂ ಅಮೃತವೀಂತಾ ಮನಪೂವಾಧೀಕಾ[10]

ನೀರ್ಝರ ಝರಣ್ಯೆಂ ಅಮೀರಸ ಪೀವಣಾಷಟ್ ದಲ ಮಂಧೇಜಾಇ ।
ಚಂದಬಿಹೂಣಾಂ ಚಾಂದಿಣಾ ತಹಾಂ ದೇಷ್ಯಾ ಶ್ರೀ ಗೋರಖರಾಇ ।
ಊ ಭಾ ಬೈಠಾಸೂತಾಂಲೀಜ್ಯೈ ಕಬಹೂಂಬಿತ ಭಂಗನ ಕೀಜ್ಯೈ ।
ಅನಹದ ಸಬಹದ ಗಗನ ಮ್ಯೆಂ ಗಾಜ್ಯೈ[11]

ದೊಡ್ಡ ದೊಡ್ಡ ತಪಸ್ವಿಗಳು ಸಿದ್ಧಿಯನ್ನು ಪಡೆಯಲು ಕಾವಿತೊಟ್ಟು ಉತ್ತರಖಂಡ (ಬದರೀಕಾಶ್ರಮವೇ ಮೊದಲಾದ ಸ್ಥಾನ)ಕ್ಕೆ ಹೋಗಿ ಝರಿಯ ನೀರನ್ನು ಕುಡಿದು ಕಂದಮೂಲ ಫಲಗಳನ್ನು ಸೇವಿಸಿ ಬದುಕುತ್ತಾರೆ. ಆದರೆ ಗೋರಖನಾಥ ಹೇಳುವ ಉತ್ತರಖಂಡ (ಬ್ರಹ್ಮರಂಧ್ರ) ದಲ್ಲಿ ತೊಡಲು ಬ್ರಹ್ಮಾಗ್ನಿಯ ವಸ್ತ್ರ. ಕುಡಿಯಲು ಅಮೃತ ನಿರ್ಝರದಿಂದ ಹರಿಯುವ ಅಮೃತ ಹಾಗೂ ತಿನ್ನಲು ಶೂನ್ಯ ಫಲ ದೊರೆಯುತ್ತದೆ. ಗೋರಕ್ಷ ತನ್ನ ಚಂಚಲ ಮನವನ್ನು ಈ ರೀತಿ ಸ್ವಾಧೀನ ಪಡಿಸಿಕೊಂಡಿದ್ದಾನೆ.

ಅಲ್ಲಿ ಚೆನ್ನಾಗಿ ಧುಮುಕುವ ಝರಿಯಲ್ಲಿ ಕುಡಿಯಲು ಅಮೃತ ರಸ ದೊರೆಯುತ್ತದೆ. ಅಲ್ಲಿಗೆ ಹೋಗಿ ಗೋರಖನಾಥ ಚಂದ್ರನಿಲ್ಲದೆ ಚಂದ್ರಿಕೆಯನ್ನು ಕಂಡ, ಅರ್ಥಾತ್ ಕಾರಣರಹಿತ ಸ್ವತಃ ಪ್ರಕಾಶ ಪರಬ್ರಹ್ಮನ ದರ್ಶನ ಮಾಡಿದ.

ಗಗನ (ಬ್ರಹ್ಮರಂಧ್ರ)ದಲ್ಲಿ ಅನಾಹತನಾದದ ಗರ್ಜನೆ ಕೇಳಿಸುತ್ತದೆ. ನಿಂತು, ಕುಳಿತು, ಮಲಗಿ ಈ ರೀತಿ ಎಲ್ಲ ವೇಳೆಯಲ್ಲು ಅದನ್ನು ಆಲಿಸುತ್ತಿರಬೇಕು. ಚಿತ್ತವನ್ನು ಎಂದಿಗೂ ಕದಡಿಸಬಾರದು (ನಿದ್ರೆಗೆ ವಶನಾಗಿ ಎಚ್ಚರ ತಪ್ಪಿ ಮೃತ್ಯುವಿನತ್ತ ಸಾಗಬಾರದು) ಹಾಗೇನಾದರೆ ಸಾವು ಸಂಭವಿಸುವುದಾದರೆ ಅದು ಗುರುವಿಗೆ ಅಪಮಾನವೇ ಸರಿ.

ದೈನಿಕ ಕ್ರಿಯೆಗಳನ್ನು ಶಾಶ್ವತದೊಂದಿಗೆ ಮೇಳವಿಸುವುದೇ ಸಹಜ. ಆದರಂತೆ ಪ್ರವೃತ್ತಿ, ನಿವೃತ್ತಿಯ ತುತ್ತತುದಿಗೆ ಹೋಗದೆ ಎರಡರನಡುವಣ ಸುವರ್ಣಮಧ್ಯಮವನ್ನು ಬುದ್ಧ ಬೋಧಿಸಿದ. ಯಾವ ಕಾಯಕ್ಲೇಶವೂ ಇಲ್ಲದೆ, ದೈನಿಕ ಕಾರ್ಯಕಲಾಪಗಳೊಂದಿಗೆ ಸಾಧಕ ಶಾಶ್ವತದೊಂದಿಗೆ ಸಂಬಂಧ ಸ್ಥಾಪಿಸುತ್ತಾನೆ. ಆಗ ಆತ ಮಾಡುವುದೆಲ್ಲ ಪೂಜೆ, ಧ್ಯಾನ, ಸಮಾಧಿಯಾಗುತ್ತದೆ. ಆತ ಕಣ್ಣು ಮುಚ್ಚಬೇಕಿಲ್ಲ, ಮೂಗು ಮುಚ್ಚಬೇಕಿಲ್ಲ. ಸಮಾಧಿ ತಾನೇ ಕೂತಲ್ಲೇ ಸಿದ್ಧಿಸುತ್ತದೆ. ಇದನ್ನೇ ಬಸವಣ್ಣನವರು 'ಶರಣ ನಿದ್ದೆಗೈದರೆ ಜಪಕಾಣಿರೋ' ಎಂದಿದ್ದಾರೆ. ಈ ಸಹಜವನ್ನು ಅಲ್ಲಮಪ್ರಭು ಮತ್ತು ಗೋರಖನಾಥ ಇಬ್ಬರೂ ವರ್ಣಿಸಿದ್ದಾರೆ

ಅಲ್ಲಮಪ್ರಭು : ನಾರುಬೇರಿನ ಕುಟಿಲ ಕಪಟದಯೋಗವಲ್ಲಿದು ನಿಲ್ಲಿ
ಭೋ । ಕಾಯಸಮಾಧಿ ಕರಣ ಸಮಾಧಿ ಯೋಗದಲ್ಲಿದು
ನಿಲ್ಲಿ ಭೋ । ಜೀವಸಮಾಧಿಯೆಂಬುದಲ್ಲ, ನಿಜಸಹಜ
ಸಹಜ ಸಮಾಧಿಗುಹೇಶ್ವರ[12]

ಗೋರಕ್ಷನಾಥ :

ನೌಲಖಿಪಾಕರ ಆಗೈಂ ನಾಚೈಂ, ಪೀಛೈಂ ಸಹಜ ಅಖಾಡಾ ।
ಎಸ್ಯೆಂ ಮಾನಲ್ಯೆ ಜೋಗೀ ಬೇಲ್ಯೆತಬ್ ಅಂತರಿ ಬಸೇ ಭಂಡಾರಾ ॥
ಗ್ಯಾನಕಹ್ಯೆ ಕೌತ್ರಿನ್ನಾ ಹಾರ್ಯೆ, ಸೂರಜ ದೇಖಿ ಪಛಾರಿ ಹೀಂ ।
ಸತಗುರು ಮಿಲ್ಯೆ ತೋ ಸಾಂಸಾಭಾಗ್ಯೆ ಮೂಲವಿಚಾರ್ಯ ಮಾಂಹೀ ॥
ಅಂಜನ ಮಾಹಿಂ ನಿರಂಜನ ಭೇಟ್ಯಾ ತಿಲ ಮುಖಿಭೇಟ್ಯೆ ತೇಲಂ ।
ಮೂರತಿ ಮಾಹಿಂ ಅಮೂರತಿ ಪರಸ್ಯಾ ಭಯಾ ನಿರಂತರಿ ಖೇಲಂ ॥
ಜಹಾಂ ನಹೀಂ ತಹಾಂ ಸಖಿ ಕಛುದೇಖ್ಯಾಕಪ್ಯಾನಕೋಪತಿ ಆಈ ।
ದುಬಿಧಾ ಭಾವ ತಖ್ಯೆ ಹೀಗ ಇಯಾ, ಬಿರಲಾಂ ಪದಾಂಸಮಾಈ ॥ 13

ಯೋಗಿ ಯಾವಾಗಲೂ ಮಧ್ಯಮ ಮಾರ್ಗಿ. ಅವನು ಭೋಗ ಮತ್ತು ತ್ಯಾಗದ ಬಗೆಗೆ ಸಮತ್ವವನ್ನು ತೋರಿಸಬೇಕು. ಭೋಗ್ಯಪದಾರ್ಥಗಳು ಎದುರಿಗಿದ್ದರೂ ಅನಾಸಕ್ತನಾಗಿರಬೇಕು. ಆದ್ದರಿಂದ ಗೋರಖನಾಥ ಹೇಳುತ್ತಾನೆ. ಒಂಭತ್ತು ಕೋಟಿ ಪಾತರಗಿತ್ತಿಯರು ಕಣ್ಣೆದುರಿಗೆ ಕುಣಿದಾಡುತ್ತಿದ್ದರೂ ಕೂಡ ಅವನ ಹಿಂದೆ ಸಹಜ ಜ್ಞಾನವೈರಾಗ್ಯದ ಅಖಾಡಾ ಇರಬೇಕು. ಎಂದರೆ ಇವೆರಡರ ನಡುವೆ ಅವನಿರಬೇಕು. ಇಂಥ ಸ್ಥಿತಿಯಲ್ಲಿ ಯೋಗಿ ಇದ್ದಾಗ, ಅವನ ಸಾಧನೆ ನಿರಂತರವಾಗಿ ಸಾಗಿದರೆ ಅವನ ಆಂತರಿಕ ಭಂಡಾರ ತುಂಬಿಕೊಳ್ಳುತ್ತದೆ. ಮೂಲಾಧಾರಸ್ಥ ಸೂರ್ಯನನ್ನು ಸಹಸ್ರಾರದಲ್ಲಿರುವ ಚಂದ್ರನೆದುರಿಗೆ ಕೂಡಿಸಿ ಅವರು ಪಶ್ಚಿಮ ಮಾರ್ಗಗಾಮಿಗಳಾಗಿರುವುದನ್ನು ಕಂಡರೆ ತೃಷ್ಣೆ ನಷ್ಟವಾಗುತ್ತದೆ. ತಿಲದ ಮರೆಯ ತೈಲದಂತೆ ಅಂಜನದಲ್ಲಿ ನಿರಂಜನ. ಅಂತೆಯೇ ನಾನು ಅಂಜನದಲ್ಲಿ ನಿರಂಜನನನ್ನು ಕಂಡೆ; ಮೂರ್ತಿಯಲ್ಲಿ ಮೂರ್ತವನ್ನು. ಈ ರೀತಿ ನಿರಂತರ ಆಧ್ಯಾತ್ಮಿಕ ಆನಂದವನ್ನು ಪಡೆದೆ.

ಇದೇ ರೀತಿ ಇಬ್ಬರೂ ಶೂನ್ಯವನ್ನು ವರ್ಣಿಸಿದ್ದಾರೆ.

ಪ್ರಭುದೇವ: ಬಯಲು ಬಯಲನೆ ಬಿತ್ತಿ. ಬಯಲು ಬಯಲನೆ ಬೆಳೆದು,
ಬಯಲು ಬಯಲಾಗಿ ಬಯಲಾಯಿತ್ತಯ್ಯ,
ಬಯಲ ಜೀವನ, ಬಯಲಭಾವನೆ,
ಬಯಲು ಬಯಲಾಗಿ ಬಯಲಾಯಿತ್ತಯ್ಯ.
ನಿಮ್ಮಪೂಜಿಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರ" ॥ 14

"ಬಿಸುಜಂತೆ, ಜವಳಿಗಂಧ, ಲೇಸಾಯಿತ್ತು, ಮನೆಲೇಸಾಯಿತ್ತು ಮೇಲು ಪೊದಿಕೆ, ಮುಗುಳಿ ಆ ಅಂಗಕ್ಕೆ ಕಿಚ್ಚುಸಿಕ್ಕಿ ಮನೆಯುಸಿಂಬುಮಾಡಿದೆ ಲಿಂಗ ಜಂಗಮಕ್ಕೆ, ಹುಟ್ಟುಗೆಟ್ಟ ಬಯಲಲ್ಲಿ ನಾನಿದೇನೆ ಗುಹೇಶ್ವರ" 15

ಗೋರಕ್ಷನಾಥ :

ಆಕಾಶತತಸದಾಸಿವಜಾಂಣ । ತನಿ ಅಭಿಅಂತರಿ ಪದ ನಿರಬಾಣ
ಪ್ಯಂಡೆಪರಜಾನ್ಯೆಂ ಗುರುಮುಖಿಜೋಣ ।ಬಾಹುಡಿ
ಆವಾಗವನನಹೋಣ । (೫೭–೧೬೮)
ಜೋಗೀ ಸೋ ಜೋರಾಖೈ ಜೋಗ । ಜಿಭ್ಯಾಯಂದ್ರೀನಕರೈಭೇಗ ।
ಅಂಜನ ಛೋಡಿ ನಿರಂಜನ ರಹ್ಯೆ । ತಾಕೂಗೋರಖಿಯೋಗೀ ಕಹ್ಯೆ ॥ (೭೩-೨೩೦)
ಸುಂನಿನಮೂಈ ಸುಂನಿನ ಜಬಾಪ । ಸುಂನಿ ನಿರಂಜನ ಆಪೈ ಆಪ ।
ಸುನಿಕೈ ಪರಚೈಭಯಾ ಸಥೀರ । ನಿಹಚಲ ಜೋಗೀಗಹರಗಂಭೀರ ॥ (೭೩–೨೩೧)
ಅವಧೂ ಮನಕಾ ಸುಂನಿರೂಪ, ಪವನಕಾ ನಿರಾಲಂಭ ಆಕಾರ ।
ದಮಕೀ ಅಲೇಖದಸಾ, ಸಾಧಿಬಾದಸವ್ಯೆಂ ದ್ವಾರ ॥ (೧೮೭–೮)
ಅವಧೂ ಹಿರದಾನದೋತಾತಬ್ ಸುಂನಿ ರಹಿತಾ ಮನ ।
ನಾಭೀನಹೋಯೇತಬ್ ನಿರಾಕಾರ ರಹಿತಾಪವನ ॥
ರೂಪನ ಹೋತಾ ತಬ್ ಅಕುಲಾನರಹಿತಾಸಬದ್ ।
ಗಗನನ ಹೋತಾತಬ್ ಅಂತರಪರಹಿತಾ ಚಂದ್ರ ॥ (೧೮೯–೨೮)
ಸ್ವಾಮೀ ಕೌಣಕೇಜಥ್ಯೆಂ ಜೋತಿ ಪಲಟ್ಯೆ, ಕಾಣಸುಂನಿಥೇ ಬಾಬಾಪೂರ್ಯೆ ।
ಕೌಣ ಸುಂನಿಥ್ಯೆ ತ್ರಿಭುವನಸಾರ । ಕೌಣ ಸುಂನಿಥ್ಯೆಂ ಉತರಿಬಾಪಾರ ॥ (೧೯೪–೬೯)
ಅವಧೂ ಸುಂನೇ ಆವೈ ಸುಂನೇಜಾಣ । ಸುಂನೇ ಜೀಯಾರಹೇಸಮಾಣ ।
ಸಹಜ ಸುಂನಿ ಮನತನ ಥಿರರಹ್ಯೆ । ಐಸಾವಿಚಾರ ಮಛೀಂದ್ರಕಹ್ಯೆ । (೧೯೫–೭೮)
ಅವಧೂ ಸಬದ ಅನಾಹದ ಸುರತಿಸೋಬಿತ । ನಿರತಿ ನಿರಾಲಂಭಲಾಗೈಬಧ ।
ದುಬಧ್ಯಾಮೇಟಿ ಸಹಜಮೇಂ ರಹ್ಯೆ । ಐಸಾವಿಚಾರಮಛೀಂದ್ರ ಕಹ್ಯೆ ॥ (೧೯೬–೮೪)

ಆಕಾಶತತ್ವವೇ (ಶೂನ್ಯಮಂಡಲ, ಪಂಚಭೂತಗಳಲ್ಲಿ ಒಂದಾದ ಆಕಾಶವಲ್ಲ) ಸದಾಶಿವ (ಪೂರ್ಣಬ್ರಹ್ಮ) ನೆಂದುತಿಳಿ. ಅದರಲ್ಲೇ ನಿರ್ವಾಣಪದವಿದೆ. ಈ ಶರೀರದಲ್ಲೇ ಅದರ ಪರಿಚಯು ದೊರೆವುದು. ಗುರುಮುಖದಿಂದ ಅದನ್ನು ಪಡೆ, ಅದರಿಂದ ಮತ್ತೆ ಆವಾಗಮನ ಆಗದು.

ಯೋಗವನ್ನು ರಕ್ಷಿಸುವನೂ, ನಾಲಿಗೆ ಮೊದಲಾದ ಇಂದ್ರಿಯಗಳಿಂದ ಭೋಗಿಸದವನೇ ಯೋಗಿ. ಅಂಜನ (ಮಾಯೆ) ವನ್ನು ತೊರೆದು ನಿರಂಜನ (ಬ್ರಹ್ಮ) ನಲ್ಲಿ ಲೀನವಾಗಿರುವವನ್ನೇ ಗೋರಕ್ಷ ಯೋಗಿ ಎಂದು ಕರೆಯುತ್ತಾನೆ.

ಶೂನ್ಯವೇ (ಸಮಾಧಿಸ್ಥಿತಿ) ತಾಯಿ, ಶೂನ್ಯವೇ ತಂದೆ, ಅದೇ ನಿರಂಜನ ಬ್ರಹ್ಮ ಶೂನ್ಯದ (ಸಮಾಧಿ) ಪರಿಚಯು ದೊರೆತ ಕೂಡಲೆ ಸ್ಥೈರ್ಯವುಂಟಾಗುತ್ತದೆ. ಯೋಗಿ ಗಂಭೀರನಾಗಿ ನಿಶ್ಚಲನಾಗಿರುತ್ತಾನೆ.

ಅವಧೂತನೇ ಮನಶೂನ್ಯರೂಪಿ ಪವನದ ಆಕಾರ ನಿರಾಲಂಬ, ವಾಯು ಅಥವಾ ದಮೆಯುದಶೆ ಬರಹಕ್ಕೆ ಬಾರದು. ದಶಮದ್ವಾರವನ್ನು ಸಾಧಿಸು.

ಅವಧೂತನೇ, ಹೃದಯವಿಲ್ಲದಾಗ ಕೂಡ ಮನಸ್ಸು ಶೂನ್ಯವಾಗಿರುತ್ತದೆ. ನಾಭಿ ಇಲ್ಲದಿದ್ದರೂ ಪವನ ನಿರಂಕಾರವಾಗಿರುತ್ತದೆ. ರೂಪವಿಲ್ಲದಿದ್ದರೂ ಕೂಡ ಶಬ್ದ ಅವ್ಯಾಕುಲವಾಗಿರುತ್ತದೆ. ಗಗನವಿಲ್ಲದಿದ್ದಾಗ ಕೂಡ ಅಂತರಿಕ್ಷರಹಿತನಾಗಿ ಚಂದ್ರನಿರುತ್ತಿದ್ದ.

ಗೋರಕ್ಷಕ ತನ್ನ ಗುರು ಮತ್ಸ್ಯೇಂದ್ರನಾಥನನ್ನು ಕೇಳುತ್ತಾನೆ. "ಸ್ವಾಮಿ ಯಾವ ತೇಜಸ್ಸಿನಿಂದ ಜ್ಯೋತಿ ಹೊಮ್ಮುತ್ತದೆ? ಯಾವ ಶೂನ್ಯದಿಂದ ವಾಯು ಸ್ಫುರಿಸುತ್ತದೆ ? ಯಾವ ಶೂನ್ಯ ತ್ರಿಭುವನಸಾರ? ಯಾವ ಶೂನ್ಯದಿಂದ ಭರವನ್ನು ದಾಂಟಬಹುದು ?

(ಮತ್ಸ್ಯೇಂದ್ರನಾಥನ ಉತ್ತರ) "ಅವಧೂತನೇ, ಶೂನ್ಯದಿಂದಲೇ ಬರುತ್ತದೆ, ಶೂನ್ಯದಿಂದಲೇ ಹೋಗುತ್ತದೆ. ಶೂನ್ಯದಲ್ಲೇ ಚಿತ್ತಸಮಾಹಿತವಾಗಿರುತ್ತದೆ. ಸಹಜ ಶೂನ್ಯದಲ್ಲಿ ತನುಮನ ಸ್ಥಿರವಾಗಿರುತ್ತದೆ. ಇಂತೆಂದನಾಮತ್ಸ್ಯೇಂದ್ರ.

"ಅವಧೂತನೇ, ಅನಾಹತ ಶಬ್ದ ಸುರಾಳದಲ್ಲಿ ನೆಲೆ ನಿಂತಿರುತ್ತದೆ. ನಿರಾಳ, ನಿರಾಲಂಬವನ್ನು ಪಧಿಸುತ್ತದೆ. ದ್ವಂದ್ವವನ್ನು ತೊರೆದು ಸಹಜದಲ್ಲಿರುತ್ತದೆ. ಇಂತೆಂದನಾ ಮಛಿಂದ್ರ."

ನಿರ್ಗುಣಬ್ರಹ್ಮನಾಮ, ರೂಪ ಮೊದಲಾದ ಉಪಾಧಿಗಳಿಂದ ಹೊರಗು ಎಂದು ಹೇಳುತ್ತ ಅಲ್ಲಮ, ಗೋರಕ್ಷರಿಬ್ಬರೂ ಅದನ್ನು ಒಂದು ಮಗುವಿಗೆ ಹೋಲಿಸಿದ್ದಾರೆ :–

ಅಲ್ಲಮಪ್ರಭು :-

> ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ
> ಹೆಸರಿಟ್ಟು ಕರೆದವರಾರೋ ? ಅಕಟಕಟಾ ಶಬ್ದದ
> ಲಜ್ಜೆಯ ನೋಡಾ ! ಗುಹೇಶ್ವರನಱಾಯದ ಅನುಭಾವಿ
> ಗಳೆಲ್ಲರ ತಱಕಟಗಾಡಿತ್ತು." 16

ಗೋರಕ್ಷ :

> "ಬಸ್ತೀನಸುನ್ಯಂ ಸುನ್ಯಂ ನಬಸ್ತೀ ಅಗಮ ಅಗೋಚರ ಐಸಾ ।
> ಗಗನ ಸಿಪರ ಮಹಿ ಬಾಲಕ ಬೋಲೈ ತಾಕಾನಾಂವಧರಹುಗೇಕೈಸಾ" ॥17

ಪರಮತತ್ವವನ್ನು ವಸತಿ ಎಂದಾಗಲೀ ಶೂನ್ಯವೆಂದಾಗಲೀ ಕರೆಯಲಾಗುವುದಿಲ್ಲ. ಅಸ್ತಿ ಎಂದಾಗಲೀ ನಾಸ್ತಿ ಎಂದಾಗಲೀ ಹೇಳಲು ಬರುವುದಿಲ್ಲ. ಅದು ಭಾವಾಭಾವ. ಸತ್ ಹಾಗೂ ಅಸತ್‌ನಿಂದ ಅತೀತ. ಅದು ಆಕಾಶಮಂಡಲದಲ್ಲಿ ಮಾತನಾಡುವ ಬಾಲಕ. ಶೂನ್ಯ ಅಥವಾ ಆಕಾಶ ಇಲ್ಲವೆ ಬ್ರಹ್ಮರಂಧ್ರದಲ್ಲೇ

ಪರಬ್ರಹ್ಮನ ನಿವಾಸ ಎಂದು ಹೇಳಲಾಗುತ್ತದೆ. ಅದನ್ನು ಮುಟ್ಟಿದಾಗಲೇ ಬ್ರಹ್ಮ ಸಾಕ್ಷಾತ್ಕಾರ. ಅಲ್ಲೇ ಆತ್ಮವನ್ನು ಅರಸಬೇಕು. ಬಾಲಕ ಹೇಗೆ ಪಾಪಪುಣ್ಯದಿಂದ ದೂರನೋ ಪರಮಾತ್ಮನೂ ಹಾಗೆಯೇ ಜರಾಮರಣದೂರ. ಕಾಲಮುಟ್ಟದ ಸತತ ಬಾಲಸ್ವರೂಪವೇ ಯೋಗಿಗಳಗಮ್ಯ. ಆದ್ದರಿಂದ ಗೋರಕ್ಷ ಅನೇಕ ಕಡೆ 'ಬಾಲ' ಎಂಬ ಶಬ್ದವನ್ನು ಬಳಸಿದ್ದಾನೆ. ಇದಕ್ಕೆ ಏನೆಂದು ಹೆಸರಿಟ್ಟು ಕರೆಯುವುದು ? (ಏಕೆಂದರೆ ಅದು ನಾಮರೂಪಾದಿ ಉಪಾಧಿಗಳಿಗೆ ಮೀರಿದ್ದು) ತಲೆಯ ಮೇಲಿರುವ ಸಹಸ್ರಾರ ಕಮಲದಲ್ಲಿ. ಇದನ್ನೇ ಯೋಗಿಗಳು ಗಮನಮಂಡಲ, ಗಗನವಾದಿ ಎನ್ನುತ್ತಾರೆ.

ಅಮೃತ ಸ್ರಾವವಾಗುತ್ತದೆ. ಅದನ್ನು ಯೋಗಿ ಪಾನ ಮಾಡುತ್ತಾನೆ. ಹಠ ಯೋಗದಲ್ಲಿ ಬರುವ ಈ ವಿಷಯ ಅಲ್ಲಮ-ಗೋರಕ್ಷರಿಬ್ಬರಲ್ಲೂ ವರ್ಣಿತವಾಗಿದೆ.

ಅಲ್ಲಮಪ್ರಭು :

"ಗಗನಮಂಡಲವೆಂಬ ಸೂಕ್ಷ್ಮನಾಳದಲ್ಲಿ ಸೋಹಂ ಸೋಹಂ ಎನ್ನುತ್ತಿದ್ದಿತು ಒಂದು ಬಿಂದು. ಅಮೃತದ ವಾರಿಯ ದಣಿಯುಂಡ ತೃಪ್ತಿಯಿಂದ ಗುಹೇಶ್ವರ ನಿಮ್ಮಲ್ಲಿಯೆ ಎನಗೆ ನಿವಾಸವಾಯಿತ್ತು."[18]

ಗೋರಕ್ಷ :

ಗಗನಮಂಡಲ ಮೈಂ ಊಂಧಾಕೂವಾತಹಾಂ ಅಂಮೃತಕಾವಾಸಾ ।
ಸಗುರಾಹೋ ಇಸುಭರಿಭರಿ ಪೀವೈ ನಿಗುರಾಜಂ ಇಪಿಯಾಸಾ ॥ [19]

(ಗಗನಮಂಡಲದಲ್ಲಿಹುದು ಬೋರಲುಬಾವಿ, ಅಲ್ಲಿಹುದು ಅಮೃತದ ನೆಲೆ, ಗುರು ವುಳ್ಳಾತ ತುಂಬಿ ತುಂಬಿ ಕುಡಿವ, ಗುರುವಿಹೀನ ಮರಳುವ ಬಾಯಾರಿ.)

ಕಲ್ಲುದೇವಾಲಯುವನ್ನು ಕಟ್ಟುವುದು, ಕಲ್ಲುದೇವರನ್ನು ಪ್ರತಿಷ್ಠಿಸುವುದು ಮೊದಲಾದವನ್ನು ವಿರೋಧಿಸಿ ಅಲ್ಲಮ ಗೋರಕ್ಷರಿಬ್ಬರೂ ಮೂರ್ತಿಪೂಜೆಯನ್ನು ಖಂಡಿಸಿದ್ದಾರೆ, ಅಂತೆಯೇ ತೀರ್ಥಯಾತ್ರೆಯನ್ನೂ.

ಅಲ್ಲಮಪ್ರಭು :

"ಕಲ್ಲುದೇವರೆಂದು ಪೂಜಿಸುವರು ಆಗದು ಕಾಣಿರೋ ! ಆಗಡಿಗರಾದಿರಲ್ಲಾ ! ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ"[20]

"ಕಲ್ಲುಮನೆಯ ಮಾಡಿ, ಕಲ್ಲುದೇವರ ಮಾಡಿ, ಆ ಕಲ್ಲು ಕಲ್ಲಮೇಲೆ ಕೆಡೆದರೆ ದೇವರೆತ್ತ ಹೋದರೊ ? ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರ."[21]

"ಸುತ್ತಿಸುತ್ತಿ ಬಂದದಿಲ್ಲ. ಲಕ್ಷಗಂಗೆಯ ಮಿಂದಡಿಲ್ಲ. ತುಟ್ಟತುದಿಯ ಮೇರು ಗಿರಿಯಂ ಮೆಟ್ಟಿ ಕೂಗಿದಡಿಲ್ಲ. ನಿಚ್ಚಕ್ಕೆ ನಿಚ್ಚ ನೆನೆವ ಮನವ ಅಂದಂದಿಗೆ ಅತ್ತಲಿತ್ತ ಹರಿವ ಮನವ, ಬಿತ್ತದಲ್ಲಿ ನಿಲ್ಲಿಸಬಲ್ಲಡೆ, ಬಚ್ಚಬಜೀಯ ಬೆಳಗು ಗುಹೇಶ್ವರ ಲಿಂಗವು."[22]

ಗೋರಖನಾಥ :

ಪಷಾಂಣಚೀದೇವಲೀಪಷಾಂಣ ಚಾದೇವ
ಪಷಾಂಣ ಪೂಜಿಲಾಕೈಸ್ಯೆಂ ಫೀಟೀಲಾಸನೇಹ ।
ಸರಜೀವ ತೇಡಿಲಾಂ ನಿರಜೀವಪೂಜಿಲಾ
ಪಾಪಬೀ ಕರಣಿಂ ಕೈಸ್ಯೆಂ ದೂತರ ತಿರೀಲಾ ॥
ತೀರಥಿ ತೀರಥಿ ಸನಾಂನ ಕರೀಲಾ
ಬಾಹರ ಶೀರಥ ಸನಾಂನ ಕರೀಲಾ
ಬಾಹರ ಧೋಯೇ ಕೈಂಸ್ಯೆಂ ಭೀತರಿ ಭೇದಿಲಾ ॥ 23

ಕಲ್ಲದೇಗುಲದಲಿ ಕಲ್ಲದೇವರ ಪ್ರತಿಷ್ಠೆಯ ಮಾಡುವೆ ಎಂತು ? ನಿನ್ನಲ್ಲಿ ದಯೆ ಹೇಗೆ ಉದಿಸೀತು ? (ಕಲ್ಲದೇವರು ಎಂದಾದರೂ ಕರಗುವುದುಂಟೆ ?) ನೀನು ಸಜೀವ ಫಲಪುಷ್ಪಗಳನ್ನು ಕಿತ್ತು ನಿರ್ಜೀವ ವಿಗ್ರಹವನ್ನು ಪೂಜಿಸುತ್ತಿಯೆ. ಇಂಥ ಪಾಪ ಕೃತ್ಯಮಾಡಿ ಭವಸಾಗರವನ್ನು ಹೇಗೆ ದಾಟುವೆ? ಕಂಡಕಂಡ ತೀರ್ಥಗಳಲ್ಲಿ ಮೀಯು ತ್ತಿಯೆ. ಹೊರಗೆ ತೊಳೆದರೆ ಬೆಳಗು ನಿರ್ಮಲವಾದೀತೆ ?

ಮದ್ಯಮಾಂಸಗಳನ್ನು ಅಲ್ಲಮ ಗೋರಕ್ಷರಿಬ್ಬರೂ ನಿಷೇಧಿಸಿದ್ದಾರೆ. ಪ್ರಭುದೇವ ಅದಕ್ಕೂ ಮುಂದೆ ಹೋಗಿ ಅಷ್ಟಮದಾದಿಗಳನ್ನು ಗೆಲ್ಲಬೇಕೆಂದು ಹೇಳಿದ್ದಾನೆ.

ಪ್ರಭುದೇವ :

"ಮದ್ಯಮಾಂಸಾದಿಗಳ ಮುಟ್ಟೆವೆಂದೆಂಬಿರಿ ನೀವು ಕೇಳಿರೆ ! ಮದ್ಯವಲ್ಲ
ದೇನು ಅಷ್ಟಮದಂಗಳು ? ಮಾಂಸವಲ್ಲದೇನು ಸಂಸಾರ ಸಂಗ ? ಈ ಉಭಯ
ವನತಿಗಳೆದಾತನೆ ಗುಹೇಶ್ವರ ಲಿಂಗದಲ್ಲಿ ಲಿಂಗೈಕ್ಯನು." 24

ಗೋರಕ್ಷ :

ಜೋಗಿ ಹೋಇ ಪರ ನಿಂದ್ಯಾ ಝುಷೈ । ಮದಮಾಂಸ ಅರುಭಾಂಗಿ ಜೋಭಷೈ ।
ಇಕೋತರಸೈ ಪುರಿಷಾ ನರಕಹಿಜಾಈ । ಸತಿಸತಿ ಭಾಷಂತ ಶ್ರೀಗೋರ ಷರಾಈ ॥ 25

ಜೋಗಿಯಾಗಿ ಪರನಿಂದೆ ಮಾಡುವವನು ಮದ್ಯ, ಮಾಂಸ ಮತ್ತು ಭಂಗಿ ತಿನ್ನುವವನು ಎಪ್ಪತ್ತೊಂದು ನೂರ ಮಂದಿ ಹೋಗುವ ನರಕಕ್ಕೆ ಹೋಗುತ್ತಾನೆ. ಗೋರಕ್ಷನಾಥ ಸತ್ಯನುಡಿಯುತ್ತಾನೆ.

ಮಾಯೆಲಜ್ಜೆಗೆಟ್ಟ ಹೆಣ್ಣು ಮೂಕೊರತಿ ಎಂದು ಬಸವಣ್ಣನವರು ಹೇಳಿದ್ದಾರೆ. ಇದೇ ಪ್ರತಿಮೆ ಅಲ್ಲಮ ಗೋರಕ್ಷರಲ್ಲೂ ಕಂಡುಬರುತ್ತಿದೆ.

ಅಲ್ಲಮಪ್ರಭು :

"ಮೋಟರ ಮದುವೆಗೆ ಭಂಡರುಹಬ್ಬಿಯ ಹೊಯ್ದು ಮೂಕೊಱತಿಯು
ರೆಲ್ಲಾ ಕಳಶವ ಹೊತ್ತರಲ್ಲಾ ! ಉಘೆ ಚಾಂಗು ಭಲಾ ಎಂದು ನಿಬ್ಬಣ ನೆರೆದು
ಹೂದಂಬುಲಕ್ಕೆ ಮುನಿವರಿಂದೇನಯ್ಯಾ ? ತ್ರಿಜಗವೆಲ್ಲ ನಿಬ್ಬಣ ಹೋಯಿತ್ತು,
ಗುಹೇಶ್ವರನ ನಱುಯದ ಹಗರಣವೊ ॥26

ಗೋರಕ್ಷ :

"ಮಿಂದರಭಾಡ್ಯೆ ಕುಟೀ ಬಂಧಾವ್ಯೆ । ತ್ಯಾಗೈಮಾಯಾಡಿರ್ ಮಂಗಾವ್ಯೆ.
ಸುಂದರಿಭಾಡ್ಯೆ ನಕಟೀ ಬಾಸ್ಯೆ । ತಂತ್ಯೆಂಗೋರಖ ಅಲಗೈನ್ಹಾಸ್ಯೆ ॥ 27

ಜನವೇನೋ ಜೋಗಿಗಳಾಗಿ ಬಿಡುತ್ತಾರೆ, ಆದರೆ ಯೋಗಸಾಧನೆ ಅಷ್ಟು ಸುಲಭವಲ್ಲ. ಅವರು ಮನೆತೊರೆದು ಗುಡಿಸಲು ಕಟ್ಟಿಕೊಳ್ಳುತ್ತಾರೆ. ಮನೆಮಠದ ಮಾಯೆ ತೊರೆಯುತ್ತಾರೆ. ಆದರೆ ಶಿಷ್ಯರಿಂದ ಭಿಕ್ಷೆ ಬೇಡಿಸುತ್ತಾರೆ. ಮನೆಯು ಚೆಂಮುಳ್ಳಿ ಹೆಂಡತಿಯನ್ನು ತೊರೆದು ಮೂಕೊಱತಿಯ ಸಹವಾಸ ಮಾಡುತ್ತಾರೆ. ಇದನೆಲ್ಲವನ್ನು ಕಂಡು ಗೋರಕ್ಷ ದೂರವಿದ್ದಾನೆ.

ಮಾಯಾಬಂಧನದಲ್ಲಿರುವ ಆತ್ಮನನ್ನು ಗೋರಕ್ಷ ಅಲ್ಲಮರಿಬ್ಬರೂ ಒಂದು ಗಿಳಿಗೆ ಹೋಲಿಸಿದ್ದಾರೆ :–

ಗೋರಕ್ಷ :

ಬೈಠಾ ಅವಧೂ ಲೋಹಕೇ ಖೂಂಟೀ, ಚಲತಾ ಅವಧೂ ಪವನ ಕೀಮೂಂಠೀ ।
ಸೋವತಾ ಅವಧೂ ಜೀವಿತಾಮೂವಾ, ಬೋಲತಾ ಅವಧೂ ಪ್ಯಂಜರೈಸೂವಾ ॥ 28

ಅವಧೂತ ಯೋಗಿ ಆಸನಹಾಕಿ ಕುಳಿತನೆಂದರೆ ಕಬ್ಬಿಣದ ಮೊಳೆ ಜಡಿದಂತೆ ಅಚಲ, ನಡೆದರೆ ವಾಯುವೇಗದಿಂದ ನಡೆಯುತ್ತಾನೆ ಮಲಗಿ ನಿದ್ರಿಸುವ ಯೋಗಿ ಬದುಕಿದ್ದೂ ಸತ್ತಂತೆ, ಪಂಜರದ ಗಿಳಿಯಂತೆ.

ಅಲ್ಲಮಪ್ರಭು :

"ಗಗನದ ಮೇಲೊಂದು ಅಭಿನವಗಿಳಿಹುಟ್ಟಿ, ಸಹ ಸಂಭ್ರಮದಲ್ಲಿ ಮನೆಯು ಮಾಡಿತ್ತು. ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತು. ಬ್ರಹ್ಮನಾಗಿಳಿಗೆ ಪಂಜರವಾದ. ವಿಷ್ಣುವಾಗಿಳಿಗೆ ಕೊಱಕೂಳಾದ, ರುದ್ರನಾಗಿಳಿಗೆ ತಾಕೋಳಾದ. ಇಂತೀ ಮೂವರ ಮುಂದಣ ಕಂದನ ನುಂಗಿ ದೃಷ್ಟನಾಮನಷ್ಟವಾಯಿತು ಇದೇತೋ ಗುಹೇಶ್ವರಾ"29

ಪರವಸ್ತು ಜ್ಯೋತಿ ಸ್ವರೂಪ ಎಂದು ಇಬ್ಬರೂ ಹೇಳಿದ್ದಾರೆ :-

ಗೋರಕ್ಷನಾಥ :

"ಅವಧೂಸುನಿಸೋ ಮಂದಿರ, ಸಬದಸೋದ್ವಾರ,
ಜೋತಿ ಸೋಮೂರತಿ ಜ್ವಾಲಾ ಅಪಾರ।
ರೂಪ ಅರೂಪ ಮನಉನ್ಮ ನಿರಹೈ,
ಐಸಾ ವಿಚಾರ ಮಛೀಂದ್ರ ಕಹೈ" ॥ 30

ಅವಧೂತನೇ, ಶೂನ್ಯವೇ ಅದರಗುಡಿ, ಶಬ್ದವೇ ಅವರ ದ್ವಾರ, ಜ್ಯೋತಿ ಅವರ ಮೂರುತಿ, ಜ್ವಾಲೆ ಅಪಾರ, ರೂಪ ಅರೂಪ, ಮನ ಉನ್ಮನಿ.

ಅಲ್ಲಮಪ್ರಭು ;

"ನಿರ್ವಿಕಲ್ಪದ ಅದ್ವೈತವ ನೋಡಿರೇ! ಬೆಳಗಿನೊಳಗಣ ಬೆಳಗು ಅಡಗಿತ್ತು ನೋಡಿರೇ! ಚಂದ್ರಸೂರ್ಯರಾ ಭೂಲೋಕದೊಳಂದಾರುವ ಕಾಣೆ, ಜ್ಯೋತಿಯಿಲ್ಲದ ಬೆಳಗಿನ ಪ್ರಭೆಯೇ। ಗುಹೇಶ್ವರಲಿಂಗದಲ್ಲಿ ಸಿದ್ಧರಾಮಯ್ಯ ದೇವರ ಮಹಾಘನವೇನೆಂಬೇನು." 31

ಮಾಯಾ ಕೋಲಾಹಲವನ್ನು ಬಣ್ಣಿಸುತ್ತ ಮನದ ಆಸೆಯೇ ಮಾಯೆ ಎಂದು ಅಲ್ಲಮ ಹೇಳಿದರೆ ಮನವೇ ಮಾಯೆ ಎಂದು ಗೋರಕ್ಷ ಹೇಳುತ್ತಾನೆ.

ಅಲ್ಲಮಪ್ರಭು :

"ಹೊನ್ನ ಮಾಯೆಯೆಂಬರು ಹೊನ್ನ ಮಾಯೆ ಮಾಯೆಯಲ್ಲ. ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆಕಾಣಾ ಗುಹೇಶ್ವರಾ."32

ಗೋರಕ್ಷ :

"ಅವಧೂ ಮನ ಚಲಪಚಲಾಗೀ ಮಾಯಾ, ಕರಮ ಆಚರೈತಹಾಂ ತೂ ಕಾಯಾ।
ಧ್ಯಾನ ಬಿನಾಜಾನು ಧಂದ ಅಪಾರ, ಸಾಂಭಳಿ ಗೋರಖಿ ಕಹೂಂವಿಚಾರ್ ॥ 33

ಅವಧೂತನೇ ಚಂಚಲ ಮನವೇ ಮಾಯೆ ಕರ್ಮಾಚರಣೆಯಲ್ಲಿ ಕಾಯವಿದೆ, ಜ್ಞಾನವಲ್ಲದೆ ಜಗತ್ತೇ ಧಂಧೆ, ಆದ್ದರಿಂದ ಗೋರಕ್ಷನೇ ಎಚ್ಚರೆಚ್ಚರ.

ಚಿತ್ತಶುದ್ಧಿಯಿಲ್ಲದೆ ಬರಿಯ ನೇಮದ ಆಡಂಬರವನ್ನು ಮಾಡುವವರನ್ನು ಇಬ್ಬರೂ ನಿಂದಿಸಿದ್ದಾರೆ.

ಅಲ್ಲಮಪ್ರಭು :

"ಹಾಲನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ, ಕಡಲೆಯನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ, ಅಗ್ಘವಣಿಯನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ,

ಪುಷ್ಪದ ನೇಮ ಹಿಡಿದಾತ ತುಂಬಿಯಾಗಿ ಹುಟ್ಟುವ, ಇವು ಷಟ್‌ಸ್ಥಲಕ್ಕೆ ಹೊರಗು. ಭಕ್ತಿ ನಿಷ್ಠೆಯಿಲ್ಲದವರ ಕಂಡರೆ ಮೆಚ್ಚ ಗುಹೇಶ್ವರ" [34]

ಗೋರಕ್ಷ

"ಪಾವಡಿಯಾಂಪಗ ಫಿಲಸ್ಯೆ ಅವಧೂಲೋಹ್ಯೆ ಛೀಜಂತ ಕಾಯಾ !
ನಾನಾಮುನೀದೂಥಾಧಾರೀ ಏತಾ ಜೋಗ ನಪಾಯಾ ॥
ದೂಧಾಧಾರೀ ಪರ ಘರಿ ಚಿತ, ನಾನಾಲಕಡೀ ಚಾಹೈಸಿತ ।
ಮೋನೀಕರ್‍ಯೆಂ ಮ್ಯಂತ್ರ ಕೀ ಆಸ್ ! ಬಿನಗುರಗುರಡೀ ನಹೀಂ ಬೇಸಾಸ್" [35]

ನಡೆಮುಡಿ ಬಳಸುವಾತ ಜಾರಿ ಬೀಳುತ್ತಾನೆ. ಕಬ್ಬಿಣದ ಸರಪಳಿಗಳಿಂದ ಶರೀರವನ್ನು ಬಂಧಿಸಿದರೆ ಶರೀರ ನಾಶವಾಗುತ್ತದೆ. ನಾನಾಗಳು, ಮೌನಿಗಳು ಮತ್ತು ಬರಿಯ ಹಾಲು ಕುಡಿದು ಜೀವನ ಕಳೆಯುವವರಿಗೆ ಯೋಗ ಸಿದ್ಧಿಸದು. ಹಾಲನೇಮದವನಿಗೆ ಇಂಥವರನುನೆಯಿಂದ ಹಾಲು ಬಂದೀತು–ಎಂದು ಅವರಿವರ ಮನೆಯುದೇ ಧ್ಯಾನ. ನಾನಾಗೆ ಶರೀರವನ್ನು ಬೆಚ್ಚಗಿಡಲು ಸೌದೆ ಬೇಕು. ಮೌನಿಗೆ ಓಡಾಡಲು ಜೊತೆಗೊಬ್ಬ ಸಂಗಾತಿ ಬೇಕು.

ಷಟ್‌ಚಕ್ರಗಳನ್ನು ಗೋರಖನಾಥನೇನೋ ಸರಿ, ಪ್ರಭುದೇವನೂ ವರ್ಣಿಸಿದ್ದಾನೆ.

ಪ್ರಭುದೇವ :

ಗುದಸ್ಥಾನದಲ್ಲಿ ಆಧಾರ ಚಕ್ರ, ಪೃಥ್ವಿಯೆಂಬ ಮಹಾಭೂತ, ಚತುಃಕೋಣೆ, ಚೌದಳಪದ್ಮ, ಅಲ್ಲಿಹ ಅಕ್ಷರ ನಾಲ್ಕು: ವ–ಶ–ಷ–ಸ: ಅದಱವರ್ಣಸುವರ್ಣ, ಅದಕ್ಕೆ ಅಧಿದೇವತೆ ದಾಕ್ಷಾಯಣಿ, ಲಿಂಗಸ್ಥಾನದಲ್ಲಿ ಸ್ವಾಧಿಷ್ಠಾನ ಚಕ್ರ, ಅಪ್ಪುವೆಂಬ ಮಹಾಭೂತ, ಧನುರ್ಗತಿ, ಷಡುದಳ ಪದ್ಮ, ಅಲ್ಲಿಯ ಅಕ್ಷರವಾಱು: ಬ–ಭ–ಮ–ಯ–ರ–ಲ: ಅದಱ ವರ್ಣ ಪಚ್ಚೆಯ ವರ್ಣ, ಅದಕ್ಕೆ ಅಧಿದೇವತೆ ಬ್ರಹ್ಮನು. ನಾಭಿಸ್ಥಾನದಲ್ಲಿ ; ಮಣಿಪೂರಕಚಕ್ರ, ತೇಜವೆಂಬ ಮಹಾಭೂತ, ತ್ರಿಕೋಣ, ದಶದಳ ಪದ್ಮ, ಅಲ್ಲಿಯ ಅಕ್ಷರ ಹತ್ತು: ಡ–ಢ–ಣ–ತ–ಥ–ದ–ಧ–ನ–ಪ–ಫ ; ಅದಱವರ್ಣ ಕೃಷ್ಣವರ್ಣ, ಅದಕ್ಕೆ ಅಧಿದೇವತೆ ವಿಷ್ಣು, ಹೃದಯಸ್ಥಾನದಲ್ಲಿ ಅನಾಹತ ಚಕ್ರ, ವಾಯುವೆಂಬ ಮಹಾಭೂತ, ಷಟ್ಕೋಣೆ, ದ್ವಾದಶದಳಪದ್ಮ, ಅಲ್ಲಿಹ ಅಕ್ಷರ ಹನ್ನೆರಡು: ಕ–ಖ–ಗ–ಘ–ಙ–ಚ–ಛ–ಜ–ಝ–ಞ–ಟ–ಠ ; ಅದಱವರ್ಣ ಕುಂಕುಮವರ್ಣ. ಅದಕ್ಕೆ ಅಧಿದೇವತೆ ಮಹೇಶ್ವರನು. ಕಂಠಸ್ಥಾನದಲ್ಲಿ ವಿಶುದ್ಧಿ ಚಕ್ರ, ಆಕಾಶವೆಂಬ ಮಹಾಭೂತ, ವರ್ತುಳಾಕಾರ, ಷೋಡಶದಳ ಪದ್ಮ, ಅಲ್ಲಿಯ ಅಕ್ಷರ ಹದಿನಾಱು : ಅ-ಆ-ಇ-ಈ-ಉ-ಊ-ಋ-ೠ-ಌ-ೡ-ಏ-ಐ-ಓ-ಔ-ಅಂ -ಅಃ ; ಆದಱವರ್ಣ ಶ್ವೇತವರ್ಣ, ಅದಕ್ಕೆ ಅಧಿದೇವತೆ ಸದಾಶಿವನು, ಭ್ರೂಮಧ್ಯ

ಸ್ಥಾನದಲ್ಲಿ ಆಜ್ಞಾಚಕ್ರ, ಮನವೆಂಬ ಮಹಾಭೂತ, ತಮಂಧಕಾರ ದ್ವಿದಳಪದ್ಮ. ಅಲ್ಲಿಹ ಅಕ್ಷರವೆರಡು : ಹಂಕ್ಷಂ; ಅದರವರ್ಣ ಮಾಣಿಕ್ಯವರ್ಣ, ಅದಕ್ಕೆ ಅಧಿದೇವತೆ ಶ್ರೀ ಗುರು. ಉನ್ಮನಿ ಜ್ಯೋತಿ ಬ್ರಹ್ಮರಂಧ್ರದಲ್ಲಿ ಸಹಸ್ರದಳ ಪದ್ಮ, ಅಲ್ಲಿ ಅಮೃತ ವಿಹುದು. ಅಲ್ಲಿ ಓಂಕಾರ ಸ್ವರೂಪವಾಗಿ ಗುಹೇಶ್ವರ ಲಿಂಗವು ಸದಾ ಸನ್ನಿಹಿತನು."[36]

ಗೋರಕ್ಷ :

"ಉಲಟಿಯಾ ಪವನ ಷಟಚಕ್ರ ಬೇಧಿಯಾ. ವಾತ್ಯೆಲೋ ಹೈ ಸೋಖಿ
ಯಾ ಪಾಂಗೇ ।
ಚಂದ ಸೂರ ದೋಲೂ ನಿಜ ಘರಿ ರಾಖ್ಯಾ ಐಸಾ ಅಖಿಬಿನಾಂಣೀ" ॥ [37]

ಪ್ರಾಣವಾಯುವನ್ನು ತಿರುಗಮುರುಗ ಮಾಡಿ ಆರೂ ಚಕ್ರಗಳನ್ನು ಭೇದಿಸಿದೆ. ಅವರಿಂದ ಕಾದ ಕಬ್ಬಿಣ (ಬ್ರಹ್ಮರಂಧ್ರ) ನೀರನ್ನು (ರೇತಸ್ಸು) ಹೀರಿಬಿಟ್ಟಿತಂ. ಚಂದ್ರ (ಇಡಾನಾಡಿ), ಸೂರ್ಯ: (ಪಿಂಗಳನಾಡಿ) ಇಬ್ಬರನ್ನು ನನ್ನ ಮನೆಯಲ್ಲಿ (ಸುಷುಮ್ನಾನಾಡಿ) ಇರಿಸಿದೆ; ಮೀಯಿಸಿದೆ. ಈ ರೀತಿ ಮಾಡಿದ ಯೋಗಿ ಸ್ವತಃ ಅಲಕ್ಷ (ಅಗೋಚರ) ಹಾಗೂ ವಿಜ್ಞಾನಿ (ಬ್ರಹ್ಮ) ಯಾಗಿಬಿಡುತ್ತಾನೆ.

ಮುಕ್ತಿ ಸತ್ತ ಬಳಿಕ ದೊರೆಯುವ ವಸ್ತುವಲ್ಲ. ಈ ದೇಹವಿರುವಾಗಲೇ ಸ್ವಾನುಭೂತಿ ಹಾಗೂ ಸದಾಚಾರದಿಂದ ಮುಕ್ತಿಯನ್ನು ಪಡೆಯಬಹುದು. ಆದ್ದರಿಂದ ಸತ್ತಮೇಲೆ ದೊರೆಯುವ ಮುಕ್ತಿಯನ್ನು ಪ್ರಭುದೇವ, ಗೋರಕ್ಷರಿಬ್ಬರೂ ಹಳಿದಿದ್ದಾರೆ.

ಪ್ರಭುದೇವ :

"ಸತ್ತ ಬಳಿಕ ಮುಕ್ತಿಯ ಹಡೆದಹೆನೆಂದು ಪೂಜಿಸಹೋದರೆ ಆ ದೇವರೇನ ಕೊಡುವರೋ ಸಾಯದೆ ನೋಯದೆ, ಸ್ವತಂತ್ರನಾಗಿ ಸಂದು ಭೇದವಿಲ್ಲದಿಪ್ಪ ಗುಹೇಶ್ವರ ನಿಮ್ಮ ಶರಣ."[38]

ಗೋರಕ್ಷ : ಗೋರಕ್ಷನಾಥನ ಪ್ರಕಾರ ಈ ಶರೀರದಲ್ಲೇ ಎಲ್ಲ ಮುಕ್ತಿಮಂದಿರಗಳೂ ನೆಲೆಗೊಂಡಿವೆ. ಅದನ್ನು ಮರೆತು ಬೇರೆಲ್ಲೂ ಹೋಗಬೇಕಿಲ್ಲ.

"ಗುರುದೇವ ಸ್ಯಂಭೂದೇವ ಸರೀರ ಭೀತರಿಯೇ ।
ಆತ್ಮಾಂ ಉತ್ತಿಮದೇವ ತಾಹೀ ಕೀನ ಜಾಂಣಾಂ ಸೇವ ।
ಆಂನ ದೇವ ಪೂಜ ಪೂಜ ಇಮಹೀ ಮರಿಯೇ ।
ನವೇದ್ವಾರೇ ನವೇನಾಥ. ಕೃಬೇಣೀ ಜಗನ್ನಾಥ. ದಸವೇಂದ್ವಾರಿಕೇದಾರಂ ॥
ಜೋಗ ಜುಗತಿ ಸಾರ ತೌ ಭೌತಿರಿಯೇ ಪಾರಂ ।
ಕಥಂತ ಗೋರಕ್ಷನಾಥ ವಿಚಾರಾ ॥"[39]

ಆತ್ಮವೇ ಸರ್ವೋತ್ತಮ ದೇವತೆ, ಅದುವೆ ಗುರು, ಅದುವೆ ಪರತತ್ತ್ವ ಶಿವ. ಅದು ಶರೀರದಲ್ಲೇ ಇದೆ. ಅದರ ಸೇವೆಯನ್ನು ಅರಿಯದೆಯೆ ಅನ್ಯ ದೇವತೆಯನ್ನು ಪೂಜಿಸಿ ಹಾಳಾಗುವೆಯಲ್ಲ. ನವದ್ವಾರಗಳಲ್ಲಿ ನವನಾಥರಿದ್ದಾರೆ. ತ್ರಿವೇಣಿ (ತ್ರಿಕುಟಿ) ಯಲ್ಲಿ ಜಗನ್ನಾಥನಿದ್ದಾನೆ. ಮತ್ತೆ ದಶಮದ್ವಾರ (ಬ್ರಹ್ಮರಂಧ್ರ) ದಲ್ಲಿ ಕೇದಾರನಾಥ (ಶಿವ, ಪರಬ್ರಹ್ಮ) ನಿದ್ದಾನೆ. ಯೋಗದ ಸಾರಯುಕ್ತಿ ದೊರೆತರೆ ಸಂಸಾರದಿಂದ ಪಾರಾಗುವೆ.

ಬಾಹ್ಯಪೂಜೆಯನ್ನು ವಿರೋಧಿಸಿ ಶೂನ್ಯವನ್ನು ಉಪಾಸಿಸುವಂತೆ ಗೋರಕ್ಷ ಹೇಳಿದರೆ ಪ್ರಭುದೇವ ಕೂಡ ಲಿಂಗಪೂಜೆಯನ್ನು ವಿರೋಧಿಸಿ ನಿಃಶೂನ್ಯದ ಮರ್ಮವನ್ನು ಅರಿಯುವಂತೆ ಬೋಧಿಸುತ್ತಾನೆ.

ಪ್ರಭುದೇವ : "ಅಷ್ಟದಳ ಕಮಲದ ಮೇಲಿಪ್ಪ ನಿಃಶೂನ್ಯದ ಮರ್ಮವನರಿಯದೆ ಪ್ರಾಣಲಿಂಗವೆಂದೆಂಬರು ಸಂತೆಯ ಸುದ್ದಿಯ ವಂಚಕರು. ಅಂಗದಧ್ಯಯನಕ್ಕೆ ಲಿಂಗವನರಿಸುವ ಭಂಗಿತರನೇನೆಂಬೆ ಗುಹೇಶ್ವರಾ.''[40]

ಪ್ರಭುದೇವ ಕಾಯಕದ ಮಹತ್ವವನ್ನು ಸಾರಿಹೇಳಿದ್ದಾನೆ. ಗೋರಕ್ಷನಾಥ ? ಭಿಕ್ಷಾಟನೆಯನ್ನು ನಿಂದಿಸಿದ್ದಾನೆ.

ಪ್ರಭುದೇವ : ''ಕ್ರಿಯಾಮಥನವಿಲ್ಲದೆ ಕಾಣಬರದುದೇ ಇಕ್ಷುವಿನೊದೇ ? ತಿಲದೊಳಗಣತೈಲ ? ಕ್ರಿಯಾಮಥನವಿಲ್ಲದೆ ಕಾಣಬರದುದೇ ಕಾಷ್ಠದೊಳಗಣ ಅಗ್ನಿ? ಇದು ಕಾರಣ ನಮ್ಮ ಗುಹೇಶ್ವರ ಲಿಂಗವ ತನ್ನೊಳರಿದೆನೆಂಬ ಮಹಂತಂಗಲ್ಲದೆ ಸಕ್ರಿಯಾಚರಣೆಯೇ ಸಾಧನಕಾಣೆ ಬೋ.''[41]

ಗೋರಕ್ಷ :

"ಓಂ ಮೂಲ ಅಗನಿಕಾ ರೇಚಕ ನಾಂವ್, ಸೋಷಿಲೇಹರಕ್ತ ಪೀತ ಅರ ಅಂ ವ।
ಪೇಟಪೂಠ ದೋಲಾ ಸಮರಹೈ । ಕೌ ಮೂಲ ಅಗನಿ ಜಲಿಗೋರಕ್ಷ ಕಹೈ ।
ಭುಯಂಗಮ ಅಗನಿ ಕಾ ಭುಯಂಗಮ ನಾಂ ಮ । ತಜಿ ಬಾ ಭಿಖ್ಯಾ ಭೋಜನ
ಗ್ರಾಂಮ ॥"[42]

ಓಂ ಮೂಲ ಅಗ್ನಿಗೆ ರೇಚಕ ಎಂದು ಹೆಸರು, ಅದು ರಕ್ತ, ಆಮಪೀತವೆಲ್ಲವನ್ನು ಒಣಗಿಸುವುದು. ಭುಜಂಗಮ ಅಗ್ನಿಗೆ ಭುಜಂಗಮ ಎಂದು ಹೆಸರು. ಭಿಕ್ಷೆ, ಗ್ರಾಮ ಭೋಜನವನ್ನು ತೊರೆ.

ಈ ರೀತಿ ಪ್ರಭುದೇವ ಮತ್ತು ಗೋರಖನಾಥರ ಬದುಕು ವಿಚಾರ ಹಾಗೂ ತತ್ತ್ವದರ್ಶನದಲ್ಲಿ ಸಾಕಷ್ಟು ಸಾಮ್ಯವಿರುವುದನ್ನು ಕಾಣಬಹುದು. ಗೋರಕ್ಷ ಬ್ರಹ್ಮಚಾರಿ, ಅವಧೂತ, ಆತ ಅಮರ. ಇನ್ನೂ ಯೋಗಶರೀರದಲ್ಲಿ ಜೀವಿಸಿದ್ದಾನೆ ಎಂದು ನಾಥಪಂಥೀಯರ ನಂಬಿಕೆ. ಅಲ್ಲಮಪ್ರಭು ಕೂಡ ಬ್ರಹ್ಮಚಾರಿ, ಅವನಿಗೆ

ಮದುವೆಯಾಗಿರಲಿಲ್ಲ ಎಂದು ಚಾರ್ವಾಕಾದಿಗಳ ಮತ. ವೀರಶೈವ ಹಾಗೂ ನಾಥ ಪಂಥ ಇವೆರಡರ ಉಪಾಸ್ಯ, ಆರಾಧ್ಯದೇವತೆ ನಿರ್ಗುಣ ನಿರಾಕಾರ ಶಿವ, ಷಟ್‌ಸ್ಥಲ ಸಿದ್ಧಾಂತದಲ್ಲಿ ಕರ್ಮಜ್ಞಾನ ಹಾಗೂ ಭಕ್ತಿಯ ಸಮನ್ವಯ ಮಾಡಿದೆ. ಆದ್ದರಿಂದ ಅದನ್ನು ಸಮರಸಸಿದ್ಧಾಂತವೆಂದೂ ಕರೆಯಲಾಗುತ್ತದೆ. ವೀರಶೈವದಲ್ಲಿ ಷಟ್-ಸ್ಥಲಕ್ಕೆ ಮಹತ್ವವಿದ್ದರೆ ನಾಥ ಸಂಪ್ರದಾಯದಲ್ಲಿ ಷಟ್‌ಚಕ್ರಕ್ಕೆ. ನಾಥಸಂಪ್ರದಾಯದ ದಾರ್ಶನಿಕಮತವನ್ನು ಹಠಯೋಗವೆಂದು ಕರೆಯಲಾಗುತ್ತದೆ. ಗೋರಕ್ಷರಚಿತವೆಂದು ಹೇಳಿದ 'ಸಿದ್ಧಸಿದ್ಧಾಂತ ಪದ್ಧತಿ'ಯ ಪ್ರಕಾರ ಹಠಯೋಗದ ಅರ್ಥ ಹೀಗಿದೆ:—

"ಹಕಾರಃ ಕಥಿತಃ ಸೂರ್ಯಷ್ಠಕಾರಶ್ಚಂದ್ರ ಉಚ್ಯತೇ ।
ಸೂರ್ಯಂಶ್ಚಂದ್ರಮಸೋರ್ಯೋಗಾತ್ ಹಠಯೋಗೋನಿಗದ್ಯತೆ ॥"

ಹಕಾರವೆಂದರೆ ಸೂರ್ಯ ಠಕಾರವೆಂದರೆ ಚಂದ್ರ, ಸೂರ್ಯಚಂದ್ರರ ಯೋಗವೇ ಹಠಯೋಗ. ಸೂರ್ಯನೆಂದರೆ ಪ್ರಾಣವಾಯು, ಚಂದ್ರನೆಂದರೆ ಅಪಾನವಾಯು, ಇವೆರಡರ ಯೋಗದಿಂದ ವಾಯುವಿನ ನಿರೋಧವೇ ಹಠಯೋಗ. ಸೂರ್ಯಚಂದ್ರರೆಂದರೆ ಇಡಾಪಿಂಗಳಾ ನಾಡಿಗಳೆಂದೂ ಇವೆರಡನ್ನು ತಡೆದು ಸುಷುಮ್ನ ಮಾರ್ಗದಿಂದ ಪ್ರಾಣವಾಯು ಸಂಚಲನೆ ಮಾಡುವುದೆ ಹಠಯೋಗವೆನ್ನುವುದೂ ಉಂಟು. ಹಠಯೋಗ ಪ್ರಮುಖವಾಗಿ ಶರೀರಕ್ಕೆ ಸಂಬಂಧಿಸಿದುದು. ಶರೀರ ದಲ್ಲಿರುವ ಬಿಂದು ವಾಯು ಹಾಗೂ ಮನಸ್ಸು ಈ ಮೂರರಲ್ಲಿ ಯಾವುದಾದರೂ ಒಂದನ್ನು ವಶಪಡಿಸಿಕೊಂಡರೆ ಉಳಿದೆರಡು ತಮ್ಮಷ್ಟಕ್ಕೆ ತಾನೇ ವಶವಾಗುತ್ತದೆ.

ಹಠಯೋಗದ ಮುಖ್ಯಗುರಿ 'ಅಮರತ್ವ' ಅಥವಾ 'ಶಿವತತ್ವದ ಪ್ರಾಪ್ತಿ.' ಶಕ್ತಿ ಹಾಗೂ ಶಿವ ಈ ಸಂಪ್ರದಾಯದ ಪ್ರಧಾನ ತತ್ವಗಳು. ಶಿವ ಚಿರತತ್ವವಾದರೆ ಶಕ್ತಿ ಕ್ರಿಯಾಶೀಲ ಹಾಗೂ ಚಂಚಲ. ಶಕ್ತಿಯೇ ಜನನ ಮರಣಗಳಿಗೆ ಕಾರಣ. ಈ ಶಕ್ತಿಯ ನಿಮ್ನಗಾಮೀ ಪ್ರವೃತ್ತಿಯನ್ನು ತಡೆದು ಅದನ್ನು ಊರ್ಧ್ವಮುಖಿ ಗೊಳಿಸಿ ಶಿವತ್ವವನ್ನು ಪಡೆಯುವುದೇ ಯೋಗಸಾಧನೆಯ ಗುರಿ. ನಾಭಿಯ ಕೆಳಗೆ ಶಕ್ತಿಯಿದ್ದರೆ, ನಾಭಿಯ ಮೇಲೆ ಶಿವನಿದ್ದಾನೆ. ಮೇರುದಂಡದ ಅಡಿಯಲ್ಲಿ ಗುದದ ಮೇಲೆ ಅಧೋವದನವಾದ ಕುಂಡಲಿನೀ ನಾಡಿಯಿದೆ. ಅದು ಶಕ್ತಿಯ ಪ್ರತೀಕ. ಶಿವ ತಲೆಯ ಮೇಲಿರುವ ಸಹಸ್ರಾರು ಚಕ್ರದಲ್ಲಿ ಸಹಸ್ರದಳ ಕಮಲದಲ್ಲಿ ನೆಲೆಗೊಂಡಿದ್ದಾನೆ. ಶಿವಮತ್ತು ಶಕ್ತಿ. ಬ್ರಹ್ಮಾಂಡ ಹಾಗೂ ಪಿಂಡದ ಪ್ರತೀಕ. ಬ್ರಹ್ಮಾಂಡದಲ್ಲಿರುವುದೆಲ್ಲ ಈ ಪಿಂಡದಲ್ಲಿದೆ. ಈ ಕುಂಡಲಿನಿ ಮೂಲಾಧಾರವೇ ಮೊದಲಾದ ಷಟ್‌ಚಕ್ರಗಳನ್ನು ಭೇದಿಸಿ ಸಹಸ್ರಾರವನ್ನು ಮುಟ್ಟಿದಾಗ ಶಿವಶಕ್ತಿಯರ ಮಿಲನವಾಗುತ್ತದೆ. ಮನುಷ್ಯ ಶರೀರದಲ್ಲಿ ಮೇರುದಂಡದಲ್ಲಿ ಪ್ರಾಣವಾಯುವನ್ನು ಒಯ್ಯುವ ಅನೇಕ ನಾಡಿಗಳಿವೆ. ಅವುಗಳಲ್ಲಿ ಈ ಮೂರು ಪ್ರಮುಖವಾದವು—ಇಂಗಳಾ, ಪಿಂಗಳಾ ಮತ್ತು

ಸುಷುಮ್ನಾ, ಎಡಕ್ಕೆ ಇಂಗಳಾ ಬಲಕ್ಕೆ ಪಿಂಗಳಾ ನಡುವೆ ಸುಷುಮ್ನಾ, ಇದರ ಮೂಲಕವೇ ಕುಂಡಲಿನಿ ಮೇಲಕ್ಕೆ ಹೋಗುವುದು. ಶಿವಶಕ್ತಿಗಳು ಬೆರತು ಸಮರಸ ಗೊಂಡಾಗ ಈ ಎಲ್ಲಾ ಪ್ರತೀಯಮಾನ ಸೃಷ್ಟಿಚಕ್ರ ತನ್ನಷ್ಟಕೆ ತಾನೇ ನಿಃಶೇಷ ವಾಗಿಬಿಡುತ್ತದೆ.

ಶಕ್ತಿ ಕುಂಡಲಿನಿಯ ರೂಪದಲ್ಲಿ ನಮ್ಮ ದೇಹದಲ್ಲೇ ಇದೆ. ಶಿವನೂ ಇದೇ ದೇಹದಲ್ಲಿ ಮಿದುಳಿನಲ್ಲಿರುವ ಸಹಸ್ರಾರ ಚಕ್ರದಲ್ಲಿದ್ದಾನೆ. ಜನ್ಮಜನ್ಮಾಂತರಗಳ ಸಂಚಿತ ಮಲಭಾರಕ್ಕೆ ಸಿಕ್ಕಿ ಕುಂಡಲಿನಿ ಸುರುಟಿಕೊಂಡು ಕುಳಿತಿದೆ. ಮನುಷ್ಯ ಒಮ್ಮೆ ಧ್ಯಾನಧಾರಣೆಯ ಬಲದಿಂದ ವಾಯುವನ್ನು ಸಂಯಮಿತಗೊಳಿಸಿದರೆ, ನಾಡಿ ಶೋಧನ ಮಾಡಿದರೆ ಪರಮಪವಿತ್ರ ಸುಷುಮ್ನಾ ಮಾರ್ಗ ತೆರೆದುಕೊಳ್ಳುತ್ತದೆ. ಶಕ್ತಿ ಉದ್ಬುದ್ಧವಾಗಿ ಶಿವನೊಡನೆ ಸಮರಸಗೊಂಡಾಗ ಯೋಗಿಗೆ ಪರಮಕೈವಲ್ಯ ರೂಪಿಯಾದ ಸಹಜ ಸಮಾಧಿ ಸಿದ್ಧಿಸುತ್ತದೆ. ಇದಕ್ಕೆ ಮಿಗಿಲಾದ ಆನಂದ ಬೇರೇನಿದ್ದೀತು ?

ವೀರಶೈವ ಹಾಗೂ ನಾಥಸಂಪ್ರದಾಯದ ಸಾಧನಾಮಾರ್ಗದಲ್ಲಿ ದರ್ಶನದಲ್ಲಿ ಸಾಕಷ್ಟು ಸಾಮ್ಯವಿದೆ. ಎರಡೂ ಸಂಪ್ರದಾಯಗಳ ಉಪಾಸ್ಯಮೂರ್ತಿ ನಿರ್ಗುಣ, ನಿರಾಕಾರ ಪರಮಶಿವ. ಶಿವ, ಶಕ್ತಿ ಇವೆರಡರ ಸಾಮರಸ್ಯ ಈ ಎರಡೂ ಸಂಪ್ರದಾಯಗಳ ಧ್ಯೇಯ. ಜೀವ ಹಾಗೂ ಶಿವನ ಮಿಲನವನ್ನೇ ಎರಡೂ ಸಂಪ್ರದಾಯಗಳಲ್ಲೂ ಸಮರಸ ಇಲ್ಲವೆ ಸಾಮರಸ್ಯವೆಂದು ಕರೆದಿದೆ. ಶೂನ್ಯ ಸಹಜ ಮೊದಲಾದ ತತ್ವಗಳು ಎರಡೂ ಸಂಪ್ರದಾಯಗಳಿಗೂ ಮಾನ್ಯ. ಮೂರ್ತಿಪೂಜೆ ತೀರ್ಥಾಟನೆ ಎರಡರಲ್ಲೂ ಅಮಾನ್ಯ. ಗುರುವಿಗೆ ಎರಡು ಸಂಪ್ರದಾಯಗಳಲ್ಲೂ ಅತ್ಯಂತ ಹೆಚ್ಚಿನ ಸ್ಥಾನವಿದೆ. ಅಲ್ಲಮಪ್ರಭುವಿನದು ಷಟ್‌ಸ್ಥಲ ಸಿದ್ಧಾಂತವಾದರೆ, ಗೋರಖನಾಥನದು 'ಷಟ್‌ಚಕ್ರ' ಸಿದ್ಧಾಂತ. ಷಟ್ಸ್ಥಲ ಸಾಧನೆಯ ಸೋಪಾನ ವಾದರೆ, ಷಟ್‌ಚಕ್ರ ಕುಂಡಲಿನಿ ಶಕ್ತಿಯ ಊರ್ಧ್ವಗಮನದ ಸೋಪಾನ. ವೀರಶೈವರು ಭಕ್ತಿಸಾಧನೆಗೆ ಹೆಚ್ಚಿನ ಮಹತ್ವ ನೀಡಿದರೆ ನಾಥಯೋಗಿಗಳು ಕಾಯಸಾಧನೆಗೆ ಅತ್ಯಂತ ಹೆಚ್ಚಿನ ಮಹತ್ವ ನೀಡಿದ್ದಾರೆ. ಗೋರಕ್ಷನಾಥ ಬೌದ್ಧಮತಕ್ಕೆ ಶೈವರೂಪ ಕೊಟ್ಟ ವನು. ಆದ್ದರಿಂದ ಆತನನ್ನು ಶಿವನ ಅವತಾರವೆಂದು ಭಾವಿಸಲಾಗಿದೆ. ಶೂನ್ಯ, ಸಹಜ, ಮೊದಲಾದ ತತ್ವಗಳು ಪ್ರಭುದೇವನಲ್ಲಿ ಹೆಚ್ಚು ಬಳಕೆಗೊಂಡಿವೆ. ಪ್ರಭುದೇವ ಶಿವನ ಅವತಾರವೆಂದು ಕೆಲವರು ಹೇಳಿದರೆ, ನಿರ್ಮಾಯ ಎಂಬ ಗಣನ ಅವತಾರ ವೆಂದು ಮತ್ತೆ ಕೆಲವರು ಹೇಳಿದ್ದಾರೆ.

ಗೋರಕ್ಷನಾಥ ಮತ್ತು ಗಣೇಶ, ಗೋರಕ್ಷ, ದತ್ತಾತ್ರೇಯ, ಹಾಗೂ ಗೋರಕ್ಷ, ಮತ್ಸ್ಯೇಂದ್ರ ಮೊದಲಾದವರ ನಡುವೆ ಸಂವಾದ ನಡೆಯಿತೆಂದು ತಿಳಿಸುವ 'ಗೋರಖಗಣೇಶ್ ಗೋಷ್ಠಿ', 'ಗೋರಖದತ್ತ ಗೋಷ್ಠಿ' ಮೊದಲಾದ ಸಂವಾದ

ಸಾಹಿತ್ಯ, ಗೋಷ್ಠಿಸಾಹಿತ್ಯ ಹಿಂದಿಯಲ್ಲಿ ದೊರೆಯುತ್ತವೆ. ಇದೇ ರೀತಿ 'ಶೂನ್ಯ ಸಂಪಾದನೆ' ಸಂವಾದ ಶೈಲಿಯಲ್ಲಿರುವುದು ಗಮನಾರ್ಹ. ಅಲ್ಲಮಪ್ರಭುವಿನ ವಾಣಿಯಲ್ಲಿ ವಚನ ಹಾಗೂ ಹಾಡುಗಳಿದ್ದರೆ, ಗೋರಕ್ಷನಾಥ 'ದೋಹಾ' (ದ್ವಿಪದಿ) ಶೈಲಿಯಲ್ಲಿ ತನ್ನ ಅನುಭವಕ್ಕೆ ವಾಣಿನೀಡಿದ್ದಾನೆ. ಜೊತೆಗೆ ಪದಗಳನ್ನೂ ಹಾಡಿದ್ದಾನೆ. ಗೋರಖನಾಥ ಹಿಂದಿಯ ಆದ್ಯಗದ್ಯಕಾರ. ಪ್ರಭುದೇವನಂತೆ ಗೋರಕ್ಷ ಎಂದಿಗೂ ಭಕ್ತಿಯೊಡನೆ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಹೀಗಾಗಿಯೋ ಏನೋ, ಪ್ರಭುದೇವನ ವಾಣಿಯ ಹೃದ್ಯತೆ, ಕಾವ್ಯಮಯತೆ ಗೋರಕ್ಷನಲ್ಲಿಲ್ಲ. ಬಸವ, ಪ್ರಭುದೇವರ ವಚನಗಳೊಡನೆ ಗೋರಖವಾಣಿಯನ್ನು ಹೋಲಿಸಿದರೆ ಅದು ತೀರ ಶುಷ್ಕವೆನಿಸುತ್ತದೆ. ಅದೂ ಅಲ್ಲದೆ ಗೋರಖಬಾನಿ ಜನಹೇಳುವಷ್ಟು ಪ್ರಾಚೀನವಲ್ಲ. ಅದರ ಭಾಷೆಯನ್ನು ನೋಡಿದರೆ ಅದು ಹದಿನಾಲ್ಕನೆಯ ಶತಮಾನಕ್ಕಿಂತಲೂ ಈಚಿನದೆನಿಸುತ್ತದೆ.

ಈ ರೀತಿ ಅಲ್ಲಮಪ್ರಭು ಮತ್ತು ಗೋರಕ್ಷನಾಥನ ಬದುಕು ಹಾಗೂ ವಾಣಿ ಮತ್ತು ಶೈಲಿಯಲ್ಲಿ ಸಾಕಷ್ಟು ಸಾಮ್ಯವಿದೆ. ಅಷ್ಟೇ ಅಲ್ಲ ಗೋರಕ್ಷ ಹಾಗೂ ಬಸವಾದಿ ಶರಣರ ವಾಣಿಯಲ್ಲೂ ಸಾಕಷ್ಟು ಸಾಮ್ಯವಿದೆ.

ಈಗ ಗೋರಕ್ಷ, ಪ್ರಭುದೇವರ ದ್ವಂದ್ವದ ಕಥೆಯನ್ನು ವಿವೇಚಿಸೋಣ, ಪ್ರಭುದೇವ, ಗೋರಕ್ಷರ ನಡುವೆ ನಡೆದ ದ್ವಂದ್ವ ಪ್ರಭುದೇವರರಗಳೆ, ಪ್ರಭುಲಿಂಗ ಲೀಲೆ ಮೊದಲಾದವುಗಳಲ್ಲಿ ಚಿತ್ರಿತವಾಗಿದೆ. ಈ ಕಥೆಗಳಿಂದ ಇಬ್ಬರೂ ಸಮಕಾಲೀನರಾಗಿರಬೇಕೆಂಬ ಭ್ರಾಂತಿಯುಂಟಾಗುತ್ತದೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ವಚನ ಸಾಹಿತ್ಯದಲ್ಲಿ ಅದರಲ್ಲೂ ಬಸವ ಅಲ್ಲಮರ ವಚನಗಳಲ್ಲಿ ಗೋರಖನಾಥನ, ನಾಥಸಿದ್ಧರ ಉಲ್ಲೇಖವಿದೆ. "ಕೊಂಕಣ ದ್ವೀಪದಲ್ಲಿ ಬಂದು ಕಪಿಹುಟ್ಟಿತು–ನವನಾಥಸಿದ್ಧರ ತೊತ್ತಳ ತುಳಿದಿತ್ತು" ಎಂದು ಪೂರ್ಣ ಭೂತಕಾಲದಲ್ಲಿ ಹೇಳಿದೆ. ಮತ್ತೊಂದು ವಚನದಲ್ಲಿ ಪ್ರಭುದೇವ 'ಪೂರ್ವ ನವನಾಥಸಿದ್ಧರ ಮತೋಕ್ತ'ವೆಂದು ಹೇಳಿ–ನಾಥ ಸಿದ್ಧರು ತನಗಿಂತ ಪೂರ್ವವರ್ತಿಗಳು ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಅದೇ ರೀತಿ ಬಸವಣ್ಣನವರೂ ಕೂಡ......'ಗೋಳಕೀನಾಥನ ಕೊರಳ ಸುತ್ತಿತ್ತು!' ಎಂದು ಪೂರ್ಣಭೂತಕಾಲವನ್ನೇ ಬಳಸಿದ್ದಾರೆ. ಇದರಿಂದ ಬಸವಣ್ಣನವರ ಕಾಲಕ್ಕಾಗಲೇ ಗೋರಖನಾಥ ಗತಕಾಲದ ವ್ಯಕ್ತಿಯಾಗಿದ್ದ, ಆತನ ಕಥೆ ಗತಕಾಲದ ಕಥೆಯಾಗಿ ಜನಜನಿತವಾಗಿತ್ತು. ಈ ದೃಷ್ಟಿಯಿಂದ ಬಸವಣ್ಣನವರ, ಪ್ರಭುದೇವರ ವಚನಗಳು ಗೋರಕ್ಷನಾಥನ ಕಾಲನಿರ್ಣಯಕ್ಕೆ ಮಹತ್ವಪೂರ್ಣ ಸಾಕ್ಷಿಗಳಾಗಿವೆ. ಇದು ಹಿಂದೀ ವಿದ್ವಾಂಸರ ಗಮನಕ್ಕೆ ಬಂದಿಲ್ಲ.

ಗೋರಕ್ಷನಾಥನವಾಣಿಯಲ್ಲಾಗಲಿ ಅಥವಾ ಬೇರೆ ಯಾವ ನಾಥಪಂಥೀ ಸಂತನವಾಣಿಯಲ್ಲಾಗಲೀ ಅಲ್ಲಮಪ್ರಭು ಇಲ್ಲದೆ ಇತರ ಶಿವಶರಣರ ಉಲ್ಲೇಖವಿಲ್ಲ.

ಈಚೆಗೆ ಬಂದ ಸೈದ್ಧಾಂತಿಕ ಗ್ರಂಥಗಳಲ್ಲಿ ಅಲ್ಲಮ ಶಿವಶರಣರ ಉಲ್ಲೇಖವಿದೆ. ಹಠಯೋಗ ಪ್ರದೀಪಿಕೆಯಲ್ಲಿ ಅಲ್ಲಮನ ಉಲ್ಲೇಖ ಈ ರೀತಿ ಬಂದಿದೆ :–

"ಶ್ರೀ ಆದಿನಾಥ ಮತ್ಸ್ಯೇಂದ್ರ ಶಾಬರಾನಂದ-ಭೈರವಾಃ ।
ಚೌರಂಗೀ ಮೀನ ಗೋರಕ್ಷ-ವಿರೂಪಾಕ್ಷ-ವಿಲೇಶಯಾಃ ।
ಮಂಥಾನೋ ಭೈರವೋ ಯೋಗಿಸಿದ್ಧಿಃ ಬುದ್ಧಿಶ್ಚಕಂಥದಿಃ,
ಕೋರಂಟಕಃ ಸುರಾನಂದಃ ಸಿದ್ಧಪಾದಶ್ಚ ಚರ್ಪಟಿಃ,
ಕಾನೇರೀಪೂಜ್ಯಪಾದಶ್ಚ, ನಿತ್ಯನಾಥೋನಿರಂಜನಃ,
ಕಪಾಲೀ ಬಿಂದುನಾಥಶ್ಚ ಕಾಕಚಂಡೀಶ್ವರಾಹ್ವಯಃ ।
ಅಲ್ಲಾಮಃ ಪ್ರಭುದೇವಶ್ಚ ಘೋಡಾಚೋಲೀ ಚಟಿಂಟಿಣಿಃ ।
ಭಾನುಕೀನಿಂದ ದೇವಶ್ಚ ಖಂಡಃ ಕಾಪಾಲಿಕಸ್ತಥಾ ।
ಇತ್ಯಾದದೋ ಮಹಾಸಿದ್ಧಾಃ ಹಠಯೋಗ ಪ್ರಭಾವತಃ
ಖಂಡಯಿತ್ವಾಕಾಲದಂಡಂ ಬ್ರಹ್ಮಾಂಡೇ ವಿಚರಂತಿತೇ ॥"

(ಹಠಯೋಗಪ್ರದೀಪಿಕಾ, ೧-೬)

ಆದರೆ ಈ ಗ್ರಂಥ 15ನೆಯ ಶತಮಾನದ್ದೆಂದು ವಿದ್ವಾಂಸರ ಅಭಿಪ್ರಾಯ ಪಟ್ಟಿದ್ದಾರೆ. ಈ ರೀತಿ ಪರವರ್ತೀ ಸಂಸ್ಕೃತ ಗ್ರಂಥಗಳಲ್ಲಿ ಪ್ರಭುದೇವನ ನಾಮೋಲ್ಲೇಖವಿದೆಯೇ ವಿನಾ ಗೋರಕ್ಷ ಸಮಕಾಲೀನ ಗ್ರಂಥಗಳಲಿಲ್ಲ. ಗೋರಕ್ಷ ನಾಥ ತನ್ನ ಸಮಕಾಲೀನ ಧರ್ಮಪಂಥಗಳನ್ನು ಖಂಡಿಸುತ್ತ ಕಾಳಾಂಮುಖರೇ ಮೊದಲಾದವರನ್ನು ಉಲ್ಲೇಖಿಸುತ್ತಾನೆ.

ಯೇಕ್‌ದಂಡೀ ದುದಂಡೀತ್ರಿಯದಂಡೀ ಭಗವಾನ್ ಹೂವಾ ।
ವಿಷ್ಣು ಕೌತಿನ ವಾರ್‌ನವಾಯೌ ತೀರಥಾಂ ಭ್ರಮಿ ಭ್ರಮಿಮೂವಾ ।
ಯೇಕ ಕಲಾಮುಹಾಂ ಜಟಾಧಾರೀ, ವ್ಯಂಗ ಉಪಾನಿಕ ಹೂವಾ ।
ಮಹಾದೇವ ಕೌತಿನಪಾರ ನಪಾಯೌರಾಕ್ಷರೌಲಿರೌಲಿಮೂವಾ ॥ 43

ದಂಡಿ, ದ್ವಿದಂಡಿ, ತ್ರಿದಂಡಿ (ವೈಷ್ಣವ ಪಂಗಡಿಗಳು) ಎಂದು ಕೆಲವರು ಆಗಿ ಹೋದರು, ಆದರೆ ಅವರು ಯಾರೂ ವಿಷ್ಣುವನ್ನು ಪಡೆಯಲಿಲ್ಲ, ತೀರ್ಥಗಳಲ್ಲಿ ತೊಳಲಿ ತೊಳಲಿ ಸತ್ತರು. ಒಬ್ಬರು ಕಾಳಾಮುಖ, ಜಟಾಧಾರಿ, ಲಿಂಗೋಪಾಸಕ. ಆದರೆ ಅವರೂ ಶಿವನನ್ನು ಕಾಣಲಿಲ್ಲ, ಅವರೂ ಅಲೆದು ಸತ್ತರು.

ಇದೇ ರೀತಿ ಗೋರಖನಾಥ ಜೈನರನ್ನು ಉಲ್ಲೇಖಿಸಿದ್ದಾನೆ. ಆದರೆ ವೀರ ಶೈವರನ್ನು ಮಾತ್ರ ಉಲ್ಲೇಖಿಸಿಲ್ಲ. 'ಲಿಂಗೋಪಾಸಕ' ಎಂಬ ಶಬ್ದಕ್ಕೆ ವೀರಶೈವ ಎಂದು ಅರ್ಥ ಹೇಳೋಣವೆಂದರೆ ಕಾಳಾಮುಖ ಎಂದು ಸ್ಪಷ್ಟವಾಗಿ ಹೇಳಿದೆ ಮತ್ತು ಕಾಳಾಮುಖರು ಲಿಂಗಧಾರಿಗಳಾಗಿದ್ದರೆಂಬುದು ಸ್ಪಷ್ಟ. ಗೋರಕ್ಷನಾಥ ಕರ್ಣಾಟಕ ದಲ್ಲಿ ಜನಿಸಿರಬೇಕೆಂಬ ಊಹೆಯೂ ಇದೆ. "ಯೋಗಿ ಸಂಪ್ರದಾಯ ವಿಷ್ಕೃತಿ' ಎಂಬ ಗ್ರಂಥದಲ್ಲಿ ಗೋರಕ್ಷನಾಥ ಗೋದಾವರೀ ತೀರದ ಚಂದ್ರಗಿರಿಯಲ್ಲಿ

ಜನಿಸಿದನೆಂದು ಹೇಳಿದೆ. ನೇಪಾಳ ದೇಶದ ದರ್ಶನ ಲೈಬ್ರೆರಿಯಲ್ಲಿ 'ಗೋರಕ್ಷ ಸಹಸ್ರನಾಮಸ್ತೋತ್ರ' ಎಂಬ ಗ್ರಂಥವೊಂದಿದೆ. ಅದರ ಶ್ಲೋಕವೊಂದಂ ಹೀಗಿದೆ :—

"ಅಸ್ತಿಯಾಮ್ಯಾಂ ದಿಶಿಕಶ್ಚಿದ್ದೇಶಃ ಬಡವ ಸಂಜ್ಞಕಃ ।
ತತ್ರಾಜನಿ ಮಹಾ ಬುದ್ಧಿರ್ಮಹಾ ಮಂತ್ರ ಪ್ರಸಾದತಃ ॥

ಅರ್ಥಾತ್ ದಕ್ಷಿಣ ದಿಶೆಯಲ್ಲಿ 'ಬಡವ' ಎಂಬ ದೇಶವೊಂದಿದೆ. ಅಲ್ಲಿ ಮಂತ್ರ ಪ್ರಸಾದದಿಂದ ಮಹಾಬುದ್ಧಿ ಶಾಲಿಯಾದ ಗೋರಕ್ಷನಾಥ ಜನಿಸಿದ. ಈ 'ಬಡವ' ಶಬ್ದ ಕನ್ನಡ 'ಬಡಗ' ಶಬ್ದದ ರೂಪಾಂತರ. ಎಂದರೆ ಗೋರಕ್ಷ ನಾಥನ ಜನನ ಕಾಲದಲ್ಲಿ ಗೋದಾವರೀ ತೀರವೂ ಬಡಗನಾಡಾಗಿದ್ದಿರಬೇಕು. (ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೂ ಹಬ್ಬಿತ್ತು ಎಂಬ ಕವಿರಾಜ ಮಾರ್ಗೋಕ್ತಿಯನ್ನು ಇಲ್ಲಿ ಸ್ಮರಿಸಬಹುದು). (ಅಷ್ಟೇ ಅಲ್ಲ ಗೋರಕ್ಷನಾಥ ಮಂಗಳೂರಿಗೆ ಬಂದು ಅಲ್ಲಿಂದ ಕದರಿಕಾ ಎಂಬ ಬೌದ್ಧ ವಿಹಾರವೊಂದನ್ನು ಗೋರಕ್ಷ ಮಠವನ್ನಾಗಿ ಪರಿವರ್ತಿಸಿದನೆಂದು ಶ್ರೀ ಗೋವಿಂದ ಪೈಯವರು ತಮ್ಮ ಲೇಖನ ವೊಂದರಲ್ಲಿ ಸಾಧಾರವಾಗಿ ಪ್ರತಿಪಾದಿಸಿದ್ದಾರೆ. ಕದರೀ ಮಠ ಈಗಲೂ ಅಲ್ಲಿ ಇದೆ, ಈ ರೀತಿ ಗೋರಕ್ಷನಾಥ ಕನ್ನಡನಾಡಿನಲ್ಲಿ ಜನಿಸಿರಬೇಕು. ದೇಸಾಯಿ ಪಾಂಡು ರಂಗರಾಯರು ಮತ್ತು ಫ. ಗು. ಹಳಕಟ್ಟಿಯವರು ಗೋರಕ್ಷನಾಥ ಕರ್ನಾಟಕದವನು ಎಂದು ಅಭಿಪ್ರಾಯಪಟ್ಟಿದ್ದಾರೆ.

ಇವೆಲ್ಲ ನಿಜವಾದಲ್ಲಿ ಗೋರಖನಾಥ ವೀರಶೈವವನ್ನು ಉಲ್ಲೇಖಿಸದಿರುವುದು. ಇನ್ನೂ ಹೆಚ್ಚಿನ ಆಶ್ಚರ್ಯದ ಸಂಗತಿಯಾಗುತ್ತದೆ. ಗೋರಕ್ಷನಕಾಲದಲ್ಲಿ ವೀರ ಶೈವರು ಇದ್ದರೆ ಇಲ್ಲವೆ ಎಂಬ ಸಮಸ್ಯೆಯೂ ಎದುರಾಗುತ್ತದೆ. ಆದರೆ ಗೋರಕ್ಷನ ಸಮಕಾಲೀನನಾದ ಚರ್ಪಟಿ 'ಜಂಗಮ'ರನ್ನು ಉಲ್ಲೇಖಿಸಿದ್ದಾನೆ.

ಈ ಎಲ್ಲ ಕಾರಣಗಳಿಂದ ಗೋರಕ್ಷನಾಥ ಬಸವಾದಿ ಪ್ರಮಥರು ಆಗಿಹೋದ ಹನ್ನೆರಡನೆಯ ಶತಮಾನಕ್ಕೆ ಪೂರ್ವದವನು ಎಂದು ಹೇಳಬಹುದು. ಗೋರಕ್ಷನ ಕಾಲದ ಬಗೆಗೆ ಸಾಕಷ್ಟು ಚರ್ಚೆ ನಡೆದಿದೆ. ಅಭಿನವಗುಪ್ತ ತನ್ನ 'ತಂತ್ರಾಲೋಕ' ದಲ್ಲಿ 'ಮತ್ಸ್ಯೇಂದ್ರವಿಭು' ಎಂದು ಮತ್ಸ್ಯೇಂದ್ರನಾಥನನ್ನು ಸ್ತುತಿಸಿದ್ದಾನೆ. ಆದ್ದರಿಂದ ಮತ್ಸ್ಯೇದ್ರನಾಥನ ಶಿಷ್ಯನಾದ ಗೋರಕ್ಷಕೂಡ ಅಭಿನವಗುಪ್ತನ ಸಮಕಾಲೀನ ನಾಗಿರಬೇಕು. ಆದರೆ ಆ ಶ್ಲೋಕದ ಪ್ರಾಮಾಣಿಕತೆಯನ್ನು ಶಂಕಿಸಿ ಗೋರಕ್ಷನಾಥ ಹನ್ನೊಂದನೆಯ ಶತಮಾನದಲ್ಲಿದ್ದಿರಬೇಕು ಎಂದು ಬ್ರಿಗ್ಸ್, ಡಾ॥ ಹಜಾರೀಪ್ರಸಾದ್ ದ್ವಿವೇದಿ ಮತ್ತು ಗೋವಿಂದ ಪೈ ಪ್ರತಿಪಾದಿಸಿದ್ದಾರೆ. ಪಂಡಿತ ರಾಮಚಂದ್ರಶುಕ್ಲರು ಗೋರಖನಾಥನಕಾಲ ಹದಿಮೂರನೆಯ ಶತಮಾನವೆಂದು ತರ್ಕಿಸಿದುದುಂಟು.

ಪ್ರಭುದೇವ, ಬಸವಣ್ಣನವರ ಉಲ್ಲೇಖದಿಂದ ಶುಕ್ಲರವಾದ ಬಿದ್ದು ಹೋಗುತ್ತದೆ. ರೇವಣಸಿದ್ಧನಿಗೂ, ಗೋರಕ್ಷನಾಥನಿಗೂ ದ್ವಂದ್ವನಡೆಯಿತೆಂದು ಹರಿಹರ ತನ್ನ ರೇವಣಸಿದ್ಧೇಶ್ವರ ರಗಳೆಯಲ್ಲಿ ಹೇಳುತ್ತಾನೆ. ಗೋರಕ್ಷನಕಾಲ ಹನ್ನೊಂದ ನೆಯ ಶತಮಾನವೆನ್ನುವುದನ್ನು ಒಪ್ಪುವುದಾದರೆ ಇದು ನಿಜವೆನ್ನಬೇಕಾಗುತ್ತದೆ.

ಹಾಗಾದರೆ ಪ್ರಭುದೇವನೊಡನೆ ದ್ವಂದ್ವ ಮಾಡಿದ ಗೋರಕ್ಷ ಯಾರು ಎಂಬ ಪ್ರಶ್ನೆ ಏಳುವುದು ಸಹಜ. ಈತ ನಾಥಪಂಥದ ಅನುಯಾಯಿಯಾದ ಪರವರ್ತೀ ಸಿದ್ಧನಿರಬೇಕು. ಶಂಕರಾಚಾರ್ಯರ ಪೀಠದಲ್ಲಿ ಕೂಡುವವರೆಲ್ಲ ಶಂಕರಾಚಾರ್ಯ ರೆಂದು ಕರೆಸಿಕೊಳ್ಳುವಂತೆ ಗೋರಕ್ಷ ಮತಾನುಯಾಯಿ ಗೋರಕ್ಷನೆನ್ನಿಸಿಕೊಂಡರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಇನ್ನು ಈ ಇಬ್ಬರು ಸಂತರ ವಾಣಿಯಲ್ಲಿ ಕಂಡು ಬರುವ ಸಾಮ್ಯವಿಶೇಷಕ್ಕೆ ಕಾರಣವೇನು ಎಂದರೆ ಮಾರ್ಕಂಡೇಯ ಪ್ರವರ್ತಿತ ಹಠಯೋಗ ಇಬ್ಬರಿಗೂ ಪೂರ್ವಭಿತ್ತಿಯಾಗಿದೆ. ಬೌದ್ಧ ಧರ್ಮದ ಹಿನ್ನೆಲೆ ಇಬ್ಬರಿಗೂ ಸಮಾನವಾಗಿದೆ. ಮಧ್ಯಯುಗದಲ್ಲಿ ಯೋಗವಾಹಿನಿ ಗುಪ್ತಗಾಮಿನಿ ಯಾಗಿ ಭಾರತದ ಆಮೂಲೆಯಿಂದ ಈಮೂಲೆಯವರಿಗೂ ಹರಿಯುತ್ತಿತ್ತು. ಗೋರಕ್ಷನಾಥ ಅದಕ್ಕೊಂದು ವಿಶಿಷ್ಟಸ್ವರೂಪ ಕೊಟ್ಟು ಅದನ್ನು ಬೆಳೆಸಿದ. ಈ ಎಲ್ಲಾ ಸಾಮಾನ್ಯ ಮೂಲಗಳಿಂದಾಗಿ ಇಬ್ಬರ ವಾಣಿಯಲ್ಲೂ ಸಾಮ್ಯ ಕಂಡು ಬರದಿರಬಹುದು. ಎಲ್ಲಕ್ಕೂ ಮಿಗಿಲಾಗಿ ವಿಭಿನ್ನಧರ್ಮ ಪಂಥಗಳ ಜನರನಡುವೆ ಸತ್ಸಂಗ, ದ್ವಂದ್ವ ಆಕಾಲದಲ್ಲಿ ಸರ್ವಸಾಮಾನ್ಯ. ಹೀಗಾಗಿ ಪರಸ್ಪರ ಕೊಳ್ಕೊಡೆ ನಡೆದಿರುವುದೂ ಸಾಧ್ಯ. ಹಿಂದೆ ಹೇಳಿದಂತೆ 'ಗೋರಖಬಾನಿ' ಅಷ್ಟೇನೂ ಹಳೆಯ ದಲ್ಲ. ಆದರ ಇಂದಿನ ರೂಪದಲ್ಲಿ ಪರವರ್ತೀ ಸಂತರ ಕೈವಾಡವಿರುವ ಸಂಭವವಿದೆ. ಈ ವಾಣಿಯಮೇಲೆ ವೀರಶೈವ ಸಂತರ ಪ್ರಭಾವ ಅಸಂಭವವೇನೂ ಅಲ್ಲ. ಒಟ್ಟಿನಲ್ಲಿ ಗೋರಕ್ಷನಾಥ ಪ್ರಭುದೇವನಿಗಿಂತಲೂ ಪ್ರಾಚೀನ. ಆದರೆ ಆತನದೆಂದು ಹೇಳಲಾಗುವ 'ಗೋರಖಬಾನಿ' ಆತನಿಗಿಂತ ಏನು ಪ್ರಭುದೇವನಿಗಿಂತಲೂ ಅರ್ವಾಚೀನ, ಇದು ವಿಚಿತ್ರವೆನಿಸಬಹುದು ಆದರೂ ಸತ್ಯ.

ಅಡಿ ಟಿಪ್ಪಣಿಗಳು

1 ಬಸವಣ್ಣನವರ ಷಟ್‌ಸ್ಥಲ ವಚನಗಳು, ಸಂ. ಶಿ. ಶಿ. ಬಸವನಾಳ. ವ. ಸಂ. 930
2 ಅಲ್ಲಮನ ವಚನ ಚಂದ್ರಿಕೆ, ಸಂ. ಎಲ್. ಬಸವರಾಜು, ವ. ಸಂ, 371
3 ಅಲ್ಲಮನ ವಚನ ಚಂದ್ರಿಕೆ, ವ. 724
4 ಸಿ. ಸಿ. ಪದ್ಧತಿ (ಷಷ್ಠೋಪದೇಶ)
5 ಅ.ವ.ಚಂ. 246
6 ಗೋರಖ್‌ಬಾನೀ ಪು. 94
7 ಅ.ವ.ಚಂ. 286

8 ಗೋ.ಬಾ. 207
9 ಅ.ವ.ಚಂ. 247
10 ಗೋ.ಬಾ. 67
11 ಗೋ.ಬಾ. (? ಸಂ.)
12 ಅ.ವ.ಚಂ. 640
13 ಗೋ.ಬಾ. ಪದ 39-43
14 ಶೂನ್ಯತತ್ವವಿಕಾಸ ಪು. 27
15 ಅ.ವ ಚಂ. ೨9
16 ಅ.ವ.ಚಂ. 364
17 ಗೋ.ಬಾ. ದೋಹಾ 23
18 ಅ.ವ.ಚಂ. 210
19 ಅದೇ 212
20 ಅ.ವ ಚಂ. 351
21 ಗೋ.ಬಾ. ಪು. 131
22 ಅ.ವ.ಚಂ. 478
23 ಗೋ.ಬಾ. 164
24 ಅ.ವ.ಚಂ. 861
25 ಗೋ.ಬಾ. 209
26 ಗೋ.ಬಾ. 71
27 ಅ.ವ.ಚಂ. 15
28 ಗೋ.ಬಾ. 200
29 ಅ.ವ.ಚಂ. 10೮4
30 ಅ.ವ.ಚಂ. 72
31 ಗೋ.ಬಾ. ಪು. 230
32 ಅ.ವ.ಚಂ. 120
33 ಗೋ.ಬಾ. 39-40
34 ಅ.ವ.ಚಂ. 188
35 ಗೋ.ಬಾ. ಪ. 9
36 ಅ.ವ.ಚಂ. 110
37 ಗೋ.ಬಾ. ಪದ 9
38 ಅ.ವ.ಚಂ. 142
39 ಅ.ವ.ಚಂ. 761
40 ಗೋ.ಬಾ. ಪು. 246

"ಬಾಲವದ್ದೆ"—ಅರ್ಥವಿತರಣೆ

'ಬಾಲವದ್ದೆ' ಪದ ಮೊದಲಿಗೆ ನಮ್ಮ ಗಮನ ಸೆಳೆಯುವುದು ವಡ್ಡಾರಾಧನೆಯ, ಸುಕೌಶಳಸ್ವಾಮಿಯ ಕಥೆಯಲ್ಲಿ. (ಪುಟ 45 ; ಸಾಲು 10). ಪೂಜ್ಯ ದಿ॥ ಡಿ. ಎಲ್. ಎನ್. ರವರು 'ಬಾಲವದ್ದೆ' ಪದಕ್ಕೆ 'ಬಾಣಂತಿ' (?) ಎಂದೂ ಇದೇ ಗ್ರಂಥದ 113 ನೇ ಪುಟದಲ್ಲಿ ಮತ್ತೊಂದು ಕಥೆಯಲ್ಲಿ ಪ್ರಯೋಗವಾಗಿರುವ ಇದೇ ಪದಕ್ಕೆ 'ಮಂಗಳಕರನಾದ ಬಾಲಕ' (?) ಎಂದೂ ಅರ್ಥೈಸಿ, ಪ್ರಶ್ನಾರ್ಥಕ ಚಿಹ್ನೆಯನಿಟ್ಟು ತಮ್ಮ ಸಂದೇಹವನ್ನು ವ್ಯಕ್ತಪಡಿಸಿರುತ್ತಾರೆ. ಮಲ್ಲಿನಾಥ ಪುರಾಣದ ಆಶ್ವಾಸ 13, ಪದ್ಯ 8 ರಲ್ಲಿ ಪ್ರಯೋಗವಾಗಿರುವ 'ಬಾಳವಂದ' ಪದಕ್ಕೆ ಅದರ ಸಂಗ್ರಹಕಾರರಾದ ಎಂ. ಎಂ. ಕಲಬುರ್ಗಿಯವರು 'ಬಾಲಕಾಭರಣ'(?) ಎಂದು ಅರ್ಥೈಸಿ ಸಂದೇಹಾಸ್ಪದ ಪ್ರಶ್ನೆ ಇಟ್ಟಿದ್ದಾರೆ. (ಮಲ್ಲಿ. ಸಂಗ್ರಹ, 267 ನೇ ಪದ್ಯ) ವಿಕ್ರಮಾರ್ಜುನ ವಿಜಯದ ಆಶ್ವಾಸ 2, ಪದ್ಯ 4 ರಲ್ಲಿ ಬರುವ 'ಬಾಳವಣ್ಣ' ಎಂಬ ಪದಕ್ಕೆ ಪೂಜ್ಯ ದಿ॥ ಡಿ. ಎಲ್. ಎನ್. ರವರು 'ಕತ್ತಿಯಬಣ್ಣ' ಎಂದರೆ 'ನೀಲಿಬಣ್ಣ' ಎಂಬ ಅರ್ಥವನ್ನು ಸಮರ್ಥಿಸುತ್ತಾರೆ.

ಪ್ರಯೋಗಗಳು ಇವು :—

1) ಸಿದ್ಧಾರ್ಥ ರಿಷಿಯರ ಮೇಗೆ ಕ್ರೋಧಮಂ ಭಾವಿಸಿ 'ಬಾಲವದ್ದೆ'ಯಂ ಕೂಸಂ.
   ಸಿಸುವನ್. ಅವ್ಯಕ್ತನಂ ವಿಸುಟ್ಟು........(ವಡ್ಡಾ ಪುಟ 45 : ಸಾಲು 10)

2) ಮಗನೆ ನೀ ನಿನ್ನುಂ ಕೂಸನ್ನೆ ಬಾಲವದ್ದೆಯನ್ನಗಂ ಬಳೆದರಸುಗೆಯ್ದಿಪ್ಪ
   ವಿಷಿಯ ಕಾಮ........(ವಡ್ಡಾ. ಪುಟ 113 : ಸಾಲು 6).

3) ಚರಮತನು ಸಹಜದಿಂ ಸುಂ
   ದರಮುದನಿಂದ್ರಾಣಿ ಬಾಳವಂದಮುನಳವ
   ಟ್ಟಿರೆ ತುಡಿಸೆ. ನೋಡಿದಂ ಸಾ
   ಸಿರಕಣ್ಗಳುಮೆಯ್ದೆ ತಣಿವಿನಂ ದಿವಿಜೇಂದ್ರಂ.
   (ಮಲ್ಲಿ. ಆ 13 : ಪದ್ಯ 8 ಸಂಗ್ರಹ : 267ನೆ ಪದ್ಯ)

ಇನ್ನು ಕಿಟ್ಟೆಲ್ ನಿಘಂಟಿನ ಅರ್ಥ ಇದು : (?) ಈ ಚಿಹ್ನೆ ಜೊತೆಗೆ maturity ಎಂದಿದ್ದಾರೆ. ಪಂಪ ಭಾರತ ಕಥಾ ಲೋಕದಲ್ಲಿ ಶ್ರೀಯುತ ಆರ್. ಎಲ್. ಅನಂತರಾಮಯ್ಯ ಅವರೂ ಪೂಜ್ಯ ಡಿ. ಎಲ್. ಎನ್. ರವರ ಅರ್ಥವನ್ನೇ ಅನುಸರಿಸಿದ್ದಾರೆ.

ಈಗ, ಪದ ಪ್ರಯೋಗವಾಗಿರುವ ಸಂದರ್ಭಗಳ ಹಿನ್ನಲೆಯನ್ನು ಪರಿಶೀಲಿಸೋಣ. ಮೊದಲಿಗೆ, ವಡ್ಡಾರಾಧನೆಯ ಪ್ರಯೋಗ: ಹಿನ್ನೆಲೆ "ಜಯಾವತಿ ಬೆಸಲೆಯಾದ ಸುದ್ದಿ ತಿಳಿದ ರಾಜ ಶ್ರೇಷ್ಠಿ ಸಿದ್ಧಾರ್ಥ ನೆಲೆ ಮನೆಗೆ ಪ್ರವೇಶಿಸಿ 'ಸೋಂಕಿಲ ಮೇಗಿಟ್ಟು ಆಡಿಸುತ್ತಿರ್ಪ ಕೂಸಂ......ಕಂಡು ಆಶೀರ್ವಾದಮಾಡಿ' 'ಸೊಂಕಿಲೊಳಿರ್ದ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ' ತಪಸ್ಸಿಗೆ ಹೋಗುತ್ತಾನೆ. ಮುಂದೆ ಹಲವು ಕಾಲ ಕಳೆದ ಮೇಲೆ ತನ್ನ ಪತಿಯು ನಡವಳಿಕೆಯನ್ನು ನೆನೆದು...... ಕ್ರೋಧಮಂ ಭಾವಿಸಿ 'ಬಾಲವದ್ದೆಯಂ, ಕೂಸಂ, ಸಿಸುವನ್, ಅವ್ಯಕ್ತನಂ, ವಿಸುಟ್ಟು ಎಂತು ತಪಂಬಟ್ಟೆ, ಪಾಪಕರ್ಮ, ದಯೆಯಿಲ್ಲದೊಂ, ನಿಷ್ಕರುಣಿ...... ಎಂದು ಬಯ್ದಳ್. —ಇಲ್ಲಿ ಪ್ರಯೋಗವಾಗಿರುವ ಮೊದಲ ನಾಲ್ಕು ಪದಗಳೂ ಒಂದೇ ಅರ್ಥಕ್ಕೆ ಪೋಷಕ ನೀಡುತ್ತವೆ ಎನ್ನಿಸದೇ ಇಲ್ಲ. ಸಿಟ್ಟಿನಿಂದ ಉನ್ಮತ್ತಳಾದ ಜಯಾವತಿಯ ನೋವು ಎಂಥಹದು ಎಂಬುದು ಈ ಒತ್ತಿ ಒತ್ತಿ ಹೇಳುವ ಪದಗಳಲ್ಲಿ ವ್ಯಕ್ತವಾಗುತ್ತದೆ. ಮುಂದೆ ಬರುವ ಪಾಪಕರ್ಮ, ದಯೆಯಿಲ್ಲದೊಂ, ನಿಷ್ಕರುಣಿ—ಎಂದು ಪತಿಯನ್ನು ನಿಂದಿಸುವ ಪದ ಪ್ರಯೋಗದಲ್ಲೂ ಇದೇ ಒತ್ತು, ಹಾಗೂ ಅರ್ಥ ವ್ಯಕ್ತವಾಗುತ್ತದೆ. ಎಂದ ಮೇಲೆ, ಸಿಸು, ಕೂಸು, ಅವ್ಯಕ್ತ, ಒಂದೇ ಅರ್ಥದ ಒತ್ತುಳ್ಳ ಪದಗಳಾಗಿ 'ಬಾಲವದ್ದೆ' ಎಂಬ ಪದವೂ ಅದೇ ಅರ್ಥವನ್ನೊಳಗೊಂಡಿರಬಹುದು ಎನ್ನಿಸುತ್ತದೆ. ಈ ಪದಕ್ಕೆ 'ಬಾಣಂತಿ' ಎಂಬ ಅರ್ಥವನ್ನು ಕೊಡುವುದಾದರೆ, 'ಸಿಸು', 'ಕೂಸು', 'ಅವ್ಯಕ್ತ'—ಈ ಪದಗಳೂ ಬೇರೆ ಬೇರೆ ಅರ್ಥದಲ್ಲಿ ಉಳಿಯ ಬೇಕಾಗುತ್ತದೆ. ಹೀಗೆ ಹೇಳಲು ಇದೇ ಗ್ರಂಥದ 113ನೇ ಪುಟದ ಎರಡನೇ ಪ್ರಯೋಗಾರ್ಥವನ್ನು ಪರಿಶೀಲಿಸಬಹುದು.

ವೃಷಭ ಸೇನ ಭಟ್ಟಾರಕರ ಕಥೆಯಲ್ಲಿ ವೃಷಭ ಸೇನನು ಭಟ್ಟಾರನಾಗುವ ಸನ್ನಿವೇಶ. ಆತನ ತಂದೆ ಹೇಳುವ ಮಾತಿದು.

"ಮಗನೆ, ನೀನಿನ್ನುಂ ಕೂಸನ್ನೈ, ಬಾಲವದ್ದೆಯನ್ನಗಂ ಬಳೆದು ಅರಸುಗೆಯ್ದು......ಅನುಭವಿಸುತ್ತುಂ, ಬಳಿಕ್ಕೆ......

ಇಲ್ಲಿ 'ಕೂಸನ್ನೈ' ಎಂಬ ಪದ ಗಮನಾರ್ಹ. ಈ ಸನ್ನಿವೇಶಕ್ಕೆ ವೃಷಭ ಸೇನನಿಗೆ ಎಂಟು ವರುಷ ಪ್ರಾಯ. ಆದರೆ ಮೇಲೆ ಹೇಳಿದ ಹಿಂದಿನ ಕಥೆಯಲ್ಲಿಯೂ (ಪುಟ. 47) 'ನೀನಿನ್ನುಂ ಕೂಸಯ್. ಕಾಮ ಭೋಗಂಗಳನನುಭವಿಸುವ ದಿನಂಗಳ್......ಪ್ರಾಯಂ ಪೋದಿಂಬಳಿಕ್ಕೆ......ಎಂಬ ಮಾತು ಬರುತ್ತದೆ. ಅಲ್ಲಿ ಸುಕೌಶಲನಿಗೆ ಹದಿನಾರು ವರುಷ ಪ್ರಾಯವಾಗಿರುತ್ತದೆ. ಒಂದೆಡೆ ಎಂಟು ವರುಷ ವಯಸ್ಸಿನ ಕೂಸು ; ಮತ್ತೊಂದು ಕಡೆ ಹದಿನಾರು ವರುಷದ ಮಗುವನ್ನೂ ಕೂಸು

ಎಂದು ಕರೆದ ಮೇಲೆ, ಹುಟ್ಟಿನಿಂದ ಹದಿನಾರು ವರುಷಗಳ ಪ್ರಾಯ ಬರುವವರೆಗೆ 'ಕೂಸು', 'ಕೂಸುತನ', 'ಬಾಲ್ಯ', 'ಬಾಲರೂಪ', ಎಂಬ ಅರ್ಥ ನಿರ್ಧಾರಿತ ವಾಗುತ್ತದೆ ಎಂದು ಹೇಳಬಹುದು. ಈಗ ಎರಡನೆ ಪ್ರಯೋಗ (113 ಪುಟ) ವನ್ನು ನೋಡಿದರೆ, ಬಾಲ್ಯ ಪೂರ್ಣ ವಾಗುವವರೆಗೂ ಬಳೆದು, ನಂತರ ಅನುಭವಿಸ ಬಹುದಾದ ಸುಖಗಳನ್ನೆಲ್ಲಾ ಪಡೆದು ತಪಂ ಪಡಬಹುದು ಎಂದು ಹೇಳ ಬೇಕಾಗುತ್ತದೆ.

ಈ ಬಾಲ್ಯ, ಬಾಲಕತನ, ಬಾಲರೂಪ–ಈ ಅರ್ಥದ ಸ್ಪಷ್ಟತೆಯನ್ನು ಮಲ್ಲಿನಾಥಪುರಾಣದ ಪ್ರಯೋಗದಲ್ಲಿ ಕಾಣಬಹುದು.

> **ಅವತಂಸೋತ್ತಂಸ, ಕಂಠಾಭರಣ, ಕಟಕ, ಮುದ್ರಾಮಣಿ, ಕ್ಷುದ್ರಘಂಟಾ**
> **ನಿವಹಂಗಳ್, ನೂಪುರಂಗಳ್, ಚರಣವಳಯವೆಂಬೀ, ವಿಭೂಷಾಳಿ, ಸುತ್ರಾಮ**
> **ವಧೂಟೀಸೂತ್ರಿತಂ ಕಣ್ಗೊಳಿಸೆ, ಕೊನರ್ಗಳಿಂ, ಕೋರಕ ಶ್ರೇಣಿಯಿಂ,**
> **ಪಲ್ಲವದಿಂ, ಚೆಲ್ವಾದಕಲ್ಪದ್ರುಮದಗೆಯವೋಲಾ, ಬಾಲಕಂ ಲೀಲೆವೆತ್ತಂ,**
> **(ಮಲ್ಲಿ. 13 ಆ. ಪದ್ಯ 7)**

ಆಗತಾನೆ ಜನಿಸಿರುವ ಜಿನಶಿಸು, ಅದಕ್ಕೀಗ ಜನ್ಮಾಭಿಷೇಕ ದೇವತೆಗಳಿಂದ. ಇಲ್ಲಿ ಅಭಿಷೇಕಾನಂತರ 'ಸುತ್ರಾಮ ವಧೂಟಿ' ಜಿನಸಿಸುವಿಗೆ ತೊಡಿಸಿದ ಸರ್ವ ಆಭರಣ ಗಳ ಸೌಂದರ್ಯದಿಂದ ಕಲ್ಪದ್ರುಮದಂತೆ 'ಬಾಲಕ ಲೀಲೆವೆತ್ತಂ'

ಇಲ್ಲಿ 'ಬಾಲಕ' ಎಂಬ ಪದ ಗಮನಾರ್ಹ. ಆದರೂ ನಮಗೆ ಬೇಕಾದದು ಮುಂದಿನ ಪದ್ಯ. ಆರಂಭದಲ್ಲಿ ಕೊಟ್ಟ ಉದಾ॥ 3 ಈ ಪದ್ಯವನ್ನು ಹೀಗೆ ವಿಭಾಗ ಮಾಡಬಹುದು. "ಚರಮತನು ಸಹಜದಿಂ ಸುಂದರಮ್ ।ಅದನ್। ಇಂದ್ರಾಣಿ। ಬಾಳವಂದಮನ್ ಅಳವಟ್ಟಿರೆ ತುಡಿಸೆ।ದಿವಿಜೇಂದ್ರಂ। ಸಾಸಿರ ಕಣ್ಗಳುಮ್। ಎಯ್ದೆ ತಣಿವಿನಂ। ನೋಡಿದಂ॥. ಅರ್ಥ ಸ್ಪಷ್ಟವಾದೀತು "ಬಾಲರೂಪಕ್ಕೆ ಅಳವಡುವಂತೆ ಇಂದ್ರಾಣಿ ಆಭರಣಗಳನ್ನ ತೊಡಿಸಲು"—ಎಂದು ಹೇಳಲು ಸಾಧ್ಯ. ಹೀಗೆಂದ ಮೇಲೆ ಶ್ರೀಯುತ ಎಂ. ಎಂ. ಕಲಬುರ್ಗಿಯವರ 'ಬಾಲಕಾಭರಣ(?) ಎನ್ನುವ ಅರ್ಥದೂರವೇ ನಿಲ್ಲುತ್ತದೆ.

ಮತ್ತೊಂದು ಪದ್ಯ : ಸೂಕ್ತಿಸುಧಾರ್ಣವದಿಂದ,

> **ಅಂಲಿಲೆಯತ್ತಿಕಾಯ ಪುಲಿಯುಗುರ್ ನಿಗಳಂಕಿರುಗೆಜ್ಜೆ ಬಂದಿಕಂ**
> **ಗೊಳಿಸುವ ರಕ್ಕೆ ಸಂಕೊಲೆ ಫಣಿಲ್ಗರೆದೊಪ್ಪುವ ಗಂಟೆ ನೇವುರಂ**
> **ಪೊಳೆವಪಳವಟ್ಟು ತೋರ್ಪ ಕುರಿಯುಣ್ಣೆಯಪೆಂಡೆರವೆಂಬಿವೊಂದಿ ಗೊಂ**
> **ದಳಿಸಿರೆ ಬಾಲವಂದದ ತೆರಳ್ಕೆಯಿನಚ್ಯುತನಾದಮೊಪ್ಪಿದಂ**
> **(ಕುಮಾರೋದಯವರ್ಣನಂ —ಪದ್ಯ 75)**

ಬಾಲವಂದವತೆರಳ್ಕೆ—ಬಾಲ್ಯದ ಲೀಲೆ, ಚಲನೆ, ನಡಿಗೆಯಿಂದ ಅಚ್ಯುತನು ಒಪ್ಪಿದನು, ಎಂದು ಹೇಳಬಹುದು. ಸಾಮಾನ್ಯವಾಗಿ ಬಾಲ್ಯದ ಉಡಿಗೆ ತೊಡಿಗೆ, ಆಭರಣಗಳನ್ನು ಧರಿಸುವ ಸಂದರ್ಭಗಳಲ್ಲೇ ಪ್ರಯೋಗವಾಗುತ್ತಿದ್ದ ಈ ಪದದ ಅರ್ಥಕ್ರಮೇಣ ಬದಲಾವಣೆ ಪಡೆದಿರಬಹುದು. ಬಳಸುವ ಪದವಮರೆಯಾಗಿ ಅರ್ಥ ಮಾತ್ರ ಉಳಿಯುವುದೂ ಸಾಮಾನ್ಯವೇ. ಈಗ ನೋಡಿ.

ವಿಕ್ರಮ ಮೂರ್ತಿಗೆ ತಾರಾ
ಚಕ್ರಂ ಕಟಿ ಸೂತ್ರಮಾಗೆ ತತ್ಕಟಿ ಸೂತ್ರಂ
ಚಕ್ರಿಗೆ ಬಾಲ್ಯಕ್ಕನುರೂ
ಪಕ್ರಮ ವಾಯ್ತೆನಿಸಿ ಮುತ್ತಿನುಡೆವಣಿಯೆಸೆಗುಂ

(ಜಗನ್ನಾಥವಿಜಯ, 3–47)

ಹೀಗೆ, ಬಾಲ್ಯ, ಬಾಲಕತನ, ಬಾಲರೂಪ, ಮುಂತಾದ ಅರ್ಥ ಬಳಕೆಯುಳ್ಳ ಬಾಲವದ್ದೆ. ಬಾಳವಂದ, ಬಾಲವಂದ ರೂಪ ಮರೆಯಾಗುತ್ತ 'ಬಾಲದೊಡಿಗೆ, ಬಾಲತುಡಿಗೆ' ಪದ ಪ್ರಯೋಗ ಬಂದಿರಬಹುದು.

ಇಂತು ಸಕಲ ಸೌಂದರ್ಯಮಂ ಬೀರುವ ಬಾಲದುಡಿಗೆ ವೆರಸು ಲೀಲೆ ಮಿಕ್ಕುಂ
(ಗಿರಿಜಾಕಲ್ಯಾಣ 3 ಆ 89, ವಚನ)

'ಬಾಲದೊಡಿಗೆಗಳೆಲ್ಲವಮಂ ತುಡಿಸಿ ನೋಡುವಂ'
(ಜೈ. ಭಾರತ 19 ಸಂ. 47 ಪದ್ಯ)

ಮತ್ತೊಂದು ರೂಪ : "ಬಾಳವಣ್ಣ"

ವಿಕ್ರಮಾರ್ಜುನವಿಜಯ 2 ಆ. ಪದ್ಯ 48ರಲ್ಲಿ ಈ ಪದ ಪ್ರಯೋಗವಿದೆ.

1. ತೊಡರ್ದಮರ್ದ ಬಾಳವಣ್ಣದ
   ತುಡುಗೆ ಪಳಂಚಲೆವ ಪಂಚಜಡೆ ನೊಸಲೊಳೊಡಂ
   ಬಡುವರಳಲೆಯಿವರಿಂ ಚೆ
   ಲ್ವಿಡಿದಿರ್ದುದು ಬಾಳ ಕೇಳಿ ಧರ್ಮಾತ್ಮಜನಾ.

(ವಿ. ವಿ. ಆ. 2. ಪದ್ಯ 4)

2. "ಪುಳಿಯೊಳ್ ಕರ್ಚಿದ ಬಾಳಬಣ್ಣಮನೆ ಪೋಲ್ವಾಕಾಶಮ್. (ವಿ. ವಿ. 7–70)

ಎರಡನೆ ಉದಾಹರಣೆಗೆ ಪೂಜ್ಯ ಡಿ. ಎಲ್. ಎನ್. ರವರು ಪಂಪಭಾರತದೀಪಿಕೆಯಲ್ಲಿ ಅರ್ಥ ಕೊಡುತ್ತಾ 'ಬಾಳಬಣ್ಣ' ಎಂಬುದಕ್ಕೆ 'ಕತ್ತಿಯ ಬಣ್ಣ' ಎಂದು ಹೇಳಿ 'ನೀಲಿಬಣ್ಣ' ಎಂದು ಅರ್ಥ ಹೇಳಬಹುದು ಎಂದಿದ್ದಾರೆ. ಜೊತೆಗೆ ಈ ಅರ್ಥಕ್ಕೆ ಪುಷ್ಟಿಕೊಡಲು 'ಧೌತಾಸಿನಿಭನಭಸಿ (ಹರ್ಷ ಚರಿತ್ರೆ) ಯಿಂದ ಉದ್ಧರಿಸಿ ಹೇಳಿದ್ದಾರೆ. ಇದು ಸರಿಯೆಂದು ಒಪ್ಪಬಹುದಾದರೂ, ಇದೇ ಅರ್ಥವನ್ನು ಮೇಲಿನ ಒಂದನೇ ಉದಾಹರಣೆಯಲ್ಲಿ ಬರುವ 'ಬಾಳವಣ್ಣ' ಎಂಬ ಪದ್ಯಕ್ಕೂ ಅಂಟಿಸಿ, ಧರ್ಮರಾಜ

ನೀಲಿಬಣ್ಣದ ಉಡುಪನ್ನು ಧರಿಸಿದ್ದಂತೆ ಅರ್ಥೈಸಿರುವುದನ್ನು ಇದು ಸಾಧುವಲ್ಲ ಎಂದೇ ವಿನಯದಿಂದ ನಿರಾಕರಿಸಬೇಕಾಗುತ್ತದೆ. ಇಲ್ಲಿ ಮೊದಲನೆಯದು 'ಬಾಳವಣ್ಣ ಪ್ರಯೋಗವಾಗಿರುವುದು ಬಾಳಕೇಳಿಯ ಉಡುಗೆತೊಡುಗೆಯ ಸನ್ನಿವೇಶ. ಎರಡನೆಯದು, ಶರತ್ಕಾಲದ ಆಕಾಶದ ವರ್ಣನೆ, ಅಲ್ಲದೆ ಪದ ಪ್ರಯೋಗದಲ್ಲೂ ವ್ಯತ್ಯಾಸ ಇದೆ. 1) ಬಾಳವಣ್ಣ 2) ಬಾಳಬಣ್ಣ.

ಮೊದಲನೆಯದು ಬಾಲ್ಯಕ್ಕೆ ತಕ್ಕ ತುಡುಗೆ, ಬಾಲಕೇಳಿಗೆ ಹೊಂದುವಂತಹದು. ಎರಡನೆಯದು ಕತ್ತಿಯ ಬಣ್ಣವೆಂದೇ ಬೇರೆಯಾದ ಅರ್ಥ ಸ್ಫುರಿಸುವಂತಹದು. ಮೇಲಾಗಿ 'ಬಾಳವಣ್ಣ' ಒಂದೇ ಪದ; ಬಾಳ+ಬಣ್ಣ ಸಮಾಸ ಪದ.

ಇಲ್ಲಿ 'ಬಾಲವದ್ದೆ' ಪಂಪನ ಕಾಲಕ್ಕೆ 'ಬಾಲವಣ್ಣ' ಆಗಿರಲೂಬಹುದು. ಪಂಪನಿಗೆ ಇದು ತಿಳಿಯದ ಪದವಾಗಿರಲಿಲ್ಲ ಎನ್ನಬಹುದು. ಅಲ್ಲದೆ ಪಂಪಭಾರತದಲ್ಲಿ ಪ್ರಯೋಗಿಸಿರುವ ಕೆಲವು ಪದಗಳನ್ನು ನೋಡಿದರೆ ಎರಡು ಪದಕ್ಕೂ ವ್ಯತ್ಯಾಸ ಕಾಣುತ್ತದೆ. ಬಣ್ಣಗಳನ್ನು ಕುರಿತು ಹೇಳುವಾಗ ಎಲ್ಲಿಯೂ ಪಂಪ 'ವಣ್ಣ' ಎಂದು ಬಳಸಿಲ್ಲದಿರುವುದು ಗಮನಾರ್ಹ.

'ಪೊನ್ನಬಣ್ಣದಂತಪ್ಪ ತನ್ನ ಮೈಯ ಬಣ್ಣ' (2 ಆ 37ನೇ ಪದ್ಯ. ಗದ್ಯ)
'ಪೊಸಬಣ್ಣದೊಳೊಂದಿದ ಪಾರಿಜಾತಮ್' (2-38)
'ಅಂತಪ್ಪನ ಗಂಡಗಾಡಿಯೊಳಿಂದ್ರ ನೀಲದಂತಪ್ಪ ಬಣ್ಣ ಕಣ್ಗೆವರೆ' (2-38 ಗದ್ಯ)
'ಜವ್ವನದ ಮುಂಬಣ್ಣದಂತೆ' (2-39 ಗದ್ಯ)
'ಕಾರಿರುಳ ತಿರುಳಬಣ್ಣಂ ಕೂರಿದುದೆನೆ' (3-20 ಗದ್ಯ)
'ಎಳದಳಿರಬಣ್ಣಮಂ ಕೈಗೊಂಡು' (7-25)
'ಸಾಸಿರ ಗಿಳಿಯ ಬಣ್ಣದ ಕುದುರೆಗಳುಂ (9-95 ಗದ್ಯ)

—ಹೀಗೆ ಬಣ್ಣಗಳನ್ನು ಕುರಿತು ಹೇಳುವ ಪಂಪ 'ನೀಲಿ ಬಣ್ಣದ ತುಡುಗೆ' ಎಂಬ ಅರ್ಥವಿಟ್ಟುಕೊಂಡಿದ್ದರೆ 'ಬಾಳಬಣ್ಣ' ಎಂದು ಪ್ರಯೋಗಿಸುವುದು ಕಷ್ಟವೆನಿಸುತ್ತಿರಲಿಲ್ಲ. ಮತ್ತೊಂದೆಡೆ ಆಕಾಶದ ಬಣ್ಣವನ್ನು ವರ್ಣಿಸುವಾಗ 'ಬಾಳಬಣ್ಣ' ಎಂದೇ ಪ್ರಯೋಗಿಸಿದ್ದಾನೆ. ಆದರೆ ಬಾಲಕ್ರೀಡೆ ಬಾಲ್ಯ, ಬಾಳತುಡಿಗೆ, ಎಂಬುದು ಅವನ ಮನಸ್ಸಿನಲ್ಲಿದ್ದುದರಿಂದ, ಆ ಕಾಲಕ್ಕೆ ಪ್ರಚಾರದಲ್ಲಿದ್ದ 'ಬಾಳವಣ್ಣದ ತುಡುಗೆ' ಪದ ಪ್ರಯೋಗಿಸಿ 'ಬಾಲ್ಯದ ತುಡಿಗೆ' ಎಂಬ ಅರ್ಥವನ್ನೇ ಹೇಳಿದ್ದಾನೆ ಎಂದು ನಿರ್ಧರಿಸಬಹುದು. ಎಂದಮೇಲೆ ಈ ಪದದ ರೂಪ ಹೀಗಿರಬಹುದು.

ಬಾಲವದ್ದೆ > ಬಾಳವಣ್ಣ > "ಬಾಲವನ್ದ" > ಬಾಳವಂದ > ಬಾಲವಂದ....... ಬಾಲತುಡಿಗೆ > ಬಾಲದೊಡಿಗೆ > ಬಾಲದುಡಿಗೆ. ಆದರೆ 'ಬಾಲವನ್ದ' ರೂಪದ ಪ್ರಯೋಗ ನನಗೆ ಸಿಕ್ಕಿಲ್ಲದಿರುವುದರಿಂದ ವಿದ್ವಾಂಸರು ಗುರುತಿಸಿದರೆ ನನ್ನ ವಾದಕ್ಕೆ ಪುಷ್ಟಿ ದೊರಕೀತು.

ಹೆಚ್. ವಿ. ಶ್ರೀನಿವಾಸಶರ್ಮ

ಮೊಲೆಲಿಂಗ - ಒಂದು ಟಿಪ್ಪಣಿ

ನಂಬಿಯಣ್ಣನು ತನ್ನ ನಿಯುಳು ಪರವೆಯೊಡನೆ ಸುರತ ಸುಖವನ್ನನುಭವಿಸಿ, ಅವಳ ಮೊಲೆಯನ್ನು ಲಿಂಗವೆಂದೇ ಭಾವಿಸಿ ಕರೆಯಲು ಶಿವನು ತಡಮಾಡದೆ 'ಓ' ಎಂದು ನುಡಿದನು. ಈ ಘಟನೆ ನಂಬಿಯಣ್ಣನ ಬದುಕಿನಲ್ಲಿ ಸಂಭವಿಸಿದ ಬಗೆಗೆ ಸಂಸ್ಕೃತ ಕೃತಿಗಳಾದ 'ಅಗಸ್ತ್ಯ ಭಕ್ತಿವಿಲಾಸ' 'ಉಪಮನ್ಯು ಭಕ್ತಿವಿಲಾಸ' ಹಾಗೂ 'ಶಿವರಹಸ್ಯ'ಗಳಲ್ಲಿ ಆಗಲಿ; ತಮಿಳು ಗ್ರಂಥವಾದ ಶೇಕ್ಕಿಳಾರನ 'ಪೆರಿಯಂ ಪುರಾಣಂ'ನಲ್ಲಿ ಆಗಲೀ ; ಕನ್ನಡ ಕೃತಿಯಾದ ಹರಿಹರನ 'ನಂಬಿಯಣ್ಣನರಗಳೆ'ಯಲ್ಲಿ ಆಗಲೀ ಎಲ್ಲೂ ಉಲ್ಲೇಖ ಕಂಡುಬರುವುದಿಲ್ಲ. ಈ ಘಟನೆ ಹರಿಹರನಿಗಿಂತ ಪೂರ್ವದಲ್ಲಿ ಕನ್ನಡನಾಡಿನಲ್ಲಿ ಪ್ರಚಲಿತವಿದ್ದ ಬಗೆಗೆ ಶಿವಶರಣರ ವಚನಗಳಲ್ಲಿ ಸೂಚನೆಗಳಿವೆ. ಬಹುಶಃ, ಈ ಘಟನೆ ಭಕ್ತಿಯ ವಿಶೇಷತೆಯನ್ನು ಹೇಳುವುದರಿಂದ ಬಸವಾದಿ ಪ್ರಮಥರ ಕಾಲಕ್ಕೆ ಹೆಚ್ಚಿನ ಪ್ರಚಾರದಲ್ಲಿದ್ದಿರಬೇಕು. 'ನಂಬಿ ಕರೆದೊಡೋ ಎಂದೆ' (ವ. 520) ; 'ನಂಬಿಗೆ ಓ ಎಂದಂದನೊಂದು ಮಾತೆನ್ನಬಹುದೆ ? ' (ವ. 684) ಎಂಬ ಬಸವಣ್ಣನ ವಚನಗಳ ಈ ಎರಡು ಸಾಲುಗಳು ಮೇಲಿನ ಘಟನೆಯನ್ನೇ ಹೇಳುತ್ತಿವೆ ಎಂಬುದರಲ್ಲಿ ಸಂದೇಹವಿಲ್ಲ. ಸಿದ್ಧರಾಮನು ಮೊಲೆಯ ನಂಬಿದ ನಂಬಿಯಣ್ಣನಿಗೆ ಶಿವನು ಮುದ್ದುಕುಂಟಣಿಗನಾದನೆಂದು ತನ್ನ ಒಂದು ವಚನದಲ್ಲಿ ಹೇಳುವನು (ವ. 364). ಸಕಳೇಶ ಮಾದರಸನು 'ಲಿಂಗದ ಭಾವ ಹಿಂಗದ ನಂಬಿಗೆ ಅಂಗನೆಯರ ಮೊಲೆ ಲಿಂಗವಾಯಿತ್ತು' ಎಂದು ತನ್ನ ವಚನವೊಂದರಲ್ಲಿ (ಸ. ಪು. ವ. 2 ಪು. 619 ವ. 1750) ಹೇಳಿರುವನು. ಅಲ್ಲಮಪ್ರಭು ಈ ಘಟನೆಯ ವಾಸ್ತವತೆಯನ್ನೇ ತನ್ನ ವಚನವೊಂದರಲ್ಲಿ ಪ್ರಶ್ನಿಸುತ್ತಾ 'ಅಂಗನೆಯ ಮೊಲೆ ಲಿಂಗವೆ ? ' ಎಂದಿರುವನು. ಈ ಮಾತನ್ನು 'ಮೆಚ್ಚುವರೆ ಪ್ರಮಥರು ? ಮೆಚ್ಚುವರೆ ಪುರಾತನರು, ನಿಮ್ಮ ಭಕ್ತರು?' ಎಂದು ಸಂದೇಹಿಸಿರುವನು (ವ. 798) ಈ ಎಲ್ಲ ಉಲ್ಲೇಖಗಳಿಂದ, 12 ನೇ ಶತಮಾನದಲ್ಲಾಗಲೇ ಈ ಕಥೆ ವ್ಯಾಪಕವಾಗಿ ಹರಡಿತ್ತೆಂಬುದು ಸ್ಪಷ್ಟವಾಗುತ್ತದೆ.

ನಂಬಿಯಣ್ಣನ ಬದುಕಿಗೆ ಸಂಬಂಧಿಸಿದ ಈ ಕಥೆ ತಮಿಳು ಕೃತಿ ಶೇಕ್ಕಿಳಾರನ 'ಪೆರಿಯಪುರಾಣಂ'ನಲ್ಲಿ ಉಲ್ಲೇಖಗೊಂಡಿಲ್ಲ. ಇದರಿಂದ ತಮಿಳುನಾಡಿನಲ್ಲಿ ಈ ಕಥೆ ಪ್ರಚಲಿತವಿರಲಿಲ್ಲವೆಂದು ಹೇಳುವುದು ತಪ್ಪಾಗುತ್ತದೆ. ತಮಿಳು ಜನಪದ ಸಾಹಿತ್ಯದಲ್ಲಿ ಸುಂದರರ ತೇವಾರಂಗಳಲ್ಲಿ ಈ ಘಟನೆಯ ಬಗೆಗೆ ಹೆಚ್ಚಿನ ಶೋಧನೆ ಮಾಡಬೇಕಾಗಿದೆ.

ವಚನಕಾರರ ನಂತರ, ಈ ಘಟನೆ, ಕಂಡುಬರುವುದು ಪಾಲ್ಕುರಿಕೆ ಸೋಮನಾಥನ ತೆಲುಗು 'ಬಸವಪುರಾಣಮು'ವಿನಲ್ಲಿ. ಅಲ್ಲಿ ಈ ಪ್ರಸಂಗ ಹೀಗೆ ವರ್ಣಿತವಾಗಿದೆ :

ಮನಸಿಜ ಕ್ರೀಡಾಂತಮುನಂ ಜೇಯುವ್ರೇಸಿ
ವನಿತ ಪಾಲಿಂಡ್ಲು ನೀ ವನಿ ನಿಶ್ಚಯಿಂಚಿ
ಯಡರಂಗ ನಾತಂ 'ಡಯ್ಯಾ'ಯನಿ ಪಿಲುವ
ನೋಡಯನಂಬನ್ನಕು ನೋಯನ್ನ ಶಿವುಂಡ!
(ಬಸವಪುರಾಣಮು, ಬಂಡಾರು ತಮ್ಮಯ್ಯಗಾರು
ಪರಿಷ್ಕರಣ, 1952, ಪು. 342)

ಮೇಲಿನ 'ಬಸವಪುರಾಣಮು'ವಿನ ದ್ವಿಪದದ ಸಾಲುಗಳನ್ನು ಕನ್ನಡದ ಭೀಮ ಕವಿ ಹೀಗೆ ಅನುವಾದಿಸಿರುವನು :

... ... ಸುರ-
ತಾಂತದಲಿ ಕಾಂತೆಯ ಮೊಲೆಯ ನೀವೆಂದಃ ನಿಶ್ಚಯಿಸಿ।
ಮುಂತೆ ಅಯ್ಯಾ ಎಂದು ಕರೆಯೆ ತ
ದಂತರದೊಳಾ ನಂಬಿಯಣ್ಣಂ
ಗಂತರಿಸದೋ ಎಂದು ಮಾತಾಡಿದ ಮಹಾಮಹಿಮ ॥
(ಬಸವಪುರಾಣ ಸಂ. 27 ಪ. 52)

ಪರವೆಯು ಕುಚವನ್ನೇ ನಂಬಿದ ನಂಬಿಯಣ್ಣ, ಅಲ್ಲಿ ಶಿವನನ್ನು ನುಡಿಸಿ ಮೆರೆದುದನ್ನು ಲಕ್ಕಣ್ಣದಂಡೇಶನು (1424) ತನ್ನ 'ಶಿವತತ್ತ್ವ ಚಿಂತಾಮಣಿ' ಯಲ್ಲಿ (35.7) ಹೇಳಿರುವನು. ವಿರುಪೇಂದ್ರನು (1519) ತನ್ನ 'ಗುರುಭಕ್ತ ಚಾರಿತ್ರ' ದಲ್ಲಿ 'ಪರವೆಯ ನಿಬಿಡ ಕುಚದಿ ಸುರತಾಂತ್ಯದೊಳು ತ್ರಿಪುರಹರನ ನುಡಿಸುತ್ತಲ್ಲಿ ಪಡಿವೊಗಳ ಧರೆಮೆಚ್ಚೆಯೆ ತರಿಸಿಕೊಂಡುರು ಮಹತ್ವ ಬಡೆದ ಗುರು ನಂಬಿ... (12.22) ಎಂದು ಹೇಳಿದರೆ, 'ತ್ರಿಭುವನ ತಿಲಕ'ದಲ್ಲಿ ಪರವೆಯ ಸ್ತನವನ್ನು ನಂಬಿಯಣ್ಣನು ಲಿಂಗವೆಂದು ಭಾವಿಸಿರಲು ಪರವೆಯು 'ಇದರಲ್ಲಿ ಶಿವನೆಲ್ಲಿದ್ದಾನೆ' ಎಂದು ಪ್ರಶ್ನಿಸುವಳು. ಅದಕ್ಕೆ ನಂಬಿಯು ಶಿವನು ವಿಶ್ವವ್ಯಾಪಿ ಎಂದು ಹೇಳಿ, ಸ್ತನ ಶಂಕರನನ್ನು ನುಡಿಸಿ, ಅವನಿಂದ ಪಡಿಹೊನ್ನನ್ನು ಪಡೆದನು ಎಂದು ಹೇಳಿರುವನು (ಸಂ. 13). ಚೇರಮಾಂಕನು (1526) ತನ್ನ 'ಚೇರಮ ಕಾವ್ಯ'ದಲ್ಲಿ (9.32) ಪರವೆಯ ಕುಚಾಗ್ರದಿಂದ ಶಿವನನ್ನು 'ಓ' ಎನ್ನಿಸಿ ಸಾಸಿರ ಪೊನ್ನನ್ನು ಪಡೆದ ನಂಬಿಯಣ್ಣನು ಅದನ್ನು ಮಂಗಲೆನಾಚಿಗೆ ಕೊಟ್ಟನೆಂದು ಹೇಳಿರುವನು. ವಿರತಮಹಲಿಂಗದೇವ (1530), ವಿರೂಪಾಕ್ಷ ಪಂಡಿತ (1584), ವಿರತ ತೋಂಟದಾರ್ಯ (1616) ಚಿಕ್ಕನಂಜೇಶ (1650) – ಇವರೆಲ್ಲರ ಕೃತಿಗಳಲ್ಲಿ ಪರವೆಯ ಕುಚದಲ್ಲಿ ಶಿವನನ್ನು ನುಡಿಸಿ ನಂಬಿಯಣ್ಣ ಪಡಿಹೊನ್ನನ್ನು ಪಡೆದ ಸಂಗತಿ ಸಂಕ್ಷಿಪ್ತವಾಗಿ ಬಂದಿದೆ.

ಈ ಘಟನೆಯ ಬಗೆಗೆ ನಮಗೆ ಹೆಚ್ಚಿನ ವಿವರಗಳು ದೊರೆಯುವುದು ಶಾಂತಲಿಂಗದೇಶಿಕನ (1672) 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ'ದಲ್ಲಿ (ಭಾಗ 1, ಪು. 332). ಅಲ್ಲಿ ಬರುವ ಕಥೆ ಹೀಗಿದೆ :

"ನಂಬ್ಯಣ್ಣ ದೇವರು ಪರವೆನಾಚಿಯರು ಏಕಾಂತದಲ್ಲಿರುವಾಗಲಾಕೆಯ ಕುಚವಂ ಲಿಂಗವೆಂದು ಭಾವಿಸಿ ನೋಡುವಲ್ಲಿ, ಮುನ್ನ ಧರಿಸಿದ ಪರಿಮಳ ಲೇಪನವೆ ಗಂಧ, ಬೆಮರ್ವನಿ ಮುತ್ತು, ರತ್ನಗಳೆ ತ್ರಿಯಕ್ಷತೆ, ಕುಸುಮ ಮಾಲೆಯೆ ಪುಷ್ಪ, ನಾಶಿಕೋಚ್ಛ್ವಾಸವೆ ಧೂಪ, ಕಡೆಗಣ್ಣ ಕಾಂತಿಯೆ ಆರತಿಯೆಂದು ನಂಬಿಯಣ್ಣ ಕುಚವನೆ ಲಿಂಗವೆಂದು ಭಾವಿಸಿ "ಸ್ತನ ಶಂಕರಾಯ" ಎಂದು ನುತಿಸಿ ತಾಳವ ನುಡಿಸಿ ತಿರುಪಾಟವಂ ಪಾಡಲು, ಮಱದು ಮಲಗಿರ್ದ ಪರವೆನಾಚಿಯುದ ಕೇಳಿ ಎಚ್ಚತ್ತು ನುಡಿದಳು : "ಕುಚದಲ್ಲಿ ಲಿಂಗವುಂಟೆ ?" ಯೆಂದು ಕೇಳಲು "ಇಲ್ಲದಿರ್ದೊಡೆ ನುತಿಸುವೆನೆ"ಯೆನಲು, ಕುಚಲಿಂಗವಾದೊಡೆ ಪಡಿಹೊನ್ನ ತೆಗೆದುಕೊಳ್ಳಿ''ಯೆನಲು, ತೆಗೆದುಕೊಂಬೂದನರಿದೆ" ಯೆಂದಾಗ ನಂಬಿಯಣ್ಣನು "ಸ್ತನ ಶಂಕರಾ''ಯೆನಲು ಕುಚದಲ್ಲಿ "ತೆಗೆದುಕೊ''ಯೆಂದು ಪಡಿಹೊನ್ನ ಕೊಡಲಾಗ ನಂಬ್ಯಣ್ಣನು ತೆಗೆದು ಕೊಂಡು ಸುಖದಲ್ಲಿರ್ದನು.''

ಉತ್ತರದೇಶದ ಬಸವಲಿಂಗನು (1680) ತನ್ನ 'ಬಸವೇಶ್ವರ ಪುರಾಣದ ಕಥಾಸಾಗರ'ದಲ್ಲಿ ಮೇಲಣ ಶಾಂತಲಿಂಗದೇಶಿಕನ ಕಥಾ ನಿರೂಪಣೆಯನ್ನು ಸ್ವಲ್ಪವೂ ವ್ಯತ್ಯಾಸ ಮಾಡದೆ ಹೇಳಿರುವನು (ಪು. 138).

ವಚನಕಾರರ ನಂತರ, ವೀರಶೈವ ಕವಿಗಳ ಕೃತಿಗಳಲ್ಲಿ ಈ ಘಟನೆ ಹೇಗೆ ಬೆಳೆದು ಬಂದಿತೆಂಬುದನ್ನು ಪರಿಶೀಲಿಸಲಾಯಿತು. ಜನಪದದಲ್ಲಿ ಹಾಗೂ ವೀರಶೈವ ಕೃತಿಗಳಲ್ಲೂ ಕಾಲಕಾಲಕ್ಕೆ ಈ ಘಟನೆ ಬೆಳೆದು ಒಂದು ಸ್ಪಷ್ಟ ರೂಪು ಪಡೆದುದನ್ನು ನಾವು ಶಾಂತಲಿಂಗದೇಶಿಕನಲ್ಲಿ ಕಾಣುತ್ತೇವೆ. ಈ ಕಥೆ ಕನ್ನಡ ನಾಡಿನಲ್ಲಿ ಜನ ಜನಿತ ವಾಗಿದ್ದರೂ ಹರಿಹರನ 'ನಂಬಿಯಣ್ಣನ ರಗಳೆ'ಯಲ್ಲಿ ಏಕೆ ಬರಲಿಲ್ಲ ಎಂಬುದಕ್ಕೆ ವಿವರಣೆ ನೀಡುವುದು ಕಷ್ಟ. ತಮಿಳಿನಲ್ಲಿ ಸುಂದರ ಮೂರ್ತಿಗಳ 'ತಿರುತ್ತೊಂಡ ತ್ತೊಗೈ' ಹಾಗೂ ನಂಬಿಯಾಂಡಾರ್ ನಂಬಿಯ 'ತಿರುತ್ತೊಂಡರ್ ತಿರುವಂದಾದಿ' ಗಳನ್ನು ಆಧರಿಸಿ ತಾನು ಕೃತಿರಚನೆ ಮಾಡಿದುದಾಗಿ ಶೇಕ್ಕಿಳಾರ್ 'ಪೆರಿಯಪುರಾಣಂ' ನಲ್ಲಿ (ಪ. 38-39) ಸ್ಪಷ್ಟವಾಗಿ ಹೇಳಿಕೊಂಡಿರುವರು. ತಮಗೆ ಆಕರವಾದ ಗ್ರಂಥ ಗಳಲ್ಲಿ ಮೊಲೆ ಲಿಂಗವಾದ ಘಟನೆ ಬರುವುದಿಲ್ಲವಾದ ಕಾರಣ ಶೇಕ್ಕಿಳಾರ್ ತಮ್ಮ ಕೃತಿಯಲ್ಲಿ ಈ ಘಟನೆ ಪ್ರಸ್ತಾಪಿಸದೆ ಕೈಬಿಟ್ಟಿರಬಹುದು. ಅಲ್ಲದೆ, ಶೇಕ್ಕಿಳಾರ್ ಶೃಂಗಾರ ಭಾವವನ್ನು ಮಾತಿನಲ್ಲಿ ಸ್ಪಷ್ಟವಾಗಿ ಹೇಳಲು ಸಂಕೋಚಪಡುವ ಗುಣ ಸ್ವಭಾವದವರು. ಈ ಮಾತು ಪೆರಿಯ ಪುರಾಣವನ್ನು ಆದ್ಯಂತವಾಗಿ ಪರಿಶೀಲಿಸಿದರೆ ವ್ಯಕ್ತವಾಗುತ್ತದೆ. ವರ್ಣನೆಗಳಲ್ಲೂ ಮಡಿವಂತಿಕೆ ತೋರುವ ಇವರು, ಪ್ರತೀತಿಯಲ್ಲಿ ಈ ಕಥೆ ಇದ್ದರೂ, ಉದ್ದೇಶಪೂರ್ವಕವಾಗಿ ಬಿಟ್ಟಿರಬಹುದು. ಹರಿಹರನಿಗೆ ಈ ಘಟನೆ ತಿಳಿದಿರಲಾರದು ಎಂದು ಸರಳವಾಗಿ ತೀರ್ಮಾನ ಹೇಳುವುದು ಸರಿಯಲ್ಲ. ನಂಬಿಯಣ್ಣನ ಬಗೆಗೆ ಸಾಕಷ್ಟು ವಿವರಗಳನ್ನು ಕಲೆಹಾಕಿ, ಮೊತ್ತಮೊದಲಿಗೆ ಅವನ

ಜೀವನವನ್ನು ತನ್ನ ಕೃತಿಯೊಂದಕ್ಕೆ ವಸ್ತುವಾಗಿ ಸ್ವೀಕರಿಸಿ ಕೃತಿರಚನೆ ಮಾಡಿದ ಹರಿಹರನಿಗೆ ಈ ಘಟನೆ ತಿಳಿದಿರಲಾರದು ಎಂದು ಹೇಳುವುದು ಕಷ್ಟ. ಸಂಸ್ಕೃತ ಹಾಗೂ ತಮಿಳು ಕೃತಿಗಳಲ್ಲಿ ಈ ಘಟನೆ ಉಲ್ಲೇಖಗೊಂಡಿಲ್ಲವಾದುದರಿಂದ ಹರಿಹರನೂ ಇದನ್ನು ಕೈಬಿಟ್ಟಿರಬಹುದು ಎಂದು ವಾದಿಸಿದರೂ ತಪ್ಪಾಗುತ್ತದೆ. ಏಕೆಂದರೆ, ಹರಿಹರ ಇವುಗಳನ್ನು ಓದಿ ಪ್ರಭಾವಿತನಾಗಿ 'ನಂಬಿಯಣ್ಣನ ರಗಳೆ' ರಚಿಸಿದನೆಂಬ ವಿದ್ವಾಂಸರ ವಾದದಲ್ಲಿ ಸತ್ಯಾಂಶವಿಲ್ಲ. ಸಂಸ್ಕೃತ, ತಮಿಳು ಕೃತಿಗಳು ಹಾಗೂ 'ನಂಬಿಯಣ್ಣನ ರಗಳೆ'–ಇವುಗಳ ತೌಲನಿಕ ಅಧ್ಯಯನದಿಂದ ಹರಿಹರ ಸಂಸ್ಕೃತ-ತಮಿಳು ಕೃತಿಗಳ ಪ್ರಭಾವಕ್ಕೆ ಒಳಗಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಕೊನೆಗೂ ಪರಿಹಾರ ಕಾಣದೆ ಸಮಸ್ಯೆಯಾಗಿಯೇ ಉಳಿಯುವ ಎರಡು ಅಂಶಗಳು :

1. ಪರವೆಯ ಮೊಲೆಯಲ್ಲಿ ಶಿವ ಓ ಎಂದ ಘಟನೆಯನ್ನು ವಿವರಿಸುವ ಕಥೆ ತಮಿಳು ನಾಡಿನಿಂದ ಬಂದಿತೆ? ಇಲ್ಲವೇ ಕನ್ನಡನಾಡಿನಲ್ಲಿ ಹುಟ್ಟಿ ಕೊಂಡಿತೆ?
2. ಕನ್ನಡ ನಾಡಿನಲ್ಲಿ ಈ ಘಟನೆ ಜನಜನಿತವಾಗಿದ್ದರೂ ಹರಿಹರ ಏಕೆ ಇದನ್ನು ತನ್ನ ಕೃತಿಯಲ್ಲಿ ಬಳಸಿಕೊಳ್ಳಲಿಲ್ಲ?

ಎಸ್. ವಿದ್ಯಾಶಂಕರ

"ಕುರುತಾಪಣೆ" ಪದದ ವಿವರಣೆ ಕುರಿತು–ಒಂದು ಪ್ರತಿಕ್ರಿಯೆ

ಶ್ರೀಕಂಠ ಕೂಡಿಗೆಯವರು ತಮ್ಮ ಒಂದು ಲೇಖನದಲ್ಲಿ[1] ಕುರುತಾಪಣೆ ಪದದ ರೂಢಿ ಮತ್ತು ಬಳಕೆಯ ಬಗ್ಗೆ ಬರೆಯುವಾಗ ನೀಡಿದ ವಿವರಣೆ ಸ್ವಲ್ಪ ಸಂದೇಹಾಸ್ಪದವಾದುದರಿಂದ ಆ ಬಗ್ಗೆ ಇಲ್ಲಿ ಸ್ವಲ್ಪ ಚರ್ಚಿಸಬಹುದೆಂದು ತೋರುತ್ತದೆ. ಅವರು ಹೇಳುವುದು : "ಊರಿನಲ್ಲಿ ನಿವಾರಿಸಲಾಗದ ರೋಗ ಬಂದಾಗಲೋ, ವ್ಯಾಜ್ಯ ನಡೆದಾಗಲೋ, ದೇವರಲ್ಲಿ ಅಪ್ಪಣೆ ಕೇಳುವ ಪರಿಪಾಠವಿದೆ, ಇದನ್ನು ನಮ್ಮ ಹಳ್ಳಿಗರು ಕುರುತಾಪಣೆ ಎಂದು ಕರೆಯುತ್ತಾರೆ. ಪ್ರಾಯಶಃ ದೇವರನ್ನು 'ಕುರಿತು ಕೇಳುವ ಅಪ್ಪಣೆ' ಕುರುತಾಪಣೆ ಆಗಿದೆ"

'ಕುರುತಾಪಣೆ' ಪದವನ್ನು ದೇವರನ್ನು 'ಕುರಿತು ಕೇಳುವ ಅಪ್ಪಣೆ' ಎಂದು ವಿವರಿಸಿದ್ದು ಸಂದೇಹಕ್ಕೆ ಎಡೆಮಾಡಿದೆ, 'ಕುರುತಾಪಣೆ'ಯಲ್ಲಿರುವ 'ಕುರುತು' ಮತ್ತು

---

1. "ಐದು ಜನಪದ ಶಬ್ದಗಳ ರೂಢಿ ಮತ್ತು ಬಳಕೆ"; ಅಧ್ಯಯನ (ಶಂ. ಬಾ. ಅಭಿನಂದನ ಗ್ರಂಥ) ಸಂ : ಡಾ. ಎಂ. ಚಿದಾನಂದಮೂರ್ತಿ.

ಅದನ್ನು ವಿವರಿಸುವಲ್ಲಿ ಕೂಡಿಗೆಯವರು ಹೇಳಿದ 'ಕುರಿತುಂ' ಇವೆರಡೂ ಮೂಲತಃ ಸ್ಪಷ್ಟ ಅರ್ಥ ವ್ಯತ್ಯಾಸವನ್ನು ಹೊಂದಿವೆ.

ಉದಾ : ಇಲ್ಲಿ 'ಕುತ್ರ್ಯ' (ಕುರುತು) ಮಾಡಿದ್ದಾನೆ
ಇದನ್ನು 'ಕುರಿತು' ಹೇಳಿದ್ದಾನೆ.

ಇಲ್ಲಿ 'ಕುತ್ರ್ಯ' (ಕುರುತು) = mark ಎನ್ನುವ ಅರ್ಥವನ್ನೂ, 'ಕುರಿತು' regarding ಎನ್ನು ಅರ್ಥವನ್ನು ಸ್ಫುರಿಸುತ್ತವೆ.

ಇಲ್ಲಿ ಪ್ರಸ್ತುತವೆಂದು ತೋರಿದ್ದರಿಂದ, ಸಮಾನ ಅರ್ಥ ಮತ್ತು ಸಮಾನ ಸಾಂದರ್ಭಿಕ ವಲಯ (context) ದಲ್ಲಿ ಬಳಕೆಯಾಗುವ 'ಕುರುವಪ್ಪಣೆ'[2] ಎಂಬ ಪದವನ್ನೂ ಕುರಿತು ಒಂದು ಮಾತು ಹೇಳಬಹುದು. 'ಕುರುವಪ್ಪಣೆ' ಪದದಲ್ಲಿ ಎರಡು ಆಕೃತಿಮಾಗಳಿವೆ : 'ಕುರುವು' ಮತ್ತು 'ಅಪ್ಪಣೆ'. ಈ ಕುರುವು 'ಕುರುಹು' ಪದದಿಂದ ಬಂದಿರಬೇಕೆಂದು ತೋರುತ್ತದೆ : ಕುರುಹು > ಕುರುಉ ('ಹ'ಕಾರ ಲೋಪವಾಗಿ) > ಕುರುವು.

ಒಂದು ವಿಚಾರದ ಬಗ್ಗೆ ದೇವರ ಅಭಿಪ್ರಾಯವನ್ನು ತಿಳಿಯಬಯಸುವ ವ್ಯಕ್ತಿ (ಉದಾ : ತಂದೆಯೊಬ್ಬ ತನ್ನ ಮಗಳ ಮದುವೆ ನಡೆಯುವ, ನಡೆಯದಿರುವ ಬಗ್ಗೆ ತಿಳಿಯುವುದು) ದೇವರಲ್ಲಿ ಇಂಥದೊಂದು ವಸ್ತುವನ್ನು ತೋರಿಸಿದರೆ ಅಥವಾ ಮುಟ್ಟಿದರೆ ತನ್ನ ಕೆಲಸ ಆಗುವುದೆಂದೂ, ಬೇರೊಂದು ವಸ್ತು, ವ್ಯಕ್ತಿಯನ್ನು ತೋರಿಸಿದರೆ ಆಗದೆಂದೂ, ಮನಸಿನಲ್ಲೇ ನೆನೆದುಕೊಳ್ಳುತ್ತಾನೆ. ಹೀಗಾಗುವಲ್ಲಿ ಆ ವಸ್ತು, ವ್ಯಕ್ತಿಯನ್ನು ಅವನು 'ಕುರುತು' (ಕುರುಹು) ಎಂದು ಭಾವಿಸುತ್ತಾನೆ. ದೇವರು ನಿರ್ದಿಷ್ಟ 'ಕುರುತನ್ನು (mark) ತೋರಿಸುವುದರ ಮೂಲಕ ಕೊಡುವ ಅಪ್ಪಣೆ ಇದಾದುದರಿಂದ (ಕುರುತು ತೋರುವ ಅಪ್ಪಣೆ) ಇದಕ್ಕೆ 'ಕುರುತಾಪಣೆ' ಎಂದು ಕರೆಯಲಾಗಿದೆ[3].

ಶ್ರೀಕಂಠ ಕೂಡಿಗೆಯವರು ಪ್ರಸ್ತಾಪಿಸಿದ 'ಕುರುತಾಪಣೆ' ಮತ್ತು ನಾನು ಇಲ್ಲಿ ಪ್ರಸ್ತಾಪಿಸಿದ 'ಕುರುವಪ್ಪಣೆ' ಎರಡೂ ಒಂದೇ ಸಂದರ್ಭ, ಅರ್ಥದ ಬಳಕೆಯಾಗು

---

2. ಅರಸೀಕೆರೆ ತಾಲ್ಲೂಕಿನ ಸುತ್ತ ಮುತ್ತ 'ಕುರುವು' ಮತ್ತು 'ಕುರುವಪ್ಪಣೆ' ಪದಗಳು ಚಾಲ್ತಿಯಲ್ಲಿವೆ.

3. ನಮ್ಮ ಹಳ್ಳಿಗರು ಬಹುತೇಕವಾಗಿ ದೇವರುಗಳನ್ನು—ಯಾವಾಗಲೂ ದೇವಾಲಯದಲ್ಲಿ ಮಾತ್ರ ಇರುವಂಥವು (ಬೇಕಾದರೆ ಸ್ಥಾವರ ವಿಗ್ರಹ ಎನ್ನಬಹುದು) ಮತ್ತು 'ಮೆರೆವಿಗ್ರಹ' ('ಉತ್ಸವಮೂರ್ತಿ' ಅಥವಾ ಮೆರವಣಿಗೆ ಮೊದಲಾದ ಸಮಾರಂಭಗಳಲ್ಲಿ ಭಾಗವಹಿಸುವಂಥವು) ಎಂದು ಬೇರೆ ಬೇರೆ ಮಾಡಿಕೊಂಡಿರುತ್ತಾರೆ. ಈ 'ಕುರುವು' ಅಥವಾ 'ಕುರುತು ಕೇಳುವುದು' (ಕುರುತಾಪಣೆ, ಕುರುವಪ್ಪಣೆ) ವಿಶೇಷವಾಗಿ 'ಮೆರೆ ವಿಗ್ರಹಗಳಿಗಷ್ಟೆ ಸಂಬಂಧಿಸಿರುತ್ತದೆ. ಸ್ಥಾವರ ವಿಗ್ರಹಗಳಲ್ಲಿ ಕೇಳುವುದು ಕೇವಲ 'ಅಪ್ಪಣೆ ಕೇಳುವುದು' ಎಂದು ಕರೆಯುತ್ತಾರೆ.

ವಂಥವು. ಅಲ್ಲದೆ ಕುರುವು, ಕುರುತು, ಕುಱುಹು, ಕುರ್ತು, ಗುರ್ತು, ಗುರುತು ವೊದಲಾದುವೆಲ್ಲ ಜ್ಞಾತಿ ಪದಗಳೇ ಆಗಿವೆ[4]. ಮತ್ತು ಎಲ್ಲವೂ ಸ್ಪಷ್ಟವಾಗಿ 'ಕುರಿತು' ಪದಕ್ಕಿಂತ ಭಿನ್ನ ಅರ್ಥವನ್ನು ಹೊಂದಿವೆ. ಆದುದರಿಂದ ದೇವರನ್ನು 'ಕುರಿತು ಕೇಳುವ ಅಪ್ಪಣೆ' ಕುರುತಾಪಣೆ ಆಗಿರುವುದಕ್ಕಿಂತ, ದೇವರನ್ನು 'ಕುರುತು ತೋರಿಸಲು ಕೇಳುವ ಅಪ್ಪಣೆ' ('ಕುರುತು ಕೇಳುವ ಅಪ್ಪಣೆ') ಕುರುತಾಪಣೆ ಯಾಗಿರುವ ಸಂಭವವೇ ಹೆಚ್ಚು ಎಂದು ಹೇಳಬಹುದು.

ಎಸ್. ಎಸ್. ರೇಣುಕಾರಾಧ್ಯ

4. T. Burrow and M.B. Emeneau : A Dravidian Etymological Dictionary, 1961, page : 125, Item No : 1533.

ಸಂಪಾದಕೀಯ

ಮಾಸ್ತಿಯವರಿಗೆ ನಮನ

ಈ ವರ್ಷದ ಜೂನ್ ಆರಕ್ಕೆ ಶ್ರೀಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೆ ತೊಂಬತ್ತು ವರ್ಷ ತುಂಬಿತು.

ನಿಡುಗಾಲದ ತಮ್ಮ ಜೀವನದ ಉದ್ದಕ್ಕೂ ಒಂದಿಲ್ಲೊಂದು ಬಗೆಯಲ್ಲಿ ಅವರು ಕನ್ನಡ ಜನತೆಯೊಂದಿಗೆ ಸಂಪರ್ಕವಿರಿಸಿಕೊಂಡೇ ಬಂದಿದ್ದಾರೆ. ಬರೆಹಗಾರರಾಗಿ, ಆಡಳಿತಗಾರರಾಗಿ, ಚಿಂತಕರಾಗಿ, ಅವರು ತಮ್ಮ ಕ್ರಿಯಾಶಾಲಿತ್ವವನ್ನು ಪ್ರಕಟಿಸುತ್ತ ಬಂದಿದ್ದಾರೆ. ತಾವು ಕಂಡ ಒಳಿತನ್ನು, ಒಳಿತೆಂದು ಕಂಡದ್ದನ್ನು, ನೆವ್ಮ್ಮದ ನಂಬುಗೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾ ನಡೆದಿದ್ದಾರೆ. ಅಷ್ಟೇ ಅಲ್ಲದೆ ಅವೆಲ್ಲವೂ ತಮ್ಮ ಸುತ್ತಮುತ್ತಣ ಕಿರಿಯ ಜನರಿಗೂ ದಕ್ಕಬೇಕೆಂಬ ತುಡಿತವೂ ಅವರಲ್ಲಿದೆ.

ಬರೆಹಗಾರಾಗಿ ಅವರು ನೀಡಿರುವ ಕೃತಿಗಳ ಮೂಲಕ ಕನ್ನಡ ಓದಬಲ್ಲ ಜನರೆಲ್ಲ, ಹತಾಶೆಯಿಲ್ಲದ ಪ್ರಬುದ್ಧ ಜೀವನ ಕ್ರಮವೊಂದರ ನೆಲೆಗಳ ಪರಿಚಯವನ್ನು ಪಡೆಯಬಲ್ಲರು. ಈ ಶತಮಾನದ ಕನ್ನಡ ಸಾಹಿತ್ಯದಲ್ಲಿ ಆದ ಎಲ್ಲ ಬೆಳವಣಿಗೆಗಳ ಜತೆಗೂ ಅವರ ಬರವಣಿಗೆ ಸಾಗುತ್ತಾಬಂದಿದೆ.

ಈ ಹಿರಿಯರಿಗೆ 'ಸಾಧನೆ'ಯು ಗೌರವವನ್ನು ಸಲ್ಲಿಸುತ್ತದೆ.

ಈ ಸಂಚಿಕೆಯ ಲೇಖಕರು

ಪಿ. ವರಲಕ್ಷ್ಮಿ	ಟೆಲಿಗ್ರಾಫ್ ಅಸಿಸ್ಟೆಂಟ್ ಡಿಪಾರ್ಟ್‌ಮೆಂಟಲ್ ಟೆಲಿಗ್ರಾಫ್ ಆಫೀಸ್ ಚಿತ್ರದುರ್ಗ–577501
ಡಾ॥ ಜಿ. ಎಸ್. ಅಮೂರ್	ಇಂಗ್ಲಿಷ್ ವಿಭಾಗ, ಮರಾಠವಾಡ ವಿಶ್ವವಿದ್ಯಾಲಯ. ಔರಂಗಾಬಾದ್, ಮಹಾರಾಷ್ಟ್ರ–431 002
ಸುಮತೀಂದ್ರ ನಾಡಿಗ್	ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು–560056
ಎಸ್. ಎನ್. ಶಿವರುದ್ರಸ್ವಾಮಿ	ಅಧ್ಯಾಪಕ, ಇತಿಹಾಸ ವಿಭಾಗ ಕಲ್ಪತರು ಕಾಲೇಜ್, ತಿಪಟೂರು-572202
ಡಾ॥ ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–560 056
ಟಿ. ಶ್ರೀ ವೆಂಕಟರಮಣ	ಪ್ರಾಧ್ಯಾಪಕರು, ಸಂಖ್ಯಾಕಲನ ವಿಜ್ಞಾನ ವಿಭಾಗ ಸೆಂಟ್ರಲ್ ಕಾಲೇಜು, ಬೆಂಗಳೂರು–560009
ವಿ. ಎಸ್. ಶ್ಯಾನ್‌ಭಾಗ್	ಶ್ರೀ ಮಂಜುನಾಥ ನಿಲಯ ರಿಪ್ಪನ್‌ಪೇಟೆ, ಶಿವಮೊಗ್ಗ ಜಿಲ್ಲೆ
ಡಾ॥ ಬಿ. ಸಿ. ಜವಳಿ	ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–570 003
ಡಾ॥ ವಿ. ಶಿವಾನಂದ	ಅಧ್ಯಾಪಕರು, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ
ಕೆ. ವೆಂಕಟರಾಯಾಚಾರ್ಯ	ಸುರತ್ಕಲ್ (ದ. ಕ.) 574 158

ಎಂ. ಬಿ. ಕೋಟಿ	ಎಂ.ಫಿಲ್. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು-560056
ಎಸ್. ವಿಜಯಾ ಸುಬ್ಬರಾಜ್	ಅಧ್ಯಾಪಕರು, ಎಂ.ಇ.ಎಸ್. ಕಾಲೇಜು ಮಲ್ಲೇಶ್ವರಂ, ಬೆಂಗಳೂರು–560003
ಷಣ್ಮುಖಯ್ಯ ಅಕ್ಕೂರಮಠ	67, ದೇವಗಂಗೋತ್ರಿ ಶಂಕರಮಠದ ರಸ್ತೆ, ಬೆಂಗಳೂರು–560004
ಬಿ. ಎ. ಸನದಿ	ವಿಸ್ತರಣಾಧಿಕಾರಿಗಳು, ಎ ಐ.ಆರ್. ಆಕಾಶವಾಣಿ ಭವನ್, ಬಾಂಬೆ–400020
ಪಿ. ಕೆ. ಖಂಡೋಬಾ	ಕರ್ನಾಟಕ ಕಾಲೇಜ್, ಧಾರವಾಡ-570 001
ಡಿ. ಮಂಗಳಾ ಪ್ರಿಯದರ್ಶಿನಿ	ಅಧ್ಯಾಪಕಿ, ಕನ್ನಡ ವಿಭಾಗ ವಿದ್ಯಾವರ್ಧಕ ಪ್ರಥಮ ದರ್ಜೆ ಮಹಿಳಾ ಕಾಲೇಜು, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು-560010
ಡಾ॥ ಮ. ಸು. ಕೃಷ್ಣಮೂರ್ತಿ	ರೀಡರ್, ಹಿಂದಿ ವಿಭಾಗ ಮೈಸೂರು ವಿಶ್ವವಿದ್ಯಾಲಯ ಮೈಸೂರು
ಎಚ್. ವಿ. ಶ್ರೀನಿವಾಸಶರ್ಮ	ಕನ್ನಡ ವಿಭಾಗದ ಮುಖ್ಯಸ್ಥರು ಎಂ.ಇ.ಎಸ್. ಕಾಲೇಜು, ಮಲ್ಲೇಶ್ವರಂ, ಬೆಂಗಳೂರು–560003
ಡಾ॥ ಎಸ್. ವಿದ್ಯಾಶಂಕರ	ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು-560056
ಎಸ್. ಎಸ್. ರೇಣುಕಾರಾಧ್ಯ	ಎಂ. ಫಿಲ್. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು–560056

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8–00 ರೂ.
(ವಿದ್ಯಾರ್ಥಿಗಳಿಗೆ) 5–00 ರೂ.
ಆಜೀವ ಚಂದಾ ಹಣ 100–00 ರೂ. ಗಳನ್ನು ಎರಡು ಕಂತುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪಾವತಿ ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12–00 ರೂ.
(ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ 6–00 ರೂ.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056